ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ತಾಲೀಮು...
ಗಣರಾಜ್ಯೋತ್ಸವ ಕಾರ್ಯಕ್ರಮಗಳ ಸಮಾರೋಪದ ಅಂಗವಾಗಿ ನವದೆಹಲಿಯ ವಿಜಯ್ ಚೌಕ್‌ನಲ್ಲಿ ನಡೆಯಲಿರುವ ‘ಬೀಟಿಂಗ್ ರಿಟ್ರೀಟ್’ ಕಾರ್ಯಕ್ರಮಕ್ಕಾಗಿ ಮಂಗಳವಾರ ತಾಲೀಮು ನಡೆಸಲಾಯಿತು

ಸೆನ್ಸೆಕ್ಸ್ 81,857 | ನಿಫ್ಟಿ 25,175 | $/₹ 91.68 | ಚಿನ್ನ (Std. 10g) ₹1,66,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,68,500 (ಬೆಂಗಳೂರು)

cottonking
Present REFRESH YOUR WARDROBE 15th Jan to 1st Feb
Get a Discount of Up to ₹ 300 on each garments!
& on Exchange of old garments of any men's brand
*Terms & Conditions apply
Offer Available At : Jayanagar - 30th Cross, 4th Block, Ph.:9730508441 I Gandhi Bazaar- 37 BOSCO Court Complex, Ph.:9963890921 I Malleshwaram - Near 11th Cross Sampige Main Road, Ph.: 9730508441 I Commercial Street - Next to Police Station, Ph.:9730508441
Basaveshwar Nagar - Opp. to Chord Road Hospital, Ph.:9916061878 I Mysore - Next to Bhima & Brothers Jewellers, Devaraja Urs Road, Ph.:9341426363 I Mangaluru - Opp. Maruti Suzuki Arena, Mandovi Motors, Ph.:9480353000 I Udupi - Sriram Building, Karavali to City Bus Stand Road, Bananje, Ph.:08202525123 I Enquiry : 9730508441.

‘ಒಪ್ಪಂದಗಳ ತಾಯಿ’ಗೆ ದಾರಿ ಮುಕ್ತ

ಭಾರತ ಇತಿಹಾಸದ ಅತಿದೊಡ್ಡ ಒಪ್ಪಂದ ಅಂತಿಮ ● ಮುಕ್ತ ವ್ಯಾಪಾರಕ್ಕೆ ರಹದಾರಿ

ನವದೆಹಲಿ (ಪಿಟಿಐ): ‘ಎಲ್ಲ ಒಪ್ಪಂದಗಳ ತಾಯಿ’ ಎಂದು ಬಣ್ಣಿಸಲಾಗಿರುವ ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಮಾತುಕತೆ ಪೂರ್ಣಗೊಂಡಿದೆ ಎಂದು ಭಾರತ ಮತ್ತು ಇ.ಯು. ಮಂಗಳವಾರ ಘೋಷಿಸಿವೆ.

ಈ ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ಭಾರತದಿಂದ ಇ.ಯು ದೇಶಗಳಿಗೆ ರಫ್ತಾಗುವ ಶೇಕಡ 93ರಷ್ಟು ಉತ್ಪನ್ನಗಳು ಸುಂಕ ರಹಿತವಾಗಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಲಿವೆ. ಅಲ್ಲದೆ, ಇ.ಯು. ದೇಶಗಳ ಐಷಾರಾಮಿ ಕಾರುಗಳು ಹಾಗೂ ವೈನ್‌ಗಳ ಬೆಲೆಯು ಭಾರತದಲ್ಲಿ ಕಡಿಮೆ ಆಗಲಿದೆ.

ಎರಡು ದಶಕಗಳ ಸುದೀರ್ಘ ಮಾತುಕತೆ ನಂತರದಲ್ಲಿ ಎಫ್‌ಟಿಎ ಈ ಹಂತ ತಲುಪಿದೆ. ಇದು ಅಂದಾಜು 200 ಕೋಟಿ ಜನರ ಬೃಹತ್ ಮಾರುಕಟ್ಟೆಯನ್ನು ಸೃಷ್ಟಿಸಲಿದೆ. ಭಾರತವು ವಿಶ್ವದ ನಾಲ್ಕನೆಯ ಅತಿ ದೊಡ್ಡ ಅರ್ಥ ವ್ಯವಸ್ಥೆಯನ್ನು ಹೊಂದಿದೆ. ಇ.ಯು ದೇಶಗಳನ್ನು ಒಂದು ಗುಂಪಾಗಿ ಪರಿಗಣಿಸಿದಾಗ ಅದು ವಿಶ್ವದ ಎರಡನೆಯ ಅತಿದೊಡ್ಡ ಆರ್ಥಿಕತೆ ಯಾಗುತ್ತದೆ. ▶10

ಏನೆಲ್ಲಾ ಅವಕಾಶ?

- ಭಾರತ ರಫ್ತು ಮಾಡುವ ಉತ್ಪನ್ನಗಳ ಪೈಕಿ ಶೇ 99ರಷ್ಟಕ್ಕೆ ಇ.ಯು ಒಕ್ಕೂಟದ 27 ದೇಶಗಳ ಮಾರುಕಟ್ಟೆಗೆ ಆದ್ಯತೆ ಮೇರೆಗೆ ಪ್ರವೇಶ
- ಭಾರತದ ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಹೊಸ ಅವಕಾಶ
- ಜವಳಿ, ಚರ್ಮೋದ್ಯಮ, ಸಮುದ್ರ ಉತ್ಪನ್ನಗಳು, ಹರಳು ಮತ್ತು ಆಭರಣ ವಲಯದ ಉದ್ಯಮಗಳಿಗೆ ಸೇರಿದ ಒಟ್ಟು 33 ಬಿಲಿಯನ್ ಡಾಲರ್ ಮೌಲ್ಯದ ಉತ್ಪನ್ನಗಳ ರಫ್ತಿಗೆ ಉತ್ತೇಜನ
- ಇ.ಯು ದೇಶಗಳ ಕಾರು ತಯಾರಕರಿಗೆ ತಮ್ಮ ವಾಹನಗಳನ್ನು ಭಾರತದಲ್ಲಿ ತಯಾರಿಸಲು, ಅವುಗಳನ್ನು ಭಾರತದಿಂದ ರಫ್ತು ಮಾಡುವ ಅವಕಾಶ ಮುಕ್ತ
- ಇ.ಯು ದೇಶಗಳ ಐ.ಟಿ ಹಾಗೂ ಐ.ಟಿ. ಆಧಾರಿತ ಸೇವೆಗಳು, ವೃತ್ತಿಪರ ಸೇವೆಗಳು, ಶಿಕ್ಷಣ ಸಂಬಂಧಿ ಸೇವೆಗಳ ವಲಯಕ್ಕೆ ಭಾರತದ ಕಂಪನಿಗಳಿಗೆ ಅವಕಾಶ

ಇ.ಯು ನಾಯಕರಾದ ಉರ್ಸುಲಾ ಫಾಂಡರ್ ಲೇಯನ್ ಮತ್ತು ಆ್ಯಂಟೊನಿಯೊ ಕೋಸ್ಟಾ ಅವರ ಜತೆ ಪ್ರಧಾನಿ ನರೇಂದ್ರ ಮೋದಿ —ಪಿಟಿಐ ಚಿತ್ರ

> ಇದು ವ್ಯಾಪಾರ ಒಪ್ಪಂದ ಮಾತ್ರವೇ ಅಲ್ಲ. ಇದು ಭಾರತ ಮತ್ತು ಇ.ಯು ದೇಶಗಳ ಸಮೃದ್ಧಿಗೆ ಒಂದು ನೀಲನಕ್ಷೆಯೂ ಹೌದು
> **ನರೇಂದ್ರ ಮೋದಿ,** ಪ್ರಧಾನಿ

ಯುರೋಪಿನ ಐಷಾರಾಮಿ ಕಾರುಗಳು ಅಗ್ಗ

ವಿವರ ▶10

ಭಾರತದಲ್ಲಿ ಇವು ಅಗ್ಗವಾಗಬಹುದು

ಇ.ಯು ದೇಶಗಳ ವಾಹನಗಳು, ವೈನ್, ಸ್ಪಿರಿಟ್, ಬಿಯರ್, ಆಲಿವ್ ಎಣ್ಣೆ, ಕಿವಿ ಹಣ್ಣು, ಪೇರು ಹಣ್ಣು, ಹಣ್ಣಿನ ಜ್ಯೂಸ್, ಬ್ರೆಡ್, ಪೇಸ್ಟ್ರಿ, ಬಿಸ್ಕತ್ತು, ಪಾಸ್ತಾ, ಚಾಕಲೇಟ್, ಸಾಕುಪ್ರಾಣಿಗಳ ಆಹಾರ, ಕುರಿ ಮಾಂಸ, ಕೆಲವು ಮಾಂಸಭಕ್ಷ್ಯಗಳಿಗೆ ಭಾರತದ ಮಾರುಕಟ್ಟೆ ಪ್ರವೇಶಿಸಲು ಸುಂಕದಲ್ಲಿ ವಿನಾಯಿತಿ ಸಿಗಲಿದೆ. ಈ ಉತ್ಪನ್ನಗಳಿಗೆ ಈಗ ಶೇ 33ರಿಂದ ಶೇ 150ರವರೆಗೆ ಸುಂಕ ವಿಧಿಸಲಾಗುತ್ತಿದೆ.

ರಾಜ್ಯಕ್ಕೇನು ಲಾಭ?

ಒಪ್ಪಂದದ ಕುರಿತು ಪ್ರಕಟಣೆ ಹೊರಬಿದ್ದ ನಂತರದಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ದೇಶದ ಯಾವ ರಾಜ್ಯದ ಯಾವ ವಲಯಕ್ಕೆ ಹೆಚ್ಚಿನ ಪ್ರಯೋಜನ ಆಗಬಹುದು ಎಂಬ ವಿವರವನ್ನು ಎಕ್ಸ್ ಮೂಲಕ ನೀಡಿದ್ದಾರೆ.

ರಾಜ್ಯದ ರಾಸಾಯನಿಕಗಳು, ಎಂಜಿನಿಯರಿಂಗ್ ಸರಕುಗಳು, ಎಲೆಕ್ಟ್ರಾನಿಕ್ಸ್, ಔಷಧ ಮತ್ತು ವೈದ್ಯಕೀಯ ಉಪಕರಣಗಳು, ಜವಳಿ ಹಾಗೂ ಉಡುಪು ವಲಯಕ್ಕೆ ಒಪ್ಪಂದವು ಪ್ರಯೋಜನ ತಂದುಕೊಡಲಿದೆ ಎಂಬ ಮಾಹಿತಿ ಅವರು ಹಂಚಿಕೊಂಡಿರುವ ವಿವರದಲ್ಲಿ ಇದೆ.

ಭಾರತದ ಈ ವಲಯಕ್ಕೆ ರಕ್ಷೆ

ಚೀಸ್ ಸೇರಿದಂತೆ ಹೈನುಗಾರಿಕೆ ಉತ್ಪನ್ನಗಳಿಗೆ ಭಾರತವು ಯಾವುದೇ ವಿನಾಯಿತಿ ನೀಡುತ್ತಿಲ್ಲ. ಸೋಯಾ ಮೀಲ್ ಮತ್ತು ಏಕದಳ ಧಾನ್ಯಗಳಿಗೆ ಕೂಡ ಭಾರತವು ರಿಯಾಯಿತಿ ನೀಡಿಲ್ಲ. ಇದೇ ಸಂದರ್ಭದಲ್ಲಿ ಇ.ಯು ತನ್ನ ಸಕ್ಕರೆ, ಗೋಮಾಂಸ, ಮಾಂಸ ಮತ್ತು ಕುಕ್ಕುಟ ಉದ್ಯಮ ವಲಯವನ್ನು ಭಾರತದ ಉತ್ಪನ್ನಗಳಿಗೆ ಮುಕ್ತವಾಗಿಸಿಲ್ಲ.

ಗ್ರಾ. ಪಂ.ಗಳಿಗೆ ಗಾಂಧಿ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳು ಇನ್ನು ಮುಂದೆ ಮಹಾತ್ಮ ಗಾಂಧಿ ಎಂಬ ಹೆಸರನ್ನು ಮುಡಿಗೇರಿಸಿಕೊಳ್ಳಲಿವೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಇಲ್ಲಿ ಮಂಗಳವಾರ ನಡೆದ ‘ನರೇಗಾ ಬಚಾವೋ, ರಾಜಭವನ ಚಲೊ’ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಈ ವಿಷಯ ಪ್ರಸ್ತಾಪಿಸಿದರು.

ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಕೇಂದ್ರ ಸರ್ಕಾರ ನರೇಗಾ ಯೋಜನೆಗೆ ವಿಬಿ ಜಿ ರಾಮ್ ಜಿ ಎಂದು ಹೆಸರು ಬದಲಾಯಿಸಿದೆ. ನಮ್ಮ ಸರ್ಕಾರ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ಅವರ ಹೆಸರು ಇಡುವ ಬಗ್ಗೆ ಮುಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಲಿದೆ’ ಎಂದು ಹೇಳಿದರು.

‘ಗಾಂಧೀಜಿ ಹೆಸರು ತೆಗೆದು ರಾಮನ ಹೆಸರು ಬರುವ ರೀತಿ ಬಿಜೆಪಿ ಮಾಡಿದೆ. ‘ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಎಂದು ಬದಲಾಯಿಸಿದ್ದು, ಇಲ್ಲಿ ದಶರಥ ರಾಮ ಇಲ್ಲ. ಕೌಸಲ್ಯಾ ರಾಮನೂ ಇಲ್ಲ. ಸೀತಾರಾಮ ಸಹ ಇಲ್ಲ’ ಎಂದು ಟೀಕಿಸಿದರು.

ಡಿ.ಕೆ.ಶಿವಕುಮಾರ್ ಮಾತನಾಡಿ, ‘ಪಂಚಾಯಿತಿಗಳಿಗೆ ಗಾಂಧೀಜಿ ಹೆಸರು ಇಡುವಂತೆ ಪಕ್ಷದ ಉಪಾಧ್ಯಕ್ಷ ಉಗ್ರಪ್ಪ ಪತ್ರ ಬರೆದಿದ್ದಾರೆ. ಅದರ ಅನುಷ್ಠಾನದ ಮೂಲಕ ಗಾಂಧೀಜಿ ಹೆಸರನ್ನು ಶಾಶ್ವತವಾಗಿ ಉಳಿಸುವ ಕೆಲಸ ಮಾಡಲಾಗುವುದು’ ಎಂದು ಹೇಳಿದರು.

ಇನ್ನಷ್ಟು ಸುದ್ದಿಗಳು ▶7

ಚಿನಕುರುಳಿ ಪ್ರಕಾಶ್ ಶೆಟ್ಟಿ

KFC
15 ಪೀಸ್‌ಗಳು ₹399ಕ್ಕೆ
ಎಪಿಕ್ ಬುಧವಾರ
6 ಹಾಟ್ ವಿಂಗ್ಸ್
SAVE UP TO 49%*
2 ಹಾಟ್ & ಕ್ರಿಸ್ಪಿ
7 ಬೋನ್‌ಲೆಸ್ ಸ್ಟ್ರಿಪ್ಸ್
TASTE THE EPIC
SKIP THE QUEUE ON DINE-IN
ORDER ON APP
OFFER PRICE AVAILABLE ON DINE-IN AND KFC APP ONLY. FREE DELIVERY ON KFC APP.

ಕೈಲಾಸ ಜೀವನ
ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್
ಕಾಲಿನ ಬಿರುಕುಗಳು
ಕಾಲುಗಳನ್ನು ಸ್ವಚ್ಛವಾಗಿ ತೊಳೆದು, ತುಸು ಹೊತ್ತು ಬೆಚ್ಚನೆ ನೀರಲ್ಲಿ ಅದ್ದಿಟ್ಟು, ಮೆತ್ತಗೆ ಮಾಡಿ. ಮೆತ್ತನೆ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. ಉಜ್ಜಬೇಡಿ. ಕಾಲಿನ ಬಿರುಕುಗಳು ತುಂಬಿ ಬರಲು ನೆರವಾಗುವುದು. ಕಾಲುಗಳ ಚರ್ಮ ನವುರು ಹಾಗೂ ಮೃದುವಾಗುವುದು.
ಗುಳ್ಳೆಗಳು, ಮೊಡವೆ
ಬೆಚ್ಚನೆ ನೀರಿನಿಂದ ಮುಖಕ್ಕೆ ಶಾಖ ಕೊಟ್ಟು, ಮೆತ್ತನೆಯ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. (ಉಜ್ಜಬೇಡಿ.) ಮೊಡವೆ, ಗುಳ್ಳೆಗಳಿಂದ ಶೀಘ್ರ ಆರಾಮ ಲಭಿಸಲು ನೆರವಾಗುತ್ತದೆ. ಮುಖ ತೇಜಸ್ವಿ, ಆಕರ್ಷಕ, ತಿಳಿಯಾಗಲು ನೆರವಾಗುವುದು.
ಕಣ್ಣುಗಳ ಉರಿತ
ಬೆಚ್ಚನೆ ನೀರಿನಿಂದ ಮುಖ ಮತ್ತು ಕಣ್ಣುಗಳನ್ನು ಸ್ವಚ್ಛ ಮಾಡಿ. ರಾತ್ರಿ ಮಲಗುವಾಗ ಕೈಲಾಸ ಜೀವನವನ್ನು ಲೇಪಿಸಿ ಮೇಲೆ ಹತ್ತಿಯ ಮಡಿಕೆಯನ್ನಿರಿಸಿ. ತಂಪು ಉಂಟಾಗಿ ಕಣ್ಣುಗಳ ಉರಿತ ಮತ್ತು ಕೆಂಪು ಕಡಿಮೆಯಾಗಲು ನೆರವಾಗುವುದು.
ಮೂಲವ್ಯಾಧಿ / ಫಿಶೂರ್
ಒಂದು ಚಮಚೆ ಕೈಲಾಸ ಜೀವನವನ್ನು ಅಷ್ಟೇ ಸಕ್ಕರೆಯೊಂದಿಗೆ ರಾತ್ರಿ 21 ದಿನಗಳ ಕಾಲ ಸೇವಿಸಿ. ಕೆಜೆ ಕ್ರೀಮ್ ಅನ್ನು ಪೀಡಿತ ಪ್ರದೇಶಕ್ಕೆ ದಿನಕ್ಕೆ 2/3 ಬಾರಿ ಅನ್ವಯಿಸಿ. ಇದು ಬಿರುಕುಗಳಿಂದ ಪರಿಹಾರವನ್ನು ತರುತ್ತದೆ. ಎಣ್ಣೆ, ಮಾಂಸ ಮತ್ತು ಮದ್ಯವನ್ನು ತಪ್ಪಿಸಿ.
ಕಾಲಿನ ಬಿರುಕುಗಳು, ಮೊಡವೆ, ಗುಳ್ಳೆಗಳು, ಕಣ್ಣುಗಳ ಉರಿತ, ಸುಡುವಿಕೆ, ಗಾಯ ಮತ್ತು ಕೊಯ್ತಗಳು, ಬಿರುಕುಗಳು... ಇತ್ಯಾದಿಗಳಿಗೆ ಪರಿಣಾಮಕಾರಿ!
ರೋಗ ಹಲವು, ಪರಿಹಾರ ಒಂದು... ಹೀಗಾಗಿ ಮಲ್ಟಿಪರ್ಪಸ್ ! ಇಂದೇ ಖರೀದಿಸಿ !
Also available on amazon netmeds.com India Ki Pharmacy
Available in: 12g & 20g Tube, 30g, 60g, 120g, 230g Bottle
Manufacturer: ASUM, Pune: 020-24486865 I Customer Care: Prashant: 91300 26070
I asumkj@gmail.com I www.asum.com I
anunaad.com Kan-W25

BRITANNIA
ಜಿ ಎಸ್ ಟಿ ಕಡಿತದಿಂದಾಗಿ ನಿಮಗೆ ಬಿಸ್ಕಟುಗಳು ಹೆಚ್ಚು ಸಿಗುತ್ತಿವೆಯೇ?
ದೊರೆಯಲೇಬೇಕು.
ಬ್ರಿಟಾನಿಯಾದ ಪ್ರತಿ 5 ರೂಪಾಯಿ ಮತ್ತು 10 ರೂಪಾಯಿಯ ಪ್ಯಾಕ್‌ನೊಂದಿಗೆ ಅದೇ ಬೆಲೆಗೆ ಹೆಚ್ಚಿನ ಬಿಸ್ಕಟುಗಳು ನಿಮಗೆ ದೊರೆಯುತ್ತದೆ. ಮುಂದಿನ ಬಾರಿ ಬಿಸ್ಕಟ್‌ನ ಪ್ಯಾಕ್ ತಿರುಗಿಸಿ ಬೆಲೆ ಮತ್ತು ತೂಕ ಎರಡನ್ನೂ ನೋಡಿ ಹಾಗೂ ಅಂಗಡಿಯವರಲ್ಲಿ ಸರಿಯಾದದ್ದನ್ನೇ ಕೇಳಿ.
ಸಿಗಲೇಬೇಕು.
₹10 ಗಾಗಿ ~~64g~~ 73.8g / ₹10 ಗಾಗಿ ~~13 ಬಿಸ್ಕತ್~~ 15 ಬಿಸ್ಕತ್
₹10 ಗಾಗಿ ~~60g~~ 66.6g / ₹10 ಗಾಗಿ ~~9 ಬಿಸ್ಕತ್~~ 10 ಬಿಸ್ಕತ್
₹5 ಗಾಗಿ ~~30.2g~~ 34.5g / ₹5 ಗಾಗಿ ~~7 ಬಿಸ್ಕತ್~~ 8 ಬಿಸ್ಕತ್
₹10 ಗಾಗಿ ~~52.5g~~ 60.1g / ₹10 ಗಾಗಿ ~~7 ಬಿಸ್ಕತ್~~ 8 ಬಿಸ್ಕತ್
₹10 ಗಾಗಿ ~~52.5g~~ 60.1g / ₹10 ಗಾಗಿ ~~7 ಬಿಸ್ಕತ್~~ 8 ಬಿಸ್ಕತ್
ಬಿಸ್ಕಿಟ್ ಚಿತ್ರಣಗಳು ವಿವರಣೆಯ ಉದ್ದೇಶಗಳಿಗಾಗಿ ಮಾತ್ರವಾಗಿರುತ್ತವೆ.
ನಿದರ್ಶಿತ ಪ್ಯಾಕ್‌ಗಳು 5 ಮತ್ತು 10 ರೂಪಾಯಿಗಳದ್ದಾದರೂ, ಇತರ ಬ್ರಿಟಾನಿಯಾ SKU ಗಳಲ್ಲಿಯೂ ಸೂಕ್ತವಾದ ಪ್ರಮಾಣದ ಪ್ರಯೋಜನಗಳು ಅನ್ವಯಿಸುತ್ತವೆ.

ಸೂರ್ಯೋದಯ: 6:46 ಸೂರ್ಯಾಸ್ತ : 6:18 | ಚಂದ್ರೋದಯ: ಮ. 12:44 ಚಂದ್ರಾಸ್ತ: ರಾ. 12:59 | ಮಂಗಳವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 17°

ಬುಧವಾರದ ಉಷ್ಣಾಂಶ 29° ಗರಿಷ್ಠ | 17° ಕನಿಷ್ಠ | ಗುರುವಾರ 28° : 17° | ಶುಕ್ರವಾರ 27° : 16° | ಶನಿವಾರ 28° : 17°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ಹಾಗೂ ಬಿಸಿಲಿನ ವಾತಾವರಣ ಇರಲಿದೆ

ಸಂಚಾರ ಸುಗಮಕ್ಕೆ ಹರಸಾಹಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಬಿ–ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಪ್ರತಿಭಟನೆಗೆ ಜನಸಾಗರವೇ ಹರಿದು ಬಂದಿತ್ತು. ಇದರಿಂದಾಗಿ ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿ, ಸವಾರರು ಹೈರಾಣರಾದರು.

ನಗರ ಪ್ರದೇಶ ಮಾತ್ರವಲ್ಲದೇ ವಿವಿಧ ಜಿಲ್ಲೆಗಳಿಂದ ಸಾವಿರಾರು ಕಾರ್ಯಕರ್ತರು, ಮುಖಂಡರು ಬಂದ ಕಾರಣ ಸ್ವಾತಂತ್ರ್ಯ ಉದ್ಯಾನ ಭರ್ತಿಯಾಗಿತ್ತು. ವೇದಿಕೆ ಬಳಿ ತೆರಳಲು ಅವಕಾಶ ನೀಡದ ಪೊಲೀಸರೊಂದಿಗೆ ಕಾರ್ಯಕರ್ತರು ವಾಗ್ವಾದ ನಡೆಸಿದರು.

ಭಾರಿ ಜನಸ್ತೋಮ ಸೇರಿದ ಕಾರಣ ಮೆಜೆಸ್ಟಿಕ್ ಹಾಗೂ ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತು. ಪೊಲೀಸರು ಸಂಚಾರ ಸುಗಮಗೊಳಿಸಲು ಹರಸಾಹಸಪಟ್ಟರು.

ಮೆಜೆಸ್ಟಿಕ್, ಸಂಗೊಳ್ಳಿ ರಾಯಣ್ಣ ವೃತ್ತ, ಆನಂದರಾವ್ ವೃತ್ತದ ಮೇಲ್ಸೇತುವೆ, ಶೇಷಾದ್ರಿ ರಸ್ತೆ, ಕೆ.ಆರ್.ವೃತ್ತ, ಕೆ.ಜಿ.ರಸ್ತೆ, ಮೈಸೂರು ಬ್ಯಾಂಕ್ ವೃತ್ತದ ಸುತ್ತಮುತ್ತ ವಾಹನಗಳು ಸಾಲುಗಟ್ಟಿ ನಿಂತವು.

ಕಚೇರಿ ಹಾಗೂ ವೈಯಕ್ತಿಕ ಕೆಲಸಕ್ಕೆ ಹೊರಟಿದ್ದ ನಗರವಾಸಿಗಳಿಗೆ ದಟ್ಟಣೆ ಬಿಸಿ ತಟ್ಟಿತು. ಸಕಾಲಕ್ಕೆ ಕಚೇರಿ ತಲುಪಲಾಗದೆ ತೊಂದರೆ ಅನುಭವಿಸಿದರು. ಹೊರ ಊರುಗಳಿಗೆ ಹೋಗಲು ರೈಲು ಮತ್ತು ಬಸ್‌ಗಳಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸಿದ್ದ ಪ್ರಯಾಣಿಕರಿಗೆ ನಿಗದಿತ ಸಮಯಕ್ಕೆ ನಿಲ್ದಾಣ ತಲುಪಲಾಗಲಿಲ್ಲ. ಆಟೊ, ಬಿಎಂಟಿಸಿ ಬಸ್‌ಗಳಲ್ಲಿ ರೈಲು ನಿಲ್ದಾಣ, ಮೆಜೆಸ್ಟಿಕ್‌ನತ್ತ ಹೋಗುತ್ತಿದ್ದವರು ಟ್ರಾಫಿಕ್ ಜಾಮ್‌ನಿಂದಾಗಿ ಮಾರ್ಗ ಮಧ್ಯೆಯೇ ವಾಹನಗಳಿಂದ ಇಳಿದು ನಿಲ್ದಾಣದತ್ತ ಹೆಜ್ಜೆ ಹಾಕಿದರು.

ಆರ್‌ಟಿಇ: ಖಾಸಗಿಗೂ ಅನ್ವಯಕ್ಕೆ ತಿದ್ದುಪಡಿ

ಸರ್ಕಾರಿ, ಅನುದಾನಿತ ಶಾಲೆಗಳಿಗೆ ಸೀಮಿತವಲ್ಲ; ಬದಲಾವಣೆ ಸಾಧ್ಯತೆ: ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅಡಿ ಶೇ 25ರಷ್ಟು ಸೀಟುಗಳನ್ನು ಉಚಿತವಾಗಿ ನೀಡುವುದನ್ನು ಸರ್ಕಾರಿ, ಅನುದಾನಿತ ಶಾಲೆಗಳಿಗೆ ಸೀಮಿತಗೊಳಿಸಿ 2019ರಲ್ಲಿ ಮಾಡಿರುವ ತಿದ್ದುಪಡಿಯನ್ನು ರಾಜ್ಯ ಸರ್ಕಾರ ವಾಪಸ್ ಪಡೆಯುವ ಸಾಧ್ಯತೆಯಿದೆ.

ಈ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ‘ಎಲ್ಲ ರಾಜ್ಯಗಳು ಖಾಸಗಿ ಶಾಲೆಗಳಲ್ಲಿ ಶೇಕಡ 25ರಷ್ಟು ಸೀಟುಗಳನ್ನು ಆರ್‌ಟಿಇ ಕೋಟಾ ಮೂಲಕ ತುಂಬುವುದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈ ವಿಷಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರಲಾಗುವುದು’ ಎಂದು ಹೇಳಿದರು.

ಆದರೆ, ‘ಈ ತಿದ್ದುಪಡಿಗಳನ್ನು ಹಿಂಪಡೆಯುವುದರಿಂದ ಆರ್ಥಿಕವಾಗಿ ಉಂಟಾಗುವ ಪರಿಣಾಮಗಳು, ಹಣಕಾಸು ಇಲಾಖೆ ಅಭಿಪ್ರಾಯ ಮತ್ತು ತೀರ್ಮಾನವೂ ಮಹತ್ವದ್ದಾಗಿರುತ್ತದೆ. ಖಾಸಗಿ ಶಾಲೆಗಳಲ್ಲಿ ಶೇ 25 ಸೀಟುಗಳನ್ನು ಆರ್‌ಟಿಇ ಕೋಟಾದಡಿ ಭರ್ತಿ ಮಾಡಿದರೆ, ಶುಲ್ಕ ಮರು ಪಾವತಿಗಾಗಿ ಸುಮಾರು ₹500 ಕೋಟಿ ಅಗತ್ಯವಿದೆ’ ಎಂದು ಸಚಿವರು ವಿವರಿಸಿದರು.

‘ಆರ್‌ಟಿಇ ಕಾಯ್ದೆಯ ನಿಯಮ 4ಕ್ಕೆ ತರಲಾದ ತಿದ್ದುಪಡಿಗಳನ್ನು ಹಿಂಪಡೆಯುವುದಕ್ಕೆ ತಮಗೆ ವೈಯಕ್ತಿಕವಾಗಿ ಯಾವುದೇ ಆಕ್ಷೇಪ ಇಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

ಆರ್‌ಟಿಇ ಕಾಯ್ದೆಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕವಾಗಿದೆ. ಆದರೆ, 2019ರಲ್ಲಿ ನಿಯಮ 4ಕ್ಕೆ ತಿದ್ದುಪಡಿ ಮಾಡಿ, ಸಮೀಪದಲ್ಲೇ (1 ಕಿಲೋ ಮೀಟರ್ ಒಳಗೆ) ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿದ್ದರೆ ಖಾಸಗಿ ಶಾಲೆಗಳಲ್ಲಿ ಪ್ರವೇಶ ನೀಡುವುದಕ್ಕೆ ವಿನಾಯಿತಿ ನೀಡಿತ್ತು. ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರವು ಆಗ ಸಮರ್ಥಿಸಿಕೊಂಡಿತ್ತು.

ಈ ತಿದ್ದುಪಡಿಯೊಂದಿಗೆ, ರಾಜ್ಯ ಸರ್ಕಾರವು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪ್ರವೇಶಕ್ಕೆ ಆದ್ಯತೆ ನೀಡಿತು. ಇದರಿಂದ ಆರ್‌ಟಿಇ ಅಡಿ ಪ್ರವೇಶಕ್ಕೆ ಬೇಡಿಕೆ ಕುಸಿದು, ಶೇ 90 ಸೀಟುಗಳು ಖಾಲಿ ಉಳಿದಿವೆ. 2016–17ನೇ ಸಾಲಿನಲ್ಲಿ ವಿವಿಧ ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಆರ್‌ಟಿಇ ಅಡಿ ಪ್ರವೇಶಗಳು ಕಡಿಮೆಯಾಗಿದ್ದವು. ಪೋಷಕರು ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದು ಪ್ರಮುಖ ಕಾರಣಗಳಲ್ಲಿ ಒಂದಾಗಿತ್ತು.

86 ಸಾವಿರಕ್ಕೂ ಹೆಚ್ಚು ಅರ್ಜಿಗಳಲ್ಲಿ 34 ಸಾವಿರ ಅರ್ಜಿಗಳು ಅನರ್ಹ ಜಾತಿ/ಆದಾಯ ಪ್ರಮಾಣ ಪತ್ರಗಳ ಕಾರಣದಿಂದ ತಿರಸ್ಕೃತಗೊಂಡವು. ಹಾಗೆಯೇ, 24 ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ಅನರ್ಹ ಆಧಾರ್/ಮತದಾರರ ಗುರುತಿನ ಚೀಟಿಗಳ ಕಾರಣದಿಂದ ನಿರಾಕರಿಸಲಾಗಿತ್ತು.

ಸುಪ್ರೀಂ ಕೋರ್ಟ್ ಏನು ಹೇಳಿದೆ?

2009ರ ಆರ್‌ಟಿಇ ಕಾಯ್ದೆಯಡಿ ಖಾಸಗಿ ಅನುದಾನರಹಿತ ಅಲ್ಪಸಂಖ್ಯಾತವಲ್ಲದ ಶಾಲೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದ ಮಕ್ಕಳಿಗೆ ಶೇ 25ರಷ್ಟು ಸೀಟುಗಳು ನೀಡುವುದನ್ನು ರಾಜ್ಯಗಳು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಜನವರಿ 14ರಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು.

ಇದನ್ನು ‘ರಾಷ್ಟ್ರೀಯ ಮಿಷನ್’ ಎಂದು ಹೇಳಿರುವ ನ್ಯಾಯಾಲಯ, ಈ ಕೋಟಾದಡಿ ಸೀಟುಗಳನ್ನು ಭರ್ತಿ ಮಾಡುವುದನ್ನು ಖಚಿತಪಡಿಸಲು ರಾಜ್ಯಗಳು ನಿಯಮಗಳನ್ನು ರೂಪಿಸಬೇಕು ಎಂದು ಆದೇಶಿಸಿತು.

ವರ್ಷವಾರು ಆರ್‌ಟಿಇ ಅಡಿ ಪ್ರವೇಶ

ವರ್ಷ	ಪ್ರವೇಶ ಸಂಖ್ಯೆ
2012-13	1,22,000
2014-15	92,543
2015-16	1,00,067
2017-18	1,09,001
2018-19	1,16,273
2019-20	1,312
2020-21	3,680
2021-22	4,755
2022-23	1,512
2023-24	2,306
2024-25	3,412

FARNAZ

ಹಣ ನೀಡದ್ದಕ್ಕೆ ತಾಯಿ ಕೊಂದ ಮಗ

ಮುದಗಲ್ (ರಾಯಚೂರು ಜಿಲ್ಲೆ): ಜಕ್ಕೆರಮಡು ತಾಂಡಾದಲ್ಲಿ ಹಣ ನೀಡದ್ದಕ್ಕೆ ಮಗನೊಬ್ಬ ತಾಯಿಯನ್ನು ಕಲ್ಲಿನಿಂದ ಹೊಡೆದು ಕೊಲೆ ಮಾಡಿದ್ದಾನೆ. ಚಂದವ್ವ (55) ಕೊಲೆಯಾದವರು. ಕುಮಾರ (32) ಬಂಧಿತ ಆರೋಪಿ.

ಕುಮಾರ ₹2 ಲಕ್ಷ ನೀಡುವಂತೆ ತಾಯಿಯನ್ನು ಪೀಡಿಸಿದ್ದ. ಆಗ ಮಾತಿನ ಚಕಮಕಿ ನಡೆದಿದ್ದು, ತಾಯಿಗೆ ಕಲ್ಲಿನಿಂದ ಹೊಡೆದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ.: ಮು.ಇಂ(ವಿ)/ಪ್ರ(ಕಾ)ವಬೆ/ಅಇಂ(ಕ)/ಸ.ಇಂ–1&2/ಎಫ್–424&BIAL-457(4)/2025–26/9485–86&9509 ದಿ.: 27.01.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಎಲ್ಲಾ ಸರಿ ಹೊಂದುವ ಸಾಮಾಗ್ರಿಗಳ / ಉಪಕರಣಗಳ ಸರಬರಾಜು, ಪರೀಕ್ಷೆ ನಿರ್ಮಾಣ ಕಾರ್ಯ ಮತ್ತು ಕಾರ್ಯಾರಂಭ ಮಾಡುವ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

1) ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮು.ಇಂವಿ/ಪ್ರ(ಕಾ)ವ/ಬೆಂವ/ಪಿ.ಟಿ.ಕೆ–27 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ, ಚಿಂತಾಮಣಿ ತಾಲ್ಲೂಕಿನ 220ಕೆ.ವಿ ಚಿಂತಾಮಣಿ ಸ್ವೀಕರಣಾಕೇಂದ್ರದಲ್ಲಿನ 100ಎಮ್.ವಿ.ಎ APEX ಮೇಕ್ ವಿದ್ಯುತ್ ಪರಿವರ್ತಕ–2ರ ಗ್ಯಾಸ್ಕೆಟ್ ಬದಲಾಯಿಸುವುದರೊಂದಿಗೆ ವಿದ್ಯುತ್ ಪರಿವರ್ತಕವನ್ನು ಒಣಗಿಸುವ ಮತ್ತು ಪರಿವರ್ತಕದ ತೈಲವನ್ನು ಬದಲಾಯಿಸುವ ಕಾಮಗಾರಿ.

2) ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮು.ಇಂ.ವಿ/ಪ್ರ(ಕಾ)ವ/ಬೆಂ.ವ/ಪಿ.ಟಿ.ಕೆ–24/(ಕರೆ–2) ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿ ಇರುವ 66/11ಕೆ.ವಿ ರಾಜನಕುಂಟೆ ವಿದ್ಯುತ್ ಉಪಕೇಂದ್ರದಲ್ಲಿ ಹೆಚ್ಚುವರಿಯಾಗಿ 11ಕೆ.ವಿ ಸ್ವಿಚ್‌ಗೇರ್‌ಗಳನ್ನು ಅಳವಡಿಸುವ ಕಾಮಗಾರಿ **(11ಕೆ.ವಿ ಸ್ವಿಚ್‌ಗೇರ್ ಹೊರತುಪಡಿಸಿ) (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ).**

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿನ ವಿಷಯದ ವಿಚಾರಣೆಯ ಕುರಿತು ವಿವರವಾದ ಅಧಿಸೂಚನೆಯನ್ನು ದಿನಾಂಕ: **ಕ್ರಮ ಸಂಖ್ಯೆ: 1)ಕ್ಕೆ 02.02.2026 ಕ್ರಮ ಸಂಖ್ಯೆ: 2)ಕ್ಕೆ 28.01.2026** ರಂದು ಅಥವಾ ನಂತರ ಇ–ಪ್ರೊಕ್ಯೂರ್‌ಮೆಟ್ ವೆಬ್‌ಸೈಟ್ **www.kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಇನ್ನಿತರ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವಲಯ, ಕ.ವಿ.ಪ್ರ.ನಿ.ನಿ., ಆನಂದರಾವ್ ವೃತ್ತ, ಬೆಂಗಳೂರು–09.

ಏರೋಸ್ಪೇಸ್ ಪಾರ್ಕ್‌ಗೆ ಭೂಮಿ: ರೈತರ ಆಕ್ಷೇಪ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಪ್ರಸ್ತಾವಿತ ಏರೋಸ್ಪೇಸ್ ಪಾರ್ಕ್‌ಗಾಗಿ ಸ್ವಯಂಪ್ರೇರಿತವಾಗಿ ಭೂಮಿ ನೀಡಲು ಮೂರು ತಿಂಗಳ ಗಡುವು ನಿಗದಿ ಮಾಡಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಪ್ರಕಟಣೆ ಹೊರಡಿಸಿರುವುದಕ್ಕೆ ದೇವನಹಳ್ಳಿಯ ಚನ್ನರಾಯಪಟ್ಟಣ ಹೋಬಳಿಯ ಭೂಸ್ವಾಧೀನ ವಿರೋಧಿ ಹೋರಾಟದ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರೈತರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣ ಹೋಬಳಿಯ 1,777 ಎಕರೆ ಸ್ವಾಧೀನ ಪ್ರಕ್ರಿಯೆಯನ್ನು ಸರ್ಕಾರ ಹಿಂದೆ ಕೈಬಿಟ್ಟಿದ್ದರೂ, ಇದೀಗ ಸ್ವಯಂಪ್ರೇರಿತ ಭೂಮಿ ನೀಡುವ ಆಯ್ಕೆ ಮುಂದಿಟ್ಟು ‘ಹಿಂಬಾಗಿಲಿನಿಂದ’ ಭೂಮಿ ಪಡೆಯಲು ಸರ್ಕಾರ ಮುಂದಾಗಿದೆ ಎಂಬ ಆರೋಪ ಕೇಳಿಬಂದಿದೆ.

ಈ ಸಂಬಂಧ ಜ.23ರಂದು ಕೆಐಎಡಿಬಿ ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದು, ಏ.30ರೊಳಗೆ ಭೂಮಿ ನೀಡಲು ಸಮ್ಮತಿಸುವ ರೈತರು ಬೆಂಗಳೂರಿನ ನೃಪತುಂಗ ರಸ್ತೆಯ ಅರವಿಂದ ಭವನದ ಕೆಐಎಡಿಬಿ ಕಚೇರಿಗೆ ತಮ್ಮ ಒಪ್ಪಿಗೆ ಪತ್ರ ಸಲ್ಲಿಸುವಂತೆ ಸೂಚಿಸಿದೆ. ಭೂಮಿ ನೀಡುವವರಿಗೆ ಸಮಿತಿ ನಿರ್ಧರಿಸುವ ಪರಿಹಾರ ನೀಡುವುದಾಗಿ ತಿಳಿಸಿದೆ.

‘ಕೆಐಎಡಿಬಿ ಪ್ರಕಟಣೆಯನ್ನು ಒಪ್ಪುವುದಿಲ್ಲ. ಮುಂದಿನ ಹೋರಾಟದ ರೂಪುರೇಷೆಯನ್ನು ಶೀಘ್ರದಲ್ಲೇ ತೀರ್ಮಾನಿಸುತ್ತೇವೆ’ ಎಂದು ಭೂಸ್ವಾಧೀನ ವಿರೋಧಿ ಹೋರಾಟಗಾರರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ:ಬೆಂಅಪ್ರಾ/ನಯೋಸ/CLU–426/3846/2025–26 ದಿನಾಂಕ: 27.01.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀ ಬಿ.ಎಂ.ವೃಷಬೇಂದ್ರ ನಂ.2011, 7ನೇ ಕ್ರಾಸ್, 1ನೇ ಮೈನ್, ಜುಡಿಶಿಯಲ್ ಬಡಾವಣೆ, ಬೆಂಗಳೂರು–560 065	ಬೆಂಗಳೂರು ಪೂರ್ವ	ವರ್ತೂರು	ಸೂಲಿಕುಂಟೆ	67/4	0–6.50	ವ್ಯವಸಾಯ ವಲಯ	ವಾಣಿಜ್ಯ

ಷರಾ: ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಗಳು/ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ಅಂಗಡಿಗಳು ಬಾಡಿಗೆಗೆ ದೊರಕುವುದಲ್ಲದೆ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ ಎಂದು ಪ್ರಸ್ತಾವನೆಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿರುವುದಾಗಿ ಅರ್ಜಿದಾರರು ತಿಳಿಸುತ್ತಾ, ‘ವ್ಯವಸಾಯ ವಲಯ’ ದಿಂದ ‘ವಾಣಿಜ್ಯ ಉಪಯೋಗ’ಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ದೊಡ್ಡಜಾಲ ಗ್ರಾ.ಪಂ ಚೇತನ್ ಅಧ್ಯಕ್ಷ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ದೊಡ್ಡಜಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಎಂ.ಚೇತನ್ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚೇತನ್ ಕುಮಾರ್

ಎ.ನಾಗರಾಜ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಮಂಗಳವಾರ ನಡೆದ ಚುನಾವಣೆಯಲ್ಲಿ ಚೇತನ್ ಕುಮಾರ್ ಮಾತ್ರ ನಾಮಪತ್ರ ಸಲ್ಲಿಸಿದ್ದರು.

ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಎನ್‌.ಕೆ. ಮಹೇಶ್‌ಕುಮಾರ್, ಆರ್.ಬೈರೇಗೌಡ, ಹಂಸವೇಣಿ ವಿ, ಸದಸ್ಯರಾದ ಎಂ.ಹರಿಪ್ರಕಾಶ್, ಪ್ರಕಾಶ್ ಎಸ್, ಗೀತಾ ವಿ. ಶಂಕರ್, ನರಸಿಂಹಯ್ಯ ಎಂ, ಎ.ಸಿ.ಗೌರಮ್ಮ, ಸೌಭಾಗ್ಯಮ್ಮ, ರತ್ನಮ್ಮ, ಮಾಲಾ, ಶ್ರುತಿ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

My client **Sri D.A. Srinivas** S/o Late D.K. Adikesavalu Aged about 52 years, R/o No. 7/21, 1st Cross, 9th Main, R.M.V. Extension, Bengaluru - 560 080, has instructed me to issue public notice with regard to properties which are subject to pending adjudications before the civil court and at presently pending considering before the Hon'ble supreme court of India. The subject of the properties are as follows:-

Sy No: 274/1, 268, 264, 267, 272/3, 273, 276, 274/2, 274/1, 275, 272/3, 272/1, 272/2, 271/1, 272/4, 15 items of agriculture Properties totally measuring 26 acres 10 guntas, situated at Avathi Village, Kasaba Hobli, Devanahalli Taluk, Bangalore Rural District.

Sy No:113/3 3A & 3B, 117, 117, 120, 118/6B, 121, 112/2, 111/1, 118/1B and 121 totally 10 items agriculture Properties measuring 6 acres 11 guntas situated at Bullahalli Village, Vijayapura Hobli, Devanahalli Taluk, Bangalore Rural District:

Sy No: 47/2, 28/5, 29/5, 41/2, 28/6, 29/6 and 28/4, totally 7 item agriculture Properties measuring 6 acres 11 guntas situated at Dasarahalli Village, Kasaba Hobli, Devanahalli Taluk, Bangalore Rural District:

Sy No: 96/6, 92/5A, 89/1, 89/1, 89/1, 89/1, 87/3, 92/1 and 92/5B totally 9 itemconverted Properties measuring 6 acres 16 guntas situated at Nallurahalli Village, Krishnarajapura Hobli, Bangalore East Taluk, and Bengaluru:

Sy No: 89/1, 89/1 totally 2 items agriculture Properties measuring 29 guntas situated at Nallurahalli Village, Krishnarajapura Hobli, Bangalore East Taluk, Bengaluru.My client Sri. D.A. Srinivas is the owner and in possession of all the above immovable properties. A declaratory suit has been filed by client in O.S. 246/2020 against One Smt. Manjula, K.R. Pradeep and K.R. Rohith before the Court of the senior Civil Judge, Bengaluru Rural District, Bengaluru and there was an order of status quo and lateran on an application filed by Smt. Manjula under order 7 rule 11, the said suit came to be rejected. The said judgment and decree was challenged before the Hon'ble High court of Karnataka in R.F.A. No: 2216/2023 which came to be allowed. Now said Smt Manjula is before the Hon'ble supreme court in SLP (civil) 7924/2024 challenging the judgment passed in R.F.A. 2216/2023. Hon'ble supreme court has granted interim order on 08-04-2024 and matter is required to adjudicate finally by the courts.

It is hereby informed to the general public at large that certain immovable properties, details of which are the subject matter of civil litigation, are presently pending adjudication before the Hon'ble Supreme Court of India. Smt. Manjula, K.R. Pradeep and K.R. Rohith are trying to alienate some properties. Therefore it is hereby bringing it to the kind notice to the public that any transaction, purchase, or dealing in respect of such properties during the pendency of legal proceedings is not permissible and may render the purchaser's rights subject to the final orders of the Hon'ble Court.

Therefore, all persons are cautioned not to enter into any agreement, sale.purchase, or transaction relating to the above properties until the matter is finally adjudicated and disposed of by the Hon'ble Supreme Court of India. Any person dealing with the said properties, despite this notice, shall be doing so at their own risk, cost, and consequences, and neither my client nor their representatives shall be responsible for any claims, losses, or disputes arising therefrom.

Issued in the interest of the public.
J&M Associate Adv. Jayasheelareddy TS
Ph 9743801260
Office at : 57/7, 1st Floor, Subbarama Chetty Road Nettakallappa Circle, Basavanagudi, Bengaluru- 560004

BUNTS' SANGHA R.N.S VIDYANIKETAN
324, Bunts' Sangha Complex, West of Chord Road, Vijayanagar, Bengaluru - 560 040
For BSRNSV-I, Vijayanagar & BSRNSV-II. Yelachaguppe Campus for the year 2025-26
TENDER NOTIFICATION
Invites EOI From Technically Competent and Financially Stable suppliers for the following & Financial Capacity for the following
- Text Books and Note Books for School
- Uniform for Schools & College
- Reputed Security Service Provider

APPLY NOW - info@bsrnsv.com
Interested parties may submit the quotations within 10 days. For further details please contact Bunts' Sangha RNS Vidyaniketan School Office.
Contact: 080-23398922

PUBLIC NOTICE

This is to inform the general public that my client intends to purchase the immovable properties mentioned and described in the schedule below from its Owner Sri. **Rajaiah B.**, son of Late Basappa, (hereafter referred to as "Owner"). The Owner represents that he is the absolute owner of the Schedule Property which is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence within **Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the below mentioned properties situated at Kethohalli Village, Kasaba Hobli, Ramanagara Taluk:

Sl. No.	Sy. No.	Extent in Acres & Guntas	Boundaries			
1.	123/4	02-10	Survey No. 124/10	Survey Nos. 123/1 & 5	Private Property	Survey No. 123/2
2.	124/10	00-06	Road	Survey No. 123/4	Survey Nos. 125 & 123/4	Property belongs to Smt.Prema

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001
Ph.: 080 22863885 / 49763233
email: vinay@vinaykademane.in
Place : Bengaluru
Date : 27-01-2026

HOSMAT HOSPITAL PVT. LTD.
No. 45, Magrath Road, Off. Richmond Road, Bangalore – 560025. INDIA.
Ph: 080-2559 3796, 2559 3797, 2559 3746.
NOTICE
Disposal of Out - patient and In-patient Medical Records
Out-patient and In-patient Medical Records prior to the year 2020 will be destroyed (IP 2000001 TO IP2003545). Whosoever interested, can contact the **Medical Records Department** at **HOSMAT Hospital** to collect their out & in patient records prior to 2020 within 15 days from the date of this Notification.
Note: Not applicable to Medico-Legal files and Death Records.

PUBLIC NOTICE
I, Ram Kamal Bairagya, S/o Mr.Saba Kumar Bairagya, Flat No.T-1, 3th floor, 9th cross, Building No. 136, Sree Sai Archard, HAL 2nd Stage, Kodihalli, VTC, Bangalore North, intended to purchase the schedule property from it's owner Mr. Ankam Ravindra Rao, S/o Late A.L.Nacharaiah, No.5, Muniyellappa Garden, Near Diamond District, Kodihalli, Bangalore-560008.
Any person/s having any right, title or interest or claim against the said property should send their claims in writing to the above named along with the documentary evidence in support of the said claim within 7 days of publication of this notice, failing which claims if any shall be deemed to have waived and it is not binding on the part of me.
SCHEDULE
All that piece and parcel of immovable property bearing Municipal No.40, PID No. 73-50-40 with building thereon ground, first, second, third, fourth and fifth floor occupied by the tenant situated at Muniyellappa Garden, Kodihalli, Varthur Hobli, Bangalore East Taluk, now under the administrative jurisdiction of BBMP old Ward No.73, New 113, site measuring East to West 46 ft and North to South 30 ft in all measuring 1379 sq.ft, bounded on: East by : Property No.39, West by:Road, North by:Property No.3, New No.8, South by:Road.
Ramkamal Bairagya
PURCHASER
K.N. Somaiah, Advocate, Cauvery Complex, 129, Old Madras Road, Halasuru, Benglauru- 08

JOB OPPORTUNITIES

Manager

A Consortium of German, Italian, Dutch & other European Companies represented in India by their agents **STANDARD MACHINERY CORPORATION** who are leaders in the Industrial Food Manufacturing Machinery Business, are looking for a
Lady Admin Manager for Office
Qualification : Graduate
The Incumbents must have Good Communication skills in English. Very well versed with Computers, MS Office, E mailing etc.
Office located on Banaswadi Main Road, next to ITC.
Interested Candidates please send your CV to : smmc.accounts@gmail.com
STANDARD MACHINERY CORPORATION
205B, Brooklyn Apartments #63, Banaswadi Main Road Jai Bharath Nagar, Bangalore-33.
M : +91 97407 06565
www.stanmac.com

Multiple Vacancy

VACANCY
Shri Lakshmi Steel Suppliers, One of the Leading Steel companies In South India, is looking for HR Manager, Sales Managers, Accounts Manager and Warehouse Operations Manager in Bengaluru.
CONTACT:
Mr. Rajganesh
948 0834 473
Email:ganesh.c@slgroup.in

Marketing & Sales

WANTED SALES Managers, Sales Executives, Delivery Boys, Telecallers. Attractive salary + Incentives Call: 8867627879

Engg/ Production Technical

WANTED SITE Engineers Qualifcation DIPLOMA or BE. Salary fresher 20,000/- Experienced- 25,000/- Mobile: 9611712549/ 9019157733

REAL ESTATE BUYING

General

General

WE DO FUNDING & Solutions/ Settlements for disputed properties under Bank,High Court, Civil/DC/AC/ Tribunal/ Tahsildar Courts pending cases. Contact Verna Developers, Barton Centre, MG Road,Blr. 9620253180.

REAL ESTATE SELLING

Sites

Vishweshwariah Layout

SALE, 5TH, 6th Block, 40X60, 30X40 and Three/ Four BHK Duplex House, RUDRAPPA: 9035334418, 9141326819

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business Offers

Distributors

WWW.JNNFOODS.COM LOOKING for Distributors / Wholesellers / Experienced Salesman in FMCG Food. Attractive margin- 8951344539

Finance

MSME LOAN Available for Any Start-Ups Companies And Existing Running Companies Hotels,Shops Establishments Etc. Contact- 7204995189.

PERSONAL

Change of Name

CHANGE OF NAME
I, SABIHA FARHATH & SABEEHA FARHANA W/o AHMED BASHA, R/at No.25/1-2, Bore Bank Road, Benson Town, Bangalore-560046. Declare that the above names pertain to me only Henceforth I shall be known as **SABIHA FARHATH** vide affidavit dated 20-01-2026 sworn before notary Ramachandrappa C, Bengaluru

CHANGE OF NAME
I, **M. VANI LATHA** W/o Madhu Babu Setty Balija, aged about 40 years resident of at H.No. K.No.82, Sy.No.12/7-193, Beside K. Narayanapura Bus Stop, Kothanur Village, Bengaluru – 560077, have changed my name to **SETTY BALIJA GEETHAVANI** after marriage, vide affidavit dated 22.01.2026, before Notary E. Sreenivasulu, Kurnool. Henceforth, I shall be known as **SETTY BALIJA GEETHAVANI** for all purposes.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CONNECT

I M M Bhuvaneshwari W/O, Mohan Kumar Madappa R/o Mohan Kumar Madappa Garden Vilas, 7th C Cross, Quarter No 01 Bbmp Maternity Hospital, Nagarabhavi, Bangalore 560072 have changed my name to N S Bhuvaneshwari

I, **HEMARAJ,** Residing at No.#1-116A, Jattar Bettu Nivas Adiudupi Udupi Kaderkar -576103 Have changed my Name to HEMARAJ NARAYANA POOJARY, vide affidavit Dated 26/01/2026, Before Notary K.V Mani, Bengaluru-560030.

I, **JYOTHI,** Residing at No.#1-10, Beedu Marga Ambalapady Post Ambalapady, Udupi-576103, Have changed my Name to JYOTHI HEMARAJ POOJARY vide affidavit Dated 26/01/2026, Before Notary K.V Mani, Bengaluru-560030.

DH Classifieds More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9886213331 | +91 9731810277

ಅರ್ಕಾವತಿ: ಭೂಸಂತ್ರಸ್ತರಿಗೆ ಪರಿಹಾರ

ನ್ಯಾ.ಕೇಶವ ನಾರಾಯಣ ಸಮಿತಿಗೆ ಶೀಘ್ರವೇ ಮನವಿ

● ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಕಾವತಿ ಬಡಾವಣೆಯ ಭೂಸಂತ್ರಸ್ತರಿಗೆ ಪರಿಹಾರ ಒದಗಿಸಲು ಶೀಘ್ರವೇ ಸಭೆ ಕರೆದು ಚರ್ಚೆ ನಡೆಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನ ಸಭೆಯಲ್ಲಿ ಭರವಸೆ ನೀಡಿದರು.

ಬಿಜೆಪಿಯ ಎಸ್.ಮುನಿರಾಜು ಅವರ ಗಮನ ಸೆಳೆಯುವ ಸೂಚನೆಗೆ ಪ್ರತಿಕ್ರಿಯಿಸಿದ ಅವರು, 'ಭೂಸಂತ್ರಸ್ತ ರೈತರಿಗೆ ಪರಿಹಾರವಾಗಿ ಭೂಮಿ ನೀಡಬೇಕು ಎಂಬುದಕ್ಕೆ ನಾನು ಬದ್ಧವಾಗಿದ್ದೇನೆ' ಎಂದರು.

'ಅರ್ಕಾವತಿ ಬಡಾವಣೆ ಎಸ್.ಎಂ.ಕೃಷ್ಣ ಅವರ ಕಾಲದಲ್ಲೇ ಆರಂಭವಾಯಿತು. ಈ ಮಧ್ಯೆ ನಿವೇಶನಕ್ಕೆ ಅನೇಕರು ಅರ್ಜಿ ಹಾಕಿಕೊಂಡು ಅವರಿಗೆ ನಿವೇಶನ ಮಂಜೂರಾಯಿತು. ಭೂಸಂತ್ರಸ್ತರಿಗೆ ಅದೇ ಜಾಗದಲ್ಲಿ ಪರಿಹಾರವಾಗಿ ಜಾಗ ನೀಡಲು ಸಾಧ್ಯವಾಗಲಿಲ್ಲ. ಹೀಗಾಗಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಮಧ್ಯ ಪ್ರವೇಶಿಸಿ, ಮುಂದೆ ಯಾವ ರೀತಿ ಮಾಡಬೇಕು ಎಂದು ನಿರ್ಧರಿಸಲು ನ್ಯಾಯಮೂರ್ತಿ ಕೇಶವ ನಾರಾಯಣ ಸಮಿತಿಯನ್ನು ನೇಮಿಸಲಾಗಿದೆ. ಸಮಿತಿಯವರನ್ನು ಕರೆದು ಆದಷ್ಟು ಬೇಗ ತೀರ್ಮಾನ ಮಾಡುವಂತೆ ಮನವಿ ಮಾಡಲಾಗುವುದು' ಎಂದು ಅವರು ಹೇಳಿದರು.

ಶಿವರಾಮ ಕಾರಂತ ಬಡಾವಣೆ ವಿಚಾರದಲ್ಲೂ ನ್ಯಾಯಾಲಯ ಹೊಸ ಅರ್ಜಿ ತೆಗೆದುಕೊಳ್ಳಲು ಅವಕಾಶ ನೀಡಿಲ್ಲ. ಹೀಗಾಗಿ ಇಲ್ಲಿ ಮೊದಲು ಭೂಸಂತ್ರಸ್ತರಿಗೆ ಭೂಮಿ ನೀಡಲಾಗುತ್ತಿದ್ದು, ಅರ್ಕಾವತಿ ಬಡಾವಣೆ ಭೂಸಂತ್ರಸ್ತರ ಸಮಸ್ಯೆಯನ್ನು ಆದಷ್ಟು ಬೇಗ ನಿವಾರಿಸಲಾಗುವುದು ಎಂದರು.

ಜನಪ್ರತಿನಿಧಿಗಳಿಗೆ ಫಾಸ್ಟ್ಯಾಗ್ ಸೌಲಭ್ಯ

ಜನಪ್ರತಿನಿಧಿಗಳಿಗೆ ಟೋಲ್‌ಗಳಲ್ಲಿ ತೊಂದರೆ ಆಗದಿರುವಂತೆ ಫಾಸ್ಟ್ಯಾಗ್ ವ್ಯವಸ್ಥೆ ಮಾಡಿ, ಅದಕ್ಕೆ ಸರ್ಕಾರದಿಂದ ಸಹಕಾರ ನೀಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ತಿಳಿಸಿದರು.

ಕಾಂಗ್ರೆಸ್‌ನ ಎಸ್.ಎನ್.ಸುಬ್ಬಾರೆಡ್ಡಿ, ಬಿಜೆಪಿಯ ಉಮಾನಾಥ್ ಕೋಟ್ಯಾನ್ ಮತ್ತು ಇತರರ ಪ್ರಶ್ನೆಗಳಿಗೆ ಅವರು ಪ್ರತಿಕ್ರಿಯಿಸಿದರು.

ಮೈಸೂರು–ಬೆಂಗಳೂರು ರಸ್ತೆಯ ಟೋಲ್ ಬಳಿ ಜನಪ್ರತಿನಿಧಿಗಳಿಗೆ ಕಿರಿ ಕಿರಿ ಮಾಡಿದವರಿಗೆ ದಂಡ ವಿಧಿಸಲಾಗಿದೆ. ಹುನಗುಂದದಲ್ಲಿ ವಿಧಾನಪರಿಷತ್ ಸದಸ್ಯರೊಬ್ಬರಿಗೆ ತೊಂದರೆ ಮಾಡಿದ ಕಾರಣಕ್ಕೆ ನೋಟಿಸ್ ನೀಡಿ ₹10 ಲಕ್ಷ ದಂಡ ವಿಧಿಸಲಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದರು.

'ಸಭಾಧ್ಯಕ್ಷರ ಕಡೆಯಿಂದ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಸಂಸದರಿಗೆ ಪಾಸ್ ಹಾಗೂ ಫಾಸ್ಟ್ಯಾಗ್ ಅನ್ನು ಒದಗಿಸಬೇಕು' ಎಂದು ಹೇಳಿದರು.

'ನಮ್ಮ ವಾಹನದ ಮೇಲೆ 'ಶಾಸಕರು' ಎಂದು ಬೋರ್ಡ್ ಬರೆಸಿದ್ದರೂ ನಿಲ್ಲಿಸಿ, ಐಡಿ ಕಾರ್ಡ್ ತೋರಿಸಿ, ಮುಖ ತೋರಿಸಿ ಎಂದೆಲ್ಲ ಹೇಳುತ್ತಾರೆ' ಎಂದು ಶಾಸಕರು ಬೇಸರ ವ್ಯಕ್ತಪಡಿಸಿದರು.

ವಿಧಾನ ಮಂಡಲ ಅಧಿವೇಶನ

'ರಸ್ತೆ ಅಗಲ 45 ಮೀಟರ್‌ಗೆ ಇಳಿಕೆ'

ಬೆಂಗಳೂರು: 'ನಗರದ ಮಧುರೆಯಿಂದ ರಾಜಾನುಕುಂಟೆ ಮಾರ್ಗವಾಗಿ ದೇವನಹಳ್ಳಿ ರಸ್ತೆವರೆಗೆ ನಿರ್ಮಿಸಲಾಗುತ್ತಿರುವ 21.38 ಕಿಮೀ ರಸ್ತೆಯ ಅಗಲವನ್ನು 90 ಮೀಟರ್‌ನಿಂದ 45 ಮೀಟರ್‌ಗೆ ಇಳಿಸಲು ಹೊಸದಾಗಿ ಆದೇಶ ಹೊರಡಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಎಸ್.ಆರ್. ವಿಶ್ವನಾಥ್ ಕೇಳಿದ ಪ್ರಶ್ನೆಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಪರವಾಗಿ ಕೃಷ್ಣ ಬೈರೇಗೌಡ ಉತ್ತರಿಸಿದರು. 'ಮಧುರೆಯಿಂದ ರಾಜಾನುಕುಂಟೆ ಮಾರ್ಗವಾಗಿ ದೇವನಹಳ್ಳಿ ರಸ್ತೆವರೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ (ಕೆಆರ್‌ಡಿಸಿಎಲ್) 21.38 ಕಿಮೀ ಉದ್ದದ ಚತುಷ್ಪಥ ರಸ್ತೆ ನಿರ್ಮಿಸಲಾಗುತ್ತಿದೆ. ಈ ರಸ್ತೆ ಕಾಮಗಾರಿಯಲ್ಲಿ ಈಗಾಗಲೇ 8.04 ಕಿಮೀ ರಸ್ತೆ ಕಾಮಗಾರಿ ಪೂರ್ಣಗೊಳಿಸಲಾಗಿದೆ.ಇನ್ನು 13.34 ಕಿಮೀ ಉದ್ದದ ರಸ್ತೆ ನಿರ್ಮಾಣ ಮಾಡಬೇಕಿದ್ದು, ಕಾಮಗಾರಿಗೆ ಅಗತ್ಯವಿರುವ ಭೂ ಸ್ವಾಧೀನಪಡಿಸಿಕೊಳ್ಳಬೇಕಿದೆ. ಅದಕ್ಕಾಗಿ ರಸ್ತೆಯ ಅಗಲ ಕಡಿಮೆ ಮಾಡಲು ಆದೇಶ ಹೊರಡಿಸಲಾಗುವುದು' ಎಂದರು.

'ದೊಡ್ಡಬಳ್ಳಾಪುರಕ್ಕೆ ಮೆಟ್ರೊ: ತಜ್ಞರ ಸಮಿತಿಗೆ ಶಿಫಾರಸು'

ಬೆಂಗಳೂರು: 'ದೊಡ್ಡಬಳ್ಳಾಪುರಕ್ಕೆ ಮೆಟ್ರೊ ರೈಲು ಸಂಪರ್ಕ ಕಲ್ಪಿಸುವ ಸಂಬಂಧ ಸಾಧ್ಯಾಸಾಧ್ಯತೆ ಕುರಿತು ವರದಿ ನೀಡಲು ಸಮಗ್ರ ಚಲನಶೀಲತೆ ಯೋಜನೆಯ (ಸಿಎಂಪಿ) ತಜ್ಞರ ಸಮಿತಿಗೆ ರಾಜ್ಯ ಸರ್ಕಾರದಿಂದ ಶಿಫಾರಸು ಮಾಡಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಧೀರಜ್ ಮುನಿರಾಜು ಕೇಳಿದ ಪ್ರಶ್ನೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರವಾಗಿ ಕೃಷ್ಣ ಬೈರೇಗೌಡ ಉತ್ತರಿಸಿದರು.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ನಮ್ಮ ಮೆಟ್ರೊ 2ಎ ಮತ್ತು 2ಬಿ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಅದು 2027ರ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಜೊತೆಗೆ, 3 ಮತ್ತು 3ಎ ಹಂತಕ್ಕೂ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ಎರಡರಲ್ಲೂ ದೊಡ್ಡಬಳ್ಳಾಪುರಕ್ಕೆ ಮೆಟ್ರೊ ರೈಲು ಮಾರ್ಗ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವ ಇಲ್ಲ' ಎಂದರು.

'ಬೆಂಗಳೂರು ನಗರದಲ್ಲಿ ಮೆಟ್ರೊ ರೈಲು ಮಾರ್ಗ ಯೋಜಿಸಲು ಸಿಎಂಪಿ ಸಮಿತಿಯಿದ್ದು, ಅದು ಯಾವ ಮಾರ್ಗ ನಿರ್ಮಾಣ ಮಾಡಬೇಕು ಎಂದು ಯೋಜಿಸಲಿದೆ. ಆದರೂ, ಭವಿಷ್ಯದ ಮೆಟ್ರೊ ರೈಲು ವ್ಯವಸ್ಥೆ ಒದಗಿಸಲು ಯಲಹಂಕ- ರಾಜಾನುಕುಂಟೆ- ದೊಡ್ಡಬಳ್ಳಾಪುರ ಸೇರಿದಂತೆ 26 ಕಿ.ಮೀ ಮೆಟ್ರೊ ಕಾರಿಡಾರ್ ನಿರ್ಮಾಣಕ್ಕೆ ಈ ಹಿಂದೆ ತಾತ್ಕಾಲಿಕ ಮಾಸ್ಟರ್ ಪ್ಲ್ಯಾನ್ ಮಾಡಲಾಗಿತ್ತು. ಆದರೆ, ಅದನ್ನು ಮುಂದುವರಿಸಿರಲಿಲ್ಲ. ಇದೀಗ ಪ್ರಸ್ತಾವವನ್ನು, ಸಿಎಂಪಿ ತಜ್ಞರ ಸಮಿತಿಗೆ ಶಿಫಾರಸು ಮಾಡಲಾಗುವುದು' ಎಂದರು.

ಶಾಸಕ ಸುರೇಶ್‌ಕುಮಾರ್‌ಗೆ ತೇಜೋವಧೆ: ಹಕ್ಕುಚ್ಯುತಿ ಸಮಿತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದನದಲ್ಲಿ ಆಡಿದ ಮಾತುಗಳನ್ನೇ ಮುಂದಿಟ್ಟುಕೊಂಡು ಬಿಜೆಪಿಯ ಎಸ್. ಸುರೇಶ್ ಕುಮಾರ್ ಅವರ ಮನೆಯ ಗೋಡೆಗಳಿಗೆ ಕಾಂಗ್ರೆಸ್ ಕಾರ್ಯಕರ್ತರು ಕೀಳುಮಟ್ಟದ ಪೋಸ್ಟರ್‌ಗಳನ್ನು ಅಂಟಿಸಿ, ತೇಜೋವಧೆ ಮಾಡಿರುವ ಪ್ರಕರಣವನ್ನು ಹಕ್ಕು ಬಾಧ್ಯತಾ ಸಮಿತಿಗೆ ವಹಿಸುವುದಾಗಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ರೂಲಿಂಗ್ ನೀಡಿದರು.

ಸುರೇಶ್ ಕುಮಾರ್

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಸುರೇಶ್ ಕುಮಾರ್, 'ನಾನು ಸಾಮಾನ್ಯವಾಗಿ ರೂಢಿಯಲ್ಲಿರುವ ಒಂದು ಮಾತನ್ನು ಹೇಳಿದ್ದೆ. ಬಳಿಕ ಆ ಮಾತನ್ನು ಕಡತದಿಂದ ತೆಗೆಯುವಂತೆ ಮತ್ತು ಅದನ್ನು ವಾಪಸ್ ತೆಗೆದುಕೊಳ್ಳು ತ್ತೇನೆ ಎಂದೂ ಹೇಳಿದ್ದೇನೆ. ಕಡತದಿಂದ ತೆಗೆಯುವಂತೆ ಮುಖ್ಯಮಂತ್ರಿ ಕೂಡ ಹೇಳಿದ್ದರು. ಈ ಪ್ರಕರಣ ಮುಕ್ತಾಯವಾಯಿತು ಎಂದು ನಾನು ಅಂದುಕೊಂಡಿದ್ದೆ' ಎಂದರು.

'ಆದರೆ, ಕೆಲವು ಕಾಂಗ್ರೆಸ್ ಕಾರ್ಯರ್ತರು ಇದೇ 24ರಂದು ನನ್ನ ಮನೆಯ ಗೋಡೆಯ ಮೇಲೆ ಪೋಸ್ಟರ್ ಗಳನ್ನು ಅಂಟಿಸಿದ್ದಾರೆ. ಮರುದಿನ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ರಾಜಕೀಯ ದುರುದ್ದೇಶದಿಂದ ಈ ರೀತಿ ತೇಜೋವಧೆ ಮಾಡಲಾಗಿದೆ. ಸದನದ ಒಳಗೆ ನಡೆದ ಪ್ರಕರಣವನ್ನು ಉಲ್ಲೇಖಿಸಿ ದೂರು ದಾಖಲಾಗಿರುವುದು ವಿಧಾನಸಭಾ ಸದಸ್ಯನಾಗಿ ನನ್ನ ಕರ್ತವ್ಯ ನಿರ್ವಹಣೆಗೆ ಚ್ಯುತಿ ಉಂಟುಮಾಡಿದೆ. ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದು ಕೋರಿದರು.

ಸುರೇಶ್ ಕುಮಾರ್ ಬೆಂಬಲಕ್ಕೆ ನಿಂತ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, 'ಸದನದಲ್ಲಿ ಮಾತನಾಡಿದ್ದನ್ನು ವಾಪಸ್ ಪಡೆದ ಮೇಲೂ ಮನೆ ಬಳಿ ಹೋಗಿ ಪ್ರತಿಭಟಿಸು ವುದು ಸರಿಯಲ್ಲ. ಈಗ ನಿಮ್ಮ ಸರ್ಕಾರ ಇದೆ ಎಂದು ಈ ರೀತಿ ಮಾಡುತ್ತಿದ್ದೀರಾ? ಮುಂದೆ ನಮ್ಮ ಸರ್ಕಾರವೂ ಬರುತ್ತದೆ. ಇಂತಹ ಕೆಟ್ಟ ಸಂಪ್ರದಾಯಕ್ಕೆ ತಡೆ ಹಾಕಬೇಕು' ಎಂದು ಆಗ್ರಹಿಸಿದರು.

ಘಟನೆಯನ್ನು ಖಂಡಿಸಿದ ಗೃಹ ಸಚಿವ ಜಿ. ಪರಮೇಶ್ವರ ಅವರು, 'ಯಾರು ಪೋಸ್ಟರ್ ಅಂಟಿಸಿದ್ದಾರೊ ಅವರ ಬಗ್ಗೆ ಖುದ್ದಾಗಿ ನಾನೇ ವಿಚಾರಿಸುತ್ತೇನೆ. ಶಾಸಕರ ಮನೆ ಬಳಿ ಹೋಗಿ ಈ ರೀತಿ ಮಾಡುವುದು ಒಳ್ಳೆಯ ಸಂಪ್ರದಾಯ ಅಲ್ಲ. ದೂರು ನೀಡುವ ಹಕ್ಕು ಎಲ್ಲರಿಗೂ ಇದೆ. ಅದನ್ನು ಪೊಲೀಸರು ನೋಡಿಕೊಳ್ಳುತ್ತಾರೆ. ಆದರೆ, ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತೇನೆ' ಎಂದರು.

'ಸದನ ಕುಟುಂಬ ಇದ್ದಂತೆ. ಸದನದ ಒಳಗೆ ನಡೆದಿರುವ ವಿಚಾರದಲ್ಲಿ ಹೊರಗಡೆ ಇರುವವರು ಮಧ್ಯಪ್ರವೇಶಿಸುವುದು ಸರಿಯಲ್ಲ. ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಪ್ರಕರಣವನ್ನು ಹಕ್ಕುಚ್ಯುತಿ ಸಮಿತಿಗೆ ವಹಿಸುತ್ತೇನೆ' ಎಂದು ಸಭಾಧ್ಯಕ್ಷರು ಹೇಳಿದರು.

'ದಕ್ಷಿಣಾಸ್ಯದರ್ಶಿನಿ' ವಸ್ತು ಪ್ರದರ್ಶನ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೇದಾಂತ ಭಾರತೀ ಹಾಗೂ ಪರಮ್ ಫೌಂಡೇಷನ್‌ನಿಂದ ಜ.29ರಿಂದ ಫೆ. 1ರವರೆಗೆ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ 'ದಕ್ಷಿಣಾಸ್ಯದರ್ಶಿನಿ' ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ' ಎಂದು ವೇದಾಂತ ಭಾರತಿ ಟ್ರಸ್ಟಿ ಹಾಗೂ ಹಿರಿಯ ವಕೀಲ ಎಸ್.ಎಸ್. ನಾಗಾನಂದ ತಿಳಿಸಿದರು.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಪ್ರದರ್ಶನದಲ್ಲಿ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಹಾಗೂ ತಂತ್ರಜ್ಞಾನದ ವಿವಿಧ ಪ್ರಯೋಗಗಳ ಮೂಲಕ ದಕ್ಷಿಣಾಮೂರ್ತಿ ಅಷ್ಟಕದಲ್ಲಿನ ವಿಚಾರಗಳನ್ನು ಎಲ್ಲರಿಗೂ ತಿಳಿಸಲಾಗುತ್ತದೆ. ಈ ಎಲ್ಲ ಪ್ರಯೋಗಗಳನ್ನು ಶಾಲಾ–ಕಾಲೇಜಿನ ವಿದ್ಯಾರ್ಥಿಗಳೇ ಪ್ರಸ್ತುತಪಡಿಸಲಿದ್ದಾರೆ. ವೇದಾಂತವನ್ನು ಅಭ್ಯಾಸ ಮಾಡಿದ ಸಂಸ್ಕೃತ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು, ವಿದ್ವಾಂಸರು ಆಯಾ ಪ್ರಯೋಗಕ್ಕೆ ಸಂಬಂಧಿಸಿದಂತೆ ಆಧ್ಯಾತ್ಮಿಕ ಅಂಶಗಳ ವಿವರಣೆ ನೀಡಲಿದ್ದಾರೆ' ಎಂದರು.

'ವಿವಿಧ ಕಾಲೇಜು ಹಾಗೂ ಸಂಸ್ಥೆಗಳು 50ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಿದ್ದು, ಪ್ರತಿದಿನ ಬೆಳಿಗ್ಗೆ 10 ಗಂಟೆಯಿಂದ ಸಂಜೆ 7.30ರವರೆಗೆ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಈ ಪ್ರದರ್ಶನ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ' ಎಂದರು.

29ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಇಸ್ರೊದ ಮಾಜಿ ಅಧ್ಯಕ್ಷ ಹಾಗೂ ಚಾಣಕ್ಯ ವಿಶ್ವವಿದ್ಯಾಲಯದ ಕುಲಪತಿ ಎಸ್. ಸೋಮನಾಥ, ಇತಿಹಾಸ ತಜ್ಞ ವಿಕ್ರಮ್ ಸಂಪತ್ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಜ. 31ರಂದು ಬೆಳಿಗ್ಗೆ 11ಕ್ಕೆ ಅರಮನೆ ಮೈದಾನದ ಕೃಷ್ಣವಿಹಾರದಲ್ಲಿ ಆಯೋಜಿಸಿರುವ 'ವಿವೇಕದೀಪ್ತಿ' ಸಮಾವೇಶದಲ್ಲಿ ದಕ್ಷಿಣಾಮೂರ್ತಿ ಅಷ್ಟಕವನ್ನು ಸಾಮೂಹಿಕ ಪಾರಾಯಣ ಮಾಡಲಾಗುತ್ತದೆ. ಶೃಂಗೇರಿ ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಅವರು ಈ ಸಮಾವೇಶದ ಸಾನ್ನಿಧ್ಯ ವಹಿಸಲಿದ್ದಾರೆ. ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿ ಶಂಕರಭಾರತೀ ಸ್ವಾಮೀಜಿ, ಬ್ರಹ್ಮಾನಂದ ಭಾರತೀ ಸ್ವಾಮೀಜಿ ಭಾಗವಹಿಸಲಿದ್ದಾರೆ' ಎಂದರು.

ನಿಧನ ವಾರ್ತೆ

ಕುಲಶೇಖರಿ

ಬೆಂಗಳೂರು: ಕುಲಶೇಖರಿ ಎಂದೇ ಪ್ರಸಿದ್ಧರಾದ ಲೇಖಕಿ ಉಷಾದೇವಿ (86) ಮಂಗಳವಾರ ನಿಧನರಾದರು.

ಕುಲಶೇಖರಿ

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ಮೃತರಿಗೆ ಇಬ್ಬರು ಪುತ್ರಿಯರು ಹಾಗೂ ಪುತ್ರ ಇದ್ದಾರೆ.

ಅವರು ಕರ್ನಾಟಕ ಲೇಖಕಿಯರ ಸಂಘದ ಸ್ಥಾಪಕ ಸದಸ್ಯರಾಗಿ, 47 ವರ್ಷಗಳಿಂದ ಸಂಘದೊಂದಿಗೆ ಒಡನಾಟ ಇರಿಸಿಕೊಂಡಿದ್ದರು.

ಕ್ಷಿತಿಜ, ಸಂಕಲ್ಪ, ಬಿಕ್ಕುಗಳು, ಶತರಂಜ, ಏಕಲ ಮುಂತಾದ ಕವನ ಸಂಕಲನಗಳು, ಇರುವುದೊಂದೇ ಜೀವ (ಕಾದಂಬರಿ), ಮಂಗಲ ಮಾಂಗಲ್ಯ (ನಾಟಕ), ಅಳಿದ ಗೆಳತಿಗೆ ಉಳಿದ ನೆನಪು (ಜೀವನ ಚರಿತ್ರೆ), ನಾನೇನೂ ಅಲ್ಲ ಮತ್ತು ಎಲ್ಲರಂತಲ್ಲ (ಆತ್ಮಚರಿತ್ರೆ) ಸೇರಿ ಅವರ ಹಲವು ಕೃತಿಗಳು ಪ್ರಕಟಗೊಂಡಿವೆ.

ಈ ಶತಮಾನದ ಕನ್ನಡ ಕವಯತ್ರಿಯರು, ಈಜಿಪ್ಟಿನ ಏಕಾಕಿ, ಬೊಗಸೆ ಬುತ್ತಿ ಪ್ರವಾಸ ಕಥನ ಅವರ ಇನ್ನಿತರ ಕೃತಿಗಳು.

ಮಾಧವಸ್ವಾಮಿ

ಬೆಂಗಳೂರು: ಯಶವಂತಪುರ ನಿವಾಸಿ ಪಿ.ವಿ. ಮಾಧವಸ್ವಾಮಿ (78) ಭಾನುವಾರ ನಿಧನರಾದರು.

ಅವರಿಗೆ ನಾಲ್ವರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ನಾಗಮಂಗಲ ತಾಲ್ಲೂಕಿನ ಪಾಲ ಅಗ್ರಹಾರ ಗ್ರಾಮದಲ್ಲಿ ಸೋಮವಾರ ಅಂತ್ಯಕ್ರಿಯೆ ನೇರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

'ಮತದಾರರ ಪಟ್ಟಿ: ಸಮಯ ವಿಸ್ತರಿಸಿ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ ಬರೆಯಲು ಸೂಚನೆ
- ನಾಗರಿಕರಲ್ಲಿ ಅರಿವು ಮೂಡಿಸಲು ಕರೆ

ಬೆಂಗಳೂರು: 'ಐದು ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ಮನೆ–ಮನೆಗೆ ಭೇಟಿ ನೀಡಿ ಮತದಾರರ ಪಟ್ಟಿಯ ತಾಳೆ ಮಾಡಲು ಸಮಯ ವಿಸ್ತರಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ ಬರೆಯಿರಿ' ಎಂದು ಜಿಬಿಎ ಮುಖ್ಯ ಆಯುಕ್ತ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ ರಾವ್ ಅವರು ಚುನಾವಣಾ ವಿಭಾಗಕ್ಕೆ ನಿರ್ದೇಶನ ನೀಡಿದರು.

ನಗರ ಪಾಲಿಕೆಗಳಿಗೆ ವಾರ್ಡ್‌ವಾರು ಮತದಾರರ ಕರಡು ಪಟ್ಟಿ ಪ್ರಕಟಿಸಿದ ನಂತರ, ರಾಜ್ಯ ಚುನಾವಣಾ ಆಯೋಗದ ಪರಿಷ್ಕೃತ ಸುತ್ತೋಲೆ ಬಗ್ಗೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಮಂಗಳವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಜ.19ರಂದು ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿದ್ದು, ಜ.22ರಂದು ರಾಜ್ಯ ಚುನಾವಣಾ ಆಯೋಗವು ಪರಿಷ್ಕೃತ ವೇಳಾಪಟ್ಟಿ ಬಿಡುಗಡೆ ಮಾಡಿದೆ. ಅದರಂತೆ ಆಯಾ ನಗರ ಪಾಲಿಕೆಗಳಲ್ಲಿ ಸಂಬಂಧಿಸಿದ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಚುನಾವಣೆಗೆ ಸಂಬಂಧಿಸಿದ ಶಾಸನಬದ್ಧ ಕಾರ್ಯಗಳನ್ನು ಪೂರ್ಣಗೊಳಿಸಲು ಸಮಯ ವಿಸ್ತರಣೆ ಮಾಡುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಹಿನ್ನೆಲೆಯಲ್ಲಿ ಅವಧಿ ವಿಸ್ತರಣೆಗೆ ಆಯೋಗಕ್ಕೆ ಕೂಡಲೇ ಪತ್ರ ಬರೆಯಬೇಕು ಎಂದರು.

ಎಲ್ಲ ನಗರ ಪಾಲಿಕೆಗಳಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡುವ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸುವ ಕಾರ್ಯ ಕೈಗೊಳ್ಳಬೇಕು ಎಂದು ಹೇಳಿದರು.

ಜಿಬಿಎ ಚುನಾವಣಾ ವಿಭಾಗದ ವಿಶೇಷ ಆಯುಕ್ತ ರಾಮಚಂದ್ರನ್ ಮಾತನಾಡಿ, 'ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಮನೆ–ಮನೆಗೆ ಭೇಟಿ ನೀಡಿ ನಿಗದಿತ ನಮೂನೆಗಳ ಮೂಲಕ ಅರ್ಜಿಗಳನ್ನು ಸ್ವೀಕರಿಸುವ ಕಾರ್ಯ ನಿರ್ವಹಿಸಬೇಕು. ಮತದಾರರ ಕರಡು ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ಇತರೆ ಬದಲಾವಣೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಿಕೊಳ್ಳುವಂತೆ ಹಾಗೂ ದೋಷರಹಿತ ಮತದಾರರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯದಲ್ಲಿ ಸಹಕರಿಸಬೇಕು' ಎಂದು ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಕೋರಿದರು.

ಒಂದು ಮತಗಟ್ಟೆಯಲ್ಲಿ ಗರಿಷ್ಠ 1,500 ಮತದಾರರು ಇರಬೇಕು ಎಂದು ರಾಜ್ಯ ಚುನಾವಣಾ ಆಯೋಗವು ನಿರ್ದೇಶನ ನೀಡಿದೆ. ಅದರಂತೆ ಎಲ್ಲಾ ವಾರ್ಡ್‌ಗಳಲ್ಲಿ ಮತದಾರರ ಸಂಖ್ಯೆಗೆ ಅನುಗುಣವಾಗಿ ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು ಎಂದರು.

ಕೋರಿಕೆ: ವಿಧಾನಸಭಾ ಮತದಾರರ ಹೆಸರು ಒಂದಕ್ಕಿಂತ ಹೆಚ್ಚು ವಾರ್ಡ್‌ಗಳ ಮತದಾರರ ಪಟ್ಟಿಯಲ್ಲಿ ಪುನರಾವರ್ತನೆ ಆಗದಂತೆ ಎಚ್ಚರ ವಹಿಸುವುದು, ವಾರ್ಡ್ ಮತದಾರರ ಪಟ್ಟಿಯನ್ನು ಆಯಾ ವಾರ್ಡ್ ವ್ಯಾಪ್ತಿಗೆ ಒಳಪಡುವ ವಿಧಾನಸಭಾ ಮತದಾರರ ಪಟ್ಟಿಯೊಂದಿಗೆ ತಾಳೆ ಮಾಡುವುದು ಹಾಗೂ 2025ನೇ ಅಕ್ಟೋಬರ್ 1ರ ನಂತರ ವಿಧಾನಸಭಾ ಮತದಾರರ ಪೂರಕ ಪಟ್ಟಿಗಳಂತೆ ಮತದಾರರನ್ನು ವಾರ್ಡ್ ಮತದಾರರ ಕರಡು ಪಟ್ಟಿಗೆ ಪೂರಕ ಪಟ್ಟಿ–1 ರೂಪಿಸಲು ಆನ್‌ಲೈನ್ ಮ್ಯಾಟ್ರಿಕ್ಸ್ ಸಾಫ್ಟ್‌ವೇರ್‌ನಲ್ಲಿ ಅಳವಡಿಸುವ ಕಾರ್ಯಕ್ಕೆ ಹೆಚ್ಚಿನ ಸಮಯ ಬೇಕೆಂದು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮನವಿ ಸಲ್ಲಿಸಿದರು.

ಪುಷ್ಪ ಪ್ರದರ್ಶನ: ಕ್ಯಾನ್ಸರ್ ಪೀಡಿತ ಮಕ್ಕಳಿಂದ ವೀಕ್ಷಣೆ

ಬೆಂಗಳೂರು: ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ 'ತೇಜಸ್ವಿ ವಿಸ್ಮಯ' ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನವನ್ನು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕ್ಯಾನ್ಸರ್ ಪೀಡಿತ ಮಕ್ಕಳು ಕಣ್ತುಂಬಿಕೊಂಡರು.

ಈ ಪ್ರದರ್ಶನಕ್ಕೆ ಸೋಮವಾರವೇ ತೆರೆ ಬಿದ್ದಿದ್ದರೂ, ಮಕ್ಕಳಲ್ಲಿ ಹೊಸ ಚೈತನ್ಯ ಮೂಡಿಸಲು ಸಂಸ್ಥೆಯು ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಮಂಗಳವಾರ ವಿಶೇಷ ವೀಕ್ಷಣೆಯ ವ್ಯವಸ್ಥೆ ಮಾಡಿತ್ತು. ಮಕ್ಕಳು ಕಾಯಿಲೆಯ ನೋವು ಮರೆತು ಲಾಲ್‌ಬಾಗ್‌ನಲ್ಲಿ ಸಂಭ್ರಮಿಸಿದರು. ಬಣ್ಣ–ಬಣ್ಣದ ಹೂವುಗಳಲ್ಲಿ ಅನಾವರಣ ಮಾಡಲಾಗಿದ್ದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಜೀವನ ಗಾಥೆ ವೀಕ್ಷಿಸಿದರು.

'ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಮಾನಸಿಕ ಹಾಗೂ ದೈಹಿಕ ಬಲ ಅಗತ್ಯ. ಫಲಪುಷ್ಪ ಪ್ರದರ್ಶನವು ಮನಸ್ಸಿಗೆ ನೆಮ್ಮದಿ ನೀಡಲಿದೆ. ಪ್ರಕೃತಿಯನ್ನು ಕಣ್ತುಂಬಿಕೊಂಡಾಗ ಮಕ್ಕಳಲ್ಲಿನ ಮಾನಸಿಕ ಒತ್ತಡವೂ ಕಡಿಮೆಯಾಗಲಿದೆ. ಆದ್ದರಿಂದ ಮಕ್ಕಳನ್ನು ಲಾಲ್‌ಬಾಗ್‌ಗೆ ಕರೆತರಲಾಯಿತು' ಎಂದು ಸಂಸ್ಥೆಯ ನಿರ್ದೇಶಕ ಡಾ.ಟಿ. ನವೀನ್ ತಿಳಿಸಿದರು.

ಕೆಎಂಎಫ್ ಮಳಿಗೆಗೆ ಅಮುಲ್ ಅಧ್ಯಕ್ಷರ ಭೇಟಿ

ದುಬೈನಲ್ಲಿ ನಡೆಯುತ್ತಿರುವ ಗಲ್ಫ್ ಫುಡ್ ಫೇರ್‌ನಲ್ಲಿ ಕೆಎಂಎಫ್ ತೆರೆದಿರುವ ನಂದಿನಿ ಉತ್ಪನ್ನಗಳ ಮಳಿಗೆಗೆ ಅಮುಲ್ ಅಧ್ಯಕ್ಷ ಅಶೋಕಭಾಯಿ ಚೌಧರಿ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಹಾಗೂ ಮಾರುಕಟ್ಟೆ ನಿರ್ದೇಶಕ ಸತೀಶ್, ಅಮುಲ್ ಅಧಿಕಾರಿಗಳು ಉಪಸ್ಥಿತರಿದ್ದರು

30ಕ್ಕೆ ಸಂವಿಧಾನ ನಡಿಗೆ ಕಾರ್ಯಕ್ರಮ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯದ ಸಹಯೋಗ, ಬೆಂಗಳೂರು ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಜ.30ರಂದು ಬೆಳಿಗ್ಗೆ 7ಕ್ಕೆ 'ಸಂವಿಧಾನವೇ ಬೆಳಕು– ಹೆಜ್ಜೆಯಿಡು ಬೆಂಗಳೂರು' ಸಂವಿಧಾನ ನಡಿಗೆ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯ ವೆಂಕಟಗಿರಿ ಗೌಡ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವ ಜತೆಗೆ ಮೌಲ್ಯ, ಹಕ್ಕು, ಮತ್ತು ಕರ್ತವ್ಯಗಳನ್ನು ಗೌರವಿಸುವ, ಅರಿವು ಮೂಡಿಸುವ ಉದ್ದೇಶದಿಂದ ಸಂವಿಧಾನ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿದೆ. ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವ ವಿಶೇಷ ವಿಚಾರ ಸಂಕಿರಣದೊಂದಿಗೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ನಂತರ, ನಡಿಗೆಗೆ ಚಾಲನೆ ನೀಡಲಾಗುತ್ತದೆ.

ಪ್ರವೇಶ ಉಚಿತವಾಗಿದ್ದು, ನೋಂದಣಿ ಕಡ್ಡಾಯವಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ ದೊಂದಿಗೆ ಸಂಯೋಜಿತವಾಗಿರುವ ಎಲ್ಲ ಕಾಲೇಜುಗಳ ಪದವಿ ವಿದ್ಯಾರ್ಥಿಗಳು ಭಾಗವಹಿಸಲು ಮುಕ್ತ ಅವಕಾಶ ಇದೆ. ನೋಂದಣಿ ಮಾಡಿಕೊಂಡವರಿಗೆ ಟಿ–ಶರ್ಟ್ ಮತ್ತು ಕ್ಯಾಪ್ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ 9901918805

ಪಕ್ಷದ ಕಚೇರಿಗೆ ನಿರಾಸಕ್ತಿ: ವರಿಷ್ಠರಿಗೆ ಮಾಹಿತಿ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಪಕ್ಷದ ನೂರು ಕಚೇರಿಗಳ ನಿರ್ಮಾಣ ವಿಚಾರದಲ್ಲಿ ಆಸಕ್ತಿ ತೋರಿರುವ ಮತ್ತು ತೋರದವರ ಕುರಿತು ಎರಡು ದಿನಗಳಲ್ಲಿ ಎಐಸಿಸಿ ನಾಯಕರಿಗೆ ಮಾಹಿತಿ ನೀಡುತ್ತೇನೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಭವನ್ ಟ್ರಸ್ಟ್ ಸಮಿತಿಯ ಸಭೆಯ ಬಳಿಕ ಮಾತನಾಡಿದ ಅವರು, 'ಲಿಖಿತ ಮಾಹಿತಿ ನೀಡುವಂತೆ ವರಿಷ್ಠರು ಸೂಚಿಸಿದ್ದಾರೆ' ಎಂದರು.

'ಯಾವ ತಾಲ್ಲೂಕಿನಲ್ಲಿ ಕಚೇರಿ ಆಗಿದೆ, ಯಾವ ತಾಲ್ಲೂಕಿನಲ್ಲಿ ಆಗಿಲ್ಲ, ಕಚೇರಿ ನಿರ್ಮಾಣ ವಿಚಾರದಲ್ಲಿ ಯಾರು ಆಸಕ್ತಿ ವಹಿಸಿದ್ದಾರೆ, ಯಾರು ಆಸಕ್ತಿ ವಹಿಸಿಲ್ಲ ಎನ್ನುವುದನ್ನು ಸಭೆಯಲ್ಲಿ ಚರ್ಚಿಸಲಾಯಿತು' ಎಂದರು.

'ರಾಜ್ಯದಲ್ಲಿರುವ ಪಕ್ಷದ ಆಸ್ತಿಗಳು, ದಾಖಲೆಗಳು, ತೆರಿಗೆ ಪಾವತಿ ಸೇರಿದಂತೆ ಅನೇಕ ಅಂಶಗಳ ಬಗ್ಗೆ ಸಭೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ನೂತನ ಕಚೇರಿ ನಿರ್ಮಾಣ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂದು ಎಐಸಿಸಿ ನಾಯಕರು ಮಾಹಿತಿ ಪಡೆದರು. ಗಾಂಧಿ ನಗರದಲ್ಲಿರುವ ಕಾಂಗ್ರೆಸ್ ಪಕ್ಷದ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಸಿದ್ಧವಾಗಿದೆ' ಎಂದರು.

ಪಕ್ಷದ ರಾಜ್ಯ ಉಸ್ತುವಾರಿಯೂ ಆಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಕಾರ್ಯದರ್ಶಿಗಳಾದ ಅಭಿಷೇಕ್ ದತ್, ಗೋಪಿನಾಥ್ ಪಳನಿಸ್ವಾಮಿ, ಸಚಿವರಾದ ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ರಹೀಂ ಖಾನ್ ಸಭೆಯಲ್ಲಿ ಉಪಸ್ಥಿತರಿದ್ದರು.

'ಸಿ' ವರ್ಗದ ದೇವಸ್ಥಾನಗಳ ಮಾಸಿಕ ವೆಚ್ಚ ₹6000ದಿಂದ ₹10 ಸಾವಿರಕ್ಕೆ ಏರಿಸಲು ಆಗ್ರಹ

ಪೂಜಾ ವೆಚ್ಚದ ಅನುದಾನ ಹೆಚ್ಚಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ಹಿಂದೂ ದೇವಾಲಯಗಳ ಪೂಜಾ ಸಾಮಗ್ರಿಗಳ ವೆಚ್ಚಕ್ಕೆ ನೀಡುತ್ತಿರುವ ಅನುದಾನವನ್ನು ಹೆಚ್ಚಿಸುವಂತೆ ಕೋರಿ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟವು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಮಾಡಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಒಕ್ಕೂಟದ ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್, ನಿಯೋಗವು ಮಂಗಳವಾರ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಿ ಈ ಬಗ್ಗೆ ಮನವಿ ಪತ್ರ ಸಲ್ಲಿಸಿತು ಎಂದು ತಿಳಿಸಿದ್ದಾರೆ.

'ಸಿ' ವರ್ಗದ 36 ಸಾವಿರ ದೇವಸ್ಥಾನಗಳ ಪೂಜಾ ಸಾಮಗ್ರಿಗಳು, ವಿದ್ಯುತ್ ವೆಚ್ಚ, ನಿತ್ಯ ಎರಡು ಬಾರಿ ಪೂಜೆ ಮಾಡಲು ಮುಜರಾಯಿ ಇಲಾಖೆ ಮೂಲಕ ಮಾಸಿಕ ₹6 ಸಾವಿರ ಹಣ ನೀಡಲಾಗುತ್ತಿದೆ. ಅದನ್ನು ₹10 ಸಾವಿರಕ್ಕೆ ಏರಿಸುವಂತೆ ಮನವಿ ಮಾಡಲಾಯಿತು' ಎಂದು ತಿಳಿಸಿದ್ದಾರೆ.

'ಎ' ಮತ್ತು 'ಬಿ' ವರ್ಗದ ದೇವಸ್ಥಾನಗಳ ಪೂಜಾ ಸಾಮಗ್ರಿಗಳ ವೆಚ್ಚದಲ್ಲಿ ಶೇ 35ರಷ್ಟು ಪಾಲನ್ನು ಇಲಾಖೆ ಭರಿಸುತ್ತಿದೆ. ಅದನ್ನು ಶೇ 50ಕ್ಕೆ ಹೆಚ್ಚಿಸುವಂತೆ ಮನವಿ ಮಾಡಲಾಯಿತು. ಸಚಿವರು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದರು' ಎಂದು ಅವರು ಹೇಳಿದ್ದಾರೆ.

ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ವತಿಯಿಂದ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು

ನಗರದಲ್ಲಿ ಇಂದು

ಉತ್ಪಾದನೆಯಾಚೆಗೆ ಕೃಷಿ–ರೈತರ ಸಬಲೀಕರಣ: ಅತಿಥಿಗಳು: ಎನ್. ಚಲುವರಾಯಸ್ವಾಮಿ, ಆಯೋಜನೆ: ಕೃಷಿ ಇಲಾಖೆ, ಸ್ಥಳ: ಸಿಲ್ವರ್ ಜುಬಲಿ ಸಭಾಂಗಣ, ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯ, ಕೆ. ನಾರಾಯಣಪುರ, ಕೊತ್ತನೂರು, ಬೆಳಿಗ್ಗೆ 9.30

ಪ್ರೊ.ಕ.ವೆಂ. ರಾಜಗೋಪಾಲ್–100 ಜನ್ಮ ಶತಮಾನೋತ್ಸವದ ಉದ್ಘಾಟನೆ: ಬಿ. ಸುರೇಶ್, ಅಧ್ಯಕ್ಷತೆ: ಟಿ.ಟಿ. ಶ್ರೀನಿವಾಸನ್, ಅತಿಥಿಗಳು: ಎಚ್.ಎಸ್. ರಾಘವೇಂದ್ರ ರಾವ್, ಕೆ.ವಿ. ನಾಗರಾಜಮೂರ್ತಿ, ಶಶಿಧರ್ ಭಾರಿಘಾಟ್, ಆಯೋಜನೆ: ಎಂಇಎಸ್ ಕಲಾ ವೇದಿ, ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಎಂಇಎಸ್ ಕಾಲೇಜಿನ ಸಭಾಂಗಣ, 15ನೇ ಅಡ್ಡ ರಸ್ತೆ, ಮಲ್ಲೇಶ್ವರ, ಮಧ್ಯಾಹ್ನ 3.30

ಆರಾಧನಾ ಸಂಗೀತೋತ್ಸವ: ಗಾಯನ: ದಿಲಿಪ್ ಸಿಂಹ, ಪಿಟೀಲು: ಅಚ್ಯುತರಾವ್, ಮೃದಂಗ: ಅನಿರುದ್ಧ ಭಟ್, ಖಂಜೀರಾ: ಕಿರಣ್ ಕುಮಾರ್, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ದಿ ಬ್ಲೈಂಡ್, ಜೆ.ಪಿ. ನಗರ, ಸಂಜೆ 5

61ನೇ ನಾದಜ್ಯೋತಿ ಸಂಗೀತ ಸಂಭ್ರಮ: ಉದ್ಘಾಟನೆ: ವಲ್ಲಭ ಕೆ.ಎಸ್., ಅತಿಥಿ: ರಾಮಕೃಷ್ಣ, ಯುಗಳ ಗಾಯನ: ಅರ್ಚನಾ, ಸಮನ್ವಿ, ಪಿಟೀಲು: ಸಿ.ವಿ. ಶ್ರುತಿ, ಮೃದಂಗ: ಬಿ.ಎಸ್. ಪ್ರಶಾಂತ್, ಮೋರ್ಚಿಂಗ್: ಭಾಗ್ಯಲಕ್ಷ್ಮಿ ಎಂ. ಕೃಷ್ಣ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 5.30ರಿಂದ

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ಎಂ.ಎಸ್. ಮಹಾಬಲೇಶ್ವರ್, ವೈ.ಎ. ದಂತಿ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ನಾಟಕೋತ್ಸವ: 'ಗುಲಾಮನ ಸ್ವಾತಂತ್ರ್ಯ ಯಾತ್ರೆ' ನಾಟಕ ಪ್ರದರ್ಶನ: ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ, ಆಯೋಜನೆ: ಯಕ್ಷ ರಂಗಾಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ಕ್ಯಾನ್ಸರ್ ಚಿಕಿತ್ಸೆಗೆ ಹೊಸ ತಂತ್ರ!

• ಎಸ್.ಎನ್.ಹೆಗಡೆ

ಶರೀರಕ್ಕೆ ಯಾವುದೇ ಸೋಂಕು ತಗುಲಿದರೆ ಅದನ್ನು ನಿವಾರಿಸಿಕೊಳ್ಳುವ ಸಾಮರ್ಥ್ಯ ಪ್ರತಿಯೊಬ್ಬ ವ್ಯಕ್ತಿಗೂ ಜೀವಿಗೂ ಇರುತ್ತದೆ. ಶರೀರದಲ್ಲಿಯೇ ಇರುವ ಪ್ರತಿರಕ್ಷಣಾ ವ್ಯವಸ್ಥೆಯು ಸೋಂಕನ್ನು ನಿವಾರಿಸುತ್ತದೆ. ಇದು ಜೀವಿಗಳಿಗೆ ನಿಸರ್ಗ ನೀಡಿದ ವರದಾನ. ಯಾವುದೇ ಸೋಂಕು, ಶರೀರವನ್ನು ಪ್ರವೇಶಿಸಿದಾಗ ಶರೀರದಲ್ಲಿರುವ ಕೆಲವು ರಕ್ಷಣಾತ್ಮಕ ಜೀವಕೋಶಗಳು ಪ್ರತಿಕಾಯಗಳನ್ನು ಸಂಶ್ಲೇಷಿಸುತ್ತವೆ. ಈ ಪ್ರತಿಕಾಯಗಳು ಸೋಂಕನ್ನು ಬಂಧಿಸಿ ಅವನ್ನು ಕ್ರಿಯಾಹೀನಗೊಳಿಸುತ್ತವೆ. ಸೋಂಕು ಅಧಿಕವಾದರೆ ಸೂಕ್ತ ಔಷಧವನ್ನು ಸೇವಿಸುವುದರ ಮೂಲಕ ಪರಿಹರಿಸಿಕೊಳ್ಳಬಹುದು.

ಕ್ಯಾನ್ಸರನ್ನು ರೋಗವೆಂದು ಹೇಳುತ್ತೇವಾದರೂ ಅದು ಯಾವುದೇ ಸೋಂಕಿನಿಂದ ಉಂಟಾಗುವುದಿಲ್ಲ. ಅದೊಂದು ವಿಶಿಷ್ಟವಾದ ಆಂಗಿಕ ಸ್ಥಿತಿ. ಬೆಳವಣಿಗೆಯ ಹಂತವನ್ನು ಪೂರೈಸಿ, ನಿಶ್ಚಿತ ಅಂಗಗಳಲ್ಲಿ ನಿಶ್ಚಿತ ಕಾರ್ಯಗಳನ್ನು ಮಾಡುತ್ತಿರುವ ಜೀವಕೋಶಗಳು ಇದ್ದಕ್ಕಿದ್ದಂತೆ ತಮ್ಮ ಕೆಲಸವನ್ನು ನಿಲ್ಲಿಸಿ ಬೆಳವಣಿಗೆಯ ಹಂತದಲ್ಲಿರುವ ಜೀವಕೋಶಗಳಂತೆ ವಿಭಜನೆಗೊಳ್ಳತೊಡಗುತ್ತವೆ. ಕೋಶಗಳ ಗುಂಪನ್ನೊಳಗೊಂಡ ಗೆಡ್ಡೆ ಅಥವಾ ಕ್ಯಾನ್ಸರ್ ಪೀಡಿತ ಅಂಗ ಬೆಳೆಯುತ್ತದೆ. ಮುಂದೆ ಕ್ಯಾನ್ಸರ್ ಕೋಶಗಳು ಗಡ್ಡೆಗಳನ್ನು ಬಿಟ್ಟು ಶರೀರವನ್ನೆಲ್ಲ ಆಕ್ರಮಿಸಿ ಎಲ್ಲ ಕಡೆ ವೃದ್ಧಿಗೊಂಡು ಅಂತಿಮವಾಗಿ ವ್ಯಕ್ತಿಯ ಸಾವಿನಲ್ಲಿ ಕೊನೆಗೊಳ್ಳುತ್ತದೆ. ಕ್ಯಾನ್ಸರ್ ಬೆಳವಣಿಗೆ ಯಾವ ಹಂತದಲ್ಲಿದೆ ಎಂಬುದನ್ನು ಅವಲಂಬಿಸಿ ಅದನ್ನು ಪ್ರಾಥಮಿಕ, ದ್ವಿತೀಯ ಹಾಗೂ ಅಂತಿಮ ಹಂತಗಳೆಂದು ಗುರುತಿಸಲಾಗುತ್ತದೆ.

ಕ್ಯಾನ್ಸರಿಗೆ ಮದ್ದನ್ನು ಕಂಡುಹಿಡಿಯುವ ಪ್ರಯತ್ನ ಒಂದು ಶತಮಾನಕ್ಕಿಂತ ಹಿಂದೆಯೇ ಆರಂಭವಾಯಿತು. ಕೀಮೊಥೆರಪಿ, ರೇಡಿಯೋಥೆರಪಿ – ಹೀಗೆ ಹಲವು ವಿಧಾನಗಳನ್ನು ಬಳಕೆಗೆ ತರಲಾಯಿತಾದರೂ ಅವು ಯಾವುದರಿಂದಲೂ ಖಚಿತವಾದ ನಿರ್ಣಾಯಕ ಫಲಿತಾಂಶಗಳು ದೊರೆಯಲಿಲ್ಲ. ಮೊದಲ ಹಂತಗಳಲ್ಲಿರುವ ಕ್ಯಾನ್ಸರನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸಬಹುದಾದರೂ ಎರಡನೆಯ ಹಂತವನ್ನು ದಾಟಿ ಅಂತಿಮ ಹಂತ ತಲುಪಿದ ನಂತರ ಅದರ ಚಿಕಿತ್ಸೆ ಸಾಧ್ಯವಿಲ್ಲ. ಆದ್ದರಿಂದಲೇ ಇಂದಿಗೂ ಕ್ಯಾನ್ಸರ್‌ನಿಂದ ಉಂಟಾಗುವ ಸಾವಿನ ಪ್ರಮಾಣ ಇಳಿಮುಖವಾಗಿಲ್ಲ. ವಿಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರ ಎಷ್ಟೆಲ್ಲ ಬೆಳವಣಿಗೆಯಾಗಿದ್ದರೂ ಇನ್ನೂ ಕೆಲವು ಕ್ಯಾನ್ಸರ್‌ಗಳಿಗೆ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸಲಾಗಿಲ್ಲ.

ಬೇರೆ ಸೋಂಕುಗಳಿಗೆ ಪ್ರತಿಕಾಯಗಳು ಸಂಶ್ಲೇಷಣೆಯಾಗುವಂತೆ ಕ್ಯಾನ್ಸರ್‌ಗೆ ಏಕೆ ಪ್ರತಿಕಾಯಗಳು ಸಂಶ್ಲೇಷಣೆಯಾಗುವುದಿಲ್ಲ ಎಂಬ ಪ್ರಶ್ನೆ ಸ್ವಾಭಾವಿಕ. ಶರೀರವನ್ನು ಪರಕೀಯ ಸೋಂಕುಗಳು ಅಥವಾ ವಸ್ತುಗಳು ಪ್ರವೇಶಿಸಿದಾಗ ಶರೀರದಲ್ಲಿಯೇ ಇರುವ ಬಿಳಿ ರಕ್ತಕಣಗಳ ಪೈಕಿ ಟಿ-ಜೀವಕೋಶಗಳು ಸೋಂಕಿಗೆ ಕಾರಣವಾದ ಪ್ರತಿಜನಕಗಳನ್ನು ಗುರುತಿಸಿ ಪ್ರತಿಕಾಯಗಳನ್ನು ಉತ್ಪತ್ತಿ ಮಾಡುತ್ತವೆ. ಒಂದೊಂದು ಸೋಂಕಿಗೂ ಪ್ರತ್ಯೇಕವಾದ ಪ್ರತಿಕಾಯಗಳೇ ಉತ್ಪನ್ನವಾಗಬೇಕು. ಟಿ-ಜೀವಕೋಶಗಳಿಗೆ ಯಾವುದೇ ವಸ್ತುವನ್ನು ಸ್ವಂತ ಅಥವಾ ಪರಕೀಯ ಎಂದು ಗುರುತಿಸುವ ಹಾಗೂ ಪರಕೀಯ ವಸ್ತುವಿಗೆ ಪ್ರತಿಯಾಗಿ ಪ್ರತಿಕಾಯಗಳನ್ನು ಸಂಶ್ಲೇಷಿಸಿ ಅವನ್ನು ನಿಷ್ಕ್ರಿಯಗೊಳಿಸುವ ಸಾಮರ್ಥ್ಯವಿದೆ. ಟಿ-ಕೋಶಗಳು ಶರೀರದಲ್ಲಿಯೇ ಉತ್ಪತ್ತಿಯಾಗುವ ವಸ್ತುಗಳನ್ನು ಅಥವಾ ಜೀವಕೋಶಗಳನ್ನು ಸ್ವಯಂ ಎಂದು ಗುರುತಿಸಿ ಅವುಗಳ ಮೇಲೆ ಪರಿಣಾಮ ಬೀರುವುದಿಲ್ಲ. ಕ್ಯಾನ್ಸರ್ ಕೋಶಗಳು ಶರೀರದಲ್ಲಿಯೇ ಉತ್ಪನ್ನವಾಗುವುದರಿಂದ ಅವುಗಳ ವಿರುದ್ಧ ಪ್ರತಿಕಾಯಗಳು ಸೃಷ್ಟಿಯಾಗುವುದಿಲ್ಲ. ಟಿ-ಕೋಶಗಳು ಕ್ಯಾನ್ಸರ್ ಕೋಶಗಳನ್ನು ಪರಕೀಯ ಎಂದು ಗುರುತಿಸುವಂತಾದರೆ ಅವು ಪ್ರತಿಕಾಯಗಳನ್ನು ಸಂಶ್ಲೇಷಿಸಬಲ್ಲವು.

1990ರ ದಶಕದ ನಂತರ ಕ್ಯಾನ್ಸರ್ ಕೋಶಗಳ ಹೊರಮೈಯಲ್ಲಿರುವ ಕೆಲವು ವಿಶಿಷ್ಟ ಪ್ರೊಟೀನ್‌ಗಳನ್ನು ಗುರುತಿಸಿ ಕ್ಯಾನ್ಸರ್ ಕೋಶಗಳನ್ನು ಪರಕೀಯ ವಸ್ತುಗಳೆಂದು ಪರಿಗಣಿಸಿ ವಿವಿಧ ಬಗೆಯ ಟಿ-ಜೀವಕೋಶಗಳು ತಯಾರಾಗುವಂತೆ ಪ್ರಚೋದಿಸುವತ್ತ ಸಂಶೋಧನೆಗಳು ನಡೆದವು. ಪ್ರಪಂಚದಾದ್ಯಂತ ಹಲವು ಪ್ರಯೋಗಾಲಯಗಳು ಈ ಪ್ರಯತ್ನ ನಡೆಸಿದವು. ಈ ಪ್ರಯತ್ನದಲ್ಲಿ ಕೆಲವು ಬಗೆಯ ಕ್ಯಾನ್ಸರ್‌ಗಳನ್ನು ಗುರುತಿಸಿ ಚಿಕಿತ್ಸೆ ನೀಡಲು ಸಾಧ್ಯವಾಯಿತೇ ಹೊರತು ಎಲ್ಲ ಬಗೆಯ ಕ್ಯಾನ್ಸರ್‌ಗೆ ಚಿಕಿತ್ಸೆ ಸಾಧ್ಯವಾಗಲಿಲ್ಲ. ಈಗಲೂ ಇಂಥ ಪ್ರಯತ್ನಗಳು ನಡೆಯುತ್ತಲೇ ಇವೆ. ಅದರಿಂದಲೇ ಆಗೊಮ್ಮೆ ಈಗೊಮ್ಮೆ ಯಾವುದೋ ಬಗೆಯ ಕ್ಯಾನ್ಸರ್‌ಗೆ ಮದ್ದನ್ನು ಕಂಡು ಹಿಡಿಯಲಾಗಿದೆ ಎಂದು ವರದಿಗಳು ಬರುತ್ತಲೇ ಇವೆ; ಕ್ಯಾನ್ಸರ್ ಮಾತ್ರ ಪೂರ್ತಿ ನಿರ್ನಾಮವಾಗಲೇ ಇಲ್ಲ.

ಇತ್ತೀಚೆಗೆ 'ಕಾರ್ಟ್-ಟಿ' ಎಂಬ ಹೊಸ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕಳೆದ ವರ್ಷ ಅಮೆರಿಕದ ಸೊಸೈಟಿ ಆಫ್ ಹೆಮಟಾಲಜಿಯ ವಾರ್ಷಿಕ ಸಭೆಯಲ್ಲಿ ಹೂಸ್ಟನ್ ಮೆಥೊಡಿಸ್ಟ್ ಸಂಶೋಧನಾ ಸಂಸ್ಥೆಯ ಕ್ಯಾನ್ಸರ್ ಜೀವಶಾಸ್ತ್ರಜ್ಞ ಬಿನ್ ಹಿ ಎಂಬುವವರು ಈ ಚಿಕಿತ್ಸೆಯ ಬಗ್ಗೆ ಮೊದಲು ವರದಿ ಮಾಡಿದರು. ಈ ತಂತ್ರ ನಿಧಾನವಾಗಿದ್ದು, ಎಲ್ಲ ಕ್ಯಾನ್ಸರ್ ಕೋಶಗಳನ್ನು ನಿರ್ನಾಮ ಮಾಡುವಷ್ಟು ಪ್ರತಿಕಾಯಗಳ ಸಂಶ್ಲೇಷಣೆಯಾಗಲಿಲ್ಲ. ಈ ವಿಧಾನ ಅಸಮರ್ಥವಾದುದರಿಂದ ಕ್ಯಾನ್ಸರ್ ಕೋಶಗಳನ್ನೇ ರಕ್ಷಣಾಕೋಶಗಳನ್ನಾಗಿ ಮಾರ್ಪಡಿಸಿ ಪ್ರತಿರಕ್ಷಣಾ ವ್ಯವಸ್ಥೆಗೆ ಒಡ್ಡಿದರೆ ಹೇಗೆ ಎಂದು ಚಿಂತಿಸಿ ಅದಕ್ಕೆ ತಕ್ಕದಾದ ಪ್ರಾಯೋಗಿಕ ತಂತ್ರಗಳನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸಲಾಯಿತು.

ಈ ತಂತ್ರವನ್ನು ಎರಡು ರೀತಿಯಲ್ಲಿ ನಿರ್ವಹಿಸಬಹುದು. ಮೊದಲನೆಯದು ಸಾಂಪ್ರದಾಯಿಕವಾಗಿ, ವೈದ್ಯರು ಮಿಶ್ರ ಪ್ರತಿಜನಕ ಗ್ರಾಹಕಗಳನ್ನು ('ಕೈಮೆರಿಕ್ ಆಂಟಿಜನ್ ರಿಸೆಪ್ಟಾರ್' ಅಥವಾ ಸಂಕ್ಷಿಪ್ತವಾಗಿ ಹೇಳುವುದಾದರೆ 'ಸಿಎಆರ್-ಟಿ'; ಇದೊಂದು ಪ್ರೊಟೀನ್) ಶರೀರದಲ್ಲಿ ಇರುವ ಟಿ-ಜೀವಕೋಶಗಳನ್ನು ಹೊರತೆಗೆದು, ಅವುಗಳಿಗೆ ಗ್ರಾಹಕಗಳನ್ನು ಸೇರಿಸುವುದು. ಈ ಗ್ರಾಹಕಗಳು ಟಿ-ಜೀವಕೋಶಗಳಿಗೆ ಕ್ಯಾನ್ಸರ್ ಜೀವಕೋಶಗಳನ್ನು ಗುರುತಿಸುವ ಹಾಗೂ ನಾಶಪಡಿಸುವ ಸಾಮರ್ಥ್ಯವನ್ನು ನೀಡುತ್ತವೆ. ಆದರೆ ಈ ವಿಧಾನದಲ್ಲಿ ಕೆಲವು ತೊಂದರೆಗಳು ಎದುರಾದವು. ಟಿ-ಕೋಶಗಳನ್ನು ಕ್ಯಾನ್ಸರ್‌ಪೀಡಿತ ವ್ಯಕ್ತಿಯಿಂದ ಹೊರತೆಗೆದು ಅವನ್ನು ಪ್ರಯೋಗಾಲಯಗಳಲ್ಲಿ ಕೃತಕವಾಗಿ ಬೆಳೆಸಿ, ಮಾರ್ಪಡಿಸಬೇಕು. ಅನಂತರ ಅವುಗಳನ್ನು ವ್ಯಕ್ತಿಗೆ ಅಳವಡಿಸಬೇಕು. ಇದಕ್ಕೆ ಸಾಕಷ್ಟು ಸಮಯ ಹಿಡಿಯುತ್ತದೆ. ಈ ಚಿಕಿತ್ಸೆಯ ವೆಚ್ಚವೂ ಅಧಿಕ; ಸಾಮಾನ್ಯರಿಗೆ ಅದನ್ನು ಭರಿಸಲಾಗುವುದಿಲ್ಲ.

ಎರಡನೆಯದು 'ಇನ್-ವಿವೊ', ಎಂದರೆ ರೋಗಿಯ ಶರೀರದಲ್ಲಿಯೇ ಟಿ-ಜೀವಕೋಶಗಳಿಗೆ ಗ್ರಾಹಕಗಳನ್ನು ನೇರವಾಗಿ ಅಳವಡಿಸುವ ಪ್ರಯತ್ನ. ಈ ವಿಧಾನದಲ್ಲಿ ಗ್ರಾಹಕ ಪ್ರೊಟೀನನ್ನು ಸಂಶ್ಲೇಷಿಸುವ ಜೀನ್ ಅನ್ನೇ ಸ್ಥಳೀಯವಾಗ ಮಾರ್ಪಡಿಸಿದ ನಿರುಪದ್ರವಿ ವೈರಸ್ ಒಂದರ ಮೂಲಕ ಟಿ-ಜೀವಕೋಶಗಳೊಳಗೆ ಸೇರಿಸುವುದು. ಈ ಜೀನ್ ಟಿ-ಜೀವಕೋಶವನ್ನು ಸೇರಿದ ಕೂಡಲೇ ಗ್ರಾಹಕ ಪ್ರೊಟೀನ್ ಸಂಶ್ಲೇಷಣೆಯಲ್ಲಿ ತೊಡಗಿ, ಟಿ-ಕೋಶಗಳು ಕ್ಯಾನ್ಸರ್ ಕೋಶಗಳನ್ನು ತಮ್ಮೆಡೆಗೆ ಸೆಳೆದು ಅವುಗಳನ್ನು ನಾಶಪಡಿಸುತ್ತವೆ.

ಈ ವಿಧಾನವು ಸಾಂಪ್ರದಾಯಿಕ ವಿಧಾನಕ್ಕಿಂತ ವೇಗವಾಗಿದ್ದು ಅದಕ್ಕಿಂತ ಅಗ್ಗವಾಗಿದೆ. ಕಳೆದ ವರ್ಷ ಈ ತಂತ್ರದ ಪರಿಣಾಮಗಳನ್ನು ಅಧ್ಯಯನ ಮಾಡಲು ಆರಂಭಿಸಲಾಗಿದೆ. ಮೊದಲು ನಾಲ್ವರು ರಕ್ತಕ್ಯಾನ್ಸರ್ ಪೀಡಿತರಿಗೆ ಈ ವಿಧಾನವನ್ನು ಅಳವಡಿಸಲಾಯಿತು. ರಕ್ತಕಣಗಳನ್ನು ಉತ್ಪಾದಿಸುವ ಮೂಳೆಗಳ ಮಜ್ಜೆಯಲ್ಲಿ ಮೊದಲು ಕ್ಯಾನ್ಸರ್ ಕೋಶಗಳು ಕಣ್ಮರೆಯಾದವು. ಸ್ವಲ್ಪ ದಿನದಲ್ಲಿಯೇ ಮೂಳೆಮಜ್ಜೆಯ ಹೊರಗಿನ ಗಡ್ಡೆಗಳೂ ನಾಶವಾದವು. ಈ ಫಲಿತಾಂಶಗಳು ಕಾರ್ಟ್-ಟಿ ಚಿಕಿತ್ಸೆಯು ಕ್ಯಾನ್ಸರ್ ತಡೆಗಟ್ಟಲು ಪರಿಣಾಮಕಾರಿಯಾಗಬಹುದು ಎಂದು ಊಹಿಸಲು ಅವಕಾಶ ಮಾಡಿಕೊಟ್ಟಿದೆ. ಪ್ರಯೋಗದ ಹಂತದಲ್ಲಿರುವ ಇನ್-ವಿವೊ ಕಾರ್ಟ್ ತಂತ್ರ ಮುಂದೆ ಕ್ಯಾನ್ಸರ್ ತಡೆಗಟ್ಟುವುದರಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ ಎಂದು ಊಹಿಸಲಾಗಿದೆ. ❖



ಭಾರತದ ಫೋನ್‌ಗಳು ಸ್ಮಾರ್ಟ್ ಆಗುತ್ತಿವೆ

• ಕೃಷ್ಣಭಟ್

ಕೆಲವು ದಿನಗಳ ಹಿಂದೆ ಸ್ಮಾರ್ಟ್‌ಫೋನ್ ಮಾರ್ಕೆಟ್ ಅನ್ನು ಗಮನಿಸುತ್ತಿರುವವರಿಗೆ ಒಂದು ದೊಡ್ಡ ಆಘಾತಕಾರಿಯಂತಹ ಸುದ್ದಿಯೊಂದು ಹರಡಿತ್ತು. ಚೀನಾ ಮೂಲದ ಒನ್‌ಪ್ಲಸ್ ಕಂಪನಿ ಭಾರತದಲ್ಲಿ ಬಾಗಿಲು ಹಾಕುತ್ತಿದೆ ಎಂಬುದು ಈ ಸುದ್ದಿ! ತಕ್ಷಣವೇ ಕಂಪನಿ 'ಇಲ್ಲ, ನಾವು ಭಾರತದಲ್ಲಿ ಎಂದಿನಂತೆಯೇ ಕಾರ್ಯಾಚರಣೆ ಮಾಡುತ್ತಿದ್ದೇವೆ' ಎಂದು ಸ್ಪಷ್ಟನೆ ನೀಡಿತು. ಅದಾದ ಮೇಲೆ, ಮೊನ್ನೆ ಡಾವೋಸ್‌ನಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್, ಮುಂದಿನ ಒಂದು ಅಥವಾ ಒಂದೂವರೆ ವರ್ಷದಲ್ಲಿ ಭಾರತದ್ದೇ ಜಾಗತಿಕ ಸ್ಮಾರ್ಟ್‌ಫೋನ್ ಬ್ರ್ಯಾಂಡ್ ಬಿಡುಗಡೆಯಾಗಲಿದೆ ಎಂದು ಹೇಳಿದರು.

ಈ ಎರಡೂ ಘಟನೆಗಳ ಜೊತೆಗೆ ಭಾರತದ ಸದ್ಯದ ಸ್ಮಾರ್ಟ್‌ಫೋನ್ ಮಾರ್ಕೆಟ್‌ನಲ್ಲಿ ಆಗುತ್ತಿರುವ ಸ್ಥಿತ್ಯಂತರವನ್ನು ಗಮನಿಸಿದರೆ ಭವಿಷ್ಯದಲ್ಲಿ ಭಾರತದಿಂದ ಚೀನಾ ಸ್ಮಾರ್ಟ್‌ಫೋನ್ ಕಂಪನಿಗಳು ಕಾಲುಕೀಳುವ ಹೊತ್ತು ಬರುತ್ತಿದೆ ಎನ್ನಬಹುದು. ಇದನ್ನು ತಕ್ಷಣಕ್ಕೆ ಓದಿದಾಗ ಇದೊಂದು ಅತಿರಂಜಿತ ಅನ್ನಿಸಬಹುದು. ಎಷ್ಟು ಭಾರತೀಯ ಬ್ರ್ಯಾಂಡ್‌ಗಳು ಬಂದು ಅವು ಹಾಗೆಯೇ ನೆಲಕಚ್ಚಿವೆ, ಮೈಕ್ರೋಮ್ಯಾಕ್ಸ್ ಕಥೆ ಏನಾಯ್ತು? ಲಾವಾ ಇನ್ನೂ ಉಸಿರಾಡುತ್ತಿದೆಯೇ? ಜಿಯೋದ ಬೇಸಿಕ್ ಫೋನ್‌ಗಳು ಯಾರ ಕೈಯಲ್ಲಾದರೂ ಕಾಣಿಸುತ್ತಾ ಇದೆಯೇ? - ಎಂದೆಲ್ಲ ಪ್ರಶ್ನೆಗಳು ಮಾಡಬಹುದು.

ಕಳೆದ ಒಂದೆರಡು ವರ್ಷದಲ್ಲಿ ಚೀನಾದ ಹಲವು ಪ್ರಾಡಕ್ಟ್‌ಗಳು ಸದ್ದಿಲ್ಲದೇ ಆನ್‌ಲೈನ್ ಮಾರ್ಕೆಟ್‌ಪ್ಲೇಸ್‌ನಲ್ಲಿ ಕಳೆದ ಒಂದು ಒಂದೂವರೆ ವರ್ಷದಿಂದ ಮರೆಯಾಗುತ್ತಿರುವುದು ಯಾಕೆ?

ಭಾರತದ ಸ್ಮಾರ್ಟ್‌ಫೋನ್ ಮಾರ್ಕೆಟ್‌ನಲ್ಲಿ ಸದ್ದಿಲ್ಲದೇ ಒಂದು ಸಂಚಲನ ನಡೆಯುತ್ತಿದೆ. ಸ್ಮಾರ್ಟ್‌ಫೋನ್‌ಗಳ ಉತ್ಪಾದನೆ ವೆಚ್ಚದಲ್ಲಿ ಹೆಚ್ಚಳವಾಗಿದೆ. ಚಿಪ್‌ಗಳು ಮತ್ತು ಸ್ಕ್ರೀನ್‌ಗಳ ದರದಲ್ಲಿ ಶೇ 40-50ರಷ್ಟು ಏರಿಕೆಯಾಗಿದೆ. ಇದರಿಂದ ಭಾರತದಂತಹ ದೇಶದಲ್ಲಿ ಕಡಿಮೆ ದರದಲ್ಲಿ, ಕಡಿಮೆ ಮಾರ್ಜಿನ್‌ನಲ್ಲಿ ಸ್ಮಾರ್ಟ್‌ಫೋನ್ ಮಾರುವುದು ಕಂಪನಿಗಳಿಗೆ ಕಷ್ಟವಾಗಿದೆ. ಈ ಹಿಂದೆ ಈ ಚೀನಾ ಕಂಪನಿಗಳು ಅತಿ ಕಡಿಮೆ ಮಾರ್ಜಿನ್ ಇಟ್ಟುಕೊಂಡು ಮಾರುತ್ತಿದ್ದವು. ಆದರೆ, ಈಗ ಲಾಭ ಮಾಡುವುದಕ್ಕೆ ಹೊರಟಿವೆ. ಇನ್ನೊಂದು ಕಡೆಗೆ ಭಾರತ ಸರ್ಕಾರವೂ ಇವರ ಮೇಲಿನ ನಿಯಮಗಳನ್ನು ಬಿಗಿ ಮಾಡುತ್ತಿದೆ. ಕಡಿಮೆ ಬೆಲೆಯ ಸ್ಮಾರ್ಟ್‌ಫೋನ್‌ಗಳಲ್ಲಿ ಇವರ ಅಸ್ತಿತ್ವವನ್ನು ಕಡಿಮೆ ಮಾಡಿ, ಅಲ್ಲಿ ಭಾರತೀಯ ಕಂಪನಿಗಳು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತಿದೆ. ಲಾವಾ ಕಂಪನಿಯ ಅಗ್ನಿ ಸರಣಿಯ ಫೋನ್‌ಗಳು ವರ್ಷದಿಂದ ವರ್ಷಕ್ಕೆ ಶೇ 100ಕ್ಕಿಂತ ಹೆಚ್ಚು ಮಾರಾಟ ಏರಿಕೆ ಕಾಣುತ್ತಿವೆ. ಆದರೆ, ಅದರ ಮಾರಾಟದ ಸಂಖ್ಯೆಯು ಉಳಿದ ಕಂಪನಿಗಳಿಗೆ ಹೋಲಿಸಿದರೆ ಇನ್ನೂ ಕಡಿಮೆಯೇ ಇದೆ.

ಇನ್ನೊಂದು ಮಹತ್ವದ ಬದಲಾವಣೆಯೇನೆಂದರೆ, ಭಾರತದ ಗ್ರಾಹಕರ ಮನಃಸ್ಥಿತಿಯಲ್ಲಿ ಬದಲಾವಣೆಯಾಗುತ್ತಿದೆ. ಈ ಹಿಂದೆ 10-12 ಸಾವಿರದ ಸ್ಮಾರ್ಟ್‌ಫೋನ್ ತೆಗೆದುಕೊಂಡು ಒಂದೆರಡು ವರ್ಷಕ್ಕೇ 'ಸ್ಲೋ' ಆಗುತ್ತಿದ್ದುದನ್ನು ಅನುಭವಿಸಿದ ಜನರು ಈಗ ಪ್ರೀಮಿಯಂ ಸ್ಮಾರ್ಟ್‌ಫೋನ್ ಕಡೆಗೆ ಹೊರಳಿಕೊಳ್ಳುತ್ತಿದ್ದಾರೆ. ಆದರೆ, ಪ್ರೀಮಿಯಂ ಫೋನ್‌ಗಳ ವಿಷಯ ಬಂದಾಗ ಚೀನಾ ಬ್ರ್ಯಾಂಡ್‌ಗಳಿಗಿಂತ ಯುರೋಪಿಯನ್ ಅಮೆರಿಕನ್ ಬ್ರ್ಯಾಂಡ್‌ಗಳ ಬಗ್ಗೆ ಜನರಿಗೆ ವಿಶ್ವಾಸ ಹೆಚ್ಚು. ಸೆಕೆಂಡ್ ಹ್ಯಾಂಡ್ ಐಫೋನನ್ನಾದರೂ ಖರೀದಿ ಮಾಡುತ್ತಾರೆಯೇ ಹೊರತು, ಅದೇ ದರಕ್ಕೆ ಒಪ್ಪೊ, ವಿವೊ ಖರೀದಿ ಮಾಡುವುದಕ್ಕೆ ಮನಸು ಮಾಡುವುದಿಲ್ಲ. ಇದರಿಂದ ಆ ಕಡೆ ಪ್ರೀಮಿಯಂ ಸ್ಮಾರ್ಟ್‌ಫೋನ್ ಸೆಗ್ಮೆಂಟ್‌ನಲ್ಲಿ ಸೇಲ್ ಆಗದ, ಈ ಕಡೆ ಬಜೆಟ್ ಸ್ಮಾರ್ಟ್‌ಫೋನ್‌ನಲ್ಲಿ ಲಾಭ ಮಾಡಿಕೊಳ್ಳಲಾಗದ ಪರಿಸ್ಥಿತಿಯಲ್ಲಿ ಚೀನಾ ಸ್ಮಾರ್ಟ್‌ಫೋನ್ ಕಂಪನಿಗಳಿವೆ.

ಹಾಗೆಂದ ಮಾತ್ರಕ್ಕೆ ಮುಂದಿನ ಒಂದೆರಡು ವರ್ಷದಲ್ಲಿ ಚೀನಾದ ಕಂಪನಿಗಳೆಲ್ಲ ನಷ್ಟ ಮಾಡಿಕೊಂಡು ಹೋಗುತ್ತವೆ ಎಂದು ನಾವು ಈಗಲೇ ಷರಾ ಬರೆಯಬೇಕಿಲ್ಲ. ಎರಡು ವರ್ಷ ಮಾರ್ಕೆಟ್‌ನಲ್ಲಿ ಅಷ್ಟೇನೂ ಉತ್ಸಾಹ ತೋರಿಸದ ಒಪ್ಪೊ ಕಂಪನಿಯ ಫೋನ್‌ಗಳು 2025ರಲ್ಲಿ ಸ್ವಲ್ಪ ಚೇತರಿಕೆ ಕಂಡು, ಶೇ 10ರಷ್ಟು ಏರಿಕೆಯಾಗಿದೆ. ಆದರೆ, ವಿವೋ ಫೋನ್‌ಗಳು 2025ರಲ್ಲಿ ಶೇ 19ರಷ್ಟು ಏರಿಕೆಯನ್ನು ಕಂಡಿವೆ. ಇನ್ನು ವಿವೋದ ಹೊಸ ಬ್ರ್ಯಾಂಡ್ ಐಕ್ಯೂ ಕೂಡ ಗೇಮರ್‌ಗಳಿಗೆ ಭಾರಿ ಇಷ್ಟದ ಸ್ಮಾರ್ಟ್‌ಫೋನ್ ಆಗಿದೆ. ಆದರೆ, ಒಂದು ಕಾಲದಲ್ಲಿ ಭಾರತದಲ್ಲಿ ಬಜೆಟ್ ಸ್ಮಾರ್ಟ್‌ಫೋನ್‌ಗಳ ಅಲೆ ಎಬ್ಬಿಸಿದ್ದ ಶಓಮಿ 2025ರಲ್ಲಿ ಶೇ 26ರಷ್ಟು ಕುಸಿದಿದೆ. ಆಮೇಲೆ ಬಂದ ರಿಯಲ್‌ಮಿ ಮಾರಾಟ ಶೇ 18ರಷ್ಟು ಕುಸಿದಿದೆ. ಒನ್‌ಪ್ಲಸ್ ಅಂತೂ ಶೇ 40ರಷ್ಟು ಮಾರಾಟ ಕುಸಿತ ಕಂಡಿದೆ!

ಭಾರತ ಯಾಕೆ ಇನ್ನೂ ಹಿಂದಿದೆ?

ಈ ಹತ್ತು ವರ್ಷದಲ್ಲಿ ಭಾರತದ ಸ್ಮಾರ್ಟ್‌ಫೋನ್ ವಲಯದಲ್ಲಿ ಸದ್ದಿಲ್ಲದೇ ಒಂದು ಚಮತ್ಕಾರ ನಡೆದಿದೆ. ಮೊದಲು ಭಾರತಕ್ಕೆ ಸ್ಮಾರ್ಟ್‌ಫೋನ್‌ಗಳನ್ನು ಪರಿಚಯಿಸಿದ್ದು ಮೈಕ್ರೋಮ್ಯಾಕ್ಸ್ ಎಂಬ ಕಂಪನಿ. ಈ ಕಂಪನಿ ವಾಸ್ತವದಲ್ಲಿ ಆಮದು ಕಂಪನಿಯಾಗಿ ಕೆಲಸ ಮಾಡಿತ್ತು. ಅಂದರೆ, ಚೀನಾದಿಂದ ಐಟಮ್‌ಗಳನ್ನು ತಂದು ಇಲ್ಲಿ ಅದನ್ನು ಅಸೆಂಬಲ್ ಮಾಡಿ ಮೈಕ್ರೋಮ್ಯಾಕ್ಸ್ ಎಂದು ಬ್ರ್ಯಾಂಡ್ ಮಾಡಿ ಮಾರಾಟ ಮಾಡುತ್ತಿತ್ತು. ಆಮೇಲೆ ನಿಧಾನವಾಗಿ ಇವರಿಗೆ ಬಿಡಿಭಾಗಗಳನ್ನು ಮಾರಾಟ ಮಾಡುತ್ತಿದ್ದ ಕಂಪನಿಗಳೇ ಭಾರತಕ್ಕೆ ಕಾಲಿಟ್ಟವು. ಆದರೆ, ಆರಂಭದಲ್ಲಿ ಚೀನಾದಲ್ಲೇ ಅಸೆಂಬಲ್ ಮಾಡುತ್ತಿದ್ದ ಈ ಕಂಪನಿಗಳು ಭಾರತದ ನಿಯಮಗಳ ಕಾರಣದಿಂದ ಭಾರತದಲ್ಲಿ ಅಸೆಂಬಲ್ ಮಾಡಲು ಶುರು ಮಾಡಿದವು. ಆಗ ಭಾರತದಲ್ಲಿ ಸನ್ನಿವೇಶ ಬದಲಾಯಿತು. ಇದೇ ಮೈಕ್ರೋಮ್ಯಾಕ್ಸ್‌ನ ಫ್ಯಾಕ್ಟರಿಯಲ್ಲೇ ಈಗಲೂ ಬಹುತೇಕ ಎಲ್ಲ ಚೀನಾದ ಸ್ಮಾರ್ಟ್‌ಫೋನ್‌ಗಳು ಅಸೆಂಬಲ್ ಆಗುತ್ತಿವೆ. ಆದರೆ, ನಮಗೆ ಅದು ಕಾಣಿಸುತ್ತಿಲ್ಲ ಅಷ್ಟೇ!

ನಾವೆಲ್ಲ ಹಿಂದೆ ಚೀನಾದಿಂದ ಬಂದ ಬಿಡಿಭಾಗಗಳನ್ನು ಭಾರತದಲ್ಲಿ ಅಸೆಂಬಲ್ ಮಾಡಿ, ಮೈಕ್ರೋಮ್ಯಾಕ್ಸ್ ಬ್ರ್ಯಾಂಡ್‌ನಲ್ಲಿದ್ದ ಸ್ಮಾರ್ಟ್‌ಫೋನ್ ಬಳಸುತ್ತಿದ್ದೆವು. ಈಗ ಭಾರತದಲ್ಲೇ ಬಿಡಿಭಾಗಗಳನ್ನು ತಯಾರಿಸಿ ಭಾರತದಲ್ಲಿ ಅಸೆಂಬಲ್ ಆದ ಚೀನಾ ಬ್ರ್ಯಾಂಡ್ ಹೆಸರಿನ ಸ್ಮಾರ್ಟ್‌ಫೋನ್‌ಗಳನ್ನು ಬಳಸುತ್ತಿದ್ದೇವೆ. ಕಳೆದ ಎರಡು ವರ್ಷಗಳ ಹಿಂದೆ ನೋಯ್ಡಾದಲ್ಲಿ ಮೈಕ್ರೋಮ್ಯಾಕ್ಸ್‌ನ ಭಗವತಿ ಪ್ರಾಡಕ್ಟ್ಸ್ ಲಿಮಿಟೆಡ್‌ನ ಫ್ಯಾಕ್ಟರಿಯಲ್ಲಿ ಸದ್ಯಕ್ಕೆ ದಿನವೊಂದಕ್ಕೆ 20 ಲಕ್ಷ ಯೂನಿಟ್‌ಗಳು ಉತ್ಪಾದನೆಯಾಗುತ್ತಿವೆ! ಈ ಹಿಂದೆ ಬರಿ ಅಸೆಂಬಲ್ ಮಾಡುತ್ತಿದ್ದ ಕಂಪನಿ ಈಗ ಮದರ್‌ಬೋರ್ಡ್‌ಗಳನ್ನು ತಾನೇ ಡಿಸೈನ್ ಮಾಡಿ, ತಾನೇ ಪ್ರೊಡಕ್ಷನ್ ಮಾಡುತ್ತಿದೆ.

ಇದು ಸಣ್ಣ ಸಾಧನೆಯೇನಲ್ಲ. ಹಾಗಿದ್ದರೆ, ಭಾರತದ್ದೇ ಸ್ಮಾರ್ಟ್‌ಫೋನ್ ಬ್ರ್ಯಾಂಡನ್ನು ಪ್ರಚಾರ ಮಾಡಿ, ಚೀನಾದ ಬ್ರ್ಯಾಂಡ್‌ಗಳಿಗೆ ತೆರಿಗೆ ಹಾಕಿ ಮಾರ್ಕೆಟ್‌ನಿಂದ ಆಚೆ ಕಳಿಸುವುದಕ್ಕೆ ಸಾಧ್ಯವಿಲ್ಲವೇ ಎಂದು ಯೋಚಿಸಬಹುದು. ಆದರೆ, ಇಲ್ಲೊಂದು ಸಮಸ್ಯೆ ಇನ್ನೂ ಇದೆ. ಅದೇನೆಂದರೆ, ಭಾರತದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯ ಕೊರತೆ ಇದೆ. ನಾಲ್ಕೈದು ವರ್ಷಗಳವರೆಗೆ ನಮ್ಮಲ್ಲಿ ಉತ್ಪಾದನೆ ಸಾಮರ್ಥ್ಯದ ಕೊರತೆ ಇತ್ತು. ಅದನ್ನು ನಾವು ಈಗ ಬಹುತೇಕ ನೀಗಿಸಿದ್ದೇವೆ. ಈಗ ನಮ್ಮಲ್ಲಿ ಸ್ಮಾರ್ಟ್‌ಫೋನ್ ಉತ್ಪಾದನೆ ಮಾಡುವುದಕ್ಕೆ ಅಗತ್ಯ ಪರಿಣತಿ ಇದೆ. ಆದರೆ, ಸ್ಮಾರ್ಟ್‌ಫೋನ್ ಉತ್ಪಾದನೆಯೊಂದೇ ಸಾಲದು, ಆ ಸ್ಮಾರ್ಟ್‌ಫೋನ್‌ನಲ್ಲಿ ಏನಿರಬೇಕು, ಯಾವ ಫೀಚರ್ ಜನರಿಗೆ ಇಷ್ಟವಾಗುತ್ತದೆ ಎಂಬ ಸಂಶೋಧನೆಯ ಕೊರತೆಯಿದೆ. ಇದನ್ನು ನೀಗಿಸುವುದಕ್ಕೆ ನಮ್ಮಲ್ಲಿ ಹಣ ಹೂಡಿಕೆ, ಪ್ರೋತ್ಸಾಹ, ಅನುಕೂಲ ಎಲ್ಲ ಅಗತ್ಯವಿದೆ. ಸದ್ಯಕ್ಕೆ ಪರಿಸ್ಥಿತಿ ಅನುಕೂಲಕರವಾಗಿದೆ. ಆದರೆ, ಅದಕ್ಕೆ ಪೂರಕವಾದ ಸಂಶೋಧನೆಯೂ ನಡೆಯಬೇಕಿದೆ, ಅಷ್ಟೇ.

ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದಂತೆ ಒಂದೂವರೆ ವರ್ಷದಲ್ಲಿ ಅಲ್ಲದೇ ಇದ್ದರೂ, ಇನ್ನು ಸ್ವಲ್ಪ ವರ್ಷದಲ್ಲೇ ನಮ್ಮ ದೇಶದ ಪ್ರೀಮಿಯಂ ಬ್ರ್ಯಾಂಡ್‌ಗಳು ಜಾಗತಿಕ ಮಟ್ಟದಲ್ಲಿ ಹೆಸರು ಮಾಡುವ ವಿಶ್ವಾಸವಂತೂ ಇದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

23) ಅಯಾನಿಕ ಸಂಯುಕ್ತಗಳ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:– ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು ಹೀಗಿವೆ

(i) ಭೌತ ಸ್ಥಿತಿ : ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಧನ ಮತ್ತು ಋಣ ಅಯಾನುಗಳ ನಡುವೆ ಇರುವ ಪ್ರಬಲ ಆಕರ್ಷಣ ಬಲದಿಂದಾಗಿ ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಈ ಸಂಯುಕ್ತಗಳು ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ.

(ii) ಕರಗುವ ಮತ್ತು ಕುದಿಬಿಂದುಗಳು : ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ. ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(iii) ವಿಲೀನತೆ : ಅಯಾನಿಕ ಸಂಯುಕ್ತಗಳು ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ. ಮತ್ತು ಸಾವಯವ ದ್ರಾವಕಗಳಾದ ಸೀಮೆ ಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.

(iv) ವಿದ್ಯುದ್ವಾಹಕತೆ : ಒಂದು ದ್ರಾವಣದ ಮೂಲಕ ವಿದ್ಯುತ್ತಿನ ಹರಿಯುವಿಕೆಯು ವಿದ್ಯುದಂಶಪೂರಿತ ಕಣಗಳ ಚಲನೆಯನ್ನು ಒಳಗೊಂಡಿದೆ. ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ಅಯಾನುಗಳನ್ನು ಹೊಂದಿದ್ದು ದ್ರಾವಣದ ಮೂಲಕ ವಿದ್ಯುತ್ ಹಾಯಿಸಿದಾಗ ಅವು, ವಿರುದ್ಧ ವಿದ್ಯುದ್ವಾರಗಳ ಕಡೆ ಚಲಿಸುತ್ತವೆ. ಘನಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ ಏಕೆಂದರೆ, ಘನವಸ್ತುಗಳ ಕಠಿಣ ರಚನೆಯಿಂದಾಗಿ ಅಯಾನುಗಳ ಚಲನೆ ಸಾಧ್ಯವಿಲ್ಲ. ಆದರೆ ದ್ರವಿಸಿದ ಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ. ಇದು ದ್ರವಿಸಿದ ಸ್ಥಿತಿಯಲ್ಲಿ ಸಾಧ್ಯವಾಗಲು ಕಾರಣವೇನೆಂದರೆ ವಿದ್ಯುದಂಶಪೂರಿತ, ವಿರುದ್ಧ ಅಯಾನುಗಳ ನಡುವಣ ವಿದ್ಯುದಾಕರ್ಷಣ ಬಲಗಳು ಉಷ್ಣತೆಗೆ ಒಡೆಯುತ್ತವೆ. ಹಾಗಾಗಿ ಅಯಾನುಗಳು ಸ್ವತಂತ್ರವಾಗಿ ಚಲಿಸುತ್ತವೆ ಮತ್ತು ವಿದ್ಯುತ್ ಅನ್ನು ಹರಿಯಲು ಬಿಡುತ್ತವೆ.

24) ಅಮೀಬಾದ ಕೋಶವಿಭಜನೆಯ ಚಿತ್ರ ಬರೆಯಿರಿ

ಉತ್ತರ:–



25) ಲೈಂಗಿಕತೆಯ ಹಿನ್ನೆಲೆಯಲ್ಲಿ ಉಂಟಾಗುವ ರೋಗಗಳು ಯಾವುವು?

ಉತ್ತರ:– ಗೊನೋರಿಯಾ, ಸಿಫಿಲಿಸ್ ಮತ್ತು ಏಡ್ಸ್

26) ಪ್ಲನೇರಿಯ ಎಂಬ ಸರಳ ಜೀವಿಯ ಪುನರುತ್ಪಾದನೆಯ ಚಿತ್ರ ಬರೆಯಿರಿ

ಉತ್ತರ:–



27) ನರಕೋಶದ ಅಂದವಾದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



28) ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಬಹುದು? ಯಾವುವು?

ಉತ್ತರ:– ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. (i) ಕಡಿಮೆ ಕ್ರಿಯಾಪಟುತ್ವ ಹೊಂದಿರುವ ಲೋಹಗಳು (ii) ಮಧ್ಯಮ ಕ್ರಿಯಾಪಟುತ್ವ ಹೊಂದಿರುವ ಲೋಹಗಳು ಮತ್ತು (iii) ಹೆಚ್ಚಿನ ಕ್ರಿಯಾಪಟುತ್ವ ಹೊಂದಿರುವ ಲೋಹಗಳು.

ಪ್ರತಿಯೊಂದು ಗುಂಪಿನ ಲೋಹಗಳನ್ನು ವಿಭಿನ್ನ ತಂತ್ರಗಳನ್ನು ಬಳಸಿ ಪಡೆಯಲಾಗುತ್ತದೆ.

29) ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯ ಬಗ್ಗೆ ಬರೆಯಿರಿ

ಉತ್ತರ:– ಒಂದು ಜೀವಕೋಶದಿಂದ ಎರಡು ಜೀವಕೋಶಗಳ ಉಂಟಾಗುವಿಕೆಯು ಡಿಎನ್‌ಎ ಮತ್ತು ಕೋಶೀಯ ರಚನೆಗಳ ಪ್ರತೀಕರಣವನ್ನು ಒಳಗೊಂಡಿದೆ. ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯು ನಾವು ಗಮನಿಸಿರುವಂತೆ ಸಂಪೂರ್ಣವಾಗಿ ನಿಖರವಾಗಿರುವುದಿಲ್ಲ ಮತ್ತು ಇದರಲ್ಲುಂಟಾಗುವ ದೋಷಗಳು ಜೀವಿಸಂದಣಿಯಲ್ಲಿನ ಭಿನ್ನತೆಗಳ ಆಕರವಾಗಿರುತ್ತದೆ. ಭಿನ್ನತೆಗಳು ಉಂಟಾಗದಂತೆ ಪ್ರತಿಯೊಂದು ಜೀವಿಯನ್ನು ರಕ್ಷಿಸಲಾಗುವುದಿಲ್ಲ. ಆದರೆ ಒಂದು ಸಮುದಾಯದಲ್ಲಿ ಪ್ರಭೇದಗಳ ಉಳಿಯುವಿಕೆಯನ್ನು ಖಚಿತಪಡಿಸಿಕೊಳ್ಳಲು ಭಿನ್ನತೆಗಳು ಉಪಯುಕ್ತವಾಗಿರುತ್ತವೆ. ಆದ್ದರಿಂದ ಹೆಚ್ಚು ಹೆಚ್ಚು ಭಿನ್ನತೆಗಳನ್ನು ಉಂಟುಮಾಡಲು ಸಾಧ್ಯವಾಗುವ ಸಂತಾನೋತ್ಪತ್ತಿ ವಿಧಾನಗಳೊಂದಿಗೆ ಜೀವಿಗಳು ಸಜ್ಜುಗೊಂಡವು ಎಂಬ ಅರ್ಥವನ್ನು ಇದು ಉಂಟುಮಾಡುತ್ತದೆ.

ಡಿಎನ್‌ಎ ಸ್ವಪ್ರತೀಕರಣವು ಸಂಪೂರ್ಣ ನಿಖರವಾಗಿಲ್ಲದಿದ್ದರೂ ನಿಧಾನಗತಿಯಲ್ಲಿ ಭಿನ್ನತೆಗಳು ಉಂಟಾಗುವಷ್ಟರ ಮಟ್ಟಿಗೆ ಅವು ನಿಖರವಾಗಿರುತ್ತವೆ. ಒಂದು ವೇಳೆ ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಗಳು ಕಡಿಮೆ ನಿಖರತೆಯನ್ನು ಹೊಂದಿದ್ದರೆ ಅನೇಕ ಫಲಿತ ಡಿಎನ್‌ಎ ಪ್ರತಿಗಳು ಕೋಶೀಯ ರಚನೆಗಳೊಂದಿಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಅವು ಸಾಯುತ್ತವೆ.

ಈಗಾಗಲೇ ಹಿಂದಿನ ಪೀಳಿಗೆಗಳಿಂದ ಸಂಗ್ರಹಿತವಾದ ಭಿನ್ನತೆಗಳನ್ನು ಹೊಂದಿರುವ ಡಿಎನ್‌ಎ ತನ್ನ ಪ್ರತಿಯೊಂದು ಜೀವಿಸಂದಣಿಯ ಪ್ರತಿಯಲ್ಲಿ ಹೊಸ ಭಿನ್ನತೆಯನ್ನು ಉಂಟುಮಾಡುತ್ತದೆ. ಹೀಗೆ ಎರಡು ವಿಭಿನ್ನ ಜೀವಿಗಳು ಸಂಗ್ರಹಿತ ಭಿನ್ನತೆಗಳ ಸಾಕಷ್ಟು ವಿಭಿನ್ನ ಮಾದರಿಗಳನ್ನು ಹೊಂದಿರುತ್ತವೆ. ಈ ಎಲ್ಲಾ ಭಿನ್ನತೆಗಳು ಜೀವಂತ ಜೀವಿಗಳಲ್ಲಿರುವುದರಿಂದ ಅವು ಯಾವುದೇ ಕೆಟ್ಟ ಪರಿಣಾಮಗಳನ್ನು ಹೊಂದಿಲ್ಲವೆಂಬುದು ನಿಶ್ಚಿತ. ಹೀಗೆ ಎರಡು ಅಥವಾ ಹೆಚ್ಚು ಜೀವಿಗಳಲ್ಲಿನ ಭಿನ್ನತೆಗಳನ್ನು ಒಟ್ಟುಗೂಡಿಸುವುದರಿಂದ ರೂಪಾಂತರಗಳ ಹೊಸ ಸಂಯೋಜನೆಗಳು ಉಂಟಾಗುತ್ತವೆ. ಪ್ರತಿ ಸಂಯೋಜನೆಯೂ ಅಪೂರ್ವವಾಗಿರುತ್ತದೆ ಏಕೆಂದರೆ ಅಲ್ಲಿ ಎರಡು ವಿಭಿನ್ನ ಜೀವಿಗಳ ಒಳಗೊಳ್ಳುವಿಕೆ ಇದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ.

CHEMISTRY

REVISION : MODEL QUESTIONS

23) Fill in the blanks by choosing the appropriate word from those given in the brackets: (glycogen, starch, catalyst, cobalt, methanol, HNO_2)

1. Storage polysaccharide present in animals is ______

Ans:- **glycogen,b**

2. Vitamin B12 is a coordination compound of ______ metal

Ans:- **cobalt**

3. Primary aliphatic amines convert into aliphatic alcohols on reacting with ______ solution.

Ans:- **HNO_2**

4. The chemical name of wood spirit is ______

Ans:- **methanol,**

5. Change in standard Gibbs free energy (ΔG^0) of a reaction is does not altered by the addition of ___.

Ans:- **catalyst**

24). What is meant by doping?

Ans:- The process of increasing the conductivity of insulators by the addition of certain impurities is doping.

25) What type of semiconductor does doping silicon with indium create?

Ans:- By doping silicon with indium a p–type semiconductor is created.

26) What is a valence band?

Ans:- The energy band formed by a series of energy levels containing the valence electrons is known as the valence band.

27) What is a conductance band?

Ans:- The lowest unfilled energy band lying just above the valence band is known as the conductance band.

28) What is the ratio of the conduction electrons to the number of holes in an n-type semiconductors?

Ans:- The ratio of the conduction electrons to the number of holes in an n-type semiconductors is more than 1, this shows that the electrons are majority carriers in it.

29) How many types of extrinsic semiconductors are there? Which are they?

Ans:- There are 2 types of extrinsic semiconductors, they are n – type & p –type.

30) What are rectifiers.

Ans:- Rectifiers are the electronic devices that convert AC input power into DC output power.

31) Mention the different types of rectifiers.

Ans:- Rectifiers are of two types- Half-wave Rectifier and Full-wave Rectifier

32) What is rectification?

Ans:- The process of converting AC into pulsating DC is called rectification.

33) Using Valence Bond theory. Account for the geometry and magnetic property of $[Ni(CN)_4]^{2-}$

Ans:-



magnetic property of $[Ni(CN)_4]^{2-}$ is diamagnetic.

34) Give the IUPAC name of $[Ti(H_2O)_6]^{3+}$. Draw cis and trans isomers of $[Pt(NH_3)_2Cl_2]$.

Ans:- The IUPAC name is hexaaquatitanium(III)ion.

The cis and trans isomers of $[Pt(NH_3)_2Cl_2]$ is



cis-isomer (pale yellow) trans-isomer (dark yellow)

35) a] On dissolving 2.34g of solute in 40g of benzene, the boiling point of solution was higher than that of benzene by 0.81K.Kb value for benzene is 2.53Kg mol^{-1}. Calculate the molar mass of the solute.

b] State Henry's law. Write its mathematical form.

Ans:-a]

$$\Delta T_b = \frac{1000 \times w_2 \times k_b}{M_2 \times w_1}$$

$$M_2 = \frac{100 \times w_2 \times k_b}{M_2 \Delta T_b \times w_1} = \frac{1000 \times 2.34 \times 2.53}{0.81 \times 40}$$

$M_2 = 182.72 g\ mol^{-1}$

b] The solubility of a gas in a liquid is directly proportional to the pressure of the gas at constant temperature.

The mathematical form is $p = K_H x$.

36) a] Draw labelled diagram of Standard Hydrogen Electrode (SHE). Write its half cell reaction and E^0 value.

b] Calculate $\Delta_r G^0$ for the following reaction:

$$Fe^{+2}_{(aq)} + Ag^{+}_{(aq)} \rightarrow Fe^{+3}_{(aq)} + Ag(S).$$

(Give: E^0_{cell} = +0.03V, F = 96500C).

Ans:- a]



The SHE is represented as $Pt(s)/H_2$ (g, 1 bar)/ H^+ (aq.1M) and E^0 value is zero.

b) $\Delta rG^0 = -nfE^0 \Rightarrow \Delta rG^0$

$= -1 \times 96500 \times 0.03 \Rightarrow \Delta rG^0 = 2899J$

ಠಾಣೆ ಮೆಟ್ಟಿಲೇರಿದ ವಾರಗಿತ್ತಿಯರು

ನಟಿ ಕಾವ್ಯಾ ಗೌಡ ಸೇರಿ ಹಲವರ ವಿರುದ್ಧ ರಾಮಮೂರ್ತಿನಗರ ಠಾಣೆಯಲ್ಲಿ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದಂತೆ ಕಿರುತೆರೆ ನಟಿ ಕಾವ್ಯಾ ಗೌಡ ಹಾಗೂ ಪ್ರೇಮಾ (ಒಂದೇ ಮನೆಯ ಸೊಸೆಯಂದಿರು) ಅವರು ಪರಸ್ಪರ ದೂರು – ಪ್ರತಿದೂರು ನೀಡಿದ್ದು, ಒಟ್ಟು ಏಳು ಮಂದಿ ವಿರುದ್ಧ ರಾಮಮೂರ್ತಿನಗರ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳು ಸೋಮವಾರ ರಾತ್ರಿ ಹಾಗೂ ಮಂಗಳವಾರ ಬೆಳಿಗ್ಗೆ ದಾಖಲಾಗಿವೆ.

ಸೋಮಶೇಖರ್ ಮತ್ತು ಅವರ ಅಣ್ಣ ನಂದೀಶ್‌ಕುಮಾರ್, ಕಲ್ಕೆರೆ ಬಳಿಯ ಎನ್‌ಆರ್‌ಐ ಲೇಔಟ್‌ನ ಮನೆಯಲ್ಲಿ ತಂದೆಯ ಜತೆಗೆ ಒಟ್ಟಿಗೆ ವಾಸವಾಗಿದ್ದಾರೆ. ಕಾವ್ಯಾ ಗೌಡ–ಸೋಮಶೇಖರ್ ದಂಪತಿ ಹಾಗೂ ಪ್ರೇಮಾ – ನಂದೀಶ್‌ಕುಮಾರ್ ದಂಪತಿ ನಡುವೆ ಗಲಾಟೆ ನಡೆದಿದ್ದು, ರಾಮಮೂರ್ತಿನಗರ ಠಾಣೆಯ ಮೆಟ್ಟಿಲೇರಿದೆ. ಪ್ರೇಮಾ ಮೊದಲು ದೂರು ನೀಡಿದ್ದರೆ, ಕಾವ್ಯಾ ಬಳಿಕ ದೂರು ನೀಡಿದ್ದಾರೆ.

ಇಬ್ಬರೂ ಪ್ರತ್ಯೇಕ ದೂರು ನೀಡಿದ್ದಾರೆ. ದೂರು ಆಧರಿಸಿ, ನಿಂದನೆ, ಕೊಲೆ ಬೆದರಿಕೆ, ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಆರೋಪದಡಿ ಪ್ರೇಮಾ, ನಂದೀಶ್ ಕುಮಾರ್ ಹಾಗೂ ಪ್ರೇಮಾ ಅವರ ತಂದೆ ರವಿಕುಮಾರ್, ಸಹೋದರಿ ಕಸ್ತೂರಿ ಪ್ರಿಯಾ ಹಾಗೂ ಸೋಮಶೇಖರ್, ಕಾವ್ಯಾ ಗೌಡ ಹಾಗೂ ಕಾವ್ಯಾ ಸಹೋದರಿ ಭವ್ಯಾ ಗೌಡ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ಸದ್ಯ ನಾಲ್ವರ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಗಲಾಟೆಯ ವಿಡಿಯೊಗಳನ್ನು ಪಡೆದುಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ನಟಿ ಕಾವ್ಯಾ ದೂರಿನಲ್ಲಿ ಏನಿದೆ?: ‘ಎನ್‌ಆರ್‌ಐ ಲೇಔಟ್‌ನ ಒಂದನೇ ಮುಖ್ಯರಸ್ತೆಯ ಒಂದನೇ ಕ್ರಾಸ್‌ನಲ್ಲಿರುವ ಮನೆಯಲ್ಲಿ ಪತಿ ಸೋಮಶೇಖರ್ ಹಾಗೂ ಎರಡು ವರ್ಷದ ಮಗು ಜತೆಗೆ ವಾಸ ಮಾಡುತ್ತಿದ್ದೇನೆ. ಮಗು ನೋಡಿಕೊಳ್ಳಲು ಸುಮಾ ಅವರನ್ನು ನೇಮಿಸಿಕೊಂಡಿದ್ದೇವೆ. ಕೆಲವು ದಿನಗಳ ಹಿಂದೆ ಫೋಟೊಶೂಟ್ ಮಾಡಲು ಹಾಲ್‌ನಲ್ಲಿ ಎಲ್ಲ ಕೆಲಸಗಾರರು ಓಡಾಟ ನಡೆಸುತ್ತಿದ್ದರು. ಸುಮಾ ಅವರನ್ನು ಕಳ್ಳಿ ಎಂದು ಪ್ರೇಮಾ–ನಂದೀಶ್ ದಂಪತಿ ನಿಂದಿಸಿದ್ದರು. ಅಲ್ಲದೇ ಜ.26ರಂದು ಮಗುವಿನ ಕೆನ್ನೆಗೆ ಪ್ರೇಮಾ ಹೊಡೆದಿದ್ದರು’ ಎಂದು ಕಾವ್ಯಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮಗುವಿಗೆ ಹೊಡೆದಿದ್ದನ್ನು ಪ್ರಶ್ನೆ ಮಾಡಿದ್ದಕ್ಕೆ ‘ಇದು ನನ್ನ ಮನೆ. ನನ್ನ ಏರಿಯಾ’ ಎಂದು ಬೆದರಿಕೆ ಹಾಕಿ, ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದರು. ಅಡುಗೆ ಕೋಣೆಯಲ್ಲಿದ್ದ ರವಿಕುಮಾರ್ ಅವರು ಪತಿ ಸೋಮಶೇಖರ್‌ಗೂ ದೊಣ್ಣೆಯಿಂದ ಹೊಡೆದಿದ್ದಾರೆ. ನನ್ನ ಕುತ್ತಿಗೆಗೂ ಕೈಹಾಕಿ, ನೂರಾರು ಜನರ ಮುಂದೆ ಅತ್ಯಾಚಾರ ಮಾಡಿ ಸಾಯಿಸ್ತೀನಿ ಎಂದು ಕಾಲಿನಿಂದ ಒದ್ದಿದ್ದಾರೆ’ ಎಂದು ದೂರಿನ ಪ್ರತಿಯಲ್ಲಿ ನಟಿ ಉಲ್ಲೇಖಿಸಿದ್ದಾರೆ.

ಕೊಲೆಗೆ ಯತ್ನ?: ಸೋಮಶೇಖರ್‌ಗೆ ರವಿಕುಮಾರ್ ಅವರು ಚಾಕುವಿನಿಂದ ಬಲಭುಜಕ್ಕೆ ತಿವಿದು ಕೊಲೆಗೆ ಯತ್ನಿಸಿದ್ದಾರೆ. ಬಳಿಕ ಕಾರು ಚಾಲಕನ ಸಹಾಯ ಪಡೆದು ಆಸ್ಪತ್ರೆಗೆ ದಾಖಲಾಗಿದ್ದೆವು ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಜೀವ ಬೆದರಿಕೆ ಹಾಕಿ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುವ ರವಿಕುಮಾರ್, ಪ್ರೇಮಾ, ನಂದೀಶ್, ಪ್ರಿಯಾ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆಯೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

ಗಲಾಟೆಯ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ ಪ್ರೇಮಾ ದಂಪತಿ (ಎಡಚಿತ್ರ). ಕಾವ್ಯಾ ದಂಪತಿ

ಮಾಂಗಲ್ಯ ಸರ ಕಸಿದು ಹಲ್ಲೆ

‘ಎನ್‌ಆರ್‌ಐ ಲೇಔಟ್‌ನಲ್ಲಿ ನಾವಿರುವ ಮನೆಯಲ್ಲೇ ಸೋಮಶೇಖರ್ ಹಾಗೂ ಕಾವ್ಯಾ ಗೌಡ ಅವರು ವಾಸವಿದ್ದಾರೆ. ನಂದೀಶ್ ಅವರು ಊಟ ಮಾಡುತ್ತಿರುವಾಗ ಕಾವ್ಯಾ ಹಾಗೂ ಸೋಮಶೇಖರ್ ಬಂದು ‘ಇದು ನಮ್ಮ ಮನೆ; ನೀವು ಆಚೆಗೆ ಹೋಗಿ’ ಎಂದು ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದರು. ಬಳಿಕ ನಮ್ಮ ತಂದೆಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದರು. ಮಾವನ ಗೆಸ್ಟ್‌ಹೌಸ್‌ಗೆ ಹೋಗಿದ್ದಾಗ, ನನ್ನ ತಂಗಿ ಕಸ್ತೂರಿ ಪ್ರಿಯಾ ಮೇಲೂ ಕಾವ್ಯಾ ಹಲ್ಲೆ ಮಾಡಿದ್ದಾರೆ’ ಎಂದು ಪ್ರೇಮಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಕಾವ್ಯಾ ಅವರ ಸಹೋದರಿ ಭವ್ಯಾ ಗೌಡ ಅವರು ಚಪ್ಪಲಿಯಿಂದ ಹೊಡೆದು ನಿಂದಿಸಿ ಮಾಂಗಲ್ಯದ ಸರವನ್ನು ಕಸಿದುಕೊಂಡು ತುಂಡು ಮಾಡಿದ್ದಾರೆ’ ಎಂದು ದೂರುದಾರೆ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಾಫ್ಟ್‌ವೇರ್ ಕಂಪನಿ ಮಾಜಿ ಹಿರಿಯ ವ್ಯವಸ್ಥಾಪಕರ ವಿರುದ್ಧ ಎಫ್‌ಐಆರ್

₹87 ಕೋಟಿ ಮೌಲ್ಯದ ದತ್ತಾಂಶ ಕಳವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾಫ್ಟ್‌ವೇರ್ ಕಂಪನಿಯಲ್ಲಿ ₹87 ಕೋಟಿ ಮೌಲ್ಯದ ದತ್ತಾಂಶ ಕಳ್ಳತನ ಮಾಡಿದ್ದ ಕಂಪನಿಯ ಮಾಜಿ ಹಿರಿಯ ವ್ಯವಸ್ಥಾಪಕರ ವಿರುದ್ಧ ವೈಟ್‌ಫೀಲ್ಡ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾರತ್ ಹಳ್ಳಿಯ ಅಮೇಡಿಯಸ್ ಸಾಫ್ಟ್‌ವೇರ್ ಲ್ಯಾಬ್ಸ್ ಕಂಪನಿಯ ಸಂಶೋಧನಾ ವಿಭಾಗದ ಮಾಜಿ ಹಿರಿಯ ವ್ಯವಸ್ಥಾಪಕ, ಐಟಿಪಿಎಲ್ ಮುಖ್ಯರಸ್ತೆಯ ಪ್ರೆಸ್ಟೀಜ್ ಶಾಂತಿನಿಕೇತನ್‌ನ ನಿವಾಸಿ ಅಶುತೋಷ್ ನಿಗಮ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕಂಪನಿಯ ಪ್ರತಿನಿಧಿ ಜುಲ್ ಕಫೀಲ್ ಅವರು ದೂರು ನೀಡಿದ್ದಾರೆ. ಅಶುತೋಷ್ ನಿಗಮ್ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 65, 66 ಮತ್ತು 66(ಸಿ)ರ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸರು ಹೇಳಿದರು.

‘2020ರ ಫೆಬ್ರುವರಿ 1ರಿಂದ ಅಶುತೋಷ್ ನಿಗಮ್ ಎಂಬುವವರು ಕಂಪನಿಯ ಸಂಶೋಧನಾ ವಿಭಾಗದ ಹಿರಿಯ ವ್ಯವಸ್ಥಾಪಕರಾಗಿ ಕೆಲಸಕ್ಕೆ ಸೇರಿದ್ದರು. ಕಂಪನಿಯ ಬಹುಕೋಟಿ ಮೌಲ್ಯದ ಸಾಫ್ಟ್‌ವೇರ್ ತಂತ್ರಜ್ಞಾನದ ಬಗ್ಗೆ ಸಂಪೂರ್ಣ ಅರಿವಿದ್ದ ಅಶುತೋಷ್ ನಿಗಮ್ ಅವರು ಕಳೆದ ಅ.11ರಂದು ಕಂಪನಿಯ ಅನುಮತಿಯಿಲ್ಲದೇ, ಭದ್ರತಾ ವ್ಯವಸ್ಥೆಗಳನ್ನು ದಾಟಿ ಅತ್ಯಂತ ರಹಸ್ಯವಾದ ‘ಸೋರ್ಸ್ ಕೋಡ್’ ಮತ್ತು ಇತರೆ ಗೋಪ್ಯ ದಾಖಲೆಗಳನ್ನು ತಮ್ಮ ವೈಯಕ್ತಿಕ ಇ–ಮೇಲ್ ಮೂಲಕ ಕಳ್ಳತನ ಮಾಡಿದ್ದಾರೆ. ₹87 ಕೋಟಿ ಮೌಲ್ಯದ ಡಿಜಿಟಲ್ ಆಸ್ತಿಯನ್ನು ದುರ್ಬಳಕೆ ಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಆಂತರಿಕ ತಪಾಸಣೆ ವೇಳೆ ಪತ್ತೆ

ಕಂಪನಿಯ ಆಂತರಿಕ ಭದ್ರತಾ ತಪಾಸಣೆಯ ವೇಳೆ ದತ್ತಾಂಶ ಕಳವು ಮಾಡಿರುವುದು ಪತ್ತೆ ಆಗಿತ್ತು. ಕಂಪನಿಯ ಅಧಿಕಾರಿಗಳು ಡಿಜಿಟಲ್ ಸಾಕ್ಷ್ಯಗಳೊಂದಿಗೆ ಅಶುತೋಷ್ ಅವರನ್ನು ವಿಚಾರಣೆ ನಡೆಸಿದಾಗ, ಅವರು ತಾವು ಮಾಡಿದ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಜುಲ್ ಕಫೀಲ್ ಅವರು ದೂರಿನಲ್ಲಿ ಕೋರಿದ್ದಾರೆ.

ಪತ್ನಿ ಮೇಲೆ ನಿಗಾ: ‘ಆ್ಯಪ್’ ಅಳವಡಿಸಿದ್ದ ಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯ ಮೊಬೈಲ್‌ನಲ್ಲಿ ರಹಸ್ಯವಾಗಿ ಆ್ಯಪ್ ಅಳವಡಿಸಿ ಅವರ ಪ್ರತಿ ಚಲನವಲನ ಪತ್ತೆ ಹಚ್ಚುತ್ತಿದ್ದ ಪತಿ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುಟ್ಟೇನಹಳ್ಳಿಯ ಬಿ.ಜಿ ರಸ್ತೆಯ ವೈದ್ಯೆ ಆರ್ಯ ಶಾರದಾ (28) ಎಂಬುವವರು ನೀಡಿದ ದೂರು ಆಧರಿಸಿ ಅವರ ಪತಿ ಅಮಲ್ ವಿ. ನಾಯರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಆರ್ಯ ಶಾರದಾ ಹಾಗೂ ಅಮಲ್ ವಿ. ನಾಯರ್ ದಂಪತಿ, 2025ರ ಆ.1ರಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ. ದಂಪತಿಗೆ ಒಂದು ಮಗುವಿದ್ದು, ಮಗು ಯಾರ ಬಳಿ ಇರಬೇಕೆಂಬ ಪ್ರಕರಣವು ಕೌಟುಂಬಿಕ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಈ ನಡುವೆ ವಾರಕ್ಕೊಮ್ಮೆ ಮಗುವನ್ನು ನೋಡಲು ನ್ಯಾಯಾಲಯವು ಅಮಲ್ ಅವರಿಗೆ ಅವಕಾಶ ನೀಡಿದೆ. ಮಗುವನ್ನು ನೋಡಲು ಬರುವ ವೇಳೆ ಅಮಲ್ ಅವರು ಪತ್ನಿಗೆ ತಿಳಿಯದಂತೆ ಮೊಬೈಲ್‌ನಲ್ಲಿ ಆ್ಯಪ್‌ವೊಂದನ್ನು ಇನ್‌ಸ್ಟಾಲ್ ಮಾಡಿದ್ದರು. ಪತ್ನಿ ಎಲ್ಲಿ ಹೋಗುತ್ತಾರೆ? ಯಾರ ಜೊತೆಯಲ್ಲಿ ಮಾತನಾಡುತ್ತಾರೆ ಎಂಬುದರ ಮಾಹಿತಿ ಪಡೆದುಕೊಳ್ಳುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

2025ರ ನ.22ರಂದು ಆರ್ಯ ಶಾರದಾ ಅವರ ಮೊಬೈಲ್‌ನಲ್ಲಿ ದೋಷ ಕಾಣಿಸಿಕೊಂಡಿತ್ತು. ಆ್ಯಪ್‌ವೊಂದು ಪದೇ ಪದೇ ಅಪ್‌ಡೇಟ್ ಕೇಳುತ್ತಿತ್ತು. ಪರಿಶೀಲನೆ ನಡೆಸಿದಾಗ, ಆ್ಯಪ್‌ವೊಂದು ಅಳವಡಿಕೆ ಆಗಿರುವುದು ಅವರ ಅರಿವಿಗೆ ಬಂದಿತ್ತು. ಅವರು ಅದೇ ದಿನ ಅನ್ ಇನ್‌ಸ್ಟಾಲ್ ಮಾಡಿದ್ದರು. ನಂತರ, ಠಾಣೆಗೆ ದೂರು ನೀಡಿದ್ದಾರೆ. ಇದೀಗ ಪುಟ್ಟೇನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಿಸ್ತೂಲ್ ತೋರಿಸಿ ದರೋಡೆ

ಪೀಣ್ಯ ದಾಸರಹಳ್ಳಿ: ನೆಲಮಂಗಲ ಬಳಿಯ ದಾಸನಪುರದ ರಾಮ್‌ದೇವ್ ಚಿನ್ನಾಭರಣ ಅಂಗಡಿಯಲ್ಲಿ ಪಿಸ್ತೂಲ್ ತೋರಿಸಿ ದರೋಡೆ ನಡೆಸಲಾಗಿದೆ.

ಬೈಕ್‌ನಲ್ಲಿ ಬಂದಿದ್ದ ಮೂವರು ಸಿಕ್ಕಸಿಕ್ಕ ಚಿನ್ನಾಭರಣ ದೋಚಿ ಪರಾರಿ ಆಗಿದ್ದಾರೆ. ದರೋಡೆಯ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅಂಗಡಿಯಲ್ಲಿದ್ದ ಬಾಲಕ, ದರೋಡೆಕೋರರ ಮೇಲೆ ಹಲ್ಲೆ ನಡೆಸಲು ಮುಂದಾಗಿದ್ದ. ಆತನನ್ನು ತಳ್ಳಿ ದರೋಡೆ ನಡೆಸಲಾಗಿದೆ. ಮಾದನಾಯಕನಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬಿಲ್ಡರ್ ಮನೆಯಲ್ಲಿ ಕೃತ್ಯ: ಕೆಲಸಕ್ಕಿದ್ದ ಇಬ್ಬರ ವಿರುದ್ಧ ಪ್ರಕರಣ ದಾಖಲು

₹18 ಕೋಟಿ ಮೌಲ್ಯದ ಆಭರಣ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಲ್ಡರ್ ಮನೆಯಲ್ಲಿ ₹18 ಕೋಟಿ ಮೌಲ್ಯದ ಚಿನ್ನಾಭರಣ ಕಳ್ಳತನವಾಗಿದ್ದು, ಈ ಸಂಬಂಧ ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಪಾಳದ ದಿನೇಶ್ (32) ಹಾಗೂ ಕಮಲಾ (25) ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಕೆಂಪಾಪುರ ರಸ್ತೆಯ ಯಮಲೂರಿನ ನಿವಾಸಿ ಶಿಮಾಂತ್ ಎಸ್. ಅರ್ಜುನ್ ಅವರು ದೂರು ನೀಡಿದ್ದಾರೆ.

₹17.73 ಕೋಟಿಯ 11.5 ಕೆ.ಜಿ ಚಿನ್ನ ಹಾಗೂ ವಜ್ರದ ಆಭರಣ, ₹14.60 ಲಕ್ಷ ಮೌಲ್ಯದ 5 ಕೆ.ಜಿ ಬೆಳ್ಳಿಯ ಸಾಮಗ್ರಿ, ₹11.50 ಲಕ್ಷ ನಗದು ಕಳ್ಳತನ ಮಾಡಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದಿನೇಶ್ ಹಾಗೂ ಕಮಲಾ ಅವರನ್ನು ಮನೆಯ ಕೆಲಸಕ್ಕೆ ನೇಮಿಸಿಕೊಳ್ಳಲಾಗಿತ್ತು. ಅವರೇ ಕೃತ್ಯ ಎಸಗಿ ಪರಾರಿ ಆಗಿದ್ದಾರೆ. ಮನೆಯ ಮೊದಲ ಮಹಡಿಯ ಬೆಡ್ ರೂಂನಲ್ಲಿದ್ದ ಲಾಕರ್ ಅನ್ನು ಸಲಾಕೆಯಿಂದ ಮೀಟಿ ಕಳ್ಳತನ ಮಾಡಲಾಗಿದೆ ಎಂದು ದೂರಿನಲ್ಲಿ ಅವರು ತಿಳಿಸಿದ್ದಾರೆ.

ಆರೋಪಿಗಳ ಬಂಧನಕ್ಕೆ ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಶಿಮಾಂತ್ ಎಸ್. ಅರ್ಜುನ್ ಅವರ ತಂದೆ ಎಂ.ಆರ್.ಶಿವಕುಮಾರ್ ಅವರು ಬಿಲ್ಡರ್ ಆಗಿ ಕೆಲಸ ಮಾಡುತ್ತಿದ್ದಾರೆ. 19 ವರ್ಷದಿಂದ ಕೆಂಪಾಪುರ ರಸ್ತೆಯ ಯಮಲೂರಿನ ಎಎಸ್‌ಕೆ ಲೇಕ್ ಗಾರ್ಡನ್‌ನಲ್ಲಿ ವಾಸವಿದ್ದಾರೆ. ಅವರ ಮನೆಯಲ್ಲಿ ಸಿದ್ದರಾಜು, ಅಂಬಿಕಾ (ಅಡುಗೆ ಸಿಬ್ಬಂದಿ) ಹಾಗೂ ದಿನೇಶ್, ಕಮಲಾ (ಮನೆ ಕೆಲಸ) ಅವರು ಕೆಲಸ ಮಾಡುತ್ತಿದ್ದರು. ವಿಕಾಸ್ ಹಾಗೂ ಮಾಯಾ ವಿಷ್ಣು ಎಂಬುವವರ ಮೂಲಕ 20 ದಿನಗಳ ಹಿಂದೆ ದಿನೇಶ್ ಹಾಗೂ ಕಮಲಾ ಕೆಲಸಕ್ಕೆ ಸೇರಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಎಂ.ಆರ್.ಶಿವಕುಮಾರ್ ಅವರು ಕೆಲಸದ ನಿಮಿತ್ತ ಬೇರೆ ಊರಿಗೆ ತೆರಳಿದ್ದರು. ಜ.25ರಂದು ಬೆಳಿಗ್ಗೆ ಶಿಮಾಂತ್ ಎಸ್.ಅರ್ಜುನ್ ಅವರ ತಾಯಿ ಮಾಲಿನಿ ಹಾಗೂ ಪತ್ನಿ ತನ್ಮಯಾ ಅವರು ಸಂಬಂಧಿಯೊಬ್ಬರು ಆಯೋಜಿಸಿದ್ದ ಭೂಮಿ ಪೂಜೆಗೆ ತೆರಳಿದ್ದರು. ಅಂದೇ ಮಧ್ಯಾಹ್ನ 12.30ರ ಸುಮಾರಿಗೆ ಅಂಬಿಕಾ ಅವರು ಕರೆ ಮಾಡಿ, ದಿನೇಶ್ ಹಾಗೂ ಕಮಲಾ ಅವರು ಲಾಕರ್‌ನಲ್ಲಿದ್ದ ಆಭರಣ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದರು. ಕೆಂಪಾಪುರ ರಸ್ತೆಯ ಯಮಲೂರಿನಲ್ಲಿರುವ ಮನೆಗೆ ತೆರಳಿ ನೋಡಿದಾಗ ₹18 ಕೋಟಿ ಮೌಲ್ಯದ ಆಭರಣ ಕಳ್ಳತನ ಮಾಡಿಕೊಂಡು ಹೋಗಿರುವುದು ಗೊತ್ತಾಗಿತ್ತು ಎಂದು ಮೂಲಗಳು ಹೇಳಿವೆ.

ಎಟಿಎಂಗೆ ಹಣ ತುಂಬದೆ ₹1.38 ಕೋಟಿ ವಂಚನೆ

ಬೆಂಗಳೂರು: ಎಟಿಎಂಗೆ ಹಣ ತುಂಬದೇ ₹1.38 ಕೋಟಿ ವಂಚನೆ ಮಾಡಿದ್ದ ಐವರ ವಿರುದ್ಧ ಕೋರಮಂಗಲ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ.

ಹರೀಶ್‌ಕುಮಾರ್, ಪ್ರವೀಣ್‌ಕುಮಾರ್, ವರುಣ್, ಧನಶೇಖ್ ಹಾಗೂ ರಾಮಕ್ಕ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಹಿಟಾಚಿ ಪೇಮೆಂಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್‌ನ ಆರ್.ನಾಗಾರ್ಜುನ್ ಅವರ ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆ 316(4), 318(4) ಹಾಗೂ ಆರ್/ಡ್ಬ್ಲ್ಯು 3(5) ಅಡಿ ಪ್ರಕರಣ ದಾಖಲು ಮಾಡಿಕೊಂಡು, ತನಿಖೆ ನಡೆಸಲಾಗುತ್ತಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದು ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಹಿಟಾಚಿ ಪೇಮೆಂಟ್ ಸರ್ವೀಸ್ ಮೂಲಕ, ಎಸ್‌ಬಿಐ, ಆ್ಯಕ್ಸಿಸ್ ಬ್ಯಾಂಕ್ ಸೇರಿದಂತೆ ಇತರೆ ಬ್ಯಾಂಕ್‌ನ ಎಟಿಎಂಗಳಿಗೆ ಹಣ ತುಂಬಲಾಗುತ್ತಿತ್ತು. ಈ ಕೆಲಸಕ್ಕೆ ಐವರನ್ನು ನೇಮಿಸಿಕೊಳ್ಳಲಾಗಿತ್ತು. ಅವರೆಲ್ಲರೂ ಸೇರಿಕೊಂಡು ಕೃತ್ಯ ಎಸಗಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಕೋರಮಂಗಲದ ಆ್ಯಕ್ಸಿಸ್ ಬ್ಯಾಂಕ್‌ನಿಂದ ಆರೋಪಿಗಳು ಹಣ ಪಡೆದು ಎಟಿಎಂಗಳಿಗೆ ತುಂಬುತ್ತಿದ್ದರು. ಆ ಹಣದಲ್ಲಿ ಸ್ವಲ್ಪ ಉಳಿಸಿಕೊಂಡು ಉಳಿದ ಹಣವನ್ನು ತುಂಬುತ್ತಿದ್ದರು. ಹೀಗೆ 2024ರ ಜನವರಿಯಿಂದ 2025ರ ಡಿಸೆಂಬರ್ ವರೆಗೆ ₹80.49 ಲಕ್ಷ ಹಾಗೂ ₹57.96 ಲಕ್ಷ ಮೋಸ ಮಾಡಿದ್ದಾರೆ. ಲೆಕ್ಕ ಪರಿಶೋಧನೆ ನಡೆಸಿದಾಗ ಆರೋಪಿಗಳ ಕೃತ್ಯ ಬಯಲಾಗಿದೆ ಎಂದು ಪೊಲೀಸರು ಹೇಳಿದರು.

ಇಬ್ಬರು ಡ್ರಗ್ಸ್ ಪೆಡ್ಲರ್‌ಗಳ ಬಂಧನ

ಬೆಂಗಳೂರು: ಹೊರ ರಾಜ್ಯದಿಂದ ಮಾದಕ ವಸ್ತುವನ್ನು ಖರೀದಿಸಿ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದ ಮಹಿಳೆ ಸೇರಿ ಇಬ್ಬರು ಡ್ರಗ್ಸ್ ಪೆಡ್ಲರ್‌ಗಳನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹4 ಲಕ್ಷ ಮೌಲ್ಯದ 4 ಕೆ.ಜಿ ಗಾಂಜಾ, 37 ಗ್ರಾಂ ಎಂಡಿಎಂಎ, 35 ಗ್ರಾಂ ಹ್ಯಾಶಿಸ್ ಆಯಿಲ್, ತೂಕದ ಯಂತ್ರ, ಕೃತ್ಯಕ್ಕೆ ಉಪಯೋಗಿಸುತ್ತಿದ್ದ ಒಂದು ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದಿದ್ದಾರೆ.

ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಹೊರ ರಾಜ್ಯದ ವ್ಯಕ್ತಿಗಳಿಂದ ಮಾದಕ ವಸ್ತುವನ್ನು ಆರೋಪಿಗಳು ಕಡಿಮೆ ಬೆಲೆಗೆ ಖರೀದಿಸುತ್ತಿದ್ದರು. ಸಾರ್ವಜನಿಕರಿಗೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದರು. ಸಿಸಿಬಿ ಪೊಲೀಸರಿಗೆ ದೊರೆತ ಖಚಿತ ಮಾಹಿತಿ ಮೇರೆಗೆ ಸುಬ್ರಮಣ್ಯ-ಪುರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಈ ಮಾಹಿತಿ ಆಧರಿಸಿ ಉತ್ತರಹಳ್ಳಿ ಪೂರ್ಣಪ್ರಜ್ಞಾ ನಗರದ ನರ್ಸರಿ ರಸ್ತೆಯ ಬಳಿ ದಾಳಿ ಮಾಡಿ ಮಹಿಳೆ ಸೇರಿದಂತೆ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಗೊತ್ತಾಗಿದೆ.

ಪುನರ್ ಪ್ರತಿಷ್ಠಾಪನೆ ನಾಳೆ

ರಾಜರಾಜೇಶ್ವರಿ ನಗರ: ಸರ್ ಎಂ.ವಿಶ್ವೇಶ್ವರಯ್ಯ ಎಂಟನೇ ಬ್ಲಾಕ್‌ನಲ್ಲಿ (ಬಿಡಿಎ ಲೇಔಟ್) ಶ್ರೀ ಕಾರ್ಯ ಸಿದ್ಧಿ ವಿನಾಯಕ ಸ್ವಾಮಿ ಪುನರ್ ಪ್ರತಿಷ್ಠಾಪನೆ ಹಾಗೂ ವಿಮಾನ ಗೋಪುರದ ಬ್ರಹ್ಮಕಲಶ, ಕುಂಭಾಭಿಷೇಕ ಮಹೋತ್ಸವ ಜ.29ರ ಬೆಳಿಗ್ಗೆ 10ಕ್ಕೆ ನಡೆಯಲಿದೆ.

ಶೃಂಗೇರಿ ಶಾರದಾ ಪೀಠಾಧ್ಯಕ್ಷ ಭಾರತಿ ತೀರ್ಥ ಸ್ವಾಮೀಜಿ, ವಿಧುಶೇಖರ ಭಾರತಿ ಸ್ವಾಮೀಜಿ ಅವರ ಸಾನ್ನಿಧ್ಯ, ಶಾಸಕ ಎಸ್.ಟಿ. ಸೋಮಶೇಖರ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ದೇವಸ್ಥಾನದ ಅಧ್ಯಕ್ಷ ಓಂಪ್ರಕಾಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್. ಎಂ.ವಿಶ್ವೇಶ್ವರಯ್ಯ ಎಂಟನೇ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕೃಷ್ಣೇಗೌಡ, ಪ್ರಧಾನ ಕಾರ್ಯದರ್ಶಿ ಹನುಮಂತರಾಜು ಜಿ.ಎನ್., ಪಳನಿವೇಲ್, ಚಂದ್ರಪ್ಪ ಹಾಜರಿದ್ದರು.

ಮಹಿಳೆಗೆ ರಕ್ಷಣೆ ಎಲ್ಲಿದೆ: ಹೈಕೋರ್ಟ್

ಟ್ರಯಲ್ ರೂಮ್‌ನಲ್ಲಿ ತರುಣಿ ಬಟ್ಟೆ ಬದಲಾಯಿಸುತ್ತಿದ್ದಾಗ ಚಿತ್ರೀಕರಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆರೋಪಿಗೆ ಪರಿಹಾರ ನೀಡಲು ಕೋರ್ಟ್ ನಕಾರ
- ತನಿಖೆ ಎದುರಿಸಲಿ ಎಂದ ನ್ಯಾಯಪೀಠ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಬಟ್ಟೆ ಅಂಗಡಿಗೆ ಬಂದ ಗ್ರಾಹಕಿಯರು ಟ್ರಯಲ್ ರೂಮಿನಲ್ಲಿ ಬಟ್ಟೆ ಬದಲಾಯಿಸುವ ಫೋಟೊಗಳನ್ನು ಅಂಗಡಿಯವನೇ ಕ್ಯಾಮೆರಾದಲ್ಲಿ ರಹಸ್ಯವಾಗಿ ಸೆರೆಹಿಡಿಯುತ್ತಾನೆ ಎಂದಾದರೆ ಇಲ್ಲಿ ಯಾವ ಮಹಿಳೆ ತಾನೆ ಸುರಕ್ಷಿತವಾಗಿದ್ದಾರೆ' ಎಂದು ಹೈಕೋರ್ಟ್ ಬೆಂಕಿಯುಗುಳಿದೆ.

'ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಪ್ರಕರಣದ ಆರೋಪಿಯಾದ ನಗರದ ದೊಡ್ಡಮಾವಳ್ಳಿಯ ಲಾಲ್‌ಬಾಗ್ ಕೋಟೆ ರಸ್ತೆ ನಿವಾಸಿ ಫೈಸಲ್ ಉಲ್ಲಾ ಷರೀಫ್ (21) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಆರೋಪಿ ಪರ ಹೈಕೋರ್ಟ್ ವಕೀಲ ಸೈಯದ್ ಜಹೀರುದ್ದೀನ್ ಬರೀದ್, 'ಅರ್ಜಿದಾರರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಪಂಚನಾಮೆಯಲ್ಲಿರುವ ಅಂಶಗಳನ್ನು ಪರಿಗಣಿಸಿ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿದರು.

ಇದಕ್ಕೆ ನ್ಯಾಯಪೀಠ, 'ನೀವು, ಆರೋಪಿ ಇನ್ನೂ ಚಿಕ್ಕವನು ಎನ್ನುತ್ತಿದ್ದೀರಿ. ಆದರೆ ಆತ ಚಿಕ್ಕವನೇನಲ್ಲ. ಈ ರೀತಿಯಾದರೆ ಯಾವ ಮಹಿಳೆಯೂ ಸುರಕ್ಷಿತವಾಗಿರಲು ಸಾಧ್ಯವಿಲ್ಲ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

'ದೋಷಾರೋಪ ಪಟ್ಟಿಯನ್ನೂ ಸಲ್ಲಿಸಲಾಗಿದೆ ಎಂದು ಹೇಳುತ್ತಿದ್ದೀರಲ್ಲಾ? ಹಾಗಾದರೆ ಹೋಗಿ ಬಿಡುಗಡೆಯ ಅರ್ಜಿ ಹಾಕಿಕೊಳ್ಳಿ. ಇಂತಹುದನ್ನೆಲ್ಲಾ ಸಹಿಸುವುದಿಲ್ಲ. ಇಂತಹವರಿಗೆ ಸರಿಯಾದ ಪಾಠ ಕಲಿಸಬೇಕು' ಎಂದು ಎಚ್ಚರಿಸಿದರು. ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದರು.

ಪ್ರಕರಣವೇನು?: 'ಪ್ರಕರಣದ ಆರೋಪಿ ಫೈಸಲ್ ಉಲ್ಲಾ ಷರೀಫ್ ಜಯನಗರ 4ನೇ ಬ್ಲಾಕ್‌ನ 10ನೇ 'ಎ' ಮುಖ್ಯ ರಸ್ತೆಯಲ್ಲಿರುವ 'ಕ್ವೀನ್ಸ್ ಡಿಸೈನರ್ ವೇರ್ ಲೇಡಿಸ್' ಎಂಬ ಹೆಸರಿನ ಬಟ್ಟೆ ಅಂಗಡಿಯನ್ನು ನೋಡಿಕೊಳ್ಳುತ್ತಿದ್ದಾರೆ. ದೂರುದಾರರಾದ 28 ವರ್ಷದ ತರುಣಿ 2024ರ ಸೆಪ್ಟೆಂಬರ್ 8ರಂದು ಸಂಜೆ 6.30ರ ಸಮಯದಲ್ಲಿ, ಬಟ್ಟೆ ಖರೀದಿಸಲು ಅಂಗಡಿಗೆ ಬಂದಿದ್ದರು. ಟ್ರಯಲ್ ರೂಮ್‌ನಲ್ಲಿ ಬಟ್ಟೆ ಬದಲಾಯಿಸುತ್ತಿದ್ದಾಗ ಆ ರೂಮಿನ ಬಾಗಿಲ ಮೇಲಿನ ಸಣ್ಣದಾದ ಸಂದಿನಿಂದ ಆರೋಪಿಯು, ತರುಣಿ ಬಟ್ಟೆ ಬದಲಾಯಿಸುತ್ತಿದ್ದ ಖಾಸಗಿ ಫೋಟೊಗಳನ್ನು ತೆಗೆಯಲು ಪ್ರಯತ್ನಿಸುತ್ತಿದ್ದುದು ತನಿಖೆಯಿಂದ ದೃಢಪಟ್ಟಿರುತ್ತದೆ' ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 77ರ ಅಡಿಯಲ್ಲಿ 2ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಸಿಜೆಎಂ) ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಶಿಕ್ಷಾರ್ಹ ಅಪರಾಧ 'ವೋಯರಿಸಂ'

ಬಿಎನ್‌ಎಸ್ ಕಲಂ 77ರ ವ್ಯಾಖ್ಯಾನ: ಕಲಂ 77ರ ಪ್ರಕಾರ (ಈ ಹಿಂದಿನ ಐಪಿಸಿ ಕಲಂ 354ಸಿ) ಮಹಿಳೆಯರ ಖಾಸಗಿತನಕ್ಕೆ ಧಕ್ಕೆ ತರುವುದನ್ನು 'ವೋಯರಿಸಂ' ಅಪರಾಧ ಎಂದು ಪರಿಗಣಿಸಲಾಗುತ್ತದೆ.

ವೋಯರಿಸಂ ಎಂದರೆ, ಮಹಿಳೆಯ ಒಪ್ಪಿಗೆಯಿಲ್ಲದೆ ಅವರ ಖಾಸಗಿ ಕೃತ್ಯಗಳನ್ನು ಅಂದರೆ; ಸ್ನಾನ ಮಾಡುವುದು, ಬಟ್ಟೆ ಬದಲಾಯಿಸುವುದು, ಲೈಂಗಿಕ ಚಟುವಟಿಕೆ ಅಥವಾ ಖಾಸಗಿ ಸ್ವಭಾವಗಳಲ್ಲಿ ನಿರತವಾದಂತಹ ಕ್ರಿಯೆಗಳ ನಿಕಟ ನಡವಳಿಕೆಗಳಲ್ಲಿ ತೊಡಗಿದ್ದಾಗ ಅದನ್ನು ಕದ್ದು ನೋಡುವ ಲೈಂಗಿಕ ಆಸಕ್ತಿ ಅಥವಾ ಅಭ್ಯಾಸ. ಈ ಕೃತ್ಯಗಳನ್ನು ವೀಕ್ಷಿಸುವ, ಚಿತ್ರೀಕರಿಸುವ ಅಥವಾ ಪ್ರಸಾರ ಮಾಡುವುದು ಶಿಕ್ಷಾರ್ಹ ವ್ಯಾಪ್ತಿಗೆ ಒಳಪಡುತ್ತದೆ. ಮೊದಲ ಬಾರಿ ಮಾಡಿದ ಅಪರಾಧಕ್ಕೆ 1ರಿಂದ 3 ವರ್ಷಗಳವರೆಗಿನ ಜೈಲು ಶಿಕ್ಷೆ ತದನಂತರದ ಇಂತಹುದೇ ಅಪರಾಧವನ್ನು ಮರುಕಳಿಸಿದರೆ 3ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ.

ಈ ಪ್ರಕರಣದಲ್ಲಿ ಆರೋಪಿಯು ಸ್ವತಃ ಚಿತ್ರ ಸೆರೆ ಹಿಡಿದಿದ್ದಾರೆ. ನಿಶ್ಚಿತವಾಗಿ ಇದು ವೋಯರಿಸಂ. ಇಂತಹವರಿಗೆ ಹೇಗೆ ತಾನೆ ರಕ್ಷಣೆ ನೀಡಲು ಸಾಧ್ಯ? ಇವರಿಗೆಲ್ಲಾ ಸರಿಯಾದ ಪಾಠ ಕಲಿಸಬೇಕು

ನ್ಯಾ.ಎಂ.ನಾಗಪ್ರಸನ್ನ

ಫೆ.5ರಿಂದ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾಮಗಾನ ಸಭಾದಿಂದ ಫೆ.5ರಿಂದ 8ರವರೆಗೆ- ಮಲ್ಲೇಶ್ವರದ ವೈಯಾಲಿ ಕಾವಲ್‌ನ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ 17ನೇ ವಾರ್ಷಿಕ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವವನ್ನು ಆಯೋಜಿಸಲಾಗಿದೆ.

'ಪುರಾಣ ಗೀತಂ–ಭಕ್ತಿಯ ಸಂಗೀತ ಪಯಣ' ಸಂಗೀತೋತ್ಸವ ಆಯೋಜಿಸಲಾಗಿದೆ. ಸಂಗೀತ ವಿದ್ವಾಂಸ ಆರ್.ಎಸ್. ನಂದಕುಮಾರ್ ಅವರು ಇದರ ಅಧ್ಯಕ್ಷತೆ ವಹಿಸಲಿದ್ದಾರೆ. ಫೆ.7ರಂದು ನಡೆಯುವ ಸಮಾರಂಭದಲ್ಲಿ '14ನೇ ಸಾಮಗಾನ ವಸಂತ' ಪ್ರಶಸ್ತಿಯನ್ನು ಪಿಟೀಲು ವಿದ್ವಾಂಸರಾದ ಗಣೇಶ್ ರಾಜ ಗೋಪಾಲನ್ ಹಾಗೂ ಕುಮರೇಶ್ ರಾಜಗೋಪಾಲನ್ ಅವರಿಗೆ ಪ್ರದಾನ ಮಾಡಲಾಗುತ್ತದೆ. 'ಸಾಮಗಾನ ವಸಂತ' ಪ್ರಶಸ್ತಿಯನ್ನು ಗಾಯಕಿ ಸ್ಫೂರ್ತಿ ರಾವ್ ಅವರಿಗೆ ನೀಡಲಾಗುತ್ತದೆ' ಎಂದು ಸಭಾ ಅಧ್ಯಕ್ಷ ಆರ್.ಆರ್. ರವಿಶಂಕರ್ ತಿಳಿಸಿದ್ದಾರೆ.

ಪೀಡಕ ಪದ: ಕೆರಳಿದ ಪ್ರಾಸಿಕ್ಯೂಟರ್

ಬಿಕ್ಲು ಶಿವು ಕೊಲೆ ಪ್ರಕರಣ: ಶಾಸಕ ಬೈರತಿ ಅರ್ಜಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಮೇಲೆ ವೈಯಕ್ತಿಕ ನೆಲೆಗಟ್ಟಿನಲ್ಲಿ ಪರ್ಸಿಕ್ಯೂಟರ್ (ಪೀಡಕ) ಎಂದು ದಾಳಿ ನಡೆಸಲಾಗುತ್ತಿದೆ. ಈ ಪ್ರಕರಣದಲ್ಲಿ ಏನು ನಡೆದಿದೆ ಎಂಬುದರ ಎಲ್ಲಾ ಅಂಶಗಳನ್ನು ಕೋರ್ಟ್ ಮುಂದೆ ತೆರೆದಿಡುತ್ತೇನೆ. ಯಾವುದನ್ನೂ ಗೋಪ್ಯವಾಗಿರಿಸಲು ತಯಾರಿಲ್ಲ' ಎಂದು ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ರೌಡಿ ಶೀಟರ್ ಬಿಕ್ಲು ಶಿವು ಕೊಲೆ ಆರೋಪಿ ಶಾಸಕ ಬೈರತಿ ಬಸವರಾಜ ಪರ ವಕೀಲರಿಗೆ ಹೈಕೋರ್ಟ್‌ನಲ್ಲಿ ಸವಾಲೆಸೆದರು.

ಪ್ರಕರಣಕ್ಕೆ ಸಂಬಂಧಿಸಿ ಬೈರತಿ ಬಸವರಾಜ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಮುಂದುವರಿಸಿತು.

ಐದನೇ ಆರೋಪಿ ಕೆ.ಆರ್.ಪುರ ಶಾಸಕ ಬೈರತಿ ಬಸವರಾಜ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ಬೈರತಿ ಅವರು ಕೋರ್ಟ್‌ಗೆ ಸುಳ್ಳು ಮಾಹಿತಿ ನೀಡಿ, ಮಧ್ಯಂತರ ಜಾಮೀನು 'ಪಡೆದುಕೊಂಡಿದ್ದಾರೆ'. ಈ ಮೂಲಕ ನ್ಯಾಯಾಂಗ ಪ್ರಕ್ರಿಯೆಯನ್ನು ನಿಷ್ಫಲಗೊಳಿಸಿದ್ದಾರೆ ಎಂಬ ಪ್ರಾಸಿಕ್ಯೂಷನ್ ಆರೋಪ ಸರ್ವಥಾ ಸರಿಯಲ್ಲ. ಕೋರ್ಟ್ ಮಧ್ಯಂತರ ಜಾಮೀನನ್ನು 'ಮಂಜೂರು ಮಾಡಿದೆ' ಎಂದು ಹೇಳಬೇಕೇ ವಿನಃ 'ಪಡೆದುಕೊಳ್ಳಲಾಗಿದೆ' ಎಂದು ಸಂಬೋಧಿಸಬಾರದು' ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವುದು ನ್ಯಾಯಸಮ್ಮತವಾಗಿಲ್ಲ ಎಂದೆನಿಸಿದರೆ ಸಿಐಡಿ ತನಿಖಾಧಿಕಾರಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದಾಗಿತ್ತು. ಅದು ಬಿಟ್ಟು ಅರ್ಜಿದಾರರ ವಿರುದ್ಧ ಸುಖಾಸುಮ್ಮನೆ ಆರೋಪ ಮಾಡುವುದು ಸರಿಯಲ್ಲ. ಪ್ರಾಸಿಕ್ಯೂಟರ್, ಪ್ರಾಸಿಕ್ಯೂಟರ್ ಮಾದರಿಯಲ್ಲಿರಬೇಕು. ಅದು ಬಿಟ್ಟು ಪರ್ಸಿಕ್ಯೂಟರ್ ಆಗಿರಬಾರದು' ಎಂದು ಅಸಮಾಧಾನ ಹೊರಹಾಕಿದರು.

ಈ ಮಾತಿಗೆ ಕೆರಳಿ ಎದ್ದು ನಿಂತ ಬಿ.ಎನ್.ಜಗದೀಶ್, 'ನನ್ನ ವಾದಾಂಶಗಳೆಲ್ಲವನ್ನೂ ನಾನು ಪ್ರತಿಪಾದಿಸಲು ಸಿದ್ಧನಿದ್ದೇನೆ. ಯಾವುದನ್ನೂ ಮುಚ್ಚಿಡಲು ತಯಾರಿಲ್ಲ' ಎಂದು ಕಿಡಿಕಾರಿದರು.

'ಅರ್ಜಿದಾರರು ಸಲ್ಲಿಸಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ಈ ಹಿಂದೆಯೇ ವಜಾಗೊಳಿಸಿದೆ. ಇದಾದ ನಂತರವೂ ಪುನಃ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಲಾಗಿದೆ. ಯಾವುದೇ ಬದಲಾದ ಪರಿಸ್ಥಿತಿ ಇಲ್ಲದಿರುವ ಕಾರಣ ಈ ಅರ್ಜಿ ಊರ್ಜಿತವಾಗುವುದಿಲ್ಲ. ಬಿಕ್ಲು ಶಿವು ತಾಯಿಯ ಮೇಲೆ ಒತ್ತಡ ಹೇರಿ ಮಾಧ್ಯಮ ಹೇಳಿಕೆ ಕೊಡಿಸಲಾಗಿದೆ. ಹಾಗಾಗಿ, ಅರ್ಜಿದಾರರಿಗೆ ನಿರೀಕ್ಷಣಾ ಜಾಮೀನು ನೀಡಿದರೆ ತನಿಖೆಗೆ ಹಿನ್ನಡೆಯಾಗಲಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ದಿನದ ಕಲಾಪದ ಅವಧಿ ಮುಗಿಯುತ್ತಿದ್ದ ಕಾರಣ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಬುಧವಾರಕ್ಕೆ (ಜ.28) ಮುಂದೂಡಿತು.

ಮಾನವ ಹಕ್ಕು ಆಯೋಗದ ಆದೇಶಕ್ಕೆ ತಡೆ

ಯುವಕನ ಮೂತ್ರಪಿಂಡ ಮಾರಾಟ, ನಿಗೂಢ ಸಾವಿನ ಪ್ರಕರಣ

ಬೆಂಗಳೂರು: ಬುದ್ಧಿಮಾಂದ್ಯ ಯುವಕನ ಕಿಡ್ನಿ ಮಾರಾಟ ಮತ್ತು ಆತನ ನಿಗೂಢ ಸಾವಿನ ಆರೋಪ ಪ್ರಕರಣದ ತನಿಖೆಯಲ್ಲಿ ಕರ್ತವ್ಯ ಲೋಪ ಎಸಗಿದ ಸಬ್ ಇನ್‌ಸ್ಪೆಕ್ಟರ್ ಹಾಗೂ ಹೆಡ್ ಕಾನ್‌ಸ್ಟೆಬಲ್ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಹಾಗೂ ಅವರಿಂದ ದಂಡ ವಸೂಲಿ ಮಾಡುವಂತೆ ಶಿಫಾರಸು ಮಾಡಿ ರಾಜ್ಯ ಮಾನವ ಹಕ್ಕುಗಳ ಆಯೋಗ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಆಯೋಗದ ಆದೇಶ ಪ್ರಶ್ನಿಸಿ ಪೊಲೀಸ್ ಅಧಿಕಾರಿಗಳಾದ ವಿ.ಸಂತೋಷ್ ಮತ್ತು ಕೆ.ಎಸ್. ಗೋಪಾಲ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಕೆಲ ಕಾಲ ವಿಚಾರಣೆ ಆಲಿಸಿದ ನ್ಯಾಯಪೀಠ, 'ಇದೇ ಪ್ರಕರಣದಲ್ಲಿ ಇತರೆ ಮೂವರು ಪೊಲೀಸ್ ಅಧಿಕಾರಿಗಳ ವಿರುದ್ಧದ ಪ್ರಕರಣಕ್ಕೆ ಮತ್ತೊಂದು ನ್ಯಾಯಪೀಠ ಮಧ್ಯಂತರ ತಡೆ ನೀಡಿದೆ. ಆದ್ದರಿಂದ, ಈ ಪ್ರಕರಣದಲ್ಲೂ ಮಧ್ಯಂತರ ತಡೆ ನೀಡಲಾಗುತ್ತಿದೆ' ಎಂದು ಹೇಳಿತು. ಪ್ರತಿವಾದಿಗಳಾದ ರಾಜ್ಯ ಸರ್ಕಾರ, ಮಾನವ ಹಕ್ಕು ಆಯೋಗ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ದೂರುದಾರ ಶಿವಾನಂದ ಬಿ.ಬಾವೂರು ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 27ಕ್ಕೆ ಮುಂದೂಡಿತು.

ಪ್ರಕರಣವೇನು?

ಬುದ್ಧಿಮಾಂದ್ಯ ಯುವಕ ಶಂಕರಪ್ಪ (29) ಎಂಬುವವನ ಕಿಡ್ನಿ ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ 2020ರಲ್ಲಿ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಎಫ್‌ಐಆರ್ ದಾಖಲಿಸಲು ಆರು ತಿಂಗಳ ವಿಳಂಬ ಮಾಡಿದ ಮತ್ತು ಸೂಕ್ತ ತನಿಖೆ ನಡೆಸದೆ ಕರ್ತವ್ಯಲೋಪ ಎಸಗಿರುವುದು ಆಯೋಗದ ತನಿಖೆಯಲ್ಲಿ ದೃಢಪಟ್ಟಿತ್ತು.

ಈ ಹಿನ್ನೆಲೆಯಲ್ಲಿ ವಿ.ಸಂತೋಷ್, ಕೆ.ಎಸ್.ಗೋಪಾಲ್ ಸೇರಿದಂತೆ ಐವರು ಪೊಲೀಸರ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಮತ್ತು ಸಬ್ ಇನ್‌ಸ್ಪೆಕ್ಟರ್ ಅವರಿಂದ ₹1.50 ಲಕ್ಷ, ಹೆಡ್‌ಕಾನ್‌ಸ್ಟಬಲ್ ಅವರಿಂದ ₹1 ಲಕ್ಷ ದಂಡ ವಸೂಲಿ ಮಾಡುವಂತೆ ಆಯೋಗವು, ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಶಿಫಾರಸು ಮಾಡಿತ್ತು.

ಪ್ರಕರಣ ನಡೆದಾಗ ಗೋವಿಂದರಾಜನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹಾಗೂ ಸದ್ಯ ಬ್ಯಾಡರಹಳ್ಳಿ ಪೊಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ಆಗಿರುವ ವಿ.ಸಂತೋಷ್ ಮತ್ತು ಕಲಾಸಿಪಾಳ್ಯ ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್‌ಸ್ಟಬಲ್ ಆಗಿರುವ ಕೆ.ಎಸ್.ಗೋಪಾಲ್ ಈ ಅರ್ಜಿ ಸಲ್ಲಿಸಿದ್ದಾರೆ.

ಹಿನ್ನೆಲೆ ಗಾಯನಕ್ಕೆ ಅರಿಜಿತ್ ಸಿಂಗ್ ವಿದಾಯ

ನವದೆಹಲಿ(ಪಿಟಿಐ): 'ಹಿನ್ನೆಲೆ ಗಾಯನದಿಂದ ನಿವೃತ್ತಿ ತೆಗೆದುಕೊಳ್ಳುತ್ತಿರುವೆ. ಹೊಸದಾಗಿ ಯಾವುದೇ ಸಂಗೀತ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುವುದಿಲ್ಲ' ಎಂದು ಖ್ಯಾತ ಗಾಯಕ ಅರಿಜಿತ್ ಸಿಂಗ್ ಮಂಗಳವಾರ ಘೋಷಿಸಿದ್ದಾರೆ.

ಅರಿಜಿತ್ ಸಿಂಗ್

ವೃತ್ತಿಜೀವನದ ಉತ್ತುಂಗದಲ್ಲಿ ಇರುವಾಗಲೇ, 38 ವರ್ಷದ ಅರಿಜಿತ್ ಸಿಂಗ್ ಈ ಘೋಷಣೆ ಮಾಡಿರುವುದು, ಅವರ ಅಭಿಮಾನಿಗಳಲ್ಲಿ ಆಘಾತ–ನಿರಾಸೆಗೆ ಕಾರಣವಾಗಿದೆ. ಹಿನ್ನೆಲೆ ಗಾಯನಕ್ಕೆ ವಿದಾಯ ಹೇಳುತ್ತಿರುವುದಾಗಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

'ಕರೀಂಖಾನ್ ಸೌಹಾರ್ದ' ಪ್ರಶಸ್ತಿಗೆ ಅಚ್ಯುತ ಆಯ್ಕೆ

ಸಕಲೇಶಪುರ (ಹಾಸನ): ತಾಲ್ಲೂಕಿನ ಬೆಳ್ಳೇಕೆರೆ ಜೈ ಕರ್ನಾಟಕ ಸಂಘವು ನೀಡುವ ರಾಜ್ಯಮಟ್ಟದ 'ಡಾ.ಎಸ್.ಕೆ. ಕರೀಂಖಾನ್ ಸೌಹಾರ್ದ ಪ್ರಶಸ್ತಿ'ಗೆ ಕೆಜಿಎಫ್‌ನ ಅಚ್ಯುತ ಅವರನ್ನು ಆಯ್ಕೆ ಮಾಡಲಾಗಿದೆ.

ಅಮೃತಾ ರಕ್ಷಿದಿ ನೆನಪಿನಲ್ಲಿ ನೀಡುವ 'ಅಮೃತ ಕಾವ್ಯ ಪ್ರಶಸ್ತಿ'ಗೆ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕೆರವಡಿ ಗ್ರಾಮದ ಮಧು ಕಾರಗಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ವಿನಯ್ ಗುಂಟೆ ಅವರನ್ನು ಆಯ್ಕೆ ಮಾಡಲಾಗಿದೆ. ಸೌಹಾರ್ದ ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಕಾವ್ಯ ಪ್ರಶಸ್ತಿಯು ₹5 ಸಾವಿರ ನಗದು, ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹಾಗೂ ಡಾ. ಎಚ್. ಎಸ್. ಅನುಪಮಾ ಅವರನ್ನು ಒಳಗೊಂಡ ಸಮಿತಿ ಆಯ್ಕೆ ಮಾಡಿದೆ. ಫೆ.28ರಂದು ಬೆಳ್ಳೇಕೆರೆ ಗ್ರಾಮದ ಪೂರ್ಣಚಂದ್ರ ತೇಜಸ್ವಿ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ರಂಗಕರ್ಮಿ ಪ್ರಸಾದ್ ರಕ್ಷಿದಿ ಹಾಗೂ ಕವಿ ಸುಬ್ಬು ಹೊಲೆಯಾರ್ ತಿಳಿಸಿದ್ದಾರೆ.



ಅಚ್ಯುತ

ಮಧು ಕಾರಗಿ

ವಿನಯ್‌ಗುಂಟೆ

'ಅಕ್ರಮ ಬಡಾವಣೆ: ಕರುಣೆ ತೋರಿಸಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ದಿನನಿತ್ಯ ಅಕ್ರಮ ಕಟ್ಟಡ, ಬಡಾವಣೆ ನಿರ್ಮಾಣವಾಗುತ್ತಿದ್ದರೂ ಅಧಿಕಾರಿಗಳು ಏನ್ ಮಾಡ್ತಾ ಇದ್ದೀರಾ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಪ್ರಶ್ನಿಸಿದರು.

ನಗರ ವ್ಯಾಪ್ತಿಯ ಸರ್ಕಾರಿ ಜಮೀನು ಒತ್ತುವರಿ ತೆರವಿಗೆ ಸಂಬಂಧಿಸಿ ಮಂಗಳವಾರ ಕಂದಾಯ ಇಲಾಖೆ ಹಿರಿಯ ಅಧಿಕಾರಿಗಳು, ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಜತೆ ಸಭೆ ನಡೆಸಿದರು.

'ಅನುಮತಿ ನೀಡಿದ ಪ್ರದೇಶಕ್ಕೂ ಮೀರಿ ಅನಧಿಕೃತ ಬಡಾವಣೆ ಮಾಡಿದವರ ವಿರುದ್ಧ ಎಫ್‌ಐಆರ್ ದಾಖಲು ಮಾಡಬೇಕು. ಅಕ್ರಮ ಲೇಔಟ್ ನಿರ್ಮಿಸಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಸೂಚನೆ ನೀಡಿದ ನಂತರವೂ ಗೋಮಾಳಗಳಲ್ಲಿ ಬಡಾವಣೆ ಮಾಡಿದವರ ವಿರುದ್ಧ ಏಕೆ ಕ್ರಮ ಜರುಗಿಸಿಲ್ಲ' ಎಂದು ತರಾಟೆಗೆ ತೆಗೆದುಕೊಂಡರು.

'ಈವರೆಗೂ ನಗರ ಹಾಗೂ ಸುತ್ತಮುತ್ತ ಅಕ್ರಮ ಬಡಾವಣೆಗಳಲ್ಲಿ ನಿರ್ಮಿಸಿರುವ ಎಷ್ಟು ಮನೆಗಳನ್ನು ನೆಲಸಮ ಮಾಡಿ ಪ್ರಕರಣ ದಾಖಲಿಸಿದ್ದೀರಿ, ನಕಲಿ ದಾಖಲೆ ಸೃಷ್ಟಿಸುವವರು ತಮ್ಮ ಕೆಲಸ ಮುಂದುವರಿಸಿದ್ದಾರೆ. ಕಾನೂನು ಉಲ್ಲಂಘಿಸಿ ಬಡಾವಣೆ ಮಾಡುವವರಿಗೆ ಕರುಣೆ ತೋರಿಸುವ ಅಗತ್ಯ ಇಲ್ಲ' ಎಂದರು.

'ಖಾಲಿ ಜಾಗ, ಸರ್ಕಾರಿ ಜಮೀನಿಗೆ ಬೇಲಿ ಇಲ್ಲವೇ ರಕ್ಷಣಾ ಗೋಡೆ ಹಾಕಲೇಬೇಕು. ನಕಾಶೆ ರಸ್ತೆ ಎಷ್ಟು ಒತ್ತುವರಿ ಆಗಿದೆ ಎಂಬ ಮಾಹಿತಿ ಸಂಗ್ರಹಿಸಬೇಕು. ಮತ್ತೆ ಒತ್ತುವರಿ ಆದರೆ ತಹಶೀಲ್ದಾರ್ ಅವರೇ ಜವಾಬ್ದಾರರಾಗುತ್ತಾರೆ. ಲ್ಯಾಂಡ್ ಬೀಟ್ ಆ್ಯಪ್‌ನಲ್ಲಿ ಶೇ 97 ರಷ್ಟು ಸರ್ಕಾರಿ ಭೂಮಿಯನ್ನು ಗುರುತಿಸಿ ಡೇಟಾ ಎಂಟ್ರಿ ಮಾಡಲಾಗಿದೆ. ಈ ಮಾಹಿತಿ ಉಪಯೋಗಿಸಿಕೊಂಡು ನೈಜಸ್ಥಿತಿಯನ್ನು ದಿಶಾ ಆ್ಯಪ್‌ನಲ್ಲಿ ಅಪ್‌ಡೇಟ್ ಮಾಡಬೇಕು' ಎಂದು ಹೇಳಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳ ಸಭೆ ನಡೆಸಿದರು.

ದೂರು ದಾಖಲಾಗಿಲ್ಲ, ಸುಳಿವೂ ಇಲ್ಲ

₹400 ಕೋಟಿ ದರೋಡೆ ಪ್ರಕರಣ • 'ಮಹಾ' ಎಸ್ಐಟಿ ತನಿಖೆಯತ್ತ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಚೋರ್ಲಾ ಘಾಟ್‌ನಲ್ಲಿ ಮೂರು ತಿಂಗಳ ಹಿಂದೆ ನಡೆದಿದೆ ಎನ್ನಲಾದ ₹400 ಕೋಟಿ ದರೋಡೆ ಪ್ರಕರಣ ಕುರಿತು ದೂರು ದಾಖಲಾಗಿಲ್ಲ. ಅಷ್ಟೇ ಅಲ್ಲ; ಕಂಟೇನರ್‌ಗಳ ಮಾಲೀಕರು ಯಾರು, ಚಾಲಕರು ಯಾರು ಎಂಬ ಸುಳಿವೂ ಸಿಕ್ಕಿಲ್ಲ.

'ಚೋರ್ಲಾ ಘಾಟ್ ಮಾರ್ಗವಾಗಿ ಸಾಗಿಸುತ್ತಿದ್ದ ₹400 ಕೋಟಿ ದರೋಡೆ ಮಾಡಿದ್ದೇನೆ ಎಂದು ನನ್ನನ್ನು ಅಪಹರಿಸಿದ್ದರು' ಎಂದು ಮಹಾರಾಷ್ಟ್ರದ ಸಂದೀಪ್ ಪಾಟೀಲ ಎಂಬವರು ನೀಡಿದ ದೂರಿನ ಅನ್ವಯ ನಾಸಿಕ್ ಪೊಲೀಸರು ಅಪಹರಣ ಪ್ರಕರಣ ದಾಖಲಿಸಿದ್ದಾರೆ. ತನಿಖೆ ನಡೆದಿದ್ದು, ಅಪಹರಣ ಮಾಡಿದ್ದ ಕಾರು ಚಾಲಕನನ್ನು ಮಂಗಳವಾರ (ಜ.27) ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಈತ ಹಣ ದರೋಡೆ ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಯಲ್ಲ.

> **₹400 ಕೋಟಿ ನಾಪತ್ತೆ ಪ್ರಕರಣದಲ್ಲಿ ಸ್ಪಷ್ಟತೆ ಇಲ್ಲ. ಮಹಾರಾಷ್ಟ್ರ ಸರ್ಕಾರ ಎಸ್ಐಟಿ ತನಿಖೆ ನಡೆಸುತ್ತಿದೆ. ಈ ಬಗ್ಗೆ ಏನೂ ಹೇಳಲು ಆಗಲ್ಲ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ಏತನ್ಮಧ್ಯೆ, ವಿಶೇಷ ತನಿಖಾ ತಂಡದ ವಶದಲ್ಲಿರುವ ಆರೋಪಿಗಳಾದ ಜಯೇಶ್ ಕದಂ, ವಿಶಾಲ್ ನಾಯ್ಡು, ಸುನಿಲ್ ಧುಮಾಲ್, ವಿರಾಟ್ ಗಾಂಧಿ, ಜನಾರ್ದನ್ ದೈಗುಡೆ ಮತ್ತು ಸಯ್ಯದ್ ಅಜರ್ ಅವರ ಕಸ್ಟಡಿ ಬುಧವಾರ (ಜ.28) ಕೊನೆಗೊಳ್ಳಲಿದೆ. ಹೀಗಾಗಿ, ಎಸ್ಐಟಿ ತಂಡ ಮಂಗಳವಾರವೇ ಅವರನ್ನು ಘಟನಾ ಸ್ಥಳಕ್ಕೆ ಕರೆತರಲಿದೆ ಎಂಬ ವದಂತಿ ಗಡಿಯಲ್ಲಿ ಹರಡಿತ್ತು.

ಆರೋಪಿಗಳಾದ ಕಿಶೋರ್ ಹಾಗೂ ಜಯೇಶ್ ಮಧ್ಯೆ ನಡೆದಿದೆ ಎನ್ನಲಾದ ಸಂಭಾಷಣೆಯಲ್ಲಿ 'ಈ ಕಪ್ಪುಹಣವನ್ನು ತಿರುಪತಿಯ ಬಾಲಾಜಿ ಟ್ರಸ್ಟ್‌ನಲ್ಲಿ ಅಥವಾ ಅಹಮದಾಬಾದ್‌ನ ಆಶ್ರಮವೊಂದರಲ್ಲಿ ಚಲಾವಣೆಯ ಹಣವಾಗಿ ಬದಲಾವಣೆ ಮಾಡಿಕೊಳ್ಳಬಹುದು' ಎಂಬ ಮಾತಿದೆ. ಎಸ್ಐಟಿ ತಂಡ ಈ ನಿಟ್ಟಿನಲ್ಲೂ ತನಿಖೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

'ಕೃತ್ಯದ ಸ್ಥಳ ಕುರಿತು ಸ್ಪಷ್ಟತೆ ಇಲ್ಲ'

ಚೋರ್ಲಾ ಘಾಟ್ ಕರ್ನಾಟಕ, ಮಹಾರಾಷ್ಟ್ರ, ಗೋವಾ ರಾಜ್ಯದ ಗಡಿಯಲ್ಲಿ ವ್ಯಾಪಿಸಿದೆ. ಇದರ ಮಾರ್ಗವು ಮೂರೂ ರಾಜ್ಯಗಳ ವ್ಯಾಪ್ತಿಯ ಕಾಡಿನಲ್ಲಿ ಹಾದುಹೋಗಿದೆ. 'ಚೋರ್ಲಾ ಘಾಟ್‌ನಲ್ಲಿ ದರೋಡೆ ನಡೆದಿದೆ' ಎಂಬ ಸಂದೀಪ್ ಪಾಟೀಲ ಅವರ ಹೇಳಿಕೆ ಸ್ಪಷ್ಟವಾಗಿಲ್ಲ. ಇದು ಬೆಳಗಾವಿ ಜಿಲ್ಲೆಯಲ್ಲಿ ನಡೆದಿದೆ ಎಂಬುದಕ್ಕೂ ಪುರಾವೆ ಇಲ್ಲ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

'ಚೋರ್ಲಾ ಘಾಟ್‌ನಲ್ಲಿ ದರೋಡೆ ನಡೆದ ಬಗ್ಗೆ ತನಿಖೆ ನಡೆಸಬೇಕು' ಎಂದು ನಾಸಿಕ್ ಪೊಲೀಸರು ಬೆಳಗಾವಿ ಜಿಲ್ಲಾ ಎಸ್‌ಪಿಗೆ ಪತ್ರ ಬರೆದ ಕಾರಣಕ್ಕೆ ಈ ಪ್ರಕರಣ ಬೆಳಗಾವಿಗೂ ತಳಕು ಹಾಕಿಕೊಂಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, 'ಸಂದೀಪ್ ಪಾಟೀಲ ನೀಡಿರುವ ದೂರು ವದಂತಿಯಂತೆ ಕಾಣುತ್ತಿದೆ' ಎಂದು ಹೇಳಿದ್ದಾರೆ. ಹೀಗಾಗಿ, ಮಹಾರಾಷ್ಟ್ರದ ಎಸ್ಐಟಿ ತಂಡದ ಪ್ರತಿಕ್ರಿಯೆ ಮೇಲೆ ಇದರ ಸತ್ಯಾಸತ್ಯತೆ ತಿಳಿಯಲಿದೆ.

ವಾಗೀಶ್ ಭಟ್‌ಗೆ 'ಶೇಷಾದ್ರಿ ಗವಾಯಿ ಪುರಸ್ಕಾರ'

ಪ್ರಜಾವಾಣಿ ವಾರ್ತೆ


ವಾಗೀಶ್ ಭಟ್

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ನೀಡುವ 'ಪಂಡಿತ್ ಆರ್.ವಿ. ಶೇಷಾದ್ರಿ ಗವಾಯಿ ಪುರಸ್ಕಾರ'ಕ್ಕೆ ಹಿಂದೂಸ್ತಾನಿ ಗಾಯಕ ವಾಗೀಶ್ ಭಟ್ ಆಯ್ಕೆಯಾಗಿದ್ದಾರೆ.

ಈ ಪುರಸ್ಕಾರವು ₹10 ಸಾವಿರ ನಗದು ಒಳಗೊಂಡಿದೆ. ಟ್ರಸ್ಟ್ ಫೆಬ್ರುವರಿ 1ರಂದು ಜಯನಗರದಲ್ಲಿರುವ ಜೆಎಸ್‌ಎಸ್ ಸಭಾಂಗಣದಲ್ಲಿ ದಾಸ ನಿರಂತರ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಚಲನಚಿತ್ರ ನಟ ಶ್ರೀನಿವಾಸ ಪ್ರಭು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಸಂಗೀತೋತ್ಸವದಲ್ಲಿ ಅನಂತ್ ಭಾಗವತ್, ಅಶ್ವಿನ್ ಬಾಳಿಗ, ಪ್ರಸನ್ನ ಕೊರ್ತಿ, ಅನನ್ಯ ಭಾರ್ಗವ್, ಶಿವಕುಮಾರ್ ಮಹಾಂತ್, ಅಮೃತೇಶ್ ಕುಲಕರ್ಣಿ, ನಾಗೇಂದ್ರ ರಾಣಾಪೂರ್, ಉಮಾ ಕುಲಕರ್ಣಿ, ಶ್ರೀನಿವಾಸ್ ಭಾಗವತ್ ಭಾಗವಹಿಸಲಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಪಂಡಿತ್ ಸತೀಶ್ ಹಂಪಿಹೊಳಿ ಅವರು ತಿಳಿಸಿದ್ದಾರೆ.

ಉದ್ಯೋಗ ವಾಣಿ

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ.1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034. Ph: 080-25526266/25526288
website: www.csbank.in

ನೇಮಕಾತಿ ಪ್ರಕಟಣೆ

"ಈ ಕೆಳಕಂಡ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ"

1. **ಹುದ್ದೆಗಳ ಸಂಖ್ಯೆ:** 1) ಕಿರಿಯ ಸಹಾಯಕರು-7 (ಏಳು), 2) ಚಾಲಕ ಕಂ ಅಟೆಂಡರ್ - 2 (ಎರಡು).
2. **ವಿದ್ಯಾರ್ಹತೆ: 1) ಕಿರಿಯ ಸಹಾಯಕರ ಹುದ್ದೆಗೆ** - ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ವಿಶ್ವ ವಿದ್ಯಾನಿಲಯದ ಯಾವುದೇ ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರಬೇಕು (ಪದವಿಯ ಎಲ್ಲಾ ವರ್ಷದ ಸರಾಸರಿ ಶೇಕಡ 60 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು) ಅ) ಬಿ.ಕಾಂ.,/ಎಂ.ಕಾಂ.,/ಎಂ.ಬಿ.ಎ. (ಫೈನಾನ್ಸ್) ನಲ್ಲಿ ತೇರ್ಗಡೆಯಾದವರಿಗೆ ಆದ್ಯತೆ. ಆ) ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು. ಇ) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು.
   2) ಚಾಲಕ ಕಂ ಅಟೆಂಡರ್ ಹುದ್ದೆಗೆ-ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. ಅ) ಕಾನೂನು ಬದ್ಧ ಲಘು ಮೋಟಾರು ವಾಹನದ ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು.
3. **ವೇತನ ಶ್ರೇಣಿ: 1) ಕಿರಿಯ ಸಹಾಯಕರ ಹುದ್ದೆ :** 37500-900-39300-1000-43300-1125-47800-1250-52800-1375-58300-1500-64300-1650-74200--1900-76100. **2) ಚಾಲಕ ಕಂ ಅಟೆಂಡರ್ ಹುದ್ದೆ:** 29600-725-32500-800-35700-900-39300-1000-43300-1125-47800-1250-52800 ಹಾಗೂ ಮೂಲ ವೇತನದ ಜೊತೆಗೆ ಆಡಳಿತ ಮಂಡಳಿಯು ನಿಗದಿಪಡಿಸುವ ರೀತಿಯಲ್ಲಿ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ಮತ್ತು ಇತರ ಭತ್ಯೆಗಳನ್ನು ನೀಡಲಾಗುವುದು.
4. **ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 18-02-2026 ಸಂಜೆ 5.30 ಗಂಟೆಯೊಳಗೆ.** ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ಅರ್ಜಿ ನಮೂನೆ, ಅರ್ಜಿ ಸಲ್ಲಿಕೆಯ ವಿಧಾನ, ವಯೋಮಿತಿ, ಅರ್ಜಿ ಶುಲ್ಕ, ಆಯ್ಕೆಯ ವಿಧಾನ, ನಿಬಂಧನೆಗಳು ಮತ್ತು ಸೂಚನೆಗಳು ಹಾಗೂ ಹೆಚ್ಚಿನ ವಿವರಗಳನ್ನು ನಮ್ಮ ಬ್ಯಾಂಕಿನ ಅಧಿಕೃತ ವೆಬ್‌ಸೈಟ್ Website: www.csbank.in ಅಥವಾ charteredsahakari.bank.in ನಿಂದ ಪಡೆದುಕೊಳ್ಳುವುದು.

ಸ್ಥಳ : ಬೆಂಗಳೂರು
ದಿನಾಂಕ: 27-01-2026

ನೇಮಕಾತಿ ಸಮಿತಿ ಆದೇಶದ ಮೇರೆಗೆ
ಸಹಿ/-
ಸಮಿತಿ ಕಾರ್ಯದರ್ಶಿ

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರೀಯ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427

ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ

ನಿಯಮಿತ / ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ನಿಯಮಿತ/ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಜಾಹೀರಾತು ನಂ. CRPD/SCO/2025-26/22 (ಗುತ್ತಿಗೆ ಆಧಾರದ ಹುದ್ದೆ)

ಹುದ್ದೆಯ ಹೆಸರು	ಖಾಲಿ ಹುದ್ದೆ	31.12.2025 ರಂತೆ ವಯಸ್ಸು (ವರ್ಷಗಳು)	
		ಕನಿಷ್ಠ	ಗರಿಷ್ಠ
ವೈಸ್ ಪ್ರೆಸಿಡೆಂಟ್ (ಯುಎಕ್ಸ್)	1	40	50
ಡೆಪ್ಯುಟಿ ವೈಸ್ ಪ್ರೆಸಿಡೆಂಟ್ (ಯುಎಕ್ಸ್)	1	36	44
ಸಹಾಯಕ ವೈಸ್ ಪ್ರೆಸಿಡೆಂಟ್ (ಯುಎಕ್ಸ್)	1	32	40
ವರಿಷ್ಠ ಸ್ಪೆಶಲ್ ಎಕ್ಸಿಕ್ಯೂಟಿವ್ಸ್ (ಯುಐ ಮತ್ತು ಯುಎಕ್ಸ್)	3	28	37

ಜಾಹೀರಾತು ನಂ. CRPD/SCO/2025-26/22 (ನಿಯಮಿತ ಹುದ್ದೆ)

ಹುದ್ದೆಯ ಹೆಸರು	ಗ್ರೇಡ್	ಖಾಲಿ ಹುದ್ದೆ	31.12.2025 ರಂತೆ ವಯಸ್ಸು (ವರ್ಷಗಳು)	
			ಕನಿಷ್ಠ	ಗರಿಷ್ಠ
ಡೆಪ್ಯುಟಿ ಮ್ಯಾನೇಜರ್ (ಯುಐ ಮತ್ತು ಯುಎಕ್ಸ್)	ಎಮ್‌ಎಮ್‌ಜಿಎಸ್ II	6	25	35

ಅರ್ಹತೆಯ ಮಾನದಂಡಗಳು (ವಯಸ್ಸು, ವಿದ್ಯಾರ್ಹತೆ, ಅನುಭವ, ಕೆಲಸದ ವಿವರಣೆ ಇತ್ಯಾದಿ), ಖಾಲಿ ಹುದ್ದೆಯ ವಿವರಗಳು, ಅವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ನೊಂದಿಗೆ ಇತರ ವಿವರಗಳಿಗಾಗಿ ಹಾಗೂ ಅರ್ಜಿ ಶುಲ್ಕದ ಆನ್‌ಲೈನ್ ಪಾವತಿಗಾಗಿ ಬ್ಯಾಂಕ್‌ನ ವೆಬ್ ಸೈಟ್ https://sbi.bank.in/web/careers/current-openingsಗೆ ಲಾಗಿನ್ ಮಾಡಿರಿ. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ಉಲ್ಲೇಖಿಸಿರಿ. ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: **"CONTACT US" —> "Post Your Query"** ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ **(https://bank.sbi/web/careers/post-your-query).**

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ: 16.01.2026 ರಿಂದ 05.02.2026**

ಸ್ಥಳ: ಮುಂಬೈ
ದಿನಾಂಕ: 16.01.2026

ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಮ್)

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-560 052, ದೂ: 080-2226 0932/2209 6555/2209 6512
E-mail: admnkfcsc123@yahoo.com, mdkfcsc@yahoo.com

ಸಂಖ್ಯೆ: ಕಾನಾಸನಿನಿ/ಆಡಳಿತ/ಸಿಬ್ಬಂದಿ/ನೇ.ದಾ.ಪ./88/2025-26/4051 ದಿನಾಂಕ: 27.01.2026

ಅಧಿಸೂಚನೆ

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ ಹಿರಿಯ ಸಹಾಯಕರು ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಅಭ್ಯರ್ಥಿಗಳ ಕಟ್-ಆಫ್ (cut-off) ಅಂಕಗಳ ಆಧಾರದ ಮೇಲೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ: 27.01.2026 ರಂದು ನಿಗಮದ ವೆಬ್‌ಸೈಟ್‌ನಲ್ಲಿ https://kfcsc.karnataka.gov.in. ಪ್ರಕಟಿಸಲಾಗಿರುತ್ತದೆ. ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿ ಕುರಿತಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಸೂಕ್ತ ವಿವರ ಮತ್ತು ದಾಖಲಾತಿಗಳೊಂದಿಗೆ ವಿಷಯಸೂಚಿಯಲ್ಲಿ 'ಹಿರಿಯ ಸಹಾಯಕರು - ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ' ಎಂದು ಕಡ್ಡಾಯವಾಗಿ ನಮೂದಿಸಿ, ತಮ್ಮ ಹೆಸರು ಹಾಗೂ ಅರ್ಜಿ ಸಂಖ್ಯೆಯೊಂದಿಗೆ ಖುದ್ದಾಗಿ ವ್ಯವಸ್ಥಾಪಕ ನಿರ್ದೇಶಕರು, ಕ.ಆ.ನಾ.ಸ.ನಿ.ನಿ., ನಂ 16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-560052 ಇವರಿಗೆ ಸಲ್ಲಿಸುವುದು. ಆಕ್ಷೇಪಣೆಗಳನ್ನು ದಿನಾಂಕ: 03.02.2026 ಸಂಜೆ 05.30 ರೊಳಗಾಗಿ ಸಲ್ಲಿಸುವುದು. ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

SHRI SIDDHESHWAR SAMSTHA
SANGANABASAVA INTERNATIONAL RESIDENTIAL SCHOOL & P.U. SCIENCE COLLEGE, KAVALAGI
(Vijayapura - Kalaburagi Road), Vijayapura - 586127

WE ARE HIRING (FOR 2026-27

Post	Subject / No. of Vacancy	Qualification
Vice Principal	Must have the experience of working as a Senior Coordinator / Vice Principal in the CBSE Schools (Minimum 5 years)	M.Sc., B.Ed. M.A., B.Ed.
PRT	English - 02, Social Science - 02 Mathematics - 02 Physical Education Teacher - 02 (1 male + 1 female)	B.A., B.Ed. B.Sc., B.Ed. B.P.Ed./M.P.Ed.
TGT	Kannada - 01, Hindi - 02, English - 03 Mathematics - 03 Science - 03 (PCM/PCB) Social Science - 03 Computer Teacher - 01	M.A., B.Ed. M.Sc., B.Ed. M.Sc./B.Sc., B.Ed. M.A., B.Ed. M.C.A./B.C.A.
Resident Mentors	Additional Coaching - 04	B.A./B.Sc., B.Ed.
PRO & Receptionist	Administration - 01 + 01	Any Degree with Fluency in English & Kannada
Wardens	Hostel Administration (Male-2, Female-2)	Any Degree with previous experience

For College Section

Post	Subject / No.of Vacancy	Qualification
Lecturer	Physics (CET Level)-01, Mathematics (CET Level)-01 Zoology (CET Level) - 01	M.Sc., (B.Ed)
	English - 01	M.A., (B.Ed)

Preference for candidates with good experience in similar capacity, fluency in English, CBSE / PU College experience and willingness to be Resident Staff. Attractive salary package, free boarding & Lodging and other perks for the deserving candidates.

- The candidates must mention the post applied for in the application.
- Send your Resume by email to sanganabasavasirs@gmail.com / srpucollege.kavalagi@gmail.com
- You may also walk in with your resume and all other necessary documents like originals etc., for the Interview.
- Interview will be held at Sanganabasava International Residential School, Kavalagi, Vijayapura on **Sunday, 08th February, 2026 from 10.00 am onwards.**
- Bus conveyance is arranged twice at 8.30 am and 9.30 am from Sri Siddheshwara Temple, Vijayapura city to the campus.

For any queries contact :
School : 7349293296 (Reception) / 7338628376 (PRO) /
College : 9113281526 (Office) / 9880608303 (Admin) /
9611037818 (College Principal) / 9886455636 (School Principal) /
9448497752 (Chairman)

Sd/-
Shri Basanagouda R. Patil (Yatnal)
MLA, Vijayapura City & President, Shri Siddheshwara Samsthe

Sd/- Prof. Hemant Krishna, Director Principal - SRPU
Sd/- Smt. Sharmila Hemant, Principal - SIRS
Scan for Location

Maheshwari Vidya Pracharak Mandal, Pune's
KirtiShree Kabra Vidyalaya
Shri Laxminaryan Mandir Educational Campus
Behind Lokmangal Oxypark, Nirale Vasti Road, Solapur - 413 003.
Email : admin@kskv.in ● Call : 9067 644 644 / 9657 644 644

WE ARE HIRING
for the following posts in CBSE School

Pre-Primary Teachers (Female) — Qualification : Graduate / Montessory/D.Ed / ECE

Primary Teacher — Qualification : Graduate / Post Gradute/B.Ed /D.Ed; Subject : English, Hindi, Marathi, Mathematics, EVS

High School Teachers — Qualification : Graduate / Post Grduate B.Ed; Subject : English, Hindi Marathi Maths, Social science, Science & EVS

HOD's — Qualification : Subject Matter Experts; High School (CBSE) All Subjects; Minimum 3 Years Experience

Pre-Primary / Primary / High School Co-Ordinator — Graduate with Relevant Qualification and Experience in Academic Co-Ordinator

Activity Teacher & Sports Teacher — Graduate with Relevant Qualification and Experience

Salary no bar to deserving candidates.
Apply with CV /resume with credentials within 7 days on **admin@kskv.in**

Chairman

ಅಭಿವ್ಯಕ್ತಿಗೆ ಸಂವಿಧಾನದ ರಕ್ಷಣೆ

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ

ಬೆಂಗಳೂರಿನಲ್ಲಿ ನಡೆದ 'ಸಂವಿಧಾನವೇ ಬೆಳಕು' ಕುರಿತ ಸಂವಾದದಲ್ಲಿ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್, ಮಂಜುಳಾದೇವಿ, ವೈ.ಗ.ಜಗದೀಶ್, ಕ್ಯಾಪ್ಟನ್ ಪಿ. ಮಣಿವಣ್ಣನ್ ಮತ್ತು ನಟರಾಜ್ ಹುಳಿಯಾರ್ ಭಾಗಿಯಾಗಿದ್ದರು ಪ್ರಜಾವಾಣಿ ಚಿತ್ರ

• ಜಯಸಿಂಹ ಆರ್.

ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಅನಿಸಿಕೆಯನ್ನು ಮುಕ್ತವಾಗಿ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಸಂವಿಧಾನ ನೀಡಿದೆ. ಸಂವಿಧಾನದ 19(1)(ಎ) ವಿಧಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವ್ಯಾಖ್ಯಾನಿಸಲಾಗಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯವೆಂಬುದು ಇನ್ನೊಬ್ಬರ ಮಾತು ಮತ್ತು ಅಭಿಪ್ರಾಯವನ್ನು ಕೇಳಿಸಿಕೊಳ್ಳುವ, ಮತ್ತೊಬ್ಬರ ಅಭಿಪ್ರಾಯಕ್ಕಿಂತ ಭಿನ್ನವಾದ ಅಭಿಪ್ರಾಯ ಹೊಂದುವ, ಮಾಹಿತಿಯನ್ನು ಪಡೆದುಕೊಳ್ಳುವ ಮತ್ತು ಪ್ರಶ್ನಿಸುವ ಸ್ವಾತಂತ್ರ್ಯವನ್ನೂ ಒಳಗೊಂಡಿದೆ ಎಂದು ವಿವಿಧ ನ್ಯಾಯಾಲಯಗಳ ಮತ್ತು ಸಂವಿಧಾನ ತಜ್ಞರ ಅಭಿಪ್ರಾಯ. ಫ್ರೆಂಚ್ ಚಿಂತಕ ವೋಲ್ಟೇರ್ ಹೇಳುವಂತೆ, 'ನಿನ್ನ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಆದರೆ ಅದನ್ನು ಹೇಳುವ ಹಕ್ಕು ನಿನಗಿದೆ ಎಂಬುದಕ್ಕೆ ನಾನು ಕಡೆಯ ತನಕ ಬದ್ಧವಾಗಿರುತ್ತೇನೆ' ಎಂಬುದೇ ಅಭಿವ್ಯಕ್ತಿ ಸ್ವಾತಂತ್ರ್ಯ.

ನೃತ್ಯ, ನಾಟಕ, ಗಾಯನ, ಬೀದಿ ನಾಟಕ, ಸಿನಿಮಾ, ಧಾರಾವಾಹಿ, ಛಾಯಾಗ್ರಹಣ, ಚಿತ್ರಕಲೆ, ಸಾಹಿತ್ಯ, ವಿಮರ್ಶೆ... ಎಲ್ಲವೂ ಅಭಿವ್ಯಕ್ತಿ ಸ್ವಾತಂತ್ರ್ಯವೇ ಹೌದು.

ಆದರೆ, ಸಂವಿಧಾನವು ನಮಗೆ ನೀಡಲಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವು ಪರಿಪೂರ್ಣವಲ್ಲ. ಅಂದರೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧಗಳಿವೆ. ದೇಶದ ಭದ್ರತೆ, ಸಾರ್ವಭೌಮತ್ವ, ಏಕತೆ, ಸ್ನೇಹಿ ದೇಶಗಳ ಜತೆಗಿನ ಸಂಬಂಧ, ಶಾಂತಿ, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವ ಹಾಗೂ ಮತ್ತು ಇತರರ ಮಾನಕ್ಕೆ ಹಾನಿಯುಂಟು ಮಾಡುವಂತಹ ಯಾವುದೇ ರೀತಿಯ ಅಭಿವ್ಯಕ್ತಿಗೆ ನಿರ್ಬಂಧವಿದೆ. ಇವುಗಳನ್ನು ಕಾಪಾಡಿಕೊಳ್ಳಲು ಸರ್ಕಾರವು ಅಗತ್ಯ ಕಾನೂನುಗಳನ್ನು ರೂಪಿಸಬಹುದು ಎಂದು ಸಂವಿಧಾನದ 19(2)ನೇ ವಿಧಿ ಹೇಳುತ್ತದೆ.

ಭಾರತದ ಸಂದರ್ಭದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧಗಳು ಬ್ರಿಟಿಷ್ ಆಳ್ವಿಕೆಯಲ್ಲಿಯೇ ಆರಂಭವಾಗಿದೆ. ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕಲು ಬ್ರಿಟಿಷರು ದೇಶದ್ರೋಹ (ಭಾರತೀಯ ದಂಡ ಸಂಹಿತೆಯ 124ಎ) ಕಾನೂನನ್ನು ಜಾರಿಗೆ ತಂದಿದ್ದರು. ಅಂತಹ ದಬ್ಬಾಳಿಕೆಗಳ ಅನುಭವವಿದ್ದ ಕಾರಣಕ್ಕೇ, ಸಂವಿಧಾನ ರೂಪಿಸಿದ ನಮ್ಮ ಪೂರ್ವಜರು ಅಭಿವ್ಯಕ್ತಿ ಸ್ವಾತಂತ್ರವನ್ನು ನಮಗೆಲ್ಲಾ ನೀಡಿದ್ದಾರೆ. ಪ್ರಭುತ್ವವು ಇಂದಿಗೂ ಈ ಕಾನೂನುಗಳನ್ನು ಉಳಿಸಿಕೊಂಡು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿಯಂತ್ರಿಸುತ್ತಿವೆ.

ಅಮೆರಿಕದಲ್ಲಿ ಪತ್ರಿಕಾ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಎರಡೂ ಬೇರೆ-ಬೇರೆಯೇ. ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯವೆಂಬುದು ಪ್ರತ್ಯೇಕವಾಗಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯವೇ ಪತ್ರಿಕಾ ಸ್ವಾತಂತ್ರ್ಯವನ್ನೂ ಒಳಗೊಂಡಿದೆ ಎಂದು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದೆ.

ಪ್ರಜಾವಾಣಿ ನೋಡಿಯೊ — ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಭುತ್ವ ಮತ್ತು ಸಂವಿಧಾನ: ಸಂವಾದ

'ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಭುತ್ವ ಮತ್ತು ಸಂವಿಧಾನ' ಎಂಬ ವಿಷಯದ ಕುರಿತು ಸಮಾಜ ಕಲ್ಯಾಣ ಇಲಾಖೆ ಹಾಗೂ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಸಂವಾದ ನಡೆಯಿತು. 'ಸಂವಿಧಾನವೇ ಬೆಳಕು-ಒಂದು ಚರ್ಚೆ' ವಿಷಯದ ಭಾಗವಾಗಿ ನಡೆದ ಸಂವಾದದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ನಟರಾಜ್ ಹುಳಿಯಾರ್, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕ್ಯಾಪ್ಟನ್ ಪಿ.ಮಣಿವಣ್ಣನ್ ಮತ್ತು ಹೈಕೋರ್ಟ್‌ನ ಹಿರಿಯ ವಕೀಲರಾದ ಮಂಜುಳಾದೇವಿ ಪಾಲ್ಗೊಂಡಿದ್ದರು. 'ಪ್ರಜಾವಾಣಿ' ವರದಿಗಾರರ ವಿಭಾಗದ ಮುಖ್ಯಸ್ಥ ವೈ.ಗ.ಜಗದೀಶ್ ಸಂವಾದ ನಡೆಸಿಕೊಟ್ಟರು.

ಚರ್ಚೆಯಲ್ಲಿ ವ್ಯಕ್ತವಾದ ವಿಷಯಗಳು

- ಮತ್ತೊಬ್ಬರು ಏನು ಹೇಳುತ್ತಾರೆ ಎಂಬುದನ್ನು ಕೇಳಿಸಿಕೊಳ್ಳುವುದೂ ಸಹ ಅಭಿವ್ಯಕ್ತಿ ಸ್ವಾತಂತ್ರ್ಯ ಒಂದು ಪ್ರಧಾನ ಅಂಗ. ಆದರೆ ಈಚೆಗೆ ಕೇಳಿಸಿಕೊಳ್ಳುವುದು ಹಿಂದೆ ಸರಿದಿದೆ ಮತ್ತು ಕೇಳುವುದು ಮುನ್ನೆಲೆಗೆ ಬಂದಿದೆ
- ದೇಶದ್ರೋಹದ ಕಾನೂನನ್ನು ಬಳಸಿಕೊಂಡು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುತ್ತಿತ್ತು. ಈಗ ಆ ಕಾನೂನಿನ ಹೆಸರು ಬದಲಾಗಿದೆ. ಸರ್ಕಾರಗಳ ವಿರುದ್ಧ ಮಾತನಾಡುವವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸವಾಗುತ್ತಿದೆ
- ಮತ್ತೊಬ್ಬರ ಭಾವನೆಗಳಿಗೆ ನೋವುಂಟು ಮಾಡುವ ರೀತಿಯ ಅಭಿಪ್ರಾಯಗಳನ್ನು ನೀಡಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಅಡಿಯಲ್ಲಿ ರಕ್ಷಣೆ ಪಡೆಯಲಾಗುತ್ತಿದೆ
- ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಹ ಕಾನೂನುಗಳನ್ನು ರದ್ದುಪಡಿಸಬೇಕು. ಅಭಿವ್ಯಕ್ತಿಯ ಅಪರಾಧೀಕರಣ ನಿಲ್ಲಬೇಕು
- ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕ್ರಮಗಳ ವಿರುದ್ಧ ಹೊಸ ತಲೆಮಾರಿನ ಕಮೀಡಿಯನ್‌ಗಳು ದೊಡ್ಡಮಟ್ಟದಲ್ಲಿ ದನಿ ಎತ್ತುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ
- ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಸಂವಿಧಾನ, ಪ್ರಸ್ತಾವನೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಒಳಗೊಂಡು ಮೂಲಭೂತ ಹಕ್ಕುಗಳನ್ನು ಅರ್ಥಮಾಡಿಸುವ ಕೆಲಸವಾಗಬೇಕು

An Initiative by:
SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

ಇಂದು ಜಾಮೀನು ಅರ್ಜಿ ವಿಚಾರಣೆ; ಆಶ್ರಯ ನೀಡಿದ್ದ ಉದ್ಯಮಿಗೆ ಜಾಮೀನು

ರಾಜೀವ್ ಗೌಡಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ನಗರಸಭೆ ಆಯುಕ್ತೆ ಅಮೃತಾಗೌಡ ಅವರಿಗೆ ಧಮ್ಕಿ ಹಾಕಿದ್ದ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರನ್ನು ಪೊಲೀಸರು ಮಂಗಳವಾರ ಶಿಡ್ಲಘಟ್ಟ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದರು.

ಧಮ್ಕಿ ಹಾಕಿದ್ದ ಬಳಿಕ ಕೇರಳದಲ್ಲಿ ತಲೆಮರೆಸಿಕೊಂಡಿದ್ದ ರಾಜೀವ್ ಗೌಡ ಅವರನ್ನು ಪೊಲೀಸರು ಸೋಮವಾರ ಬಂಧಿಸಿ, ಜಿಲ್ಲೆಗೆ ಕರೆತಂದಿದ್ದರು.

ಕೋರ್ಟ್ ಫೆ.9ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಬುಧವಾರ ಜಾಮೀನು ಅರ್ಜಿಯು ವಿಚಾರಣೆಗೆ ಬರಲಿದೆ. ರಾಜೀವ್ ಗೌಡರನ್ನು ಚಿಂತಾಮಣಿಯ ಉಪಕಾರಾಗೃಹದಲ್ಲಿ ಇರಿಸಲಾಗಿದೆ.

ಅವರಿಗೆ ಆಶ್ರಯ ನೀಡಿದ ಆರೋಪದಲ್ಲಿ ಬಂಧಿತರಾಗಿದ್ದ ಮಂಗಳೂರಿನ ಉದ್ಯಮಿ ಮೈಕಲ್ ಅವರಿಗೆ ಕೋರ್ಟ್ ಜಾಮೀನು ಮಂಜೂರು ಮಾಡಿತು.

ಜೆಎಂಎಫ್‌ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸಿ.ಎಸ್.ಸುಕನ್ಯಾ ಅವರು ವಿಚಾರಣೆ ನಡೆಸಿದ್ದು, ಮಧ್ಯಾಹ್ನ ಮೂರು ಗಂಟೆಯಿಂದ ಸಂಜೆ 7ರವರೆಗೂ ವಾದ, ಪ್ರತಿವಾದ ಆಲಿಸಿದರು.

ವಿಚಾರಣೆಗಾಗಿ ರಾಜೀವ್ ಗೌಡ ಅವರನ್ನು ತಮ್ಮ ವಶಕ್ಕೆ ನೀಡಬೇಕು ಎಂಬ ಪೊಲೀಸರ ಮನವಿಯನ್ನು ನ್ಯಾಯಾಧೀಶರು ತಿರಸ್ಕರಿಸಿದರು. ರಾಜೀವ್ ಗೌಡ ಪರ ವಿವೇಕ್ ಸುಬ್ಬಾರೆಡ್ಡಿ, ಸರ್ಕಾರದ ಪರ ಮಹಮ್ಮದ್ ಖಾಜಾ ವಾದ ಮಂಡಿಸಿದರು.

ಸೋಮವಾರ ಕೇರಳದ ಮಲಪ್ಪುರಂ ಜಿಲ್ಲೆಯ ವಾಜಿ ಕಡಬು ಎಂಬಲ್ಲಿ ರಾಜೀವ್ ಗೌಡ ಮತ್ತು ಉದ್ಯಮಿ ಮೈಕಲ್ ಅವರನ್ನು ಚಿಕ್ಕಬಳ್ಳಾಪುರ ಜಿಲ್ಲಾ ಪೊಲೀಸರು ಬಂಧಿಸಿದ್ದರು.

ಮಂಗಳವಾರ ಬೆಳಗಿನ ಜಾವ ಚಿಕ್ಕಬಳ್ಳಾಪುರಕ್ಕೆ ಕರೆತಂದಿದ್ದು, ಮಧ್ಯಾಹ್ನದವರೆಗೆ ಪೊಲೀಸ್ ಅತಿಥಿಗೃಹದಲ್ಲಿ ವಿಚಾರಣೆಗೆ ಒಳಪಡಿಸಿದರು. ನಂತರ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಕೋರ್ಟ್‌ಗೆ ಹಾಜರುಪಡಿಸಿದರು.

ಈ ವೇಳೆ ನ್ಯಾಯಾಲಯ ಆವರಣದಲ್ಲಿದ್ದ ಮಾಧ್ಯಮ ಪ್ರತಿನಿಧಿಗಳು ಮತ್ತು ಬೆಂಬಲಿಗರತ್ತ ರಾಜೀವ್ ಗೌಡ ಹೆಬ್ಬೆರಳು ಮೇಲೆತ್ತಿ (ಥಮ್ಸ್ ಅಪ್) ಮುಗುಳ್ನಗೆ ಬೀರಿದರು.

ಶಿಡ್ಲಘಟ್ಟ ಕೋರ್ಟ್‌ಗೆ ಆರೋಪಿ ರಾಜೀವ್ ಗೌಡರನ್ನು ಕರೆತರಲಾಯಿತು

ಲಘು ಲಾಠಿ ಪ್ರಹಾರ

ಕೋರ್ಟ್‌ನಿಂದ ಸಂಜೆ ರಾಜೀವ್ ಗೌಡ ಅವರನ್ನು ಪೊಲೀಸರು ಹೊರಗೆ ಕರೆ ತರುತ್ತಿದ್ದಂತೆ ಅವರ ಬೆಂಬಲಿಗರು ಜೋರಾಗಿ ಜೈಕಾರಗಳನ್ನು ಕೂಗಿದರು.

ಶಿಡ್ಲಘಟ್ಟ ಪ್ರಮುಖ ರಸ್ತೆಯಲ್ಲಿ ಗುಂಪುಗೂಡಿದ್ದು, ಗದ್ದಲ ಆರಂಭವಾದಂತೆ ಪೊಲೀಸರು ಲಘು ಲಾಠಿಪ್ರಹಾರ ನಡೆಸಿ ಜನರನ್ನು ಚದುರಿಸಿದರು.

ರಷ್ಯಾದ ಮಾಸ್ಕೊದಲ್ಲಿ ನಡೆದ 'ಅಂತರಧರ್ಮೀಯ ಸಂವಾದ-ಸಮ್ಮೇಳನ'ದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಗುಜರಾತಿನ ರಾಜಕೋಟ್‌ನ ಶಿವಾನಂದ ಆಶ್ರಮದ ಪರಮಾತ್ಮಾನಂದ ಸರಸ್ವತಿ ಸ್ವಾಮೀಜಿ ಭಾಗಿಯಾಗಿದ್ದರು. ರಷ್ಯಾ ವಿದೇಶಾಂಗ ಸಚಿವಾಲಯದ ಅಧಿಕಾರಿಗಳು, ಕ್ರೈಸ್ತ ಧರ್ಮಗುರುಗಳು, ಭಾರತದ ನಿಯೋಗ ಸದಸ್ಯರು ಪಾಲ್ಗೊಂಡಿದ್ದರು

ನಿಧನ ವಾರ್ತೆ

ಪ್ರೊ. ತಿಪ್ಪೇಸ್ವಾಮಿ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಹಿಂದಿ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ, ಅನುವಾದಕ ಪ್ರೊ.ತಿಪ್ಪೇಸ್ವಾಮಿ (80) ಅನಾರೋಗ್ಯದಿಂದ ಇಲ್ಲಿನ ಆಸ್ಪತ್ರೆಯಲ್ಲಿ ಮಂಗಳವಾರ ಸಂಜೆ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ಜನಿಸಿದ ಅವರು ಕೊಚ್ಚಿನ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದರು.

ವಿದ್ಯಾರಣ್ಯಪುರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಜ.28ರಂದು ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬವು ತಿಳಿಸಿದೆ.

ಕನ್ನಡದ ಬಿ.ವಿ. ವೈಕುಂಠರಾಜು ಅವರ 'ಉದ್ಭವ', ರಾಮಚಂದ್ರದೇವ ಅವರ 'ರಥಮಸಲ', ದೇವನೂರ ಮಹದೇವ ಅವರ 'ಕಿಸ್ಸಾ ಮುರ್ಗೇಕಾ' ನಾಟಕಗಳನ್ನು ಹಿಂದಿಗೆ ಭಾಷಾಂತರಿಸಿದ್ದರು. ಕತೆ, ಕಾದಂಬರಿ, ಕಾವ್ಯದ ಅನುವಾದ, ವಿಮರ್ಶೆ ಸೇರಿ ವಿವಿಧ ಪ್ರಕಾರದಲ್ಲಿ 77 ಕೃತಿಗಳನ್ನು ರಚಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರಶಸ್ತಿಗಳು ಸಂದಿವೆ.

ಅತ್ಯಾಚಾರ: ರೈತ ಸಂಘದ ಜಿಲ್ಲಾಧ್ಯಕ್ಷ ಸೆರೆ

ಪ್ರಜಾವಾಣಿ ವಾರ್ತೆ

ರಾಮೇಗೌಡ

ಬಂಗಾರಪೇಟೆ (ಕೋಲಾರ): ಬಾಲಕಿ ಮೇಲೆ ಅತ್ಯಾಚಾರವೆಸಗಿ, ಗರ್ಭಿಣಿಯಾಗಿಸಿದ ಆರೋಪದ ಮೇಲೆ ರೈತಸಂಘದ ಕೋಲಾರ ಜಿಲ್ಲಾ ಘಟಕದ ಅಧ್ಯಕ್ಷನನ್ನು ಪೊಲೀಸರು ಸೋಮವಾರ ರಾತ್ರಿ ಬಂಧಿಸಿದ್ದಾರೆ.

ಟಿ.ಎ.ರಾಮೇಗೌಡ (52) ಬಂಧಿತ ಆರೋಪಿ. ಸಂತ್ರಸ್ತ ಬಾಲಕಿಯನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಾಲ್ಕು ತಿಂಗಳ ಗರ್ಭಿಣಿಯಾಗಿರುವ 9ನೇ ತರಗತಿಯ ಸಂತ್ರಸ್ತ ಬಾಲಕಿಯ ಕುಟುಂಬ ನೀಡಿದ ದೂರಿನ ಮೇರೆಗೆ ಪೋಕ್ಸೊ ಕಾಯ್ದೆ ಅಡಿ ಬಂಗಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಗೆ ಇಬ್ಬರು ಪತ್ನಿಯರಿದ್ದು, ಇಬ್ಬರು ಮಕ್ಕಳಿದ್ದಾರೆ. ತಾಲ್ಲೂಕಿನ ತ್ಯಾರನಹಳ್ಳಿಯ ನಿವಾಸಿಯಾಗಿರುವ ಆರೋಪಿ ಸದ್ಯ ಬಂಗಾರಪೇಟೆಯ ವಿವೇಕಾನಂದ ನಗರದಲ್ಲಿ ನೆಲಸಿದ್ದಾರೆ.

ಪ್ರಕರಣವೊಂದರಲ್ಲಿ ಬುದ್ಧಿವಾದ ಹೇಳಲು ಬಾಲಕಿಯನ್ನು ಮನೆಗೆ ಕರೆದುಕೊಂಡು ಹೋಗಿದ್ದ ಆರೋಪಿ ಕೆಲ ದಿನ ಇರಿಸಿಕೊಂಡಿದ್ದ. ಆ ಅವಧಿಯಲ್ಲಿ ಬಾಲಕಿ ಗರ್ಭಿಣಿ ಆಗಿದ್ದಾಳೆ ಎಂದು ದೂರು ಆಧರಿಸಿ ಪೊಲೀಸರು ತಿಳಿಸಿದ್ದಾರೆ. ಆರೋಪಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ತಿಮ್ಮಾಪುರ ರಾಜೀನಾಮೆಗೆ ವಿಪಕ್ಷಗಳ ಪಟ್ಟು

ಮದ್ಯ ಮಾರಾಟಗಾರರಿಂದ ₹6,000 ಕೋಟಿ ಲಂಚ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಅಂಗಡಿಗಳ ಸನ್ನದು ನೀಡಲು ಲಂಚ ಪಡೆಯುವುದರಲ್ಲಿ ಅಬಕಾರಿ ಸಚಿವ ಆರ್‌.ಬಿ.ತಿಮ್ಮಾಪುರ ಅವರೂ ಭಾಗಿಯಾಗಿದ್ದು, ಸರ್ಕಾರವು ತಕ್ಷಣವೇ ಅವರ ರಾಜೀನಾಮೆ ಪಡೆಯಬೇಕು ಎಂದು ಉಭಯ ಸದನಗಳಲ್ಲೂ ವಿರೋಧ ಪಕ್ಷಗಳು ಮಂಗಳವಾರ ಪಟ್ಟು ಹಿಡಿದವು.

ಮದ್ಯ ಮಾರಾಟ ಸನ್ನದು ಪಡೆಯಲು ಮತ್ತು ಅಂಗಡಿ ನಡೆಸಲು ಅಬಕಾರಿ ಇಲಾಖೆ ಮುಖ್ಯಸ್ಥರಿಗೆ ಈವರೆಗೆ ₹6,000 ಕೋಟಿ ಲಂಚ ನೀಡಿದ್ದೇವೆ ಎಂಬುದಾಗಿ ಕರ್ನಾಟಕ ರಾಜ್ಯ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷರಾದ ಎಸ್‌. ಗುರುಸ್ವಾಮಿ ಅವರು ನೀಡಿರುವ ಮಾಧ್ಯಮ ಹೇಳಿಕೆಯನ್ನು ಪರಿಷತ್ತಿನ ಕಲಾಪದ ವೇಳೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಸ್ತಾಪಿಸಿದರು.

ಈ ವಿಷಯ ಕುರಿತು ನಿಯಮ 330ರ ಅಡಿಯಲ್ಲಿ ಅರ್ಧಗಂಟೆ ಚರ್ಚಿಸಲು ಸಭಾಪತಿ ಬಸವರಾಜ ಹೊರಟ್ಟಿ ಅವರು ಅವಕಾಶ ನೀಡಿದರು. 'ಅಬಕಾರಿ ಇಲಾಖೆಯ ಉಪ ಆಯುಕ್ತ ₹25 ಲಕ್ಷ ಲಂಚ ಪಡೆದುಕೊಳ್ಳುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಮದ್ಯದಂಗಡಿಗಳು ಇಲಾಖೆಯ ಅಧಿಕಾರಿಗಳಿಗೆ ಪ್ರತಿ ತಿಂಗಳೂ ₹15,000–₹20,000 ಮಾಮೂಲು ನೀಡಬೇಕು ಎಂಬುದು ನಮಗೆ ಗೊತ್ತಾಗಿದೆ' ಎಂದು ಆಪಾದಿಸಿದರು.

'ಇಲಾಖೆ ಅಧಿಕಾರಿಗಳು ಮಾತನಾಡುತ್ತಾ, 'ಸಚಿವರಿಗೆ ಕೊಡಬೇಕು. ಅವರ ಮಗನ ಮೂಲಕ ಡೀಲ್ ನಡೆಯುತ್ತದೆ. ಕಡಿಮೆ ಆಗಬೇಕು ಅಂದರೆ, ಸಚಿವರ ಮಗನಿಂದ ಕರೆ ಮಾಡಿಸಿ' ಎಂದಿದ್ದಾರೆ. ಸಚಿವರ ಪಾಲುದಾರಿಕೆ ಮತ್ತು ರಕ್ಷಣೆ ಇಲ್ಲದೆ ಅಧಿಕಾರಿಗಳು ಇಷ್ಟು ಲಂಚ ಪಡೆಯುತ್ತಾರೆಯೇ' ಎಂದು ಪ್ರಶ್ನಿಸಿದರು.

'ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ವಿಪರೀತ ಮಟ್ಟಕ್ಕೆ ಬೆಳೆದಿದೆ. ಹೀಗಾಗಿ ಸಚಿವ ಆರ್‌.ಬಿ.ತಿಮ್ಮಾಪುರ ಅವರ ರಾಜೀನಾಮೆಯನ್ನು ತಕ್ಷಣವೇ ಪಡೆಯಬೇಕು. ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆಗೆ ಆದೇಶಿಸಬೇಕು. ಹಾಗೆ ಮಾಡದೇ ಇದ್ದರೆ, ಮುಖ್ಯಮಂತ್ರಿಗೂ ಲಂಚದಲ್ಲಿ ಪಾಲಿದೆ ಎಂದರ್ಥ' ಎಂದು ಛಲವಾದಿ ನಾರಾಯಣಸ್ವಾಮಿ ಸವಾಲು ಹಾಕಿದರು.

ವಿಧಾನ ಪರಿಷತ್‌ ಕಲಾಪದ ಚರ್ಚೆ ವೇಳೆ ಸಚಿವ ಚಲುವರಾಯಸ್ವಾಮಿ, ಗೋವಿಂದರಾಜು ಮತ್ತು ಸಚಿವ ರಾಮಲಿಂಗಾರೆಡ್ಡಿ ಮಾತುಕತೆಯಲ್ಲಿ ತೊಡಗಿದ್ದರು

ಸಚಿವರಾದ ಎನ್‌.ಚಲುವರಾಯಸ್ವಾಮಿ, ಸಂತೋಷ್‌ ಲಾಡ್‌, ಶಿವರಾಜ ತಂಗಡಗಿ ಅವರು ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಆಗ ಛಲವಾದಿ ನಾರಾಯಣಸ್ವಾಮಿ ಅವರ ಬೆಂಬಲಕ್ಕೆ ನಿಂತ ವಿರೋಧ ಪಕ್ಷಗಳ ಸದಸ್ಯರು, ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿದರು. ಸಭಾಪತಿ ಹೊರಟ್ಟಿ ಅವರು ಕಲಾಪವನ್ನು ಮುಂದೂಡಿದರು.

ಸಂಜೆ ನಾಲ್ಕರ ನಂತರ ಕಲಾಪ ಆರಂಭವಾದಾಗಲೂ ವಿರೋಧ ಪಕ್ಷಗಳ ಸದಸ್ಯರು ಸಚಿವ ತಿಮ್ಮಾಪುರ ಅವರ ರಾಜೀನಾಮೆಗೆ ಆಗ್ರಹಿಸಿದರು. ಸದನಕ್ಕೆ ಬಂದ ತಿಮ್ಮಾಪುರ ಅವರು, ಉತ್ತರಿಸಲು ಅವಕಾಶ ನೀಡಿ ಎಂದು ಸಭಾಪತಿ ಅವರಲ್ಲಿ ಕೇಳಿದರು. ಆಗ ಬಿಜೆಪಿ ಮತ್ತು ಜೆಡಿಎಸ್‌ ಸದಸ್ಯರು ತಿಮ್ಮಾಪುರ ಅವರ ವಿರುದ್ಧ ಫಲಕ ಪ್ರದರ್ಶಿಸಿ ಧಿಕ್ಕಾರ ಕೂಗಿದರು.

ವಿಧಾನಸಭೆಯಲ್ಲೂ ಪ್ರತಿಧ್ವನಿ: ವಿಧಾನಸಭೆ ಕಲಾಪ ಮಂಗಳವಾರ ಬೆಳಿಗ್ಗೆ ಆರಂಭವಾಗುತ್ತಿದ್ದಂತೆ, ಅಬಕಾರಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಭಾರಿ ಭ್ರಷ್ಟಾಚಾರ ಆರೋಪ ಪ್ರತಿಧ್ವನಿಸಿತು. ಕಲಾಪ ಆರಂಭವಾಗುತ್ತಿದ್ದಂತೆಯೇ ಬಿಜೆಪಿ ಮತ್ತು ಜೆಡಿಎಸ್‌ ಸದಸ್ಯರು ಅಬಕಾರಿ ಇಲಾಖೆಯ ಹಗರಣದ ಬಗ್ಗೆ ಚರ್ಚೆಗೆ ಪಟ್ಟುಹಿಡಿದರು.

ಅಬಕಾರಿ ಇಲಾಖೆಯಲ್ಲಿನ ಕಿರುಕುಳ ಮತ್ತು ಭ್ರಷ್ಟಾಚಾರದ ಬಗ್ಗೆ ದೂರು ನೀಡಲು ಮದ್ಯ ಮಾರಾಟಗಾರರ ಸಂಘವು ಕಾಂಗ್ರೆಸ್‌ ನಾಯಕ ರಾಹುಲ್‌ ಗಾಂಧಿ ಅವರನ್ನು ಭೇಟಿ ಮಾಡಲು ನಿರ್ಧರಿಸಿದೆ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಆರ್‌. ಅಶೋಕ, 'ಅಬಕಾರಿ ಇಲಾಖೆಯಲ್ಲಿ ಲೂಟಿ ನಡೆಯುತ್ತಿದೆ. ಸಚಿವ ತಿಮ್ಮಾಪುರ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

ಗದ್ದಲ ನಿಯಂತ್ರಿಸಲು ಪ್ರಯತ್ನಿಸಿದ ಸಭಾಧ್ಯಕ್ಷ ಯು.ಟಿ. ಖಾದರ್‌, 'ನಿಯಮ 69ರ ಅಡಿ ಈ ವಿಚಾರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಪ್ರಶ್ನೋತ್ತರ ಅವಧಿಯ ನಂತರ ಈ ವಿಷಯದ ಬಗ್ಗೆ ಚರ್ಚಿಸಲು ಅವಕಾಶ ನೀಡಲಾಗುವುದು' ಎಂದು ಭರವಸೆ ನೀಡಿದರು. ಸಭಾಧ್ಯಕ್ಷರ ಮಾತಿಗೆ ಸ್ಪಂದಿಸಿ ವಿರೋಧ ಪಕ್ಷಗಳ ಸದಸ್ಯರು ಧರಣಿ ಕೈಬಿಟ್ಟರು.ಈ ವಿಷಯವನ್ನು ಬುಧವಾರ ಪ್ರಸ್ತಾಪಿಸುವುದಾಗಿ ಎಂದು ಆರ್‌.ಅಶೋಕ ಅವರು ಸಭಾಧ್ಯಕ್ಷರಿಗೆ ತಿಳಿಸಿದರು.

ತನಿಖೆಗೆ ಇ.ಡಿ ಕರೆಯಿಸಿ: ಲಾಡ್

'₹6,000 ಕೋಟಿ ಲಂಚ ನೀಡಿದ್ದೇವೆ ಎಂಬ ಹೇಳಿಕೆ ಕುರಿತಾಗಿ ಬಿಜೆಪಿ ಸದಸ್ಯರು ಕೇಂದ್ರ ಸರ್ಕಾರಕ್ಕೆ ಹೇಳಿ, ತನಿಖೆ ನಡೆಸಲು ಜಾರಿ ನಿರ್ದೇಶನಾಲಯದ ತಂಡ ಕರೆಯಿಸಿ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಛಲವಾದಿ ನಾರಾಯಣಸ್ವಾಮಿ ಅವರಿಗೆ ಸವಾಲು ಹಾಕಿದರು.

'ಅಷ್ಟು ಕೋಟಿ ಲಂಚವನ್ನು ಯಾವ ರೂಪದಲ್ಲಿ ನೀಡಿದ್ದಾರೆ? ಯಾರಿಗೆ ನೀಡಿದ್ದಾರೆ? ಎಷ್ಟೆಷ್ಟು ನೀಡಿದ್ದಾರೆ ಎಂಬುದನ್ನು ಬಹಿರಂಗಪಡಿಸಿ. ನಗದು ರೂಪದಲ್ಲೇ ಲಂಚ ನೀಡಿದ್ದರೆ, ಅಷ್ಟು ದೊಡ್ಡ ಮೊತ್ತದ ನಗದು ಎಲ್ಲಿಂದ ದೊರೆಯಿತು ಮತ್ತು ಅದನ್ನು ಹೇಗೆ ಸಾಗಿಸಿದರು ಎಂಬುದನ್ನೂ ವಿವರಿಸಿ. ಮದ್ಯ ಮಾರಾಟಗಾರರಿಂದ ಸಂಗ್ರಹಿಸಿ ₹6,000 ಕೋಟಿ ನೀಡಿದ್ದೇನೆ ಎಂದಿರುವ ಗುರುಸ್ವಾಮಿ ಅವರೂ ಲಂಚದ ಕೃತ್ಯದಲ್ಲಿ ಪಾಲುದಾರರಾದಂತಾಯಿತು. ಅವರ ವಿರುದ್ಧವೂ ಪ್ರಕರಣ ದಾಖಲಾಗಿ, ತನಿಖೆ ನಡೆಯಲಿ' ಎಂದು ಆಗ್ರಹಿಸಿದರು.

ವಿಧಾನಸಭೆ ಡಿಜಿಟಲೀಕರಣ: ಶಾಸಕ ಪೊನ್ನಣ್ಣ ಸಲಹೆ

ಬೆಂಗಳೂರು: ವಿಧಾನಸಭೆಯಲ್ಲಿ ಕಾಗದದ ಬಳಕೆಯನ್ನು ಬಿಟ್ಟು ಡಿಜಿಟಲೀಕರಣ ವ್ಯವಸ್ಥೆ ಜಾರಿಗೆ ತರಬೇಕು ಎಂದು ಕಾಂಗ್ರೆಸ್‌ನ ಎ.ಎಸ್‌. ಪೊನ್ನಣ್ಣ ಒತ್ತಾಯಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿದ ಅವರು, ವಿಧಾನಸಭೆಯ ಕಲಾಪದಲ್ಲಿ ಕಾರ್ಯ ನಿರ್ವಹಿಸಲು ಐಪಾಡ್‌ಗಳ ಬಳಕೆ ಮಾಡುವ ಬಗ್ಗೆ ಗಂಭೀರ ಆಲೋಚನೆ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ಕಲಾಪದ ವೇಳೆ ಪ್ರಶ್ನೋತ್ತರ ಮತ್ತು ಇತರ ಮಾಹಿತಿಗಳಿಗೆ ಭಾರಿ ಪ್ರಮಾಣದಲ್ಲಿ ಕಾಗದವನ್ನು ಬಳಸಲಾಗುತ್ತದೆ. ಆದರೆ, ಅದರ ಸದುಪಯೋಗ ಆಗುವುದಿಲ್ಲ. ಆದ್ದರಿಂದ, ಸಂಸತ್ತು ಮತ್ತು ಇತರ ಕೆಲವು ರಾಜ್ಯಗಳಲ್ಲಿರುವಂತೆ ಐಪಾಡ್ ಬಳಸುವುದು ಸೂಕ್ತ ಎಂದು ಹೇಳಿದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ. ₹4.5 ಲಕ್ಷ ಕೋಟಿ ಕರ್ನಾಟಕದಿಂದ ತೆರಿಗೆ ಸಂದಾಯವಾಗುತ್ತಿದೆ. ಆದರೆ, ಕೇಂದ್ರದಿಂದ ರಾಜ್ಯಕ್ಕೆ ಕೇವಲ ₹60 ಸಾವಿರ ಕೋಟಿ ಮಾತ್ರ ಬರುತ್ತಿದೆ. ಸುಮಾರು ₹1.25 ಲಕ್ಷ ಕೋಟಿ ಸರ್ಕಾರಕ್ಕೆ ನಷ್ಟವಾಗುತ್ತಿದೆ ಎಂದು ಪೊನ್ನಣ್ಣ ಕಿಡಿಕಾರಿದರು.

'ಗೌರವ ಡಾಕ್ಟರೇಟ್‌ಗೆ ಬೇಕು ಕಡಿವಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್ ಪದವಿಗಳಿಗೆ ಕಡಿವಾಣ ಹಾಕಬೇಕು ಎಂದು ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್‌ನ ರಮೇಶ್ ಬಾಬು ಒತ್ತಾಯಿಸಿದರು.

ರಮೇಶ್ ಬಾಬು

ಮಂಗಳವಾರದ ಕಲಾಪದ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಈ ಮೊದಲು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲಾಗುತ್ತಿತ್ತು. ಈಚಿನ ವರ್ಷಗಳಲ್ಲಿ ವಿಶ್ವವಿದ್ಯಾಲಯಗಳು ಸಿಕ್ಕಸಿಕ್ಕವರಿಗೆಲ್ಲಾ ಈ ಪದವಿ ನೀಡುತ್ತಿವೆ. ಕೆಲವು ವಿಶ್ವವಿದ್ಯಾಲಯಗಳು ಹಣ ಪಡೆದು ನೀಡುತ್ತಿವೆ. ಇದರಿಂದ ಈ ಪದವಿಯ ಘನತೆ ಕುಗ್ಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಗೌರವ ಡಾಕ್ಟರೇಟ್ ನೀಡಲು ಒಂದು ಮಾನದಂಡ ರೂಪಿಸಬೇಕು. ವಿಶ್ವವಿದ್ಯಾಲಯವು ವರ್ಷವೊಂದರಲ್ಲಿ ನೀಡಬಹುದಾದ ಗೌರವ ಡಾಕ್ಟರೇಟ್ ಪದವಿಗಳಿಗೆ ಮಿತಿ ಹೇರಬೇಕು' ಎಂದು ಆಗ್ರಹಿಸಿದರು.

ಕಲಾಪ ವೀಕ್ಷಣೆ

ಪ್ರಜಾವಾಣಿ ಚಿತ್ರ: ರಂಜು ಪಿ

ವಿಧಾನ ಪರಿಷತ್ ಕಲಾಪವನ್ನು ಶಾಲಾ ವಿದ್ಯಾರ್ಥಿಗಳು ಮಂಗಳವಾರ ವೀಕ್ಷಣೆ ಮಾಡಿದರು

ವಂದನಾ ನಿರ್ಣಯ: ಉಭಯ ಸದನಗಳಲ್ಲಿ ಜಟಾಪಟಿ

ರಾಜ್ಯಪಾಲರ ನಡವಳಿಕೆ ಪ್ರಸ್ತಾಪಿಸುವಂತಿಲ್ಲ: ಸಭಾಧ್ಯಕ್ಷ ರೂಲಿಂಗ್ • ಪರಿಷತ್‌ನಲ್ಲಿ ವಿಪಕ್ಷ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಸಂಬಂಧಿಸಿದಂತೆ ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಗಳವಾರ ಕಾಂಗ್ರೆಸ್ ಮತ್ತು ವಿರೋಧಪಕ್ಷಗಳ ಮಧ್ಯೆ ವಾಕ್ಸಮರ ನಡೆಯಿತು.

ವಿಧಾನಪರಿಷತ್‌ನಲ್ಲಿ ಬಿಜೆಪಿ–ಜೆಡಿಎಸ್ ಸದಸ್ಯರು ಧರಣಿ ನಡೆಸಿದರೆ, ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ ಅವರು ರಾಜ್ಯಪಾಲರ ಬಗ್ಗೆ ಆಡಿದ ಮಾತುಗಳ ಕುರಿತು ಸಭಾಧ್ಯಕ್ಷರು ರೂಲಿಂಗ್ ನೀಡಿದರು.

ವಿಧಾನಸಭೆಯಲ್ಲಿ ಪೊನ್ನಣ್ಣ ಅವರು ರಾಜ್ಯಪಾಲರ ನಡೆಯನ್ನು ಟೀಕಿಸಿದಾಗ, ಬಿಜೆಪಿ ಸದಸ್ಯರು ಆಕ್ಷೇಪ ಎತ್ತಿದರು. ಪೊನ್ನಣ್ಣ ಅವರು ಪದೇ ಪದೇ ಇದೇ ವಿಷಯ ಪ್ರಸ್ತಾಪಿಸಿದಾಗ ಸುರೇಶ್ ಕುಮಾರ್ ಅವರು ಕ್ರಿಯಾಲೋಪ ಎತ್ತಿ ರೂಲಿಂಗ್ ನೀಡುವಂತೆ ಆಗ್ರಹಿಸಿದರು. 'ಸಾಂವಿಧಾನಿಕ ಉನ್ನತ ಹುದ್ದೆಗಳಲ್ಲಿ ಇರುವವರ ನಡವಳಿಕೆ ಬಗ್ಗೆ ಇಲ್ಲಿ ಪ್ರಸ್ತಾಪಿಸುವಂತಿಲ್ಲ' ಎಂದು ಸಭಾಧ್ಯಕ್ಷ ಯು.ಟಿ ಖಾದರ್ ಅವರು ರೂಲಿಂಗ್ ನೀಡಿದರು.

'ಸಚಿವ ಸಂಪುಟ ಅನುಮೋದಿಸಿದ ಭಾಷಣವನ್ನು ಓದದ ರಾಜ್ಯಪಾಲರ ನಡೆ ಆತಂಕಕಾರಿ. ಅವರು ಕೇಂದ್ರದ ನಿರ್ದೇಶನದಂತೆ ನಡೆದುಕೊಳ್ಳುತ್ತಿದ್ದಾರೆ. ಭಾಷಣದ ಕೊನೆಯ ಸಾಲು ಓದಲು ಕೂಡಾ ಅವರಿಗೆ ತಾಳ್ಮೆ ಇರಲಿಲ್ಲ. ಸುಪ್ರೀಂ ಕೋರ್ಟ್ ನೀಡಿರುವ ಹಲವು ತೀರ್ಪುಗಳಲ್ಲಿ ರಾಜ್ಯಪಾಲರುಗಳ ಅಧಿಕಾರ ಕಾರ್ಯವ್ಯಾಪ್ತಿಯ ಉಲ್ಲೇಖಗಳಿವೆ. ಅವೆಲ್ಲವನ್ನೂ ಗಾಳಿಗೆ ತೂರಿದ್ದಾರೆ. ತಮ್ಮ ವಿವೇಚನೆಯಂತೆ ನಡೆಯಲು ಅವರಿಗೆ ಅವಕಾಶವಿಲ್ಲ' ಎಂದು ರಾಜ್ಯಪಾಲರ ನಡೆಗೆ ಪೊನ್ನಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಮಧ್ಯಪ್ರವೇಶಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, 'ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡಬೇಕಾದವರು ರಾಜ್ಯಪಾಲರ ಬಗ್ಗೆ ಮಾತನಾಡುತ್ತಿದ್ದಾರೆ. ಹಾಗಾದರೆ, ಇವರು ರಾಜ್ಯಪಾಲರ ಭಾಷಣದ ಬಗ್ಗೆ ಟೀಕೆ ಮಾಡುತ್ತಿದ್ದಾರಾ' ಎಂದು ಪ್ರಶ್ನಿಸಿದರು.

ಬಿಜೆಪಿಯ ಸಿ.ಎನ್. ಅಶ್ವತ್ಥನಾರಾಯಣ, 'ಈ ಬಗ್ಗೆ ಸಭಾಧ್ಯಕ್ಷರು ಸೂಚನೆ ನೀಡಬೇಕು. ಯಾವ ವಿಚಾರ ಚರ್ಚೆ ಮಾಡುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದರು. ಈ ವೇಳೆ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರ ನಡುವೆ ವಾಗ್ವಾದ ನಡೆಯಿತು.

ಭೋಜನ ವಿರಾಮದ ಬಳಿಕವೂ ಇದೇ ಚರ್ಚೆ ಮುಂದುವರಿಯಿತು. 'ನಾನು ರಾಜ್ಯಪಾಲರಿಗೆ ಅಗೌರವ ತರುವ ಮಾತು ಆಡಲಿಲ್ಲ. ಸಂವಿಧಾನದ ಸೆಕ್ಷನ್ 176 ರ ಅಡಿ ರಾಜ್ಯಪಾಲರ ಹುದ್ದೆ ಅತಿ ಶ್ರೇಷ್ಠವಾದುದು. ಸಂವಿಧಾನದ ಪ್ರಕಾರ ಅವರು ಕಡ್ಡಾಯವಾಗಿ, ಸಂಪುಟ ಸಭೆ ತೀರ್ಮಾನಿಸಿದ ಭಾಷಣವನ್ನೇ ಓದಲೇಬೇಕು' ಎಂದು ಪೊನ್ನಣ್ಣ ಹೇಳಿದರು.

> ಮಹಾತ್ಮ ಗಾಂಧಿ ಹೆಸರು ಕಿತ್ತು ಹಾಕಿ, ಈಗ ಗಾಂಧಿ ಪ್ರತಿಮೆ ಬಳಿ ಕುಳಿತು ಪ್ರತಿಭಟನೆ ಕೂತರೆ, ಅದನ್ನು ಪ್ರಾಮಾಣಿಕತೆ ಎನ್ನುತ್ತಾರೆಯೆ?
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಸಭಾನಾಯಕರೇ ರಾಜ್ಯಪಾಲರ ಭಾಷಣವನ್ನು ಖಂಡಿಸಿದ್ದಾರೆ. ಅಗೌರವ ಸೂಚಿಸಿದ್ದಾರೆ. ಅವರು ಮೊದಲು ಭಾಷಣ ಒಪ್ಪಿದ್ದಾರೆಯೇ ಹೇಳಬೇಕು
> **ಎಸ್.ಎಲ್. ಭೋಜೇಗೌಡ,** ಜೆಡಿಎಸ್ ಶಾಸಕ

> ರಾಜ್ಯಪಾಲರಿಗೆ ಕಾಂಗ್ರೆಸ್ ಸದಸ್ಯರು ಅಗೌರವ ಸೂಚಿಸಿದ್ದಾರೆ. ಅವರಿಗೆ ಕ್ಷಮೆ ಕೋರಿ ಪತ್ರ ಬರೆಯಬೇಕು. ಅವರ ಭಾಷಣವನ್ನು ಒಪ್ಪಿದ್ದೇವೆ ಎಂದು ಹೇಳಬೇಕು
> **ಛಲವಾದಿ ನಾರಾಯಣಸ್ವಾಮಿ,** ವಿರೋಧ ಪಕ್ಷದ ನಾಯಕ, ವಿಧಾನಪರಿಷತ್

'ವಂದನೆಯೋ ನಿಂದನೆಯೋ ಖಂಡನೆಯೋ'

'ರಾಜ್ಯಪಾಲರ ಭಾಷಣದ ಬಗ್ಗೆ ವಿಧಾನ ಪರಿಷತ್ ಸಭಾನಾಯಕರೇ ವಿರೋಧ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಭಾಷಣದ ಬಗ್ಗೆ ವಂದನಾ ನಿರ್ಣಯ ಪ್ರಸ್ತಾಪಕ್ಕೆ ಮುನ್ನ, ಅದು ವಂದನೆಯೋ, ನಿಂದನೆಯೋ, ಖಂಡನೆಯೋ ಎಂಬುದರ ಬಗ್ಗೆ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು' ಎಂದು ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷಗಳು ಪಟ್ಟು ಹಿಡಿದು ಧರಣಿ ನಡೆಸಿದವು.

'ವಿಧಾನ ಮಂಡಲದಲ್ಲಿ ಶಾಸಕರನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಿಧಾನ ಪರಿಷತ್‌ನ ಶಾಸಕರು, ಅವರಿಗೆ ಕೃತಜ್ಞತಾ ವಂದನೆ ಸಮರ್ಪಿಸುವ ಪ್ರಸ್ತಾವ'ವನ್ನು ಕಾಂಗ್ರೆಸ್‌ನ ಐವನ್ ಡಿಸೋಜ ಮಂಡಿಸಿದರು. ಅದಕ್ಕೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರನ್ನು ವಜಾ ಮಾಡಬೇಕು ಎಂದು ಬಿಜೆಪಿ ಸದಸ್ಯರು ಧರಣಿ ಮಾಡುತ್ತಿದ್ದರು. ಮಾತನಾಡಲು ಇನ್ನೂ ನಾಲ್ವರಿಗೆ ಅವಕಾಶ ನೀಡಬೇಕು ಎಂದು ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದರು. ಈ ಸಂದರ್ಭದಲ್ಲಿ, 'ಚರ್ಚೆ ಮುಗಿದಿದ್ದು, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಪ್ರಸ್ತಾವ ಸಲ್ಲಿಸಲು ಐವನ್ ಡಿಸೋಜ ಅವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಅವಕಾಶ ಮಾಡಿಕೊಟ್ಟರು.

'ಭ್ರಷ್ಟಾಚಾರ ಆರೋಪ ಹೊತ್ತ ಸಚಿವರನ್ನು ವಜಾ ಮಾಡಬೇಕು' ಎಂದು ಬಿಜೆಪಿ, ಜೆಡಿಎಸ್ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು. ಐವನ್ ಡಿಸೋಜ ಮಾತು ಮುಂದುವರಿಸಿದರು. ಈ ಸಂದರ್ಭದಲ್ಲಿ ಆಕ್ಷೇಪ ವ್ಯಕ್ತಪಡಿಸಿದ ಛಲವಾದಿ ನಾರಾಯಣಸ್ವಾಮಿ, 'ರಾಜ್ಯಪಾಲರ ಭಾಷಣವನ್ನು ಸರ್ಕಾರ ಒಪ್ಪಿದೆಯೇ? ಅವರ ಶಾಸಕರೇ ಧಿಕ್ಕಾರ ಕೂಗಿದ್ದಾರೆ. ಗೂಂಡಾಗಿರಿ ಮಾಡಿದ್ದಾರೆ. ಇದು ವಂದನೆಯೋ ಖಂಡನೆಯೋ ಮೊದಲು ಸ್ಪಷ್ಟಪಡಿಸಿ' ಎಂದು ಆಗ್ರಹಿಸಿದರು.

'ರಾಜ್ಯಪಾಲರಿಗೆ ಅಗೌರವ ಸೂಚಿಸಿಲ್ಲ. ಸಂವಿಧಾನ ಪರಿಚ್ಛೇದ 163– 176 ರಂತೆ ನಡೆದುಕೊಂಡಿಲ್ಲ ಎಂದಿದ್ದಾರೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಸಮಜಾಯಿಷಿ ನೀಡಿದರು.

ಅಕ್ರಮ ಮರಳು ದಂಧೆಯಲ್ಲಿ ಪ್ರಭಾವಿಗಳ ಕೈ– ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿನ ಅಕ್ರಮ ಮರಳು ಗಣಿಗಾರಿಕೆಯಲ್ಲಿ ಪ್ರಭಾವಿಗಳೇ ಇದ್ದಾರೆ. ಅದರಲ್ಲೂ ರಾಯಚೂರು, ದೇವದುರ್ಗದಲ್ಲಿನ ಅಕ್ರಮಕ್ಕೆ ಯಾರು ಕಾರಣ ಎಂದು ನಾನು ಸದನದಲ್ಲಿ ಹೇಳುವುದಿಲ್ಲ. ಎಲ್ಲ ಪಕ್ಷದವರು ಅದಕ್ಕೆ ಬೆಂಬಲವಾಗಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

'ನನಗೆ ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಲು ಮುಂದಾದರೆ ಧಮ್ಕಿ ಹಾಕುತ್ತಾರೆ' ಎಂದು ವಿಧಾನಸಭೆಯಲ್ಲಿ ಜೆಡಿಎಸ್‌ನ ಕರೆಮ್ಮ ಜಿ. ನಾಯಕ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಪರಮೇಶ್ವರ, 'ಕರೆಮ್ಮ ಅವರಿಗೆ ಅಕ್ರಮ ಮರಳು ಗಣಿಗಾರಿಕೆ ನಡೆಸುವವರಿಂದ ಬೆದರಿಕೆ ಬಂದಿರುವ ಕುರಿತು ತನಿಖೆ ನಡೆಸಿ, ಎಷ್ಟೇ ದೊಡ್ಡವರಾದರೂ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಯಾವುದೇ ಶಾಸಕರಿಗೂ ಸಮಸ್ಯೆಯಾಗಲು ನಾವು ಬಿಡುವುದಿಲ್ಲ. ಅವರಿಗೆ ರಕ್ಷಣೆ ನೀಡುವುದು ನಮ್ಮ ಪೊಲೀಸರ ಕರ್ತವ್ಯ. ದೇವದುರ್ಗ ಮಾತ್ರವಲ್ಲದೆ, ರಾಜ್ಯದ ಇತರ ಕಡೆಗಳಲ್ಲಿಯೂ ಅಕ್ರಮ ಮರಳು ದಂಧೆ ನಡೆಯುತ್ತಿದೆ. ಎಲ್ಲೆಲ್ಲಿ ಮರಳು ದಂಧೆ ನಡೆಯುತ್ತಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮಾಹಿತಿ ನೀಡಿದರೆ ಪೊಲೀಸ್ ಇಲಾಖೆಗೆ ಕ್ರಮ ತೆಗೆದುಕೊಳ್ಳಲಿದೆ' ಎಂದರು.

'ಅಕ್ರಮ ಮರಳು ಗಣಿಗಾರಿಕೆಗೆ ಸಂಬಂಧಿಸಿದಂತೆ ರಾಯಚೂರಿನಲ್ಲಿ ಕಳೆದ ಮೂರು ವರ್ಷಗಳಲ್ಲಿ 440 ಪ್ರಕರಣ ದಾಖಲಿಸಲಾಗಿದೆ. ಅಕ್ರಮ ಮರಳು ಗಣಿಗಾರಿಕೆ ತಡೆಗೆ ರಾಯಚೂರು ಜಿಲ್ಲೆಯ ಶಾಸಕರ ಸಭೆ ನಡೆಸಿ, ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದು ಹೇಳಿದರು.

'ಅಕ್ರಮ ಮರಳು ದಂಧೆ ಸೇರಿದಂತೆ ಇನ್ನಿತರ ಅಕ್ರಮಗಳಲ್ಲಿ ತೊಡಗಿದ್ದವರಲ್ಲಿ 10 ಮಂದಿಯನ್ನು ರಾಯಚೂರು ಜಿಲ್ಲೆಯಿಂದ ಗಡಿಪಾರು ಮಾಡಲಾಗಿದೆ. ಬ್ಯಾಂಕ್ ಅಧಿಕಾರಿಗಳೊಂದಿಗೂ ಸಭೆ ನಡೆಸಲಾಗುತ್ತಿದ್ದು, ಬ್ಯಾಂಕ್ ಖಾತೆಗಳಿಗೆ ದೊಡ್ಡ ಮಟ್ಟದಲ್ಲಿ ಹಣ ಪಾವತಿಸುವವರ ವಿವರ ಪಡೆದು ಅವುಗಳನ್ನು ಪರಿಶೀಲಿಸುವ ಚಿಂತನೆ ನಡೆಸಲಾಗಿದೆ' ಎಂದರು.

ಚಿಟಿಕೆ ಸುದ್ದಿ

ಹಂಪಿ: ಕಂದು ಬಂಡೆ ಸಿಳ್ಳಾರ ಗೋಚರ

ಹೊಸಪೇಟೆ (ವಿಜಯನಗರ): ಹಳೆಯ ಕಟ್ಟಡಗಳಲ್ಲಿ ನೆಲೆಸುವ ಅಪರೂಪದ ಕಂದು ಬಂಡೆ ಸಿಳ್ಳಾರ ಪಕ್ಷಿ (ಬ್ರೌನ್ ರಾಕ್ ಚಾಟ್) ಹಂಪಿಯ ಅಚ್ಯುತರಾಯ ದೇಗುಲ ಪ್ರದೇಶದಲ್ಲಿ ಕಾಣಿಸಿದೆ.

ಉತ್ತರಭಾರತ ಮತ್ತು ಮಧ್ಯಭಾರತದಲ್ಲಿ ಹೆಚ್ಚಾಗಿ ಕಾಣಿಸುವ ಸಿಳ್ಳಾರ ಹಕ್ಕಿಯ ಬಗ್ಗೆ ವನ್ಯಜೀವಿ ಛಾಯಾಗ್ರಾಹಕ ಪಂಪಯ್ಯಸ್ವಾಮಿ ಮಳಿಮಠ ಆಸಕ್ತಿ ಹೊಂದಿದ್ದರು. ಅವರ ಮಾರ್ಗದರ್ಶನದಲ್ಲಿ ಸುತ್ತಾಟದಲ್ಲಿದ್ದ ಕೋಲ್ಕತ್ತ ತಂಡದ ಸಬ್ಯಸಾಚಿ ರಾಯ್ ಅವರ ಕ್ಯಾಮೆರಾಗೆ ಈಗ ಸೆರೆಸಿಕ್ಕಿದೆ.

ಈ ಹಕ್ಕಿ ರಾಜ್ಯದಲ್ಲಿ ಈವರೆಗೆ ಎರಡು ಬಾರಿ ಕಾಣಿಸಿದೆ. ಕೊಪ್ಪಳ ಜಿಲ್ಲೆಯ ಇಟಗಿ ಮಹಾದೇವ ದೇವಾಲಯದ ಬಳಿ ಕಂಡಿತ್ತು. ಇದೀಗ ಅದು ಹಂಪಿಯಲ್ಲೇ ನೆಲೆಸಿರುವುದು ಗೊತ್ತಾಗಿದೆ.

ಕಳಸದ ರೀತಿಯ ಪ್ರಾಚ್ಯ ಅವಶೇಷ ಪತ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಉತ್ಖನನದ ವೇಳೆ ಮಂಗಳವಾರ ಕಳಸದಂತಿರುವ ಕಲ್ಲಿನ ಪ್ರಾಚ್ಯ ಅವಶೇಷ ಪತ್ತೆಯಾಗಿದೆ.



ಕಲ್ಲಿನ ಪ್ರಾಚ್ಯ ಅವಶೇಷ

'ದೇವಕೋಷ್ಠದ ಶಿಖರದಲ್ಲಿನ ತ್ರಿತಲ ಸ್ತೂಪ ಅಥವಾ ಕಳಸದ ರೀತಿಯ ಪ್ರಾಚ್ಯ ಅವಶೇಷ ಕುರಿತು ತಜ್ಞರ ಅಧ್ಯಯನದ ಬಳಿಕ ಮಹತ್ವ ಗೊತ್ತಾಗಲಿದೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ತುಂಗಭದ್ರಾ ಮಂಡಳಿ ಕಾರ್ಯದರ್ಶಿಯಿಂದಲೇ ಪತ್ರ

ಸಂಬಳಕ್ಕೆ ಕೊಟ್ಟ ದುಡ್ಡು, ತಕ್ಷಣ ಕೊಡಿ

• ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): 'ಅಣೆಕಟ್ಟೆ ಕ್ರೆಸ್ಟ್‌ಗೇಟ್ ಬದಲಾವಣೆಗೆ ನಿಯೋಜಿಸಿರುವ ಸಿಬ್ಬಂದಿ ಸಂಬಳ, ಸಾರಿಗೆ, ಇತರೆ ವೆಚ್ಚಗಳಿಗೆ ಆಂಧ್ರಪ್ರದೇಶ ಸರ್ಕಾರ ಬಿಡುಗಡೆ ಮಾಡಿದ್ದ ₹35.62 ಕೋಟಿಯಲ್ಲಿ ₹10 ಕೋಟಿಯನ್ನು ಕರ್ನಾಟಕ ಸರ್ಕಾರ ಹಿಡಿದಿಟ್ಟುಕೊಂಡಿದೆ' ಎಂದು ತುಂಗಭದ್ರಾ ಮಂಡಳಿ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ ಅವರೇ ಬೊಟ್ಟುಮಾಡಿ ತೋರಿಸಿದ್ದಾರೆ.

ಕಾರ್ಯದರ್ಶಿ ರೆಡ್ಡಿ ಅವರು ಈ ಸಂಬಂಧ ಕರ್ನಾಟಕದ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದು, ಅದು 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಈ ಪತ್ರವನ್ನು ಅವರು ಮಂಡಳಿಯ ಅಧ್ಯಕ್ಷರಿಗೂ ರವಾನಿಸಿದ್ದಾರೆ.

ಕರ್ನಾಟಕ ಸರ್ಕಾರ ₹10 ಕೋಟಿ ವಾಪಸು ಪಡೆದಿದೆ ಎಂದು ಜ.22ರಂದು ಗೇಟ್ ತಜ್ಞ ಕನ್ನಯ್ಯ ನಾಯ್ಡು ಹೇಳಿದ್ದರು. ವಾಪಸ್ ಪಡೆದಿಲ್ಲ ಎಂದು ರಾಜ್ಯ ಸಚಿವರು ಹೇಳಿದ್ದರು. ಆದರೆ ಮಂಡಳಿ ಕಾರ್ಯದರ್ಶಿ ಅವರ ಪತ್ರವನ್ನೇ ಕನ್ನಯ್ಯನಾಯ್ಡು ಆರೋಪಕ್ಕೆ ಸಾಕ್ಷಿಯಾಗಿ ಹೊಂದಿದ್ದಾರೆ.

> ಅಧಿಕಾರಿಗಳಿಗೆ ಹೇಳಲು ಆಗುತ್ತಿಲ್ಲ, ಹೀಗಾಗಿ ನಾನೇ ಹೇಳಬೇಕಾಯಿತು. ನನ್ನ ಮೇಲೆ ಆರೋಪ ಮಾಡುವುದರ ಬದಲಿಗೆ ಕರ್ನಾಟಕ ಸರ್ಕಾರ ತನ್ನ ಹೊಣೆಗಾರಿಕೆಯ ದುಡ್ಡನ್ನು ನೀಡಲಿ
> **ಕನ್ನಯ್ಯ ನಾಯ್ಡು,** ಗೇಟ್ ತಜ್ಞ

'ನಾನು ಸುಳ್ಳು ಹೇಳುತ್ತಿದ್ದೇನೆ ಎಂದು ನಿಮ್ಮ ಸಚಿವರು ಹೇಳುತ್ತಾರೆ. ಮಂಡಳಿ ಕಾರ್ಯದರ್ಶಿ ಅವರೇ ಪತ್ರ ಬರೆದಿದ್ದಾರೆ. ಈಗ ಏನು ಹೇಳುತ್ತಾರೆ' ಎಂದು ಕನ್ನಯ್ಯ ನಾಯ್ಡು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಪತ್ರದಲ್ಲಿ ಏನಿದೆ?: ತುಂಗಭದ್ರಾ ಅಣೆಕಟ್ಟೆ, ಬಲದಂಡೆ ಕಾಲುವೆಗಳ ನಿರ್ವಹಣೆ ಸಹಿತ ಇತರ ವೆಚ್ಚಗಳಿಗೆ ಆಂಧ್ರಪ್ರದೇಶ ಸರ್ಕಾರ ವಾರ್ಷಿಕ ₹390.66 ಕೋಟಿ ನೀಡುತ್ತದೆ. ಈ ಬಾರಿ ಕ್ರೆಸ್ಟ್‌ಗೇಟ್‌ಗಳ ಬದಲಾವಣೆಗಾಗಿ ಸಾಮಗ್ರಿಗಳ ಖರೀದಿಗಾಗಿ 2025ರ ನವೆಂಬರ್ 26ರಂದು ಆಂಧ್ರ ಸರ್ಕಾರ ₹20 ಕೋಟಿಯನ್ನು, ರಾಜ್ಯ ಸರ್ಕಾರದ ಉಸ್ತುವಾರಿಯಲ್ಲಿರುವ ತುಂಗಭದ್ರಾ ಮಂಡಳಿ ಖಾತೆಗೆ ವರ್ಗಾಯಿಸಿತ್ತು. ಆಗ ಕರ್ನಾಟಕವೂ ಖಾತೆಗೆ ₹10 ಕೋಟಿ ವರ್ಗಾಯಿಸಿತ್ತು. ಸಿಬ್ಬಂದಿ ಸಂಬಳ, ಸಾರಿಗೆ ಇತರೆ ವೆಚ್ಚಗಳಿಗೆ ಆಂಧ್ರ ಸರ್ಕಾರ ಹೆಚ್ಚುವರಿಯಾಗಿ ₹35.62 ಕೋಟಿಯನ್ನು ಡಿ.17ರಂದು ನೀಡಿತ್ತು. ಆದರೆ, ಈ ಸಂಬಳ ಸಂಬಂಧಿತ ದುಡ್ಡನ್ನು ತುಂಗಭದ್ರಾ ಮಂಡಳಿಯ ಖಾತೆಗೆ ಹಾಕುವಾಗ ಕೇವಲ ₹25.62 ಕೋಟಿ ಮಾತ್ರ ಹಾಕಲು ಕರ್ನಾಟಕ ಸರ್ಕಾರ ತನ್ನ ಖಜಾನೆ ಇಲಾಖೆಗೆ ಸೂಚಿಸಿದೆ. ಸಮರ್ಪಕವಾಗಿ ಕೆಲಸ ಮುಂದುವರಿಸಲು ಈ ದುಡ್ಡನ್ನು ತಕ್ಷಣ ನೀಡಿ' ಎಂಬ ಉಲ್ಲೇಖ ಕಾರ್ಯದರ್ಶಿ ಅವರು ಬರೆದ ಪತ್ರದಲ್ಲಿ ಇದೆ.

ಈ ಮಧ್ಯೆ, ಉಭಯ ಜಿಲ್ಲೆಗಳ ರೈತ ಮುಖಂಡರು ಮಂಗಳವಾರ ಮಂಡಳಿಯ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಿದರು. 'ಹಣ ಬಿಡುಗಡೆಗೆ ಕರ್ನಾಟಕ ಸರ್ಕಾರದ ಮೇಲೆ ಒತ್ತಡ ತನ್ನಿ ಎಂದು ಕಾರ್ಯದರ್ಶಿ ಹೇಳಿದರು' ಎಂದು ಮುಖಂಡ ಜೆ.ಎನ್.ಕಾಳಿದಾಸ ತಿಳಿಸಿದರು.

ಮೊದಲು ಆಂಧ್ರದಿಂದ ದುಡ್ಡು, ಬಳಿಕ ಹಂಚಿಕೆ

ತುಂಗಭದ್ರಾ ಅಣೆಕಟ್ಟೆಯ ನಿರ್ವಹಣೆ ಕುರಿತಂತೆ ಈಗಾಗಲೇ ಆಗಿರುವ ಒಪ್ಪಂದದಂತೆ ಅಣೆಕಟ್ಟೆಗೆ ಸಂಬಂಧಿಸಿದಂತೆ ಎಲ್ಲಾ ವೆಚ್ಚವನ್ನೂ ಮೊದಲು ಆಂಧ್ರಪ್ರದೇಶ ಸರ್ಕಾರವೇ ಭರಿಸಬೇಕು. ಬಳಿಕ ತುಂಗಭದ್ರಾ ಮಂಡಳಿಯ ನಿಯಂತ್ರಣ ಹೊಂದಿರುವ ಕೇಂದ್ರೀಯ ಜಲ ಆಯೋಗ ವೆಚ್ಚವನ್ನು ರಾಜ್ಯಗಳ ನಡುವೆ ಹಂಚಿಕೆ ಮಾಡುತ್ತದೆ. ಅದರಂತೆ ಆಂಧ್ರ ಸರ್ಕಾರ ಈಗಾಗಲೇ ₹55.62 ಕೋಟಿ ಕೊಟ್ಟುಬಿಟ್ಟಿದೆ.

ಹೊನ್ನಾಟ ಸಂಭ್ರಮ

ಪ್ರಜಾವಾಣಿ ಚಿತ್ರ:

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಎಲಿಮುನ್ನೋಳಿಯಲ್ಲಿ ತ್ರೈವಾರ್ಷಿಕ ಲಕ್ಷ್ಮೀದೇವಿ ಜಾತ್ರೆಯಲ್ಲಿ ದೇವಿಯ ಹೊನ್ನಾಟದಲ್ಲಿ ನೂರಾರು ಭಕ್ತರು ಭಾಗವಹಿಸಿದ್ದರು

ಎನ್‌ಡಬ್ಲ್ಯುಡಿಎ ವರದಿ ಆಧರಿಸಿ ಮುಖಂಡರ ಹೇಳಿಕೆ

'ಬೆಂಗಳೂರಿಗಾಗಿ ಅಘನಾಶಿನಿ ತಿರುವು?'

ಪ್ರಜಾವಾಣಿ ವಾರ್ತೆ

ಶಿರಸಿ: 'ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಯಲ್ಲಿ ನಿರೀಕ್ಷಿತ ನೀರು ಲಭ್ಯವಾಗದೆ ಬೆಂಗಳೂರು ಮತ್ತು ಕೋಲಾರ ಭಾಗದ ನೀರಿನ ಅಗತ್ಯಕ್ಕಾಗಿ ಸರ್ಕಾರ ಅಘನಾಶಿನಿ ನದಿ ತಿರುವು ಯೋಜನೆಗೆ ಕೈಹಾಕಿದೆ ಎಂಬ ಅಂಶ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ (ಎನ್‌ಡಬ್ಲ್ಯುಡಿಎ) ಸಾಧ್ಯತಾ ವರದಿಯಲ್ಲಿದೆ' ಎಂದು ವೃಕ್ಷಲಕ್ಷ ಆಂದೋಲನದ ಪ್ರಮುಖರು ತಿಳಿಸಿದ್ದಾರೆ.

'ಶರಾವತಿ ನದಿ ತಿರುವು ಯೋಜನೆಗೆ ಎದುರಾದ ತೀವ್ರ ವಿರೋಧದ ಕಾರಣದಿಂದ ಪರ್ಯಾಯ ಮಾರ್ಗವಾಗಿ ಅಘನಾಶಿನಿಯನ್ನು ವೇದಾವತಿ ನದಿಗೆ ಜೋಡಿಸುವ ₹24 ಸಾವಿರ ಕೋಟಿ ವೆಚ್ಚದ ಬೃಹತ್ ನೀರಾವರಿ ಯೋಜನೆ ರೂಪಿಸಲಾಗಿದೆ. 35 ಟಿಎಂಸಿ ನೀರನ್ನು ಸಾಗಿಸುವ ಗುರಿಯ ಈ ಯೋಜನೆಯು 194 ಕಿ.ಮೀ ಉದ್ದದ ಕಾಲುವೆ, ಪೈಪ್‌ಲೈನ್, 4 ಹಂತಗಳಲ್ಲಿ ನೀರೆತ್ತುವ ಪ್ರಕ್ರಿಯೆ ಒಳಗೊಂಡಿದೆ. ಇದಕ್ಕಾಗಿ 1,300 ಮೆಗಾವ್ಯಾಟ್ ವಿದ್ಯುತ್ ಅಗತ್ಯವಿದೆ ಎಂದು ವರದಿ ತಿಳಿಸಿದೆ' ಎಂದು ವೃಕ್ಷಲಕ್ಷ ಆಂದೋಲನ ವರದಿ ಆಧರಿಸಿ ಪ್ರಮುಖರು ಹೇಳಿಕೆ ನೀಡಿದ್ದಾರೆ.

'ಯೋಜನೆಯು 35 ಟಿಎಂಸಿ ನೀರು ಸಾಗಣೆ, 4 ಕಡೆ ನೀರೆತ್ತುವ ಪ್ರಸ್ತಾಪಗಳು, 194 ಕಿ.ಮೀ ಉದ್ದದ ಕಾಲುವೆ, ಪೈಪ್‌ಲೈನ್, ಕಾಲುವೆ, ವಿದ್ಯುತ್ ಮಾರ್ಗ, ರಸ್ತೆ ಕಾಮಗಾರಿ, ಮುಳುಗಡೆ, ಅರಣ್ಯನಾಶ, ಕಟ್ಟಡ ನಿರ್ಮಾಣವನ್ನು ಒಳಗೊಂಡಿದೆ. ಅಘನಾಶಿನಿ ಕಣಿವೆಯ ಅರಣ್ಯ ನಾಶ, ಭೂಮಿ ಮುಳುಗಡೆ ಮತ್ತು ಪರಿಸರ ಅಸಮತೋಲನಕ್ಕೆ ದಾರಿ ಮಾಡಿಕೊಡಲಿದೆ. ಬೇಡ್ತಿ-ವರದಾ ಯೋಜನೆಯಡಿ ಅಘನಾಶಿನಿ ನೀರನ್ನು ಬೆಂಗಳೂರಿಗೆ ವರ್ಗಾಯಿಸುವ ಪ್ರಸ್ತಾವ ಕೇಂದ್ರ ಜಲಶಕ್ತಿ ಸಚಿವಾಲಯದ ಪರಿಶೀಲನೆಯಲ್ಲಿದ್ದು, ಶೀಘ್ರವೇ ರಾಜ್ಯ ಸರ್ಕಾರದಿಂದ ಜಾರಿ ಹಂತಕ್ಕೆ ಬರುವ ಸಾಧ್ಯತೆಯಿದೆ' ಎಂದು ವೃಕ್ಷಲಕ್ಷದ ಸಂಚಾಲಕರಾದ ಕೆ.ವೆಂಕಟೇಶ, ಗಣಪತಿ ಕೆ. ತಿಳಿಸಿದ್ದಾರೆ.

ಪತ್ನಿ ಪರಾರಿ: ಪತಿ, ಸೋದರ ಮಾವ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ನವವಿವಾಹಿತೆ ಪ್ರಿಯಕರನೊಂದಿಗೆ ಪರಾರಿ ಆದ್ದರಿಂದ ಮನನೊಂದು ಆಕೆಯ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಷಯ ತಿಳಿದು, ಈ ಜೋಡಿಗೆ ಮದುವೆ ಮಾಡಿಸಿದ್ದ ವಧುವಿನ ಸೋದರಮಾವ ಕೂಡಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಾಲ್ಲೂಕಿನ ಗುಮ್ಮನೂರು ಗ್ರಾಮದ ಹರೀಶ್ (30), ಅವರ ಸೋದರ ಮಾವ, ನಗರದ ಆನೆಕೊಂಡ ನಿವಾಸಿ ರುದ್ರೇಶ್ (36) ಆತ್ಮಹತ್ಯೆ ಮಾಡಿಕೊಂಡವರು. ಸರಸ್ವತಿ ಅವರನ್ನು ಹರೀಶ್ 3 ತಿಂಗಳ ಹಿಂದೆ ವಿವಾಹವಾಗಿದ್ದರು. ಆಕೆ ಜ. 23ರಂದು ಪ್ರಿಯಕರ ಕುಮಾರ್ ಜೊತೆ ಪರಾರಿಯಾಗಿದ್ದರು.

ಹರೀಶ್, ರುದ್ರೇಶ್

ಹರೀಶ್ ಸೋಮವಾರ ಮರಕ್ಕೆ ನೇಣು ಹಾಕಿಕೊಂಡು ಮೃತಪಟ್ಟರೆ, ಸರಸ್ವತಿಯ ಸೋದರಮಾವ ರುದ್ರೇಶ್ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಮಂಗಳವಾರ ಆಸ್ಪತ್ರೆಯಲ್ಲಿ ಮೃತಪಟ್ಟರು.

ಡೆತ್‌ನೋಟ್ ಪತ್ತೆ: 'ಪತ್ನಿ ಓಡಿ ಹೋಗಿದ್ದಾಳೆ. ನಾನೇ ಹಿಂಸೆ ನೀಡುತ್ತಿದ್ದೇನೆ ಎಂದು ಆರೋಪ ಮಾಡಿದ್ದಾಳೆ. ನಾನು ತಪ್ಪು ಮಾಡಿಲ್ಲ. ನನಗೆ ಮಾನ– ಮರ್ಯಾದೆ ಮುಖ್ಯ' ಎಂದು ಹರೀಶ್ ಸಾವಿಗೂ ಮುನ್ನ ಬರೆದಿಟ್ಟಿದ್ದ ಪತ್ರ ಸಿಕ್ಕಿದೆ.

'ಸರಸ್ವತಿಯ ಪ್ರಿಯಕರ ಕುಮಾರ್, ಹರೀಶ್ ಮೇಲೆ ಹಲ್ಲೆ ನಡೆಸಿ ಜೀವ ಬೆದರಿಕೆಯೊಡ್ಡಿದ್ದ. ಇದರಿಂದ ನೊಂದು ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಅವರ ವಿರುದ್ಧ ಕ್ರಮ ಜರುಗಿಸಿ ಎಂದು ಹರೀಶ್ ತಂದೆ ಪೊಲೀಸರಿಗೆ ದೂರು ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಾಷ್ಟ್ರಕೂಟರ ಶಾಸನ ಪತ್ತೆ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಹುಗಲೂರು ಗ್ರಾಮದ ರಾಮಲಿಂಗೇಶ್ವರ ದೇವಸ್ಥಾನದ ನವರಂಗ ಮಂಟಪದಲ್ಲಿ ರಾಷ್ಟ್ರಕೂಟರ ಕಾಲದ ಕನ್ನಡ ಶಾಸನ ಪತ್ತೆಯಾಗಿದೆ.

'3.5 ಅಡಿ ಎತ್ತರ, 2 ಅಡಿ ಅಗಲದ ಶಾಸನ 8ನೇ ಶತಮಾನದ್ದು ಎನ್ನಲಾಗಿದೆ. ಮೇಲ್ಭಾಗ ಕುಂಭದೊಳಗೆ ಶಿವಲಿಂಗ, ಎದುರಿಗೆ ಆಕಳು ಕರುವಿಗೆ ಹಾಲುಣಿಸುತ್ತಿರುವ ಚಿತ್ರ ಹಾಗೂ ತುದಿಯಲ್ಲಿ ಸೂರ್ಯ, ಚಂದ್ರರ ಸಂಕೇತಗಳಿವೆ' ಎಂದು ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಇತಿಹಾಸ ಸಂಶೋಧಕ ಡಿ.ವೀರೇಶ ಹುಗಲೂರು ತಿಳಿಸಿದ್ದಾರೆ.

ಈ ಶಾಸನ ಅಧ್ಯಯನಕ್ಕೆ ಬೆಂಗಳೂರಿನ ಶಾಸನ ವಿದ್ವಾಂಸ ದೇವರಾಜಸ್ವಾಮಿ, ಸಂಶೋಧಕ ಶ್ಯಾಮ ಸುಂದರಗೌಡ ಮಾರ್ಗದರ್ಶನ ಮಾಡಿದ್ದಾರೆ ಎಂದು ವೀರೇಶ ಹೇಳಿದ್ದಾರೆ.

80 ಸಾವಿರ ಲಂಚ; ಎಸ್‌ಡಿಎ ಬಂಧನ

ರಾಯಬಾಗ (ಬೆಳಗಾವಿ ಜಿಲ್ಲೆ): ಪಟ್ಟಣದ ತಹಶೀಲ್ದಾರ್ ಕಚೇರಿಯ ಎಸ್‌ಡಿಎ ಚಂದ್ರಶೇಖರ ಮುರಟಗಿ ₹ 80 ಸಾವಿರ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ಚಂದ್ರಶೇಖರ ಮುರಟಗಿ

'ಭೂ ದಾಖಲೆ ಸಂಬಂಧಿಸಿದ ಕೆಲಸಕ್ಕೆ ₹ 1 ಲಕ್ಷ ನೀಡುವಂತೆ ರೈತ ಶಿವಾನಂದ ದುಂಡಗಿ ಅವರಿಗೆ ಆರೋಪಿಯು ಬೇಡಿಕೆ ಇಟ್ಟಿದ್ದರು. ₹80 ಸಾವಿರ ಲಂಚ ಪಡೆಯುವಾಗ ಕಾರ್ಯಾಚರಣೆ ನಡೆಸಿ, ಬಂಧಿಸಿದೆವು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ. ದಾಳಿ ವೇಳೆ ಕಚೇರಿಯ ಕೆಲ ದಾಖಲೆಗಳನ್ನು ಪರಿಶೀಲಿಸಿದ್ದು, ಮ್ಯೂಟೇಷನ್, ಪಹಣಿ ತಿದ್ದುಪಡಿ ಸೇರಿ ಕಂದಾಯಕ್ಕೆ ಸಂಬಂಧಿಸಿದ ಕಡತಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಕವನ ಸಂಕಲನ ಆಹ್ವಾನ

ಬಳ್ಳಾರಿ: ಬಳ್ಳಾರಿಯ 'ಸಂಗಂ ಟ್ರಸ್ಟ್' ನೀಡುವ 'ಸಂಗಂ ಸಾಹಿತ್ಯ ಪುರಸ್ಕಾರ'ಕ್ಕೆ ಕಾವ್ಯ ಸಂಕಲನಗಳನ್ನು ಆಹ್ವಾನಿಸಿದೆ.

'2023-25ರ ಅವಧಿಯಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಕವನ ಸಂಕಲನವನ್ನು ಬರಹಗಾರರು, ಪ್ರಕಾಶಕರು ಸ್ಪರ್ಧೆಗೆ ಕಳುಹಿಸಬಹುದು. ಪ್ರಶಸ್ತಿ ₹25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ' ಎಂದು ಸಂಗಂ ಸಂಸ್ಥೆ ಅಧ್ಯಕ್ಷ ಡಾ. ವೈ.ಸಿ. ಯೋಗಾನಂದ ರೆಡ್ಡಿ ತಿಳಿಸಿದ್ದಾರೆ.

ವಿಳಾಸ: ಕೆ. ಶಿವಲಿಂಗಪ್ಪ ಹಂದಿಹಾಳು, ಮನೆ ಸಂಖ್ಯೆ : 44/C, ಚೇತನಾ ಕ್ಲಿನಿಕ್, ಪಕ್ಕ, ಜಿಮ್ ಖಾನಾ ರಸ್ತೆ, ಪಾರ್ವತಿ ನಗರ, ಬಳ್ಳಾರಿ. 583103. ದೂರವಾಣಿ ಸಂಖ್ಯೆ: 9980346474.

ಹುಲಿ ಮರಿ ಸೆರೆ ಇನ್ನೊಂದಕ್ಕೆ ಶೋಧ

ಚಾಮರಾಜನಗರ: ತಾಲ್ಲೂಕಿನ ನಂಜೇದೇವನಪುರ ಬಳಿ ಮಂಗಳವಾರ ಮತ್ತೊಂದು ಹುಲಿ ಮರಿ ಸೆರೆ ಸಿಕ್ಕಿದೆ. ತಾಯಿಯಿಂದ ಬೇರ್ಪಟ್ಟಿದ್ದ ಮರಿಗಳ ಸೆರೆಗೆ ಅರಣ್ಯ ಇಲಾಖೆ ಬೋನು ಇರಿಸಿತ್ತು.

'ನಾಲ್ಕು ಮರಿಗಳು ಬೇರ್ಪಟ್ಟಿದ್ದು, ಡಿ.15, 17ರಂದು ಎರಡು ಮರಿಗಳು ಸೆರೆ ಸಿಕ್ಕಿದ್ದವು. ಉಳಿದ ಇನ್ನೊಂದು ಮರಿಗೆ ಶೋಧ ನಡೆದಿದೆ. ಸಿಕ್ಕಿರುವ ಮೂರು ಹುಲಿ ಮರಿಗಳ ಆರೋಗ್ಯದ ಮೇಲೆ ನಿಗಾ ಇರಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಂಧೀಜಿಗಾಗಿ 'ಕೈ' ರಾಜಭವನಕ್ಕೆ

ಯೋಜನೆ ಮರು ಸ್ಥಾಪನೆವರೆಗೂ ಹೋರಾಟ: ಸರ್ಕಾರದ ಘೋಷಣೆ

ನರೇಗಾ ಬಚಾವೋ, ರಾಜಭವನ ಚಲೋ ಪ್ರತಿಭಟನೆ ನಡೆಸಿದ ನಂತರ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ರಣದೀಪ್ ಸಿಂಗ್ ಸುರ್ಜೇವಾಲ ಸಹಿತ ಪ್ರಮುಖರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದರು

'ಉದ್ಯೋಗ ಖಾತ್ರಿ ರದ್ದತಿಗೆ ಹುನ್ನಾರ'

'ನಿಧಾನವಾಗಿ ಉದ್ಯೋಗ ಖಾತ್ರಿ ಯೋಜನೆ ರದ್ದುಪಡಿಸುವ ಹುನ್ನಾರವನ್ನು ಬಿಜೆಪಿ ನಡೆಸುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

'ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು 2005ರಲ್ಲಿ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಿ ಶ್ರಮ ಸಂಸ್ಕೃತಿಗೆ ಗೌರವ ನೀಡಿತು. ಪ್ರತಿ ಪಂಚಾಯಿತಿಗೆ ವರ್ಷಕ್ಕೆ ₹1 ಕೋಟಿ ವರೆಗೂ ಅನುದಾನ ನೀಡಿ ಸಬಲೀಕರಣಗೊಳಿಸಿತು. ತಮ್ಮ ಭಾಗದಲ್ಲಿ ಆಗಬೇಕಾದ ಕಾಮಗಾರಿಗಳ ಕುರಿತು ಪಂಚಾಯಿತಿ, ಗ್ರಾಮಸಭೆಗಳಲ್ಲಿ ಯೋಜನೆ ತಯಾರಿಸುವ ಅಧಿಕಾರವಾಗ ಇತ್ತು. ಈಗ ಆ ಅಧಿಕಾರ ಕಿತ್ತುಕೊಂಡು ಕೇಂದ್ರದ ಅಧಿಕಾರಿಗಳಿಗೆ ನೀಡಲಾಗಿದೆ' ಎಂದು ಹರಿಹಾಯ್ದರು.



'ನರೇಗಾ ಯೋಜನೆಯಿಂದ ಶೇ 53ರಷ್ಟು ಮಹಿಳೆಯರು, ಶೇ 28ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, 5 ಲಕ್ಷ ಅಂಗವಿಕಲರಿಗೆ ಉದ್ಯೋಗ ಸಿಗುವಂತಾಗಿತ್ತು. ಬಡವರು ಮುಖ್ಯವಾಹಿನಿಗೆ ಬರುವುದು ಆರ್‌ಎಸ್‌ಎಸ್‌ನವರಿಗೆ ಬೇಕಾಗಿಲ್ಲ. ಬಡವರ ಪರವಾದ ಎಲ್ಲ ಕಾರ್ಯಕ್ರಮ ಬಿಜೆಪಿ ರದ್ದುಗೊಳಿಸುತ್ತಿದ್ದು, ಇದರ ಭಾಗವಾಗಿಯೇ ನರೇಗಾ ಯೋಜನೆ ಬದಲಾಯಿಸಲಾಗುತ್ತಿದೆ' ಎಂದು ಆರೋಪಿಸಿದರು.

'ಕಾಯ್ದೆಯ ರದ್ದತಿ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನ ಕರೆಯಲಾಗಿದೆ. ಆದರೆ, ಬಿಜೆಪಿಯವರು ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡುತ್ತಿಲ್ಲ. ಅವರು ಚರ್ಚೆಯಲ್ಲಿ ಭಾಗವಹಿಸದೇ ಇದ್ದರೂ ರದ್ದತಿಯ ವಿರುದ್ಧ ಸರ್ಕಾರ ಖಂಡಿತ ನಿರ್ಣಯ ಕೈಗೊಳ್ಳಲಿದೆ' ಎಂದು ತಿಳಿಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರೇಗಾ ಯೋಜನೆಯನ್ನು ವಿಬಿ ಜಿ ರಾಮ್ ಜಿ ಹೆಸರಿನ ಕಾಯ್ದೆ ಮೂಲಕ ಜಾರಿಗೊಳಿಸಲು ಮುಂದಾಗಿರುವುದನ್ನು ವಿರೋಧಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ರಣಕಹಳೆ ಮೊಳಗಿಸಿತು.

'ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವವರೆಗೂ ರೈತರು ನಡೆಸಿದ ಪ್ರತಿಭಟನೆ ರೀತಿಯಲ್ಲಿಯೇ, ವಿಬಿ ಜಿ ರಾಮ್ ಜಿ ಕಾಯ್ದೆ ಹಿಂಪಡೆದು, ನರೇಗಾ ಮರು ಸ್ಥಾಪಿಸುವವರೆಗೂ ಹೋರಾಟ ಮುಂದುವರಿಸಲಾಗುವುದು' ಎಂದು ಸಭೆಯಲ್ಲಿ ಮಾತನಾಡಿದ ನಾಯಕರು ಘೋಷಿಸಿದರು.

ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಪಕ್ಷದ ಕರ್ನಾಟಕದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, ಸಚಿವರು, ಶಾಸಕರು ಹಾಗೂ ಮುಖಂಡರ ಸಮ್ಮುಖದಲ್ಲಿ 'ನರೇಗಾ ಬಚಾವೋ, ರಾಜಭವನ ಚಲೋ' ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರ ಹಾಗೂ ಬಿಜೆಪಿಯ ನಡೆ ವಿರುದ್ಧ ಆಕ್ರೋಶ ಹೊರಹಾಕಿದರು.

'ಗಾಂಧೀಜಿ ಹೆಸರನ್ನು ತೆಗೆದು ಹಾಕಿ ಎರಡನೇ ಬಾರಿಗೆ ಅವರನ್ನು ಬಿಜೆಪಿ ಹತ್ಯೆ ಮಾಡಿದೆ. ಆರ್‌ಎಸ್‌ಎಸ್ ಸೂಚನೆಯಂತೆಯೇ ಬಿಜೆಪಿ ಸರ್ಕಾರ ಯೋಜನೆಯ ಸ್ವರೂಪವನ್ನೇ ಬದಲಾಯಿಸಿದೆ. ಗ್ರಾಮ ಪಂಚಾಯಿತಿಗಳ ಅಧಿಕಾರವನ್ನೇ ಕಿತ್ತುಕೊಂಡು ಕೇಂದ್ರ ಸರ್ಕಾರವೇ ಯೋಜನೆ ರೂಪಿಸಲಿದ್ದು, ಇದರಿಂದ ಉದ್ಯೋಗ ಖಾತ್ರಿಯ ಆಶಯವೇ ಹಾಳಾದಂತಾಗಿದೆ. ಇದಕ್ಕೆ ಅವಕಾಶ ನೀಡುವುದಿಲ್ಲ' ಎಂದು ನಾಯಕರು ಹೇಳಿದರು.

ಬಳಿಕ ಮುಖ್ಯಮಂತ್ರಿ ಸೇರಿ 26 ಮಂದಿಯ ನಿಯೋಗ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಪತ್ರ ಸಲ್ಲಿಸಿತು.

ಡಿಕೆಶಿಗೆ ಟವೆಲ್ ಕಟ್ಟಿದ ಸಿದ್ದರಾಮಯ್ಯ

ಪ್ರತಿಭಟನೆ ನಡೆಯುತ್ತಿದ್ದ ವೇದಿಕೆಯ ಮೇಲೆಯೇ, ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಅವರ ತಲೆಗೆ ಟವೆಲ್ ಕಟ್ಟಿದರು.

ವಿಬಿ ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ಕಪ್ಪು ಪಟ್ಟಿ ಧರಿಸಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಮುಖಂಡರು ಟವೆಲ್ ತಂದಿದ್ದರಿಂದ ಹಲವರು ಹಳ್ಳಿಯ ಜನರಂತೆ ತಲೆಗೆ ಕಟ್ಟಿಕೊಂಡರು. ಕೆಲವರು ಹೆಗಲ ಮೇಲೆ ಹಾಕಿಕೊಂಡರು. ಶಿವಕುಮಾರ್ ಕಟ್ಟಿಕೊಂಡಿದ್ದ ಟವೆಲ್ ಒಪ್ಪವಾಗಿರಲಿಲ್ಲ. ಆದು ಮುಖ್ಯಮಂತ್ರಿಯವರ ಗಮನಕ್ಕೆ ಬಂದಾಗ, ತಾವು ಕಟ್ಟಿಕೊಂಡಿದ್ದ ರೀತಿಯಲ್ಲಿಯೇ ಶಿವಕುಮಾರ್ ಅವರ ತಲೆಗೂ ಟವೆಲ್ ಸುತ್ತಿದರು.

ಘೋಷಣೆ: ಗದರಿದ ಡಿಕೆಶಿ

ಪ್ರತಿಭಟನೆ ವೇಳೆ ನಿರಂತರವಾಗಿ ಡಿಕೆ ಅವರಿಗೆ ಜೈ, ಡಿಕೆ, ಡಿಕೆ ಎನ್ನುವ ಘೋಷಣೆಗಳು ಮೊಳಗುತ್ತಲೇ ಇದ್ದವು. ತಮ್ಮ ಭಾಷಣದ ವೇಳೆ ಕೂಗು ಜೋರಾದಾಗ, 'ಏಯ್ ತರಲೆ ಸುಮ್ಮನಿರೋ' ಎಂದರು. ಸಿದ್ದರಾಮಯ್ಯ ಅವರು ಭಾಷಣಕ್ಕೆ ನಿಂತಾಗಲೂ 'ಡಿಕೆ, ಡಿಕೆ' ಎಂದು ಘೋಷಣೆ ಅಬ್ಬರಿಸಿದರು. ಅವರು ಕೂಡ ಸಿಟ್ಟಾಗಿ, ಸುಮ್ಮನಿರುವಂತೆ ಗದರಿದರು.

'ಎಚ್‌ಡಿಕೆ, ಬಿಜೆಪಿ ಚರ್ಚೆಗೆ ಬರಲಿ'

'ವಿಬಿ ಜಿ ರಾಮ್ ಜಿ ಕಾಯ್ದೆ ಕುರಿತು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, ಬಿಜೆಪಿ ನಾಯಕರು ಚರ್ಚೆಗೆ ಬರಲಿ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಂಥಾಹ್ವಾನ ನೀಡಿದರು.

'ಈ ಯೋಜನೆ ಜಾರಿಯಾಗಿ 20 ವರ್ಷ ಆಗಿದೆ. 11 ವರ್ಷದಿಂದ ಬಿಜೆಪಿ ಸರ್ಕಾರವಿದೆ. ಯೋಜನೆಯಲ್ಲಿ ಅಕ್ರಮ ನಡೆದಿದ್ದರೆ ಸರ್ಕಾರ ಏನು ಮಾಡುತ್ತಿದೆ? ಕರ್ನಾಟಕದಲ್ಲಿನ ಅಕ್ರಮ ಪ್ರಕರಣಗಳಲ್ಲಿ ನಮ್ಮ ಸರ್ಕಾರ ಕ್ರಮ ಕೈಗೊಂಡಿದೆ. ಬಿಜೆಪಿ ನಾಯಕರು ಗಾಂಧೀಜಿ ಪ್ರತಿಮೆ ಮುಂದೆ ಕುಳಿತು ಪ್ರತಿಭಟನೆ ಮಾಡುತ್ತಿದ್ದು, ಅಲ್ಲಿ ಕುಳಿತುಕೊಳ್ಳುವ ಹಕ್ಕನ್ನು ಕಳೆದುಕೊಂಡಿದ್ದಾರೆ. ಕಚೇರಿಯಲ್ಲಿ ಗಾಂಧೀಜಿ ಭಾವಚಿತ್ರ ಇಟ್ಟುಕೊಳ್ಳುವ ಯೋಗ್ಯತೆಯೂ ಅವರಿಗಿಲ್ಲ' ಎಂದು ಹೇಳಿದರು.

ಗಾಂಧೀಜಿ ಪ್ರತಿಮೆಯ ಎದುರು ಬಿಜೆಪಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲರಿಗೆ ಕಾಂಗ್ರೆಸ್ ಶಾಸಕರು ಅವಮಾನಿಸಿದ್ದಾರೆ ಹಾಗೂ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಅಬಕಾರಿ ಸಚಿವ ಆರ್‌.ಬಿ. ತಿಮ್ಮಾಪುರ ರಾಜೀನಾಮೆಗೆ ಒತ್ತಾಯಿಸಿ ವಿಧಾನಸೌಧ ಆವರಣದಲ್ಲಿನ ಗಾಂಧಿ ಪ್ರತಿಮೆ ಮುಂದೆ ಬಿಜೆಪಿ, ಜೆಡಿಎಸ್ ಶಾಸಕರು ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯಪಾಲರ ವಿರುದ್ಧ ದುರ್ವರ್ತನೆ ತೋರಿದವರು ಹಾಗೂ ಶಾಸಕರ ಮನೆಗೆ ಬೆಂಕಿಯಿಟ್ಟ ಗೂಂಡಾಗಳ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ಘೋಷಣೆ ಕೂಗಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, 'ಅಬಕಾರಿ ಹಗರಣಕ್ಕೆ ಸಂಬಂಧಿಸಿ ಸಚಿವ ತಿಮ್ಮಾಪುರ ಅವರು ರಾಜೀನಾಮೆ ಕೊಡದೇ ನಾವ್ಯಾರೂ ಸದನ ಬಿಟ್ಟು ಹೋಗುವುದಿಲ್ಲ. ₹6 ಸಾವಿರ ಕೋಟಿ ಹಗರಣ ಎಂದು ಅಬಕಾರಿ ಗುತ್ತಿಗೆದಾರರ ಸಂಘದ ಅಧ್ಯಕ್ಷರೇ ಹೇಳಿದ್ದಾರೆ. ಇದರಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ಪಾಲು ಎಷ್ಟು' ಎಂದು ಪ್ರಶ್ನಿಸಿದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್‌.ರವಿಕುಮಾರ್, 'ರಾಜ್ಯಪಾಲರಿಗೆ ಧಿಕ್ಕಾರ ಕೂಗಿ, ಅಗೌರವ ತೋರಿದ್ದಾರೆ. ಹಾಗಾಗಿ ಬಿ.ಕೆ.ಹರಿಪ್ರಸಾದ್, ಎಸ್‌.ರವಿ, ಶರತ್ ಬಚ್ಚೇಗೌಡ, ಪ್ರದೀಪ್ ಈಶ್ವರ್ ಅವರನ್ನು ಕೂಡಲೇ ಅಮಾನತು ಮಾಡಬೇಕು' ಎಂದರು.

ಶಾಸಕ ಸಿ.ಎನ್‌.ಅಶ್ವತ್ಥ ನಾರಾಯಣ್, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಶಾಸಕ ಎಚ್‌. ಡಿ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಎಸ್‌.ಎಲ್‌. ಭೋಜೇಗೌಡ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಬಕಾರಿ ಇಲಾಖೆಯ ಭ್ರಷ್ಟಾಚಾರದ ಕುರಿತು ವಿಡಿಯೊ, ಆಡಿಯೊಗಳು ಹರಿದಾಡುತ್ತಿವೆ. ಕೂಡಲೇ ಅಬಕಾರಿ ಸಚಿವರ ರಾಜೀನಾಮೆ ಪಡೆಯಬೇಕು

ಆರ್‌.ಅಶೋಕ, ವಿರೋಧ ಪಕ್ಷದ ನಾಯಕ

ವಿಧಾನಸೌಧದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಎದುರು ಆರ್‌ ಅಶೋಕ, ಛಲವಾದಿ ನಾರಾಯಣಸ್ವಾಮಿ, ಸುರೇಶ್ ಬಾಬು, ಬಿ.ವೈ. ವಿಜಯೇಂದ್ರ ನೇತೃತ್ವತದಲ್ಲಿ ಬಿಜೆಪಿ, ಜೆಡಿಎಸ್ ಶಾಸಕರು ಪ್ರತಿಭಟಿಸಿದರು
– ಪ್ರಜಾವಾಣಿ ಚಿತ್ರ

ಸಿಬಿಐ ತನಿಖೆ ನಡೆಸಿ: ವಿಜಯೇಂದ್ರ

'ಅಬಕಾರಿ ಹಗರಣದ ತನಿಖೆಯನ್ನು ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಅಥವಾ ಸಿಬಿಐನಿಂದ ನಡೆಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

'ಹಗರಣದಲ್ಲಿ ಸ್ವತಃ ಅಬಕಾರಿ ಸಚಿವರು ಹಾಗೂ ಅವರ ಕುಟುಂಬದವರ ಹೆಸರು ಕೇಳಿ ಬರುತ್ತಿದೆ. ಸಿದ್ದರಾಮಯ್ಯ ತಮ್ಮ ಬೊಕ್ಕಸಕ್ಕೆ ಹಣ ತುಂಬಿಸಿಕೊಳ್ಳಲು ಹಾಗೂ ಗ್ಯಾರಂಟಿಗಳಿಗೆ ಹಣ ಹೊಂದಿಸಿಕೊಳ್ಳಲು ಎರಡೂವರೆ ವರ್ಷಗಳಲ್ಲಿ ಮದ್ಯ ಮಾರಾಟದ ಗುರಿಯನ್ನು ಶೇಕಡ 35ರಷ್ಟು ಹೆಚ್ಚಿಸಿದ್ದಾರೆ. ಅಬಕಾರಿ ಇಲಾಖೆ ಅಧಿಕಾರಿಗಳು ಆಯಕಟ್ಟಿನ ಸ್ಥಾನಕ್ಕೆ ಬರಲು ಕೋಟಿ ಕೋಟಿ ಲಂಚ ನೀಡಬೇಕಾದ ಪರಿಸ್ಥಿತಿ ಇದೆ' ಎಂದು ಆರೋಪಿಸಿದರು.

'ಸುಳ್ಳು ಹೇಳುವುದನ್ನು ನಿಲ್ಲಿಸಲಿ'

'ನರೇಗಾ ಯೋಜನೆಯಲ್ಲಿ 100 ದಿನ ಕೂಲಿ ಒದಗಿಸಲಾಗುತ್ತಿತ್ತು. ಅದನ್ನು ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ 125 ದಿನಕ್ಕೆ ಹೆಚ್ಚಿಸಲಾಗಿದೆ. ಆದರೆ, ಕಾಂಗ್ರೆಸ್ ಈ ಬಗ್ಗೆ ಸುಳ್ಳು ಹೇಳುತ್ತಿದೆ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

'ನೂತನ ಯೋಜನೆಯ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರವೇ ಹೆಚ್ಚಿನ ವೆಚ್ಚ ಭರಿಸುತ್ತದೆ. ನರೇಗಾದಲ್ಲಿ ಇದ್ದ ಭ್ರಷ್ಟಾಚಾರವನ್ನು ಇದು ತಡೆಯುತ್ತದೆ. ಮಧ್ಯವರ್ತಿಗಳ ಹಾವಳಿಗೆ ತಡೆಯೊಡ್ಡುತ್ತದೆ. ಇದನ್ನು ಸಾಧ್ಯವಾಗಿಸುತ್ತಿರುವುದು ತಪ್ಪೇ' ಎಂದು ಪ್ರಶ್ನಿಸಿದ್ದಾರೆ.

ವಿಐಪಿ ದರ್ಶನವು ಧಾರ್ಮಿಕ ಆಚರಣೆ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಉಜ್ಜಯಿನಿಯ ಶ್ರೀ ಮಹಾಕಾಳೇಶ್ವರ ದೇವಸ್ಥಾನದಲ್ಲಿ ಶಿವಲಿಂಗಕ್ಕೆ ಜಲಾಭಿಷೇಕ ಮಾಡಲು 'ವಿಐಪಿ ದರ್ಶನ' ಮತ್ತು 'ಆದ್ಯತೆ ಮೇರೆಗೆ ಪ್ರವೇಶ' ನೀಡುವ ಸಂಪ್ರದಾಯವನ್ನು ವಿರೋಧಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರಾಕರಿಸಿತು.

'ಇದು ಧಾರ್ಮಿಕ ಆಚರಣೆಯ ವಿಚಾರ. ಇದರಲ್ಲಿ ನ್ಯಾಯ ತೀರ್ಮಾನ ಸಾಧ್ಯವಿಲ್ಲ' ಎಂದಿತು.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಆರ್‌. ಮಹದೇವನ್ ಹಾಗೂ ಜಾಯ್ ಮಾಲ್ಯಾ ಬಾಗ್ಚಿ ಅವರ ಪೀಠ ಮಂಗಳವಾರ ಈ ರೀತಿ ಅಭಿಪ್ರಾಯಪಟ್ಟಿತು. ವಕೀಲ ವಿಷ್ಣು ಶಂಕರ್ ಜೈನ್ ಅವರು ಅರ್ಜಿ ಸಲ್ಲಿಸಿದ್ದರು. 'ಈ ವಿಚಾರದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರುತ್ತೇನೆ' ಎಂದು ಜೈನ್ ಅವರು ತಮ್ಮ ಅರ್ಜಿಯನ್ನು ವಾಪಸು ಪಡೆದರು.

'ದೇವಸ್ಥಾನದ ನಿರ್ವಹಣೆ ವಿಚಾರಗಳಿಗೆ ಸಂಬಂಧಿಸಿ ನ್ಯಾಯಾಂಗದ ಮಧ್ಯಪ್ರವೇಶಕ್ಕೆ ಮಿತಿ ಇದೆ. ಇದು ಜನರಿಗೆ ಬಿಟ್ಟ ವಿಚಾರ. ವಿಐಪಿ ದರ್ಶನ ನೀಡಬೇಕೆ? ಬೇಡವೇ ಎನ್ನುವುದನ್ನು ನ್ಯಾಯಾಲಯ ನಿರ್ಧರಿಸಲು ಸಾಧ್ಯವಿಲ್ಲ. ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕಷ್ಟೆ' ಎಂದು ಸಿಜೆಐ ಸೂರ್ಯ ಕಾಂತ್ ಹೇಳಿದರು.

'ವಿಐಪಿ ಎಂದರೆ ಏನು ಎನ್ನುವುದನ್ನು ಯಾವುದೇ ಕಾಯ್ದೆ ಅಥವಾ ನಿಯಮಗಳಲ್ಲಿ ವಿವರಿಸಿಲ್ಲ. ಇದೊಂದು ಆಡಳಿತಾತ್ಮಕ ವಿಚಾರ. ದೇವಸ್ಥಾನದ ಆಡಳಿತ ಮಂಡಳಿ ಮತ್ತು ಜಿಲ್ಲಾಧಿಕಾರಿ ಇದನ್ನು ನಿರ್ವಹಿಸುತ್ತಾರೆ' ಎಂದು ಹೇಳಿದ್ದ ಮಧ್ಯಪ್ರದೇಶ ಹೈಕೋರ್ಟ್ ಇದೇ ಕೋರಿಕೆಯುಳ್ಳ ಅರ್ಜಿಯನ್ನು ವಜಾ ಮಾಡಿತ್ತು. ಬಳಿಕ, ವಕೀಲ ಜೈನ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಸಮಾನತೆ ಬೇಕು: ಅರ್ಜಿದಾರರ ವಾದ

ಗರ್ಭಗುಡಿ ಪ್ರವೇಶಕ್ಕೆ ಸಂಬಂಧಿಸಿ ಎಲ್ಲರಿಗೂ ಸಮಾನ ಅವಕಾಶ ನೀಡಬೇಕು. ವಿಐಪಿ ಸ್ಥಾನಮಾನದ ಆಧಾರದಲ್ಲಿ ಜನರ ಮಧ್ಯೆ ತಾರತಮ್ಯ ಮಾಡಬಾರದು. ಹೆಚ್ಚಿನ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಯ ಶಿಫಾರಸಿನ ಮೇರೆಗೇ ವ್ಯಕ್ತಿಯು ಗರ್ಭಗುಡಿ ಪ್ರವೇಶಿಸುತ್ತಾನೆ. ಒಬ್ಬ ಸಾಮಾನ್ಯ ಭಕ್ತನಿಗೂ ಇಂಥ ಹಕ್ಕು ನೀಡಬೇಕಾಗುತ್ತದೆ. ಇಲ್ಲವಾದಲ್ಲಿ, ವಿಐಪಿ ದರ್ಶನದ ಸೌಲಭ್ಯವನ್ನೇ ನಿಲ್ಲಿಸಬೇಕು ಎಂದು ವಕೀಲ ವಿಷ್ಣು ಶಂಕರ್ ಜೈನ್ ವಾದಿಸಿದ್ದರು.

'ಗರ್ಭಗುಡಿಯಲ್ಲಿ ಸಮಾನತೆ ಅಸಾಧ್ಯ'

ಗರ್ಭಗುಡಿ ಪ್ರವೇಶಕ್ಕೆ ಸಂಬಂಧಿಸಿ ಮೂಲಭೂತ ಹಕ್ಕುಗಳನ್ನು ಅನ್ವಯಿಸಲು ಹೋದರೆ, ಪರಿಣಾಮ ಎದುರಿಸಬೇಕಾಗಬಹುದು. ಗರ್ಭಗುಡಿಯಲ್ಲಿ ಸಮಾನತೆ ಹಕ್ಕನ್ನು ಅನ್ವಯಿಸಲು ಹೋದರೆ, ಜನರು ವಾಕ್ ಸ್ವಾತಂತ್ರ್ಯದ ಪ್ರಸ್ತಾಪ ಮಾಡುತ್ತಾರೆ. ಬೇರೆ ಯಾರೋ ಗರ್ಭಗುಡಿ ಪ್ರವೇಶಿಸುತ್ತಿದ್ದಾರೆ ಅದಕ್ಕಾಗಿ ನಮಗೂ ಪ್ರವೇಶ ನೀಡಿ ಎಂದರೆ, ಮತ್ತೊಬ್ಬರು ಬಂದು ನನಗೆ ವಾಕ್ ಸ್ವಾತಂತ್ರ್ಯ ಇದೆ ಅದಕ್ಕೆ ನಾನು ಮಂತ್ರ ಪಠಿಸುತ್ತೇನೆ ಎನ್ನುತ್ತಾನೆ. ಆಮೇಲೆ ಎಲ್ಲ ಮೂಲಭೂತ ಹಕ್ಕುಗಳನ್ನೂ ಗರ್ಭಗುಡಿಯಲ್ಲಿ ಅನ್ವಯಿಸಬೇಕಾಗುತ್ತದೆ

ಸೂರ್ಯಕಾಂತ್, ಭಾರತದ ಮುಖ್ಯ ನ್ಯಾಯಮೂರ್ತಿ

ಮೇಲ್ಮನವಿ ವಿಚಾರಣೆಗೆ 'ಸುಪ್ರೀಂ' ಸಮ್ಮತಿ

ನವದೆಹಲಿ(ಪಿಟಿಐ): 'ನೀಟ್–ಪಿಜಿ 2025'ರ ಪ್ರಶ್ನೆಪತ್ರಿಕೆಗಳು ಹಾಗೂ ಕೀ–ಉತ್ತರಗಳನ್ನು ಬಹಿರಂಗಪಡಿಸದಿರುವ ರಾಷ್ಟ್ರೀಯ ಪರೀಕ್ಷೆಗಳ ಮಂಡಳಿ(ಎನ್‌ಬಿಇ) ನೀತಿ ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಗಳ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿದೆ.

'ನೀಟ್–ಪಿಜಿಯ ಪ್ರಶ್ನೆಪತ್ರಿಕೆಗಳು ಹಾಗೂ ಕೀ–ಉತ್ತರಗಳನ್ನು ಬಹಿರಂಗಪಡಿಸದಿರುವುದಕ್ಕೆ ಸಂಬಂಧಿಸಿದ ನೀತಿಯ ಹಿಂದಿರುವ ತರ್ಕ ಏನೆಂಬುದು ಅರ್ಥವಾಗುತ್ತಿಲ್ಲ' ಎಂದು ನ್ಯಾಯಮೂರ್ತಿಗಳಾದ ಪಿ.ಎಸ್‌. ನರಸಿಂಹ ಹಾಗೂ ವಿಜಯ ಬಿಷ್ಣೋಯಿ ಅವರು ಇದ್ದ ನ್ಯಾಯಪೀಠ ಹೇಳಿತು.

'ಇಂತಹ ನಿರ್ಧಾರ ಕೈಗೊಳ್ಳುವುದಕ್ಕೆ ಸಮರ್ಥನೆ ಏನು ಎಂಬುದನ್ನು ತಿಳಿದುಕೊಳ್ಳಬೇಕಿದೆ. ಈ ವಿಚಾರ ನಮಗೆ ಸಂಪೂರ್ಣವಾಗಿ ಮನವರಿಕೆ ಆಗುತ್ತಿಲ್ಲ. ಹೀಗಾಗಿ, ಈ ಅರ್ಜಿಗಳ ಕುರಿತು ಸಮಗ್ರ ವಿಚಾರಣೆ ನಡೆಸಲಾಗುವುದು' ಎಂದೂ ಪೀಠವು ಹೇಳಿದೆ.

ಈ ಹಿಂದೆ, ಸುಪ್ರೀಂಕೋರ್ಟ್‌ಗೆ ಎನ್‌ಬಿಇ ಈ ಕುರಿತು ಪ್ರಮಾಣಪತ್ರ ಸಲ್ಲಿಸಿತ್ತು.

ಯುಜಿಸಿ ನಿಯಮದ ವಿರುದ್ಧ ಸುಪ್ರೀಂಗೆ

ಕಾಲೇಜು, ವಿವಿ ಕ್ಯಾಂಪಸ್‌ಗಳಲ್ಲಿ ಜಾತಿ ತಾರತಮ್ಯ ತಡೆಯಲು ಸಮಿತಿ ರಚನೆ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಹೋಗಲಾಡಿಸಲು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ) ಜಾರಿಗೆ ತಂದಿರುವ ಹೊಸ ನಿಯಮದಲ್ಲಿ (ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆ ಉತ್ತೇಜಿಸುವ ನಿಯಮ –2026) 'ಜಾತಿ ತಾರತಮ್ಯದ ವ್ಯಾಖ್ಯಾನ'ವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಯುಜಿಸಿ ಹೊಸ ನಿಯಮ 3 (ಸಿ) ಅನ್ವಯ, ಜಾತಿ ಆಧಾರಿತ ತಾರತಮ್ಯ ತಡೆಯಲು ಕಾಲೇಜು ಕ್ಯಾಂಪಸ್‌ಗಳಲ್ಲಿ, ವಿಶ್ವವಿದ್ಯಾಲಯದಲ್ಲಿ ಸಮಾನ ಅವಕಾಶ ಕೇಂದ್ರಗಳು (ಇಒಸಿ), ಸಮಾನತೆ ಸಮಿತಿ, ಓಂಬುಡ್ಸ್‌ಮನ್, ಸಹಾಯವಾಣಿ ಸ್ಥಾಪಿಸುವುದರ ಬಗ್ಗೆ ಪ್ರಸ್ತಾಪಿಸಲಾಗಿದೆ. ಆದರೆ, ಈ ಸೌಲಭ್ಯದ ವ್ಯಾಪ್ತಿಯನ್ನು ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡ (ಎಸ್‌ಟಿ) ಮತ್ತು ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮಾತ್ರ ಸೀಮಿತಗೊಳಿಸಲಾಗಿದೆ. ಈ ನಿಯಮವು ಮೀಸಲಾತಿ ವರ್ಗದಡಿ ಸೇರದ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರನ್ನು ರಕ್ಷಿಸುವಲ್ಲಿ ವಿಫಲವಾಗಿದೆ ಎಂದು ಅರ್ಜಿದಾರ ವಿನೀತ್ ಜಿಂದಾಲ್ ದೂರಿದ್ದಾರೆ.

'ಹೊಸ ನಿಯಮದ ಮೂಲಕ ಯುಜಿಸಿಯು, ಸಾಮಾನ್ಯ ವರ್ಗದಡಿ ಬರುವ ವ್ಯಕ್ತಿಗಳಿಗೆ ಸಾಂಸ್ಥಿಕ ರಕ್ಷಣೆಯನ್ನು ಮತ್ತು ಅವರ ಕುಂದುಕೊರತೆಗಳಿಗೆ ಪರಿಹಾರವನ್ನು ಸ್ಪಷ್ಟವಾಗಿ ನಿರಾಕರಿಸಿದೆ' ಎಂದು ಆರೋಪಿಸಿದ್ದಾರೆ.

'ಮೀಸಲಾತಿ ವರ್ಗದಡಿ ಸೇರದವರು ತಮ್ಮ ಜಾತಿ ಹೆಸರಿನಲ್ಲಿ ಕಿರುಕುಳ ಅಥವಾ ತಾರತಮ್ಯ ಎದುರಿಸುವ ಸಾಧ್ಯತೆ ಇರುತ್ತದೆ. ಈ ನಿಯಮ ಅಸಾಂವಿಧಾನಿಕ ಮತ್ತು ಸಂವಿಧಾನದ 14ನೇ ವಿಧಿ (ಸಮಾನತೆಯ ಹಕ್ಕು), 15 (1) ವಿಧಿ (ಜಾತಿ ಆಧಾರಿತ ತಾರತಮ್ಯ ನಿಷೇಧ) ಮತ್ತು 21ನೇ ವಿಧಿಯನ್ನು (ಜೀವಿಸುವ ಹಕ್ಕು) ಉಲ್ಲಂಘಿಸುತ್ತದೆ ಎಂದೂ ಕೋರ್ಟ್‌ಗಮನಕ್ಕೆ ತರಲಾಗಿದೆ.

ಯುಜಿಸಿ ರೂಪಿಸಿರುವ ನಿಯಮಗಳಿಗೆ ತಡೆ ನೀಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಜಾತಿ ತಾರತಮ್ಯದ ಹೆಸರಿನಲ್ಲಿ ಕಿರುಕುಳ ನೀಡಲು, ನಿಯಮಗಳನ್ನು ದುರುಪಯೋಗಪಡಿಸಿಕೊಳ್ಳಲು ಯಾರಿಗೂ ಅವಕಾಶ ನೀಡುವುದಿಲ್ಲ

ಧರ್ಮೇಂದ್ರ ಪ್ರಧಾನ್, ಕೇಂದ್ರ ಶಿಕ್ಷಣ ಸಚಿವ

ವಿದ್ಯಾರ್ಥಿಗಳ ಪ್ರತಿಭಟನೆ

ಯುಜಿಸಿ ಜಾರಿಗೊಳಿಸಿರುವ ಹೊಸ ನಿಯಮವನ್ನು ಸಂಪೂರ್ಣವಾಗಿ ವಾಪಸ್ ಪಡೆಯುವಂತೆ ಆಗ್ರಹಿಸಿ ವಿದ್ಯಾರ್ಥಿ ಸಂಘಟನೆಗಳು ನವದೆಹಲಿಯಲ್ಲಿನ ಯುಜಿಸಿ ಪ್ರಧಾನ ಕಾರ್ಯಾಲಯದ ಎದುರು ಪ್ರತಿಭಟನೆ ನಡೆಸಿದರು. 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಿಟಿ ಮ್ಯಾಜಿಸ್ಟ್ರೇಟ್ ರಾಜೀನಾಮೆ

ಬರೇಲಿ/ಉತ್ತರ ಪ್ರದೇಶ (ಪಿಟಿಐ): 'ಈಗಾಗಲೇ ರಾಜೀನಾಮೆ ಸಲ್ಲಿಸಿದ್ದೇನೆ, ಅಮಾನತಿನ ಬಗ್ಗೆ ಹೇಳುವುದಕ್ಕೆ ಏನೂ ಇಲ್ಲ' ಎಂದು ಬರೇಲಿ ಸಿಟಿ ಮ್ಯಾಜಿಸ್ಟ್ರೇಟ್ ಅಲಂಕಾರ್ ಅಗ್ನಿಹೋತ್ರಿ ಹೇಳಿದ್ದಾರೆ.

ಅಶಿಸ್ತಿನ ವರ್ತನೆ ಮತ್ತು ಸರ್ಕಾರದ ನೀತಿಗಳನ್ನು, ವಿಶೇಷವಾಗಿ ಹೊಸ ಯುಜಿಸಿ ನಿಯಮವನ್ನು ಟೀಕಿಸಿದ್ದರಿಂದ ಅಗ್ನಿಹೋತ್ರಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರ ಮಂಗಳವಾರ ಹೇಳಿದೆ.

ಅಮಾನತಿಗೆ ಮೊದಲೇ ರಾಜೀನಾಮೆ ನೀಡಿದ್ದಾಗಿ ಅಗ್ನಿಹೋತ್ರಿ ಹೇಳಿದ್ದಾರೆ. 'ಸರ್ಕಾರದ ನೀತಿಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಇದೆ. ಮುಖ್ಯವಾಗಿ ಯುಜಿಸಿ ಹೊಸ ನಿಯಮದ ಮೂಲಕ ಕ್ಯಾಂಪಸ್‌ಗಳಲ್ಲಿ ಜಾತಿ ಆಧಾರಿತ ತಾರತಮ್ಯ ಎಸಗಲು ಮುಂದಾಗಿದೆ. ತಮ್ಮ ವಿರುದ್ಧ ಪಿತೂರಿ ನಡೆಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಐರೋಪ್ಯ ಒಕ್ಕೂಟದೊಂದಿಗೆ ಭಾರತದ ಮುಕ್ತ ವ್ಯಾಪಾರ ಒಪ್ಪಂದವು ಅಮೆರಿಕದ ಸುಂಕದ ಭಾರವನ್ನು ಇಳಿಸಲಿದೆಯೇ?

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕರ್ನಾಟಕ ಸರ್ಕಾರ (ಪೊಲೀಸ್ ಇಲಾಖೆ)
ಪೊಲೀಸ್ ಮಹಾನಿರೀಕ್ಷಕರು, ಪೂರ್ವ ವಲಯ ಕಛೇರಿ, ದಾವಣಗೆರೆ–577006
ದೂರವಾಣಿ ಸಂಖ್ಯೆ:08192–237829 ಮತ್ತು 237830.
ಸಂಖ್ಯೆ:68/ಸಂಗ್ರಹ/ಪೂವ//2025–26, ದಿನಾಂಕ:27/01/2026

ಇ–ಟೆಂಡರ್ ಪ್ರಕಟಣೆ

ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ ಕಛೇರಿ, ದಾವಣಗೆರೆಗೆ SUPPLY AND MAINTENANCE OF UNMANNED AERIAL VEHICLE (DRONE) WITH ACCESSORIES ಗಳನ್ನು ಇ–ಪ್ರೋಕ್ಯೂರ್‌ಮೆಂಟ್ [www.kppp.karnataka.gov.in] ಮುಖಾಂತರ ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ನಿಯಮಗಳು 2000ರ ಪ್ರಕಾರ 02 ಲಕೋಟೆ ಪದ್ಧತಿಯಲ್ಲಿ ಖರೀದಿಸಲು ಈ ಕೆಳಕಂಡಂತೆ ಇ–ಟೆಂಡರ್ ಆಹ್ವಾನಿಸಲಾಗಿದೆ.

ವಿವರ:–SUPPLY AND MAINTENANCE OF UNMANNED AERIAL VEHICLE (DRONE) WITH ACCESSORIES FOR FOR INSPECTOR GENERAL OF POLICE, EASTERN RANGE DAVANAGERE KARNATAKA STATE

ಅಂದಾಜು ಮೊತ್ತ ರೂ.1,00,00,000/– ಇಎಂಡಿ ಮೊತ್ತ (ರೂ.ಗಳಲ್ಲಿ) 2,00,000/–

(1) Tender Reference No and date No:68/Store/IGP/ER/2025-26, Date: 27/01/2026 **(2)** Tender Amount Rs.1,00,00,000/- **(3)** Date and Time for Pre-bid meeting Date: 02/02/2026, 11.30 HRS **(4)** Last date & Time for submission of Tender Date: 10/02/2026, 17.30 HRS **(5)** Date & Time of opening of Technical bid Date: 13/02/2026, 11.30 HRS **(6)** Date of demonstration Date: 18/02/2026, 12.00 HRS **(7)** Tentative Date & Time of opening of Commercial bid Date: 23/02/2026, 11.00 HRS **(8)** EMD Amount Rs. 2,00,000/- **(9)** Venue of pre-bid meeting and opening of tenders & address for communication OFFICE OF THE INSPECTOR GENERAL OF POLICE, EASTERN RANGE, DAVANGERE. POLICE BHAVANA, DEVRAJ URS LAYOUT, C-BLOCK, KONDAJJI ROAD, DAVANGERE. Phone:08192-237830, Email: igper@ksp.gov.in & storeigper@ksp.gov.in

ಹೆಚ್ಚಿನ ಮಾಹಿತಿಗಾಗಿ ಇ–ಟೆಂಡರ್ ಮೂಲಕ ಖರೀದಿಸಲು ಇ–ಪ್ರೋಕ್ಯೂರ್‌ಮೆಂಟ್ [www.kppp.karnataka.gov.in] ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– [ಡಾ॥ಬಿ.ಆರ್.ರವಿಕಾಂತೇಗೌಡ, ಐಪಿಎಸ್]
ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ ಮತ್ತು ಅಧ್ಯಕ್ಷರು, ಟೆಂಡರ್ ಆಹ್ವಾನ ಸಮಿತಿ.
ವಾಸಾಇ/ಡಿವಿಜಿ/683/ ಕೆಎಸ್‌ಎಂಸಿಎ/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, 5ನೇ ಮಹಡಿ, ನಂ.5, 1ನೇ ಹಂತ, 1ನೇ ಘಟ್ಟ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು – 560029

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸಂಖ್ಯೆ: **KWB/TEC/CE(B)/PAVAGADA SPL-T-AMRUT 2.0 /1644/2025-26, Dated: 22.01.2026**

ಕಾಮಗಾರಿಯ ಹೆಸರು: ಅಮೃತ್ 2.0 ಯೋಜನೆಯ ಅಡಿಯಲ್ಲಿ DBOT ಮಾದರಿಯ ಮೂಲಕ, ಪಾವಗಡ ಪಟ್ಟಣಕ್ಕೆ (RWSSD ಟ್ಯಾಪಿಂಗ್ ಪಾಯಿಂಟ್) ತುಂಗಭದ್ರಾ ಅನೆಕಟ್ಟಿನ ಮೂಲದಿಂದ ಸುಧಾರಿತ ನೀರು ಸರಬರಾಜು ಯೋಜನೆ ಒದಗಿಸುವ ಕಾಮಗಾರಿ, 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (1 ವರ್ಷದ DLP) ಒಳಗೊಂಡಂತೆ.

ಇಂಡೆಂಟ್ ಸಂಖ್ಯೆ: **KUWSDB/2025-26/WS/WORK_INDENT480**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in**ನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು (ಬೆಂ), ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ಡಿಐಪಿಆರ್/ಸಿಪಿ/5219/ಸಿಸಿಎಲ್/2025–26

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
No:SABVMCRI/E-TENDER/MANIFOLD/13/2025-26 Date:27.01.2026

ಟೆಂಡರ್ ಅಧಿಸೂಚನೆ

ವಿಷಯ: ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ ಅಧೀನದಲ್ಲಿ ಬರುವ ಆಸ್ಪತ್ರೆಯಲ್ಲಿರುವ ಅನಿಲ ಪೈಪ್‌ಲೈನ್ ಮತ್ತು ಮ್ಯಾನಿಫೋಲ್ಡ್ ವ್ಯವಸ್ಥೆಗಳ ನಿರ್ವಹಣೆಗಾಗಿ ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ

1. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ: 27.01.2026 2. ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: 04.02.2026 ರ ಸಂಜೆ 05.30 ಗಂಟೆವರೆಗೆ. 3. ಪ್ರೀ ಬಿಡ್ ಮೀಟಿಂಗ್ ದಿನಾಂಕ : 05.02.2026 ರ ಬೆಳಿಗ್ಗೆ 11.00 ಗಂಟೆಗೆ. 4. ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 10.02.2026 ರ ಸಂಜೆ 05.30 ಗಂಟೆವರೆಗೆ. 5. ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): 12.02.2026 ರ ಬೆಳಗ್ಗೆ 11.00 ಗಂಟೆ.

ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್ ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ, ಬೆಂಗಳೂರು
DIPR/CP/5216/Zen/2025-26

ಮಂಗಳೂರು ಮಹಾನಗರಪಾಲಿಕೆ
DMA/E Tender 22063/2025-26/EE-3 ದಿನಾಂಕ: 27.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ಅಧೀನದಲ್ಲಿರುವ ತುಂಬೆ ಹೆಚ್.ಎಲ್.ಪಿ.ಎಸ್–2 (ರಾಮಲ್ ಕಟ್ಟೆ) ಸ್ಥಾವರದ ಪಂಪ್ ಸಂಖ್ಯೆ 3ನ್ನು ಇಲೆಕ್ಟ್ರೋ ಮೆಕ್ಯಾನಿಕಲ್ ಉಪಕರಣಗಳಿಂದ ಮೇಲ್ದರ್ಜೆಗೆರಿಸುವ ಕಾಮಗಾರಿಯನ್ನು **2023–24ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನದಲ್ಲಿ** ನಿರ್ವಹಿಸುವ ಬಗ್ಗೆ ಅಂದಾಜುಪಟ್ಟಿ ಮೊತ್ತ ರೂ.190.00 ಲಕ್ಷಗಳು **WORK INDENT NO. 22063/Call-3** ಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 11.02.2026 ಅಪರಾಹ್ನ 4.00 ಗಂಟೆ**. ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು
DIPR/DK/KSMCA/1474/25-26 dt: 27.01.2026

ಕರ್ನಾಟಕ ಸರ್ಕಾರ
ಆಯುಕ್ತರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಭೂಸ್ವಾಧೀನ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ ಬಾಗಲಕೋಟರವರ ಕಾರ್ಯಾಲಯ – 587103
ದೂರವಾಣಿ :08354–200462 Email : gmlaqukp1@gmail.com
ಕ್ರಸಂ:ಸಿಓಎಂ/ಇಎಸ್‌ಟಿ/ವಿಅನೇ/18–19/ವಿನಿವ–55ಎ/23–24/850 ದಿನಾಂಕ 12–01–2026.

–: ನಿವೃತ್ತ ನ್ಯಾಯಾಧೀಶರವರಿಂದ ಅರ್ಜಿ ಆಹ್ವಾನ :–

ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ವಿಶೇಷ ಅಧಿಕಾರಿಗಳು, ಕಾನೂನು ಕೋಶ ಮತ್ತು ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿಗಳು, ಕಾನೂನು ಇಲಾಖೆ, ಕೃಷ್ಣಾ ಮೇಲ್ದಂಡೆ ಯೋಜನೆ ಬಾಗಲಕೋಟೆ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು 65 ವರ್ಷದೊಳಗಿನ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಥವಾ ನಿವೃತ್ತ ಹಿರಿಯ ಸಿವ್ಹಿಲ್ ನ್ಯಾಯಾಧೀಶರವರಿಂದ ಅರ್ಜಿ ಆಹ್ವಾನಿಸಲಾಗಿದೆ. ಹುದ್ದೆಗೆ ಆಯ್ಕೆ ಆದವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು–1958ರ ನಿಯಮ–313(ಬಿ) ಪ್ರಕಾರ ಮಾಸಿಕ ಸಂಚಿತ ವೇತನ ನಿಗಧಿಗೊಳಿಸಲಾಗುವುದು. ನೇಮಕಾತಿ ಅವಧಿ ಒಂದು ವರ್ಷ ಇರುತ್ತದೆ.

ಇಚ್ಛೆಯುಳ್ಳ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಥವಾ ನಿವೃತ್ತ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಪತ್ರಿಕಾ ಪ್ರಕಟಣೆ ಆದ 15 ದಿನಗಳ ಒಳಗಾಗಿ ನೇರವಾಗಿ ಆಯುಕ್ತರು, ಪುಪು/ಭೂಸ್ವಾಧೀನ, ಕೃ.ಮೇ.ಯೋ, ಬಾಗಲಕೋಟೆ ಇವರ ಕಾರ್ಯಾಲಯಕ್ಕೆ / E-mail Id: gmlaqukp1@gmail.com ವಿಳಾಸಕ್ಕೆ ತಮ್ಮ ಸ್ವ–ವಿವರ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಕಛೇರಿ ಟಿಪ್ಪಣೆ ಮಾನ್ಯ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ.

ಸಹಿ/–ಮಹಾ ವ್ಯವಸ್ಥಾಪಕರು ಪು ಮತ್ತು ಪು/ಭೂಸ್ವಾಧೀನ, ಕೃ.ಮೇ.ಯೋ, ಬಾಗಲಕೋಟೆ.
DIPR/BGK/RO-NO-528/KSMCA/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಕನೀನಿನಿ. ಮಎಕಾನಿ, ವಿಭಾಗ ನಂ.1 ರಾಮದುರ್ಗ

ಟೆಂಡರ್ ಪ್ರಕಟಣೆ ಕರೆ

ಉಲ್ಲೇಖ:ಕಾ.ಇಂ/ಕನೀನಿನಿ/ಮಎಕಾನಿ, ವಿ–1/ಡಿ.ಬಿ/ಟೆಂಪ್ರ/8.ಟ್ಯಾಂಕ ಫಿಲ್ಲಿಂಗ್/ಸಂಖ್ಯೆ:1845, ದಿ :23/01/2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ., ಮಎಕಾನಿ, ವಿಭಾಗನಂ.1 ರಾಮದುರ್ಗ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯೂ–IV ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. 8 ಟ್ಯಾಂಕ ಫಿಲ್ಲಿಂಗ್ ಸ್ಟೇಜ್–I ಟರ್ನ–ಕೀ ಆಧಾರಿತ ಕಾಮಗಾರಿಗೆ (ಕಾಮಗಾರಿಯ ಇಂಡೆಂಟ್ ನಂಬರ 3924) ಟೆಂಡರ್ ಕರೆಯಲಾಗಿದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ. 39.22 ಕೋಟಿ ಇರುತ್ತದೆ.

(ಜಿಎಸ್‌ಟಿ ಹೊರತುಪಡಿಸಿ) (ಒಟ್ಟು ಕಾಮಗಾರಿ–1) ಇ ಎಂ ಡಿ ಮೊತ್ತವು ಕೆ.ಪಿ.ಪಿ. ಪೋರ್ಟಲ್ ನಲ್ಲಿ ಪ್ರಕಟಿಸಲಾಗಿರುತ್ತದೆ.

1:ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ:23/01/2026 ರಿಂದ 25/02/2026 ರವರೆಗೆ 17.00 ಗಂಟೆಗೆ ಸಾಯಂಕಾಲ,2:ಪ್ರೀ ಬಿಡ್ ಮೀಟಿಂಗ್ (ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಾಫೀ ಬೋರ್ಡ ಬಿಲ್ಡಿಂಗ್ ಬೆಂಗಳೂರು ಕಚೇರಿಯಲ್ಲಿ ಕರೆಯಲಾಗಿದೆ.):02/02/2026 12.30 ಗಂಟೆಗೆ ವರೆಗೆ, 3:ಟೆಂಡರ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ದಿನಾಂಕ (ಕಾನಿಇಂ ಕನೀನಿನಿ, ಮಎಕಾನಿ ವಿಭಾಗ ನಂ.1 ರಾಮದುರ್ಗ) :10/02/2026 ರವರೆಗೆ 17.00 ಗಂಟೆಗೆ ಸಾಯಂಕಾಲ ವರೆಗೆ, 4:ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 26/02/2026 ಸಾಯಂಕಾಲ 17:30 ಗಂಟೆಯ ನಂತರ, 5:ಆರ್ಥಿಕ ಬಿಡ್‌ತೆರೆಯುವ ದಿನಾಂಕ:05/03/2026 ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ, 6:ಕಾಲಾವಧಿ:18 ತಿಂಗಳು (ಮಳೆಗಾಲ ಸಹಿತ), 7:ಇ.ಎಂ.ಡಿ ಮೊತ್ತ: 0.392 ಕೋಟಿ.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಪೋನ್:– 08335– 242143

ಸಹಿ/–(ಎಸ್. ವಾಯ್. ಹೊಕ್ರಾಣಿ)
ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ಮಎಕಾನಿ, ವಿಭಾಗ ನಂ.1 ರಾಮದುರ್ಗ
DIPR/BGM/RO-NO-1700/KSMCA/2025-26

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ನಾವು ಅಜ್ಞಾನ ಮತ್ತು ಅಧರ್ಮದಿಂದ ಬಿಡುಗಡೆ, ಸ್ವಾತಂತ್ರ್ಯ ಪಡೆಯಬೇಕಿದೆ.

–ಬಿ.ಎಂ. ಶ್ರೀಕಂಠಯ್ಯ

ಸಂಪಾದಕೀಯ

ಬೈಕ್ ಟ್ಯಾಕ್ಸಿ ಸೇವೆ: ನಿರ್ಬಂಧ ರದ್ದು ಸಮಗ್ರ ನಿಯಮಾವಳಿ ರೂಪುಗೊಳ್ಳಲಿ

ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆಗೆ ಹೇರಲಾಗಿದ್ದ ನಿರ್ಬಂಧವನ್ನು ತೆರವುಗೊಳಿಸಿರುವ ಕರ್ನಾಟಕ ಹೈಕೋರ್ಟ್ ತೀರ್ಪು ಸ್ವಾಗತಾರ್ಹ. ಸಂಚಾರ ದಟ್ಟಣೆ ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಕೊರತೆಯಿಂದ ಉಸಿರುಗಟ್ಟಿರುವ ಬೆಂಗಳೂರಿನ ಮಹಾನಗರಕ್ಕೆ ಅಗತ್ಯವಾಗಿದ್ದ ಮತ್ತೊಂದು ಸಾರ್ವಜನಿಕ ಸಂಚಾರ ಆಯ್ಕೆಯನ್ನು ಈ ತೀರ್ಪು ಮತ್ತೆ ಸಕ್ರಿಯಗೊಳಿಸಿದೆ; ಬೈಕ್ ಟ್ಯಾಕ್ಸಿ ಚಾಲಕರ ಜೀವನೋಪಾಯದ ಅವಕಾಶವನ್ನು ರಕ್ಷಿಸುವಂತಿದೆ. ಬೈಕ್ ಟ್ಯಾಕ್ಸಿ ಸೇವೆಗಳಿಗೆ ಬಳಸುವ ಮೋಟಾರು ಸೈಕಲ್‌ಗಳು, ಮೋಟಾರು ವಾಹನಗಳ ಕಾಯ್ದೆ–1988ರ ಅಡಿಯಲ್ಲಿ ಸಾರಿಗೆ ವಾಹನಗಳ ವ್ಯಾಖ್ಯಾನಕ್ಕೆ ಒಳಪಡುತ್ತವೆ ಎಂದು ಹೈಕೋರ್ಟ್‌ನ ವಿಭಾಗೀಯ ಪೀಠ ಸ್ಪಷ್ಟಪಡಿಸಿದೆ. ಬೈಕ್ ಟ್ಯಾಕ್ಸಿಗಳನ್ನು ಸಂಪೂರ್ಣವಾಗಿ ನಿರ್ಬಂಧಿಸುವುದು, ಅವುಗಳ ಚಾಲನೆಯನ್ನು ವೃತ್ತಿಯನ್ನಾಗಿ ಮಾಡಿಕೊಳ್ಳುವವರ ಸಾಂವಿಧಾನಿಕ ಹಕ್ಕಿಗೆ ವಿರುದ್ಧವಾದ ನಿರ್ಬಂಧವಾಗಿದೆ ಎಂದೂ ಕೋರ್ಟ್ ಹೇಳಿದೆ. ಇದಕ್ಕೆ ಮುನ್ನ, ಮೋಟಾರು ವಾಹನಗಳ ಕಾಯ್ದೆ–1988ರ ಅನ್ವಯ ಮಾರ್ಗಸೂಚಿ ಮತ್ತು ನಿಯಮಗಳನ್ನು ರೂಪಿಸುವವರೆಗೆ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆ ನಡೆಸುವಂತಿಲ್ಲ ಎಂದು ಏಕಸದಸ್ಯ ನ್ಯಾಯಪೀಠ ಆದೇಶಿಸಿತ್ತು. ಆ ಆದೇಶದಿಂದಾಗಿ ಲಕ್ಷಾಂತರ ಬೈಕ್ ಸವಾರರ ದುಡಿಮೆಯ ದಾರಿ ಅನಿಶ್ಚಿತಗೊಂಡಿತ್ತು. ಅದೇ ಸಮಯದಲ್ಲಿ, ಕೈಗೆಟುಕುವ ದರದಲ್ಲಿ ತ್ವರಿತ ಸಂಚಾರದ ಸೇವೆಯ ಆಯ್ಕೆಯಿಂದ ಪ್ರಯಾಣಿಕರು ವಂಚಿತರಾಗಿದ್ದರು. ಆಟೊ ರಿಕ್ಷಾಗಳ ಸೇವೆಯಲ್ಲಿ ಸಾಕಷ್ಟು ಸಮಸ್ಯೆಗಳಿರುವುದರಿಂದ, ಬೈಕ್ ಟ್ಯಾಕ್ಸಿಗಳು ವಾಸ್ತವಿಕ ಅಗತ್ಯವಾಗಿ ಪ್ರಯಾಣಿಕರಿಗೆ ಕಾಣಿಸುತ್ತಿವೆ.

ಬೈಕ್ ಟ್ಯಾಕ್ಸಿ ನಿಷೇಧದ ಹಿನ್ನೆಲೆಯನ್ನು ಗಮನಿಸಿದರೆ ಆಡಳಿತದ ವೈಫಲ್ಯ ಸ್ಪಷ್ಟವಾಗಿ ಗೋಚರಿಸುತ್ತದೆ. ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಯೋಜನೆಯನ್ನು ರಾಜ್ಯ ಸರ್ಕಾರ 2021ರಲ್ಲೇ ಪ್ರಕಟಿಸಿದೆ. ನಂತರದಲ್ಲಿ, ಕೇಂದ್ರ ಸರ್ಕಾರವು ಕೂಡ ಬೈಕ್ ಟ್ಯಾಕ್ಸಿಯಂಥ ಸೇವೆಗಳಿಗೆ ಪ್ರೋತ್ಸಾಹ ಹಾಗೂ ಅನುಮತಿ ನೀಡಲು ಅಗತ್ಯವಾದ ಮಾರ್ಗಸೂಚಿಗಳನ್ನು ಹೊರಡಿಸಿತು. ಆದರೆ, ಆ ಮಾರ್ಗಸೂಚಿಗಳನ್ನು ತನ್ನ ನಿಯಂತ್ರಣದ ಚೌಕಟ್ಟಿಗೆ ಅಳವಡಿಸಿಕೊಳ್ಳದ ರಾಜ್ಯ, ಕೋರ್ಟ್ ಮುಂದೆಯೂ ತನ್ನ ಸ್ಪಷ್ಟ ನಿಲುವು ವ್ಯಕ್ತಪಡಿಸುವಲ್ಲಿ ವಿಫಲವಾಯಿತು. ಬೈಕ್ ಟ್ಯಾಕ್ಸಿಗಳಿಗೆ ಸಂಬಂಧಿಸಿದಂತೆ ತನ್ನ ಬಳಿ ಯಾವುದೇ ನೀತಿ ಇಲ್ಲವೆಂದೂ, ಅಂತಹ ನೀತಿಯನ್ನು ರೂಪಿಸುವ ಉದ್ದೇಶವೂ ಇಲ್ಲವೆಂದು ನ್ಯಾಯಾಲಯಕ್ಕೆ ತಿಳಿಸಿತು. ಪ್ರಸ್ತುತ, ಬೈಕ್ ಟ್ಯಾಕ್ಸಿಗಳು ರಸ್ತೆಗೆ ಮರಳಿರುವುದರಿಂದ, ಯಾವುದೇ ಮಾರ್ಗಸೂಚಿ ಇಲ್ಲದ ಸ್ಥಿತಿಯಲ್ಲಿಯೇ ಅವುಗಳು ಕಾರ್ಯಾಚರಣೆ ನಡೆಸಬೇಕಾಗಿದೆ; ಪ್ರಯಾಣಿಕರು ಕೂಡ ಸ್ಪಷ್ಟವಾದ ಸುರಕ್ಷತಾ ನಿಯಮಗಳ ಗೈರುಹಾಜರಿಯಲ್ಲಿಯೇ ಆ ಸೇವೆಯನ್ನು ಬಳಸಬೇಕಾಗಿದೆ.

ಬೈಕ್ ಟ್ಯಾಕ್ಸಿಗಳ ಸೇವೆಗೆ ಹೈಕೋರ್ಟ್ ಹಸಿರು ನಿಶಾನೆ ತೋರಿಸಿದೆ. ಈಗ ಅವುಗಳ ಕಾರ್ಯಾಚರಣೆಗೆ ಸಂಬಂಧಿಸಿದ ಸಮಗ್ರ ನಿಯಮಾವಳಿಯನ್ನು ಸರ್ಕಾರ ವಿಳಂಬವಿಲ್ಲದೆ ಸಿದ್ಧಪಡಿಸಬೇಕಾಗಿದೆ.

ನ್ಯಾಯಾಲಯದ ತೀರ್ಪಿನಿಂದ ಬೈಕ್ ಟ್ಯಾಕ್ಸಿಗಳಿಗೆ ಅಥವಾ ಅವುಗಳ ಚಾಲಕರಿಗೆ ಕಾನೂನಿನಿಂದ ಯಾವುದೇ ವಿನಾಯಿತಿ ದೊರೆಯುವುದಿಲ್ಲ. ಯಾವುದೇ ವಿಳಂಬವಿಲ್ಲದೆ ಸಮಗ್ರ ನಿಯಂತ್ರಣ ಸಂಹಿತೆಯೊಂದನ್ನು ರೂಪಿಸುವ ಅನಿವಾರ್ಯತೆ ಪ್ರಸ್ತುತ ಸರ್ಕಾರಕ್ಕೆ ಎದುರಾಗಿದೆ. ವಾಣಿಜ್ಯ ನೋಂದಣಿ, ಪರವಾನಗಿಗೆ ಸಂಬಂಧಿಸಿದ ಸ್ಪಷ್ಟ ಷರತ್ತುಗಳು ಮತ್ತು ಹಿಂಬದಿ ಸವಾರರಿಗೆ ವಿಮೆ ಕಲ್ಪಿಸುವುದನ್ನು ಆ ಸಂಹಿತೆ ಕಡ್ಡಾಯವಾಗಿ ಒಳಗೊಳ್ಳಬೇಕು. ಚಾಲಕನ ಪರಿಚಯ ಪತ್ರ, ಪೊಲೀಸ್ ಪರಿಶೀಲನೆ, ರಿಯಲ್ ಟೈಮ್ ಡಿಜಿಟಲ್ ಟ್ರ್ಯಾಕಿಂಗ್ ಮತ್ತು ಪರವಾನಗಿ ಪತ್ರವನ್ನು ವಾಹನದಲ್ಲಿ ಸುಲಭವಾಗಿ ಕಾಣುವಂತೆ ಪ್ರದರ್ಶಿಸುವುದು ಅಗತ್ಯ. ವಾಹನ ಚಾಲಕರು ಸಾಂಸ್ಥಿಕ ತರಬೇತಿ ಹೊಂದಿರುವುದೂ ಅಷ್ಟೇ ಮುಖ್ಯ. ರಸ್ತೆ ಸುರಕ್ಷತೆ, ಸುರಕ್ಷಿತ ಚಾಲನೆ, ಲಿಂಗಸೂಕ್ಷ್ಮತೆ ಹಾಗೂ ಪ್ರಥಮ ಚಿಕಿತ್ಸೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಪರವಾನಗಿ ನೀಡುವ ಮೊದಲು ಕಡ್ಡಾಯವಾಗಬೇಕು; ಪ್ರಯಾಣಿಕರ ದೂರುಗಳಿಗೆ ಸಂಬಂಧಿಸಿದಂತೆ ಚಾಲಕರಿಗೆ ಹೊಣೆಗಾರಿಕೆಯನ್ನೂ ನಿಗದಿಪಡಿಸಬೇಕು. ಬೈಕ್ ಟ್ಯಾಕ್ಸಿ, ಆಟೊ ಮತ್ತು ಕ್ಯಾಬ್ ಸೇವೆಗಳಿಗೆ ಸಂಬಂಧಿಸಿದಂತೆ ಏಕರೂಪದ ನಿಯಮಗಳನ್ನು ಅನ್ವಯಿಸುವ ಮೂಲಕ ಸಮಾನ ಅವಕಾಶಗಳು ದೊರೆಯುವಂತಾಗುವುದನ್ನು ಸರ್ಕಾರ ಖಚಿತಪಡಿಸಬೇಕು. ಬೈಕ್ ಟ್ಯಾಕ್ಸಿಗಳಿಗಿದ್ದ ಕಾನೂನು ಅಡಚಣೆಯನ್ನು ಹೈಕೋರ್ಟ್ ಮುಕ್ತಗೊಳಿಸಿದೆ. ಇದೀಗ, ಮಿತಿ ಮೀರಿ ಬೆಳೆದಿರುವ ನಗರಗಳಿಗೆ ತುರ್ತಾಗಿ ಬೇಕಾದ ಆಧುನಿಕ ಸಂಚಾರ ಸೇವಾವ್ಯವಸ್ಥೆಯ ನಿಯಂತ್ರಣ ತನಗೆ ಸಾಧ್ಯವೆನ್ನುವುದನ್ನು ಸರ್ಕಾರ ಸಾಬೀತುಪಡಿಸಬೇಕಾಗಿದೆ. ಸಾಂಪ್ರದಾಯಿಕ ಸಾರ್ವಜನಿಕ ಸೇವೆಯ ಏಕಸ್ವಾಮ್ಯಕ್ಕೆ ಎದುರಾಗಿರುವ ಆತಂಕದ ರೂಪದಲ್ಲಿ ನೋಡದೆ, ಸಂಯೋಜಿತ ನಗರ ಸಾರಿಗೆಯ ಅವಿಭಾಜ್ಯ ಅಂಗವಾಗಿ ಬೈಕ್ ಟ್ಯಾಕ್ಸಿಗಳನ್ನು ಒಪ್ಪಿಕೊಳ್ಳುವುದು ವರ್ತಮಾನದ ಅಗತ್ಯವಾಗಿದೆ.

ಪ್ರತಿಭೆಯನ್ನು ಪ್ರೀತಿಸಿ...

ಕೃಷ್ಣನ ಪಾತ್ರ ಮಾಡಿದವರು ಬೆಣ್ಣೆ ಮಾತ್ರ ತಿನ್ನಬೇಕು. ರಾಮನ ಪಾತ್ರ ಮಾಡಿದವರು ಕಾಡಿಗೆ ಹೋಗಬೇಕು ಎನ್ನುವುದು ಎಂತಹ ಅಜ್ಞಾನ? ಕಲಾವಿದನ ಪ್ರತಿಭೆಯನ್ನು ಪ್ರೀತಿಸಿ; ಅವರ ತಟ್ಟೆಯೊಳಗಿನ ಪದಾರ್ಥವನ್ನಲ್ಲ.

ಪಲ್ಲವಿ ಶಂಕರಮೂರ್ತಿ, ಪತ್ರಕರ್ತೆ, ‘ಫೇಸ್‌ಬುಕ್’ನಿಂದ

ಕಿಡಿನುಡಿ

‘ವಿಬಿ–ಜಿ ರಾಮ್ ಜಿ’ ಕಾಯ್ದೆ ಪ್ರಕಾರ ಗ್ರಾ.ಪಂ.ಗಳಿಗೆ ಯೋಜನೆ ರೂಪಿಸುವ ಅಧಿಕಾರವೇ ಇರುವುದಿಲ್ಲ. ಕೇಂದ್ರ ಸರ್ಕಾರದ ಅಧಿಕಾರಿಗಳೇ ದೆಹಲಿಯಲ್ಲಿ ಕುಳಿತು ಯೋಜನೆ ರೂಪಿಸಲಿದ್ದಾರೆ. ನರೇಗಾದ ಉದ್ದೇಶವನ್ನೇ ಬಿಜೆಪಿ ಸರ್ಕಾರ ಧ್ವಂಸಗೊಳಿಸಿದೆ.

ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ರಾಜ್ಯ ಉಸ್ತುವಾರಿ

25 ವರ್ಷಗಳ ಹಿಂದೆ

ಭಾನುವಾರ, 28-1-2001

• **ಭೂಕಂಪ: 16,000ಕ್ಕೂ ಹೆಚ್ಚು ಬಲಿ**

ಗಾಂಧಿನಗರ, ಜ. 27 (ಪಿಟಿಐ, ಯುಎನ್‌ಐ)– ಶುಕ್ರವಾರ ಬೆಳಿಗ್ಗೆ ಭೀಕರ ಭೂಕಂಪಕ್ಕೆ ಸಿಕ್ಕಿ ತತ್ತರಿಸಿರುವ ಗುಜರಾತಿನಲ್ಲಿ ಇಂದು ಇನ್ನಷ್ಟು ಲಘು ಕಂಪನಗಳು ಸಂಭವಿಸಿದ್ದು, ಸತ್ತವರ ಸಂಖ್ಯೆ 16,000ಕ್ಕೂ ಹೆಚ್ಚಾಗಿರುವ ಸಾಧ್ಯತೆಗಳಿವೆ. ಕುಸಿದುಬಿದ್ದ ಕಟ್ಟಡಗಳ ಅಡಿ ಇನ್ನೂ ಸಾವಿರಾರು ಮಂದಿ ಸಿಲುಕಿ ಹಾಕಿಕೊಂಡಿದ್ದು, ಅವರನ್ನು ಹೊರತೆಗೆಯುವ ಕಾರ್ಯ ಸಮರೋಪಾದಿಯಲ್ಲಿ ಸಾಗಿದೆ.

ಭೂಕಂಪಪೀಡಿತ ಕಚ್ ಜಿಲ್ಲೆಗೆ ಭೇಟಿ ನೀಡಿ ವಾಪಸಾಗಿರುವ ಗುಜರಾತಿನ ಮುಖ್ಯಮಂತ್ರಿ ಕೇಶುಭಾಯಿ ಪಟೇಲ್ ಅವರು, ಕಚ್ ಜಿಲ್ಲೆಯೊಂದರಲ್ಲೇ 15 ಸಾವಿರಕ್ಕೂ ಹೆಚ್ಚು ಜನರು ಸತ್ತಿರುವ ಶಂಕೆ ವ್ಯಕ್ತಪಡಿಸಿದರು.

• **ಕೃಷಿ ಪಂಪ್‌ಸೆಟ್‌ಗಳಿಗೆ ವಿನಾಯಿತಿ**

ಬೆಂಗಳೂರು, ಜ. 27– ರಾಜ್ಯದಲ್ಲಿ ಕಳೆದ ತಿಂಗಳ 29ರಿಂದ ಅನ್ವಯವಾಗುವಂತೆ ಜಾರಿಗೆ ಬಂದಿದ್ದ ವಿದ್ಯುತ್ ದರ ಏರಿಕೆಯಿಂದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿನಾಯಿತಿ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದ್ದು, ಈ ವಿನಾಯಿತಿ ಒಂದು ವರ್ಷದವರೆಗೆ ಜಾರಿಯಲ್ಲಿರುತ್ತದೆ.

75 ವರ್ಷಗಳ ಹಿಂದೆ

ಭಾನುವಾರ, 28-1-1951

• **‘ಕಾಂಗ್ರೆಸಿಗರ ಅಧಿಕಾರ ದುರುಪಯೋಗ’**

ತಿರುಚಿ, ಜ. 27– ಕಾಂಗ್ರೆಸ್ ಡೆಮೊಕ್ರಾಟಿಕ್ ರಂಗದ ಸಭೆಯು ನಿನ್ನೆ ಸಭೆ ಸೇರಿ, ತಮ್ಮ ಸ್ಥಾನ ಹಾಗೂ ಅಧಿಕಾರದ ದುರುಪಯೋಗದಿಂದ ಅಲ್ಪಕಾಲದಲ್ಲೇ ಆಶ್ಚರ್ಯಕರವಾಗಿ ಶ್ರೀಮಂತರಾದ ಕಾಂಗ್ರೆಸಿಗರ ಬಗ್ಗೆ ಸಾಕಷ್ಟು ಅಂಕಿಅಂಶಗಳನ್ನು ಕೂಡಿಸಲು ನಿಷ್ಪಕ್ಷಪಾತ ಸಮಿತಿಯೊಂದನ್ನು ಏರ್ಪಡಿಸಿ, ತಪ್ಪಿತಸ್ಥರೆಂದು ಕಂಡುಬಂದವರಿಗೆ ಮೂರು ವರ್ಷಗಳ ಕಾಲ ಯಾವ ಅಧಿಕಾರವನ್ನೂ ವಹಿಸದಂತೆ ನಿಷೇಧಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಪ್ರಾರ್ಥಿಸಿತು.

ಶ್ರೀ ಅರಬಿಂದೊ, ಸರದಾರ್ ಪಟೇಲ್ ಮತ್ತು ಶ್ರೀ ಠಕ್ಕರ್ ಬಾಪಾ ಅವರ ಮರಣದ ಬಗ್ಗೆ ಸಂತಾಪ ಸೂಚಿಸಿ ಸಮ್ಮೇಳನವು ನಿರ್ಣಯಗಳನ್ನು ಮಾಡಿತು.

ರೀಲ್ಸ್ ಕಾಲದಲ್ಲಿ ಮಕ್ಕಳ ಪುಸ್ತಕ

ವಿಶ್ಲೇಷಣೆ

ಯೋಗೇಂದ್ರ ಯಾದವ್

ವ್ಯಕ್ತಿತ್ವ ವಿಕಸನ ಕುರಿತು ತಮಾಷೆಯ ಪದ್ಯಗಳನ್ನು ಒಳಗೊಂಡ ಸಚಿತ್ರ ಪುಸ್ತಕ; ಮೈಥಿಲಿ ಎಂಬ ಹುಡುಗಿ ರಕ್ಕಸರೊಂದಿಗೆ ನಡೆಸುವ ಸಾಹಸಗಳ ಬಗೆಗಿನ ರೋಮಾಂಚಕಾರಿ ಚಿತ್ರಗಳ ಪುಸ್ತಕ; ಸೂರ್ಯನನ್ನು ಈಶಾನ್ಯ ಭಾಗದ ಮಹಿಳೆಯ ರೀತಿಯಲ್ಲಿ ಚಿತ್ರಿಸಿರುವ ಅದ್ಭುತ ಪುಸ್ತಕ; ಮಿಥ್ಯೆಗಳು, ಕಥೆಗಳು ಮತ್ತು ರೇಖಾಚಿತ್ರಗಳ ಮೂಲಕ ನದಿಗಳನ್ನು ಪರಿಚಯಿಸುವ ಕೃತಿ; ಆಧುನಿಕ ಭಾರತದ ಚಿತ್ರಕಾರನೊಬ್ಬನನ್ನು ಪರಿಚಯಿಸುವ ಬೆರಗು ಮೂಡಿಸುವ ಪುಸ್ತಕ.

ಎಲ್ಲ ವಯಸ್ಸಿನ ಮಕ್ಕಳಿಗೂ ಸೂಕ್ತವಾಗಬಹುದಾದ ಮತ್ತು ನಾವೀನ್ಯವುಳ್ಳ ಇಂತಹ ನೂರಾರು ಪುಸ್ತಕಗಳನ್ನು ರಾಷ್ಟ್ರ ರಾಜಧಾನಿಯಲ್ಲಿ ಇತ್ತೀಚೆಗೆ ನಡೆದ (ಜನವರಿ 10ರಿಂದ 18ರವರೆಗೆ) ‘ನವದೆಹಲಿ ವಿಶ್ವ ಪುಸ್ತಕ ಮೇಳ’ದಲ್ಲಿ ಕಾಣಬಹುದಾಗಿತ್ತು. ವಸ್ತುಪ್ರದರ್ಶನದಲ್ಲಿ ಈ ಭಾಗವನ್ನು ಸಭಾಂಗಣ 6ರಲ್ಲಿ ಆಯೋಜಿಸಲಾಗಿತ್ತು. ಬಹಳ ಯೋಚಿಸಿಯೇ ಇಂತಹ ನಿರ್ಧಾರ ಕೈಗೊಳ್ಳಲಾಗಿತ್ತು. ಮಕ್ಕಳಿಗೆ ಬೇಕಾಗಿರುವಂತೆಯೇ ಮಕ್ಕಳ ಪುಸ್ತಕಗಳಿಗೂ ಪ್ರತ್ಯೇಕವಾದ ಸ್ಥಳದ ಅಗತ್ಯ ಇದೆ. ಅಲ್ಲಿ ಹೆಜ್ಜೆ ಹಾಕಿದರೆ, ಗಿಲೀಟು, ಥಳಕು, ಅಲಂಕೃತ ಮಳಿಗೆಗಳು, ದೊಡ್ಡ ದೊಡ್ಡ ಪ್ರಕಾಶಕರ ಮಳಿಗೆಗಳು ಎಲ್ಲವನ್ನೂ ಕಾಣಬಹುದಾಗಿತ್ತು. ಹೊಳೆಹೊಳೆಯುವ ಆಮದು ಪುಸ್ತಕಗಳು, ಜನಪ್ರಿಯ ಇಂಗ್ಲಿಷ್ ಕಾದಂಬರಿಗಳು, ಅವೇ ಪಂಚತಂತ್ರ ಮತ್ತು ಅಮರ ಚಿತ್ರಕತೆ ಪುಸ್ತಕಗಳು, ಬೇಸರ ಬರಿಸುವ ಚಟುವಟಿಕೆಗಳು ಮತ್ತು ರೇಖಾಚಿತ್ರಗಳ ಪುಸ್ತಕಗಳು, ಮಕ್ಕಳಿಗೆ ಅತ್ಯುತ್ತಮ ಶ್ರೇಣಿಯ ಭರವಸೆ ಕೊಡುವ ರಾಶಿ ರಾಶಿ ಶೈಕ್ಷಣಿಕ ಪುಸ್ತಕಗಳನ್ನು ಕಂಡು ಪುಸ್ತಕ ಪ್ರೇಮಿಗಳು ಗಲಿಬಿಲಿಗೊಳ್ಳುವ ಅಗತ್ಯ ಇಲ್ಲ.

ಶೈಕ್ಷಣಿಕ ಪುಸ್ತಕಗಳು ನಿರುಪಯುಕ್ತ ಅಲ್ಲ, ಆದರೆ, ಇವುಗಳನ್ನು ನೀವು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಬಹುದು. ಅದಕ್ಕಾಗಿ ನೀವು ಪುಸ್ತಕ ಮೇಳಗಳಿಗೆ ಹೋಗುವ ಅಗತ್ಯ ಇಲ್ಲ. ಹೊಸ ಮತ್ತು ಸೃಜನಶೀಲ ಕೃತಿಗಳನ್ನು ನೋಡುವ ಉದ್ದೇಶದಿಂದ ನೀವು ಅಲ್ಲಿಗೆ ಹೋಗಬಹುದು. ವಿಡಿಯೊಗಳು ಮತ್ತು ರೀಲ್ಸ್‌ಗಳಿಂದ ಸುತ್ತುವರಿದಿರುವ ಮಕ್ಕಳಲ್ಲಿ ಓದುವ, ಬರೆಯುವ ಮತ್ತು ಕಲಿಯುವ ಅಭಿರುಚಿ ಮೂಡಿಸಲು ಬೇಕಾದ ಪುಸ್ತಕ ಹುಡುಕಿಕೊಂಡು ಪುಸ್ತಕ ಮೇಳಗಳಿಗೆ ಹೋಗಬಹುದು. ನಿಮ್ಮ ಮಕ್ಕಳು ಬೆಳೆಯುತ್ತಿರುವ ಸಂದರ್ಭದ ಇತಿಹಾಸ, ಮಿಥ್ಯೆಗಳು, ಕಥೆಗಳು ಮತ್ತು ಈ ವಿಶಾಲ ಉಪಖಂಡದ ನಿಜ ಜೀವನದ ಕುರಿತು ಅರಿವು ಮೂಡಿಸಲು ಅಲ್ಲಿಗೆ ಹೋಗಬಹುದು. ಕೃತಕ ಬುದ್ಧಿಮತ್ತೆಯೊಂದಿಗೆ ಬದುಕುತ್ತಿರುವ ಮಕ್ಕಳಲ್ಲಿ ಕೌತುಕ ಮತ್ತು ಸೃಜನಶೀಲತೆಯನ್ನು ಉದ್ದೀಪನಗೊಳಿಸಲು ಅಲ್ಲಿಗೆ ಹೋಗಬಹುದು. ಅಂದರೆ, ಭಾರತದ ಮಕ್ಕಳಿಗಾಗಿ ಭಾರತೀಯ ಭಾಷೆಯೊಂದರಲ್ಲಿ ರಚನೆಯಾಗಿರುವ ಭಾರತೀಯ ಪುಸ್ತಕಗಳಿಗಾಗಿ ನೀವು ಪುಸ್ತಕ ಮೇಳಗಳಿಗೆ ಹೋಗಬಹುದು.

ನಿಮಗೆ ಬೇಕಾಗಿರುವುದು ಇವೇ ಆಗಿದ್ದರೆ ಇಲ್ಲಿ ಕೆಲವು ಒಳ್ಳೆಯ ಸುದ್ದಿಗಳಿವೆ. ಭಾರತದ ಮಕ್ಕಳ ಸಾಹಿತ್ಯವು ಪುನರುಜ್ಜೀವನಗೊಳ್ಳುತ್ತಿದೆ. ಈ ಪ್ರಕ್ರಿಯೆ ಭಾರತದ ಇಂಗ್ಲಿಷ್ ಪುಸ್ತಕಗಳಿಂದ ಆರಂಭವಾಯಿತು. ಹಿಂದಿಯಲ್ಲಿ ನಾನು ನೋಡಿರುವುದರ ಆಧಾರದಲ್ಲಿ ಹೇಳುವುದಾದರೆ, ಭಾರತದ ಇತರ ಭಾಷೆಗಳಿಗೂ ಮಕ್ಕಳ ಸಾಹಿತ್ಯ ಸುಗ್ಗಿ ಪಸರಿಸುತ್ತಿದೆ. ಮಕ್ಕಳು ಮತ್ತು ಯುವಜನರ ಸಾಹಿತ್ಯದ ಬರಹಗಾರ, ಚಿತ್ರಕಾರ, ಪ್ರಕಾಶಕ ಆಗುವುದು ಈಗ ಸಡಗರದ ಸಂಗತಿ.

ಟಾಟಾ ಟ್ರಸ್ಟ್‌ನ ‘ಪರಾಗ್’ ಮಳಿಗೆಯ ಮೂಲಕ ನೀವು ಆರಂಭಿಸಬಹುದು. ಕಳೆದ ಐದು ವರ್ಷಗಳಲ್ಲಿ ಈ ಟ್ರಸ್ಟ್ ಪ್ರತಿವರ್ಷವೂ ‘ಪರಾಗ್ ಗೌರವ ಪಟ್ಟಿ’ಯನ್ನು ಪ್ರಕಟಿಸುತ್ತದೆ: ಅಂದರೆ, ಮಕ್ಕಳು ಮತ್ತು ಯುವಜನರಿಗಾಗಿ ಇಂಗ್ಲಿಷ್ ಮತ್ತು ಹಿಂದಿಯಲ್ಲಿರುವ ಅತ್ಯುತ್ತಮವಾದ ಪುಸ್ತಕಗಳ ಪಟ್ಟಿ. ಒಳ್ಳೆಯ ಸಂಗತಿ ಎಂದರೆ, ಈ ಟ್ರಸ್ಟ್ ಪುಸ್ತಕಗಳನ್ನು ಪ್ರಕಟಿಸುವುದಿಲ್ಲ; ಹಾಗಾಗಿ ಇತರ ಪ್ರಕಾಶಕರ ಜೊತೆಗೆ ಈ ಟ್ರಸ್ಟ್‌ಗೆ ಪೈಪೋಟಿ ಇಲ್ಲ. ವಿಶ್ವಾಸಾರ್ಹವಾದ ಆಯ್ಕೆ ಮಂಡಳಿಯು ನಿಮಗಾಗಿ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸುತ್ತದೆ. 2025ರ ಪರಾಗ್ ಗೌರವ ಪಟ್ಟಿ ಈಗ ಲಭ್ಯ ಇದೆ ಮತ್ತು ಸಾಧ್ಯವಿದ್ದರೆ ಕಳೆದ ಐದು ವರ್ಷಗಳ ಪಟ್ಟಿಯನ್ನೂ ಆಸಕ್ತರು ಗಮನಿಸಬಹುದು. ಆನ್‌ಲೈನ್‌ನಲ್ಲಿ (www.paragreads.in) ಇದು ಲಭ್ಯ. ವಯೋಮಾನ ಮತ್ತು ವಿಧಗಳ ಆಧಾರದಲ್ಲಿ 24 ಪ್ರಕಾಶಕರ 286 ಪುಸ್ತಕಗಳನ್ನು ಈವರೆಗೆ ಪಟ್ಟಿ ಮಾಡಲಾಗಿದೆ. ಇವುಗಳಲ್ಲಿ ಹಲವು ಪುಸ್ತಕಗಳು ಆಯಾ ಪ್ರಕಾಶಕರ ಮಳಿಗೆಗಳಲ್ಲಿ ಲಭ್ಯ ಇವೆ. ‘ಮುಸ್ಕಾನ್’ ಮತ್ತು ‘ತುಲಿಕಾ’ದಂತಹ ಪ್ರಕಾಶಕರ ಮಳಿಗೆಗಳು ಇಲ್ಲಿ ಇಲ್ಲ. ಈ ಪ್ರಕಾಶಕರಿಂದ ನೀವು ನೇರವಾಗಿ ಪುಸ್ತಕಗಳನ್ನು ಖರೀದಿ ಮಾಡಬಹುದು.

> ಮಕ್ಕಳ ಸಾಹಿತ್ಯದಲ್ಲಿನ ಹೊಸ ಭಾವ–ಬಣ್ಣಗಳನ್ನು ಅರಿಯಲು ಪುಸ್ತಕ ಮೇಳಗಳು ಸಹಕಾರಿ. ಇಂಗ್ಲಿಷ್‌ನಲ್ಲಷ್ಟೇ ಕಾಣಲು ಸಾಧ್ಯವಾಗುತ್ತಿದ್ದ ಆಕರ್ಷಕ ಪುಸ್ತಕಗಳು ಈಗ ದೇಸಿ ಭಾಷೆಗಳಲ್ಲೂ ರೂಪುಗೊಳ್ಳುತ್ತಿವೆ. ರೀಲ್ಸ್ ಲೋಕದಲ್ಲಿ ಎಳೆಯ ತಲೆಮಾರು ಕಳೆದು ಹೋಗದಿರಲು ಈ ಪುಸ್ತಕ ಜಗತ್ತು ಭರವಸೆಯಂತಿದೆ. ಮನರಂಜನೆಯೊಂದಿಗೆ ಚಿಣ್ಣರ ಮನೋವಿಕಾಸಕ್ಕೂ ಪುಸ್ತಕಗಳು ಪೂರಕ.

ಇಂಗ್ಲಿಷ್‌ನಲ್ಲಿ ಕೌತುಕಮಯ ಬೆಳವಣಿಗೆಗಳು ನಡೆಯುತ್ತಿವೆ. ಗ್ರುಫಲೊ ಖ್ಯಾತಿಯ ಜೂಲಿಯಾ ಡೊನಾಲ್ಡ್‌ಸನ್ ಮತ್ತು ಆಕ್ಸೆಲ್ ಶೆಫ್ಲರ್ ಅವರಂತಹ ಲೇಖಕ–ಚಿತ್ರಕಾರರು ನಮ್ಮಲ್ಲಿ ಇಲ್ಲ. ಆದರೆ, ಅಸುನಮ್ ಎಂಬ ಸಂಗೀತಪ್ರೇಮಿ ಕಾಲ್ಪನಿಕ ದೈತ್ಯ ಪ್ರಾಣಿಯ ಕಥೆ ಹೇಳುತ್ತಿರುವ ಸೆಲಾಮೆಂಡರ್ ಮತ್ತು ರಾಜೀವ್ ಐಪ್ ಅವರು ಈ ದಿಸೆಯಲ್ಲಿ ಸಾಗುತ್ತಿದ್ದಾರೆ. ಏಳು ವರ್ಷದವರೆಗಿನ ಮಕ್ಕಳಿಗಾಗಿ ‘ಪ್ರಥಮ್ ಬುಕ್ಸ್’ (ಪ್ರಥಮ್ ಬುಕ್ಸ್ ಪ್ರಕಟಣೆಗಳು ಕನ್ನಡದಲ್ಲೂ ಸಾಕಷ್ಟಿವೆ) ಮತ್ತು ‘ತುಲಿಕಾ ಬುಕ್ಸ್’ ಕೆಲವು ಒಳ್ಳೆಯ ಕೃತಿಗಳನ್ನು ಪ್ರಕಟಿಸಿವೆ. ಡಕ್‌ಬಿಲ್ ಮತ್ತು ಪಫಿನ್ ಕೂಡ ಉತ್ತಮವಾದ ಕೃತಿಗಳನ್ನು ಹೊರತಂದಿವೆ. ಹತ್ತು ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು ಹದಿಹರೆಯದವರಿಗಾಗಿ ಹಾರ್ಪರ್‌ಕಾಲಿನ್ಸ್, ಸ್ಪೀಕಿಂಗ್ ಟೈಗರ್, ತಾರಾ ಬುಕ್ಸ್ ಮತ್ತು ಕಲ್ಪವೃಕ್ಷ ಉತ್ತಮ ಪುಸ್ತಕಗಳನ್ನು ಪ್ರಕಟಿಸಿವೆ.

ಪ್ರಥಮ್ ಬುಕ್ಸ್‌ನವರು ತಮ್ಮ ಕೃತಿಗಳನ್ನು ಭಾರತದ ಇತರ ಭಾಷೆಗಳಿಗೂ ಅನುವಾದಿಸಿ ಪ್ರಕಟಿಸಿದ್ದಾರೆ. ಕರಡಿ ಟೇಲ್ಸ್, ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯಾ ಜೊತೆಗೂಡಿ ಭಾರತದ ವಿವಿಧ ಭಾಗಗಳ ನೈಜ ಕತೆಗಳ ಹೊಸ ಸರಣಿಯನ್ನು ಆರಂಭಿಸಿದೆ. ಗಣೇಶ್ ಪಾಯಿನ್ ಮತ್ತು ಎಸ್.ಎಚ್. ರಜಾ ಅವರೂ ಸೇರಿದಂತೆ ಭಾರತೀಯ ಕಲಾವಿದರ ಕುರಿತ ಮನೋಜ್ಞವಾದ ಕೃತಿಗಳನ್ನು ಆರ್ಟ್‌ಫಸ್ಟ್ ಪ್ರಕಟಿಸಿದೆ.

ನೀವು ನೋಡಿರದ ಎರಡು ಮಳಿಗೆಗಳ ಕುರಿತು ನಾನು ಹೇಳುತ್ತೇನೆ. ಈ ಮಳಿಗೆಗಳಲ್ಲಿ ಮಕ್ಕಳ ಅತ್ಯುತ್ತಮ ಹಿಂದಿ ಪುಸ್ತಕಗಳು ಇವೆ. ನ್ಯಾಷನಲ್ ಬುಕ್ ಟ್ರಸ್ಟ್ ಮತ್ತು ಚಿಲ್ಡ್ರನ್ಸ್ ಬುಕ್ ಟ್ರಸ್ಟ್‌ನ ಅಧಿಕೃತ ಮಳಿಗೆಗಳೂ ಇವೆ, ಇವರ ಹಳೆಯ ಪುಸ್ತಕಗಳು ಅಗ್ಗದ ದರದಲ್ಲಿ ಲಭ್ಯ ಇವೆ. ಮಕ್ಕಳ ಅತಿ ಹೆಚ್ಚು ಹಿಂದಿ ಪುಸ್ತಕಗಳನ್ನು ಪ್ರಥಮ್ ಬುಕ್ಸ್ ಪ್ರಕಟಿಸಿದೆ.

ಮಕ್ಕಳ ಹಿಂದಿ ಸಾಹಿತ್ಯದ ಸೃಜನಶೀಲತೆಯಲ್ಲಿ ಮುಂಚೂಣಿಯಲ್ಲಿ ಇರುವ ಏಕತಾರಾ ಟ್ರಸ್ಟ್ (ಇಂಪ್ರಿಂಟ್, ಜುಗ್ನೂ) ಪ್ರಕಟಣೆಗಳು ಗಮನಸೆಳೆಯುವಂತಿವೆ. ಗುಲ್ಜಾರ್ ಅವರು ಬರೆದಿರುವ ಸರಣಿಗಳು, ವಿನೋದ್ ಕುಮಾರ್ ಶುಕ್ಲಾ ಅವರ ಪುಸ್ತಕಗಳು ಮತ್ತು ಕೃಷ್ಣಕುಮಾರ್ ಅವರ ಇತ್ತೀಚಿನ ಕಿರು ಕಾದಂಬರಿ ಏಕತಾರಾ ಟ್ರಸ್ಟ್‌ನ ಸಂಗ್ರಹದಲ್ಲಿ ಲಭ್ಯ. ಪಾಕೆಟ್ ಪುಸ್ತಕಗಳು, ಬೃಹತ್ ಪುಸ್ತಕಗಳು, ಪದ್ಯದ ಕಾರ್ಡ್‌ಗಳು, ಪದರಹಿತ ಚಿತ್ರ ಪುಸ್ತಕಗಳು, ಸಣ್ಣ ಮಕ್ಕಳ ಪುಸ್ತಕಗಳು– ಹೀಗೆ ಯುವಜನರಿಗೆ ಬೇಕಾದ ಎಲ್ಲ ರೀತಿಯ ಸಾಹಿತ್ಯ ಇಲ್ಲಿ ಇದೆ. ಎಲೆನ್ ಶಾ ಅವರ ಚಿತ್ರಗಳಿರುವ ಗುಲ್ಜಾರ್ ಅವರ ಪುಸ್ತಕಗಳನ್ನೂ ನೀವು ನೋಡಬಹುದು. ಅಚ್ಚರಿ ಮೂಡಿಸುವ ಕವಿ ಸುಶಿಲ್ ಶುಕ್ಲಾ ಅವರ ಕೃತಿಗಳೂ ಇವೆ. ಗುನ್‌ಗುನ್ ಆರ್ಕೆಸ್ಟ್ರಾ ಚಿತ್ರಪುಸ್ತಕವು ನನ್ನ ಮನ ಗೆದ್ದಿತು. ಇವರ ನಿಯತಕಾಲಿಕಗಳ ಚಂದಾದಾರ ಆಗುವುದನ್ನು ಮರೆಯದಿರಿ. ಸಣ್ಣ ಮಕ್ಕಳಿಗಾಗಿ ಪ್ಲೂಟೊ ಮತ್ತು ಸ್ವಲ್ಪ ದೊಡ್ಡವರಿಗಾಗಿ ಸೈಕಲ್ ಇವೆ.

ಏಕತಾರಾ ಟ್ರಸ್ಟ್‌ನಿಂದ ಭೋಪಾಲ್‌ನ ಏಕಲವ್ಯದ ಕಡೆಗೆ ಹೆಜ್ಜೆ ಹಾಕಿ. ಯುಗಪ್ರವರ್ತಕ ಹೋಶಂಗಾಬಾದ್ ವಿಜ್ಞಾನ ಬೋಧನೆ ಕಾರ್ಯಕ್ರಮದಿಂದ ಆರಂಭಗೊಂಡ ಈ ಎನ್‌ಜಿಒ ತನ್ನ ವಿಜ್ಞಾನ ಶಿಕ್ಷಣದ ಗುರಿಯನ್ನು ಮೀರಿ ವಿಸ್ತಾರವಾಗಿ ಬೆಳೆದಿದೆ. ಶಿಕ್ಷಕರು ಮತ್ತು ಹೆತ್ತವರಿಗೆ ಪ್ರಯೋಜನವಾಗಬಹುದಾದ ಪುಸ್ತಕಗಳು, ವಿಜ್ಞಾನ ಟೂಲ್‌ಕಿಟ್‌ಗಳು, ಶಿಕ್ಷಣದ ಕುರಿತ ಪುಸ್ತಕಗಳು ಇಲ್ಲಿ ಇವೆ. ಲಖನೌದಲ್ಲಿ ಹಿಂದಿ ಶಾಲೆಗೆ ಹೋಗುವ ಪಂಜಾಬಿ ಉಚ್ಚಾರಣೆಯ ಲುಧಿಯಾನದ ಹುಡುಗನ ಹೃದಯಸ್ಪರ್ಶಿ ಕತೆ ವರುಣ್ ಗ್ರೋವರ್ ಅವರ ‘ಫುಟ್–ಬಾಲ್’. ಅವರ ನಿಯತಕಾಲಿಕ ಮಕ್ಕಳಿಗಾಗಿ ಚಕ್‌ಮಕ್ ಮತ್ತು ಶಿಕ್ಷಕರಿಗಾಗಿ ಸಂದರ್ಭ್‌ನ ಚಂದಾದಾರರಾಗಲು ನೀವು ಬಯಸಬಹುದು. ಭಾರತದ ಎಲ್ಲ ಭಾಗಗಳು ಮತ್ತು ಸಮುದಾಯಗಳ ಮಕ್ಕಳ ಸಾಂಸ್ಕೃತಿಕ ಜಗತ್ತನ್ನು ವಿಸ್ತರಿಸುವ ಕೆಲಸವನ್ನು ‘ಪಿಟಾರಾ’ ಸದಾ ಮಾಡುತ್ತಲೇ ಬಂದಿದೆ.

ದೆಹಲಿ ಪುಸ್ತಕ ಮೇಳ ಮಾತ್ರವಲ್ಲ, ಯಾವುದೇ ಪುಸ್ತಕ ಮೇಳಕ್ಕೆ ನೀವು ಮಕ್ಕಳನ್ನೂ ಕರೆದುಕೊಂಡು ಹೋದರೆ, ನಾನು ಕಂಡುಕೊಂಡದ್ದಕ್ಕಿಂತ ಹೆಚ್ಚಿನದನ್ನು ನೀವು ಕಾಣಬಹುದು. ಮಕ್ಕಳ ಪುಸ್ತಕಗಳಿರುವ ಸ್ಥಳವೆಂದರೆ ಕಲ್ಪನಾಶಕ್ತಿಯು ನಡೆಯಲು ಕಲಿಯುವ ಜಾಗ. ಮನರಂಜನೆಯೊಂದಿಗೆ ಮನೋವಿಕಾಸವು ಸಾಧ್ಯವಾಗುವ ಜಾಗ. ಅಲ್ಲಿಗೆ ಹೋಗಲು ಹಿಂಜರಿಕೆ ಏಕೆ?



ವಾಚಕರ ವಾಣಿ

ಮರ್ಯಾದೆಗೇಡು ಹತ್ಯೆಗೆ ಏನು ಪರಿಹಾರ?

ಹುಬ್ಬಳ್ಳಿ ತಾಲ್ಲೂಕಿನಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಅನ್ಯಜಾತಿ ಅನ್ನುವ ಕಾರಣಕ್ಕೆ ಹೆತ್ತ ಮಗಳನ್ನೇ ಕೊಲ್ಲುವುದು ಎಷ್ಟು ಸರಿ? ಇದರಲ್ಲಿ ಹಲವು ಸೂಕ್ಷ್ಮಗಳನ್ನು ಗಮನಿಸಬೇಕಾಗುತ್ತದೆ. ಅನ್ಯಜಾತಿಯ ಯುವಕನನ್ನು ಮದುವೆಯಾದ ಮಗಳನ್ನು ಕೊಂದೆ ಎಂದು ತನ್ನ ಜಾತಿಯವರೊಂದಿಗೆ ಹೆಮ್ಮೆಯಿಂದ ಹೇಳಿಕೊಳ್ಳಬೇಕು ಅನ್ನುವ ವಿಕೃತ ಮನಸ್ಸು; ನಾನು ಹುಟ್ಟಿಸಿದ ಮಗಳು. ನನಗೆ ಕೊಲ್ಲುವ ಹಕ್ಕಿದೆ ಎನ್ನುವ ಅಜ್ಞಾನದ ಪರಮಾವಧಿ. ಅಥವಾ ಅವಳು ಹೆಣ್ಣಾಗಿರುವುದರಿಂದ ಅವಳನ್ನು ಏನು ಬೇಕಾದರೂ ಮಾಡಬಹುದು ಎನ್ನುವ ದುರುಳ ಧೋರಣೆಯೂ ಇರಬಹುದು. ಇವೆಲ್ಲದರ ಹಿಂದೆ ಕಾಣದ ಕೈಯಂತೆ ಕೆಲಸ ಮಾಡುತ್ತಿರುವುದು ಪುರುಷ ಪ್ರಧಾನ ಜಾತಿ ವ್ಯವಸ್ಥೆ. ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವುದೇ ಮರ್ಯಾದೆಗೇಡು ಹತ್ಯೆ ತಡೆಗಿರುವ ಪರಿಹಾರ.

ಸೋಮಶೇಖರ ಯು.ಟಿ., ಮೈಸೂರು

ಕೇಂದ್ರದ ಧೋರಣೆ: ಒಕ್ಕೂಟ ತತ್ತ್ವಕ್ಕೆ ಧಕ್ಕೆ

ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಮಲತಾಯಿ ಧೋರಣೆಯನ್ನು ಸಂಪಾದಕೀಯದಲ್ಲಿ (ಪ್ರ.ವಾ., ಜ. 26) ಎಳೆ ಎಳೆಯಾಗಿ ಬಿಚ್ಚಿಡಲಾಗಿದೆ. ಈ ಧೋರಣೆಯು ಜನರ ಸಾಂವಿಧಾನಿಕ ಹಕ್ಕುಗಳನ್ನು ಧಿಕ್ಕರಿಸುತ್ತಿರುವ ದ್ಯೋತಕವಾಗಿದೆ. ಕರ್ನಾಟಕವು ಕೇಂದ್ರಕ್ಕೆ ನೀಡಿದ ಒಂದು ರೂಪಾಯಿ ತೆರಿಗೆಯಲ್ಲಿ ಕೇವಲ 13 ಪೈಸೆಯಷ್ಟೆ ರಾಜ್ಯಕ್ಕೆ ವಾಪಸ್ ಬರುತ್ತಿರುವುದು ಅನ್ಯಾಯದ ಪರಮಾವಧಿ. ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳಿಗೆ ಸಂಬಂಧಿಸಿದಂತೆ1990ರಲ್ಲಿ ರಚನೆಯಾದ ಸರ್ಕಾರಿಯಾ ಆಯೋಗದ 247 ಶಿಫಾರಸುಗಳನ್ನು 35 ವರ್ಷಗಳಾದರೂ ಅನುಷ್ಠಾನಕ್ಕೆ ತಂದಿಲ್ಲ. ಮತ್ತೊಂದೆಡೆ ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಕೇಂದ್ರದ ಏಜೆಂಟ್‌ರಂತೆ ವರ್ತಿಸುವುದು ಸಂವಿಧಾನ ವಿರೋಧಿ ನಡೆ. ಇಂಥ ಅನ್ಯಾಯದ ನಡೆಗಳು ಕೊನೆಯಾಗಬೇಕಿದೆ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಸೃಜನಶೀಲತೆ ಅರಳಲು ಪುಸ್ತಕ ಅಗತ್ಯ

ಕಳೆದ ವರ್ಷ ರಾಮನಗರ ತಾಲ್ಲೂಕಿನ ಬನ್ನಿಕುಪ್ಪೆ ‘ಬಿ’ ಕ್ಲಸ್ಟರ್‌ನಲ್ಲಿ ನಡೆದ ಮಕ್ಕಳ ಕಲಿಕಾ ಹಬ್ಬದ ಸಂದರ್ಭದಲ್ಲಿ ‘ಮೊಬೈಲ್ ಬಿಡಿ, ಪುಸ್ತಕ ಹಿಡಿ’ ಅಭಿಯಾನ ಆರಂಭಿಸಿದ್ದೆವು. ಪ್ರತಿ ಶನಿವಾರ ಶಾಲಾವಧಿಯ ನಂತರ ಒಂದು ಗಂಟೆ ಪೋಷಕರ ಮೊಬೈಲ್ ಫೋನ್ ಸ್ವಿಚ್‌ಆಫ್ ಮಾಡಿಸಿ ವಿದ್ಯಾರ್ಥಿಗಳ ಜೊತೆ ಪುಸ್ತಕ ಓದಿಸುವುದು ಈ ಅಭಿಯಾನದ ಉದ್ದೇಶ. ಇದನ್ನು ನಿರಂತರವಾಗಿ ಮುಂದುವರಿಸಲಾಯಿತು. ಈ ಅಭಿಯಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಶ್ಲಾಘಿಸಿದ್ದಾರೆ. ಈಗಾಗಲೇ ತುಮಕೂರು, ಶಿವಮೊಗ್ಗ, ಬೆಂಗಳೂರು ನಗರ ವಿಶ್ವವಿದ್ಯಾಲಯಗಳು ಈ ಅಭಿಯಾನ ಅಳವಡಿಸಿಕೊಂಡಿವೆ. ಆಂಧ್ರಪ್ರದೇಶ ಸರ್ಕಾರವು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಆನ್‌ಲೈನ್ ಬಳಕೆಯ ನಿರ್ಬಂಧ ಕುರಿತು ಚಿಂತನೆ ನಡೆಸುತ್ತಿದೆ. ರಾಜ್ಯದ ಎಲ್ಲಾ ಶಾಲೆಗಳಲ್ಲಿ ಈ ಅಭಿಯಾನ ಆರಂಭಿಸಿದರೆ ಮಕ್ಕಳಲ್ಲಿ ಸೃಜನಶೀಲತೆ ವೃದ್ಧಿಸಲಿದೆ.

ಚಿಕ್ಕವೀರಯ್ಯ ಟಿ.ಎನ್., ರಾಮನಗರ

ಶೈಕ್ಷಣಿಕ ಸಮಾನತೆ ಮಾದರಿ ಮರೀಚಿಕೆ

‘ಒಂದು ರಾಷ್ಟ್ರ ; ಒಂದು ಚುನಾವಣೆ’ ಬೇಕೆಂದು ಬೀಗುವ ಆಳುವ ವರ್ಗವು ಶೈಕ್ಷಣಿಕ ಪಠ್ಯಕ್ರಮದಲ್ಲಿನ ತಾರತಮ್ಯ ನೀತಿಯ ಬಗ್ಗೆ ಚಕಾರ ಎತ್ತುವುದಿಲ್ಲ. ಸರ್ಕಾರಿ ಶಾಲೆಗಳಲ್ಲಿನ ಪಠ್ಯಕ್ರಮ ಬೇರೆ; ಖಾಸಗಿ ಶಾಲೆಗಳ ಪಠ್ಯಕ್ರಮವೇ ಬೇರೆ ಮಾದರಿಯದ್ದಾಗಿದೆ. ರಾಜ್ಯ ಪಠ್ಯ, ಕೇಂದ್ರ ಪಠ್ಯ, ಅಂತರರಾಷ್ಟ್ರೀಯ ಪಠ್ಯವೆಂದು ಮಕ್ಕಳ ಓದುವಿಕೆಯಲ್ಲಿ ಭೇದಭಾವ ಬಿತ್ತಲಾಗುತ್ತಿದೆ. ಶಿಕ್ಷಣ ಉದ್ಯಮದ ಸ್ವರೂಪ ಪಡೆದಿರುವುದೇ ಇದಕ್ಕೆ ಕಾರಣ. ಬಡವರ ಮಕ್ಕಳು ಸರ್ಕಾರಿ ಶಾಲೆಗೆ ಸೇರಿದರೆ ಶ್ರೀಮಂತರ ಮಕ್ಕಳು ಖಾಸಗಿ ಶಾಲೆಗೆ ದಾಖಲಾಗುತ್ತಾರೆ. ಇದರಿಂದ ಶಿಕ್ಷಣದ ಸಮನ್ವತೆ ಸಾಧಿಸುವುದಾದರೂ ಹೇಗೆ? ರಾಷ್ಟ್ರದಲ್ಲಿ ಶಿಕ್ಷಣವನ್ನೂ ಸಮಾನತೆಯ ಮಾದರಿಯನ್ನಾಗಿ ರೂಪಿಸಿಕೊಳ್ಳುವ ಸಾಧ್ಯತೆ ಜೀವತಳೆದಿಲ್ಲ.

ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ

ಪ್ರವಾಸೋದ್ಯಮಕ್ಕೆ ಬೇಕಾಗಿದೆ ಕಾಯಕಲ್ಪ

‘ಕಲಬುರಗಿ ಕೋಟೆ ನೋಡದೇ ವಾಪಸಾದ ವಿದೇಶಿ ಪ್ರವಾಸಿಗರು’ ಸುದ್ದಿ ಓದಿ ಬೇಸರವಾಯಿತು. ಪ್ರವಾಸಿಗರನ್ನು ಕೈಬೀಸಿ ಕರೆಯುವ ಐತಿಹಾಸಿಕ ತಾಣಗಳಿಗೆ ಅಗತ್ಯ ಮೂಲ ಸೌಕರ್ಯ ಒದಗಿಸುವಲ್ಲಿ ಎಲ್ಲ ಸರ್ಕಾರಗಳು ವಿಫಲವಾಗಿವೆ. ಪ್ರವಾಸೋದ್ಯಮವು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಾವಿರಾರು ಉದ್ಯೋಗಗಳನ್ನು ಸೃಜಿಸುತ್ತದೆ. ಆದರೆ, ಒಂದಷ್ಟು ವಿದೇಶಿಗರ ನಕಾರಾತ್ಮಕ ಅಭಿಪ್ರಾಯವು ಬರಲಿರುವ ಪ್ರವಾಸಿಗರ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಈಗಲಾದರೂ ಪ್ರವಾಸೋದ್ಯಮ ಸಚಿವರು ಎಚ್ಚತ್ತುಕೊಳ್ಳಬೇಕಿದೆ.

ವೆಂಕಟೇಶ್ ಮುದಗಲ್, ಕಲಬುರಗಿ

ಅಂಚೆ ಕಚೇರಿ: ಕನ್ನಡದ ತಾತ್ಸಾರ ಸರಿಯೆ?

ಅಂಚೆ ಕಚೇರಿಗಳಲ್ಲಿ ಗ್ರಾಹಕರು ಉಳಿತಾಯ ಖಾತೆ ಸೇರಿದಂತೆ ಆರ್‌ಡಿ, ಪಿಪಿಎಫ್, ಸುಕನ್ಯಾ ಸಮೃದ್ಧಿ ಯೋಜನೆಯಡಿ ಹಣ ತೊಡಗಿಸುತ್ತಾರೆ. ಅವಧಿ ಮುಗಿದ ನಂತರ ಈ ಹಣ ಹಿಂಪಡೆಯುವಾಗ ಚಲನ್ ಭರ್ತಿ ಮಾಡಬೇಕಿದೆ. ಆದರೆ, ಈ ಚಲನ್‌ನ ಒಂದು ಭಾಗ ಇಂಗ್ಲಿಷ್‌ನಲ್ಲಿ, ಮತ್ತೊಂದು ಭಾಗ ಹಿಂದಿ ಭಾಷೆಯಲ್ಲಿ ಮುದ್ರಿತವಾಗಿರುತ್ತದೆ. ಇಲ್ಲಿ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ನೆರೆಯ ತಮಿಳುನಾಡಿನಲ್ಲಿ ಒಂದು ಭಾಗದಲ್ಲಿ ಇಂಗ್ಲಿಷ್; ಮತ್ತೊಂದು ಭಾಗದಲ್ಲಿ ತಮಿಳಿನಲ್ಲಿ ಚಲನ್‌ಗಳು ಮುದ್ರಿತವಾಗಿರುತ್ತವೆ. ಕನ್ನಡ ಭಾಷೆಯ ಬಗ್ಗೆ ಇಷ್ಟು ತಾತ್ಸಾರ ಏಕೆ?

ಬೂಕನಕೆರೆ ವಿಜೇಂದ್ರ, ಮೈಸೂರು

ಚುರುಮುರಿ

ಗೇಮ್ ಪ್ಲಾನ್

• ಮಣ್ಣೆ ರಾಜು

‘ಟಿವಿಯಲ್ಲಿ ಬರೀ ಕ್ರಿಕೆಟ್ ನೋಡ್ತೀರಿ, ನಾನು ಸೀರಿಯಲ್ ನೋಡ್ಬೇಕು...’ ಸಿಟ್ಟಿನಿಂದ ಸುಮಿ ಗಂಡನಿಂದ ರಿಮೋಟ್ ಕಿತ್ತುಕೊಂಡಳು.

‘ಛೇ! ಸರ್ಕಾರದಲ್ಲಿ ಕುರ್ಚಿ ಕಚ್ಚಾಟ, ಸಂಸಾರದಲ್ಲಿ ರಿಮೋಟ್ ಕಿತ್ತಾಟ, ಒಳ್ಳೆಯ ಬೆಳವಣಿಗೆಯಲ್ಲ... ಕ್ರಿಕೆಟ್ ನೋಡೋದ್ರಿಂದ ಕ್ರೀಡಾಸ್ಫೂರ್ತಿ ಬೆಳೆಯುತ್ತದೆ’ ಅಂದ ಶಂಕ್ರಿ.

‘ಮಗ ಮೊಬೈಲ್‌ನಲ್ಲಿ ಗೇಮ್ ಆಡೋದನ್ನು ಕಲಿತಿದ್ದಾನೆ! ಕೇಳಿದ್ರೆ ಕ್ರೀಡಾಸ್ಫೂರ್ತಿ ಅಂತಾನೆ... ಮಕ್ಕಳು ಮೈದಾನದಲ್ಲಿ ಆಡೋದು ಬಿಟ್ಟು ಮೊಬೈಲ್‌ನಲ್ಲಿ ಆಡಲು ಶುರು ಮಾಡಿವೆ’.

‘ನಿನಗೆ ಗೊತ್ತಾ? ಬಾಂಗ್ಲಾ ತಂಡ ಈ ಬಾರಿ ವಿಶ್ವಕಪ್ ಆಡೋದಿಲ್ಲವಂತೆ’.

‘ವಿಶ್ವಕಪ್‌ನಿಂದ ಬಾಂಗ್ಲಾದೇಶ ಔಟ್, ಪಾಕಿಸ್ತಾನ ಡೌಟ್ ಅಂತ ಗೊತ್ತು. ವಿಶ್ವಕಪ್, ಏಷ್ಯಾ ಕಪ್, ಕಾಫಿ ಕಪ್, ಟೀ ಕಪ್ ಅಂತ ವರ್ಷಪೂರಾ ಕ್ರಿಕೆಟ್ ಮ್ಯಾಚ್ ನಡೆಯುತ್ತಲೇ ಇರ್ತವೆ, ನೀವು ಕೆಲಸಕಾರ್ಯ ಬಿಟ್ಟು ನೋಡ್ತಾ ಇರಿ’.

‘ಗೆಲುವಿಗೆ ಹೇಗೆ ಗೇಮ್ ಪ್ಲಾನ್ ಮಾಡಬೇಕು ಎಂದು ಕ್ರಿಕೆಟ್ ನೋಡಿ ಕಲಿಯಬಹುದು’.

ಚಾನೆಲ್ ಚೇಂಜ್ ಮಾಡಿದ ಸುಮಿ, ‘ಈ ಸೀರಿಯಲ್ ನೋಡಿ, ಅತ್ತೆಯನ್ನು ಬಗ್ಗಿಸೋದು, ಸೊಸೆಯನ್ನು ಪಳಗಿಸೋದು, ನಾದಿನಿಯನ್ನು ನಿಯಂತ್ರಿಸುವುದು ಹೇಗೆ ಎನ್ನುವ ಗೇಮ್ ಪ್ಲಾನ್ ಅನ್ನು ಈ ಸೀರಿಯಲ್‌ನಿಂದ ಕಲಿಯಬಹುದು’.

‘ಅದಕ್ಕಿಂಥಾ ನ್ಯೂಸ್ ಚಾನೆಲ್ ಹಾಕು, ರಾಜಕಾರಣಿಗಳ ಬೈದಾಟ, ಹುಯ್ದಾಟ, ಕಿತ್ತಾಟಗಳನ್ನು ನೋಡಿದರೆ ಗೇಮ್ ಪ್ಲಾನ್ ಗಮ್ಮತ್ತು ಗೊತ್ತಾಗುತ್ತದೆ’.

‘ಗಾಂಧೀಜಿ ಟೀಮ್ ವರ್ಸಸ್ ಜಿ ರಾಮ್ ಜಿ ಟೀಮ್ ನಡುವಿನ ಆಟ ಮುಗಿಯುವಂತೆ ಕಾಣ್ತಿಲ್ಲ, ಪಂದ್ಯ ಡ್ರಾ ಆಗಬಹುದಾ?’

‘ಅದು ಸಿಂಗಲ್ ಸ್ಕೀಮ್‌ನ ಡಬಲ್ ಗೇಮ್, ಡ್ರಾನೂ ಆಗಲ್ಲ, ವಿತ್‌ಡ್ರಾನೂ ಆಗಲ್ಲ. ಮುಂದಿನ ಎಲೆಕ್ಷನ್ ಗೇಮ್ ಗೆಲ್ಲಲು ರಾಜಕೀಯ ತಂಡಗಳು ನಡೆಸಿರುವ ತಾಲೀಮಿನ ಗಿಮಿಕ್ ಗೇಮ್ ಅಷ್ಟೇ...’ ಎಂದು ಶಂಕ್ರಿ ಟಿವಿ ಆಫ್ ಮಾಡಿದ.

ಸಂಗತ

ಗ್ರಾಹಕರ ವಿವೇಕ ಮಾರುಕಟ್ಟೆಯಲ್ಲಿ ಕಣ್ಮರೆ?

ಹೆಚ್ಚು ಕೊಂಡಷ್ಟೂ ಗ್ರಾಹಕರಿಗೆ ಲಾಭ ಎನ್ನುವುದು ಮಾರುಕಟ್ಟೆ ಸೂತ್ರ. ಬೇಕಿರುವ, ಬೇಕೆನಿಸುವ ವಸ್ತುಗಳ ವ್ಯತ್ಯಾಸ ಅರಿತರೆ ಕೊಳ್ಳುವ ಚಪಲ ನಿಯಂತ್ರಣ ಸಾಧ್ಯ.

• ಎಚ್.ಕೆ. ಶರತ್

‘ಅಯ್ಯೋ ಇಲ್ಲ್ಯಾಕೆ ಹೋಗಿ ಇವನ್ನೆಲ್ಲ ತಂದ್ರಿ? ಹೊಸದಾಗಿ ಶುರುವಾಗಿರೋ ಮಾಲ್‌ನಲ್ಲಿ ಇವೆಲ್ಲ ಕಡಿಮೆ ರೇಟ್‌ಗೆ ಸಿಕ್ತಾ ಇದ್ವು. ಅಲ್ಲಿ ತುಂಬಾ ಆಫರ್‌ಗಳಿವೆ’ ಎಂದು ಸಮೀಪದ ಅಂಗಡಿಗಳಿಂದ ದಿನಸಿ ಪದಾರ್ಥ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಿ ತಂದಿದ್ದ ನೆರೆಹೊರೆಯವರಿಗೆ ಮಹಿಳೆಯೊಬ್ಬರು ಸಲಹೆ ನೀಡುತ್ತಿದ್ದರು. ಅವರ ಪ್ರಕಾರ, ಸ್ಥಳೀಯ ಅಂಗಡಿಗಳಲ್ಲಿ ವಸ್ತುಗಳನ್ನು ಖರೀದಿಸುವುದು ಜಾಣ ನಡೆ ಅಲ್ಲ.

ಸಣ್ಣ ಅಂಗಡಿಗಳಿಗಿಂತ ಹೆಚ್ಚಿನ ರಿಯಾಯಿತಿ ದರದಲ್ಲಿ ವಸ್ತುಗಳನ್ನು ಮಾರುವುದಾಗಿ ಬಿಂಬಿಸಿಕೊಳ್ಳುವ ದೊಡ್ಡ ಮಾರ್ಟ್‌ಗಳಲ್ಲಿ ಅಗತ್ಯ ವಸ್ತುಗಳನ್ನು ಖರೀದಿಸುವುದು ಲಾಭದಾಯಕ ಎನ್ನುವ ಅಭಿಪ್ರಾಯ ಹಲವರಲ್ಲಿ ಬೇರೂರಿದೆ. ಅದು ನಿಜವೆ?

ಆಫರ್‌ಗಳ ಚಕ್ರಸುಳಿಯಲ್ಲಿ ಸಿಲುಕಿ ಯಾಮಾರುವುದನ್ನೇ ಬುದ್ಧಿವಂತಿಕೆ ಎಂದು ಭಾವಿಸಬಹುದೆ? ಅಗತ್ಯವಿಲ್ಲದ್ದನ್ನು ಅಥವಾ ಅಗತ್ಯಕ್ಕಿಂತ ಹೆಚ್ಚಿನದನ್ನು ಖರೀದಿಸುವುದು ಲಾಭದಾಯಕವೋ? ಅಗತ್ಯಕ್ಕಿಂತ ಹೆಚ್ಚು ಕೊಳ್ಳುವಂತೆ ಪ್ರೇರೇಪಿಸುವ, ಆಮಿಷವೊಡ್ಡುವ ಕಾರ್ಯಸೂಚಿಯನ್ನು ಎಲ್ಲಿ ಅನುಸರಿಸಲಾಗುತ್ತದೆ– ಸಣ್ಣ ಅಂಗಡಿಗಳಲ್ಲೋ ಅಥವಾ ದೊಡ್ಡ ಮಾರ್ಟ್‌ಗಳಲ್ಲೋ?

ಹೆಚ್ಚು ಹೆಚ್ಚು ಕೊಳ್ಳುವಂತೆ ಗ್ರಾಹಕರನ್ನು ಪ್ರೇರೇಪಿಸುವಲ್ಲಿ ತಮ್ಮ ಹಿತ ಅಡಗಿದೆ ಎನ್ನುವ ಮಾರುಕಟ್ಟೆಯ ತಂತ್ರದ ಮೊರೆಹೋಗುವ ದೊಡ್ಡ ಮಾರ್ಟ್‌ಗಳು ಒಡ್ಡುವ ಆಫರ್‌ಗಳ ಆಕರ್ಷಣೆ ಮೇಲ್ನೋಟಕ್ಕೆ ಲಾಭದಾಯಕವಾಗಿ ಕಂಡರೂ, ಅದು ಎಲ್ಲರಿಗೂ ಲಾಭದಾಯಕ ಆಗಿರಲಾರದು. ಕೊಳ್ಳುವ ಸಾಮರ್ಥ್ಯ ಇದ್ದರೂ, ತೀರಾ ಅಗತ್ಯವಿರುವುದನ್ನು ಮಾತ್ರ ಕೊಳ್ಳುತ್ತೇನೆ ಎನ್ನುವ ವಿವೇಚನೆಯನ್ನು ಯಾವ ಕ್ಷಣದಲ್ಲೂ ಕಳೆದುಕೊಳ್ಳದವರ ಪಾಲಿಗೆ ದೊಡ್ಡ ಮಾರ್ಟ್‌ಗಳಲ್ಲಿನ ಖರೀದಿ ಲಾಭದಾಯಕ ಆಗಬಹುದೇ ವಿನಾ, ಎಲ್ಲರಿಗೂ ಅಲ್ಲ.



ದಿನಸಿ, ಗೃಹಬಳಕೆಯ ವಸ್ತುಗಳನ್ನು ಖರೀದಿಸಲು ಹೊರಡುವ ಗ್ರಾಹಕರ ತಲೆಯಲ್ಲಿ ತಾವು ಕೊಳ್ಳಬೇಕಿರುವ ವಸ್ತುಗಳ ಪಟ್ಟಿ ಇರುತ್ತದೆ. ಸಣ್ಣ ಅಂಗಡಿಗಳಲ್ಲಿ ಖರೀದಿ ಮಾಡುವಾಗ ಆ ಪಟ್ಟಿಯ ಪ್ರಕಾರ ಕೊಳ್ಳುವ ಸಾಧ್ಯತೆಯೇ ಹೆಚ್ಚು. ಏಕೆಂದರೆ, ಸಾವಧಾನವಾಗಿ ಒಂದೆಡೆಯಿಂದ ಎಲ್ಲವನ್ನೂ ಗಮನಿಸುತ್ತಾ ಇದು ಬೇಕೋ ಬೇಡವೋ ಎಂದು ನಿರ್ಧರಿಸುವ ಅವಕಾಶ ಅಲ್ಲಿರುವುದಿಲ್ಲ. ಖರೀದಿಸಲು ವೈವಿಧ್ಯಮಯ ವಸ್ತುಗಳ ಯಥೇಚ್ಛ ಭಂಡಾರವೂ ಅಲ್ಲಿರುವುದಿಲ್ಲ. ಹೀಗಾಗಿ ಸಣ್ಣ ಅಂಗಡಿಗಳಿಗೆ ಹೋದಾಗ ಮೊದಲು ಏನನ್ನು ಖರೀದಿಸಬೇಕೆಂದು ಅಂದುಕೊಂಡಿರುತ್ತೇವೊ ಅವನ್ನಷ್ಟೇ ಕೊಳ್ಳುತ್ತೇವೆ.

ದೇಶದಾದ್ಯಂತ ಮಾಲ್ ಸ್ವರೂಪದ ಬೃಹತ್ ಮಳಿಗೆಗಳನ್ನು ಹೊಂದಿರುವ ಮಾರ್ಟ್‌ಗಳು ಕೂಪನ್, ಬೋನಸ್ ಪಾಯಿಂಟ್, ಆಫರ್‌ಗಳಂತಹ ಆಮಿಷಗಳನ್ನು ಒಡ್ಡಿ, ಹೆಚ್ಚು ಖರೀದಿಸುವ ಧಾವಂತಕ್ಕೆ ಗ್ರಾಹಕರನ್ನು ದೂಡುತ್ತವೆ. ಗ್ರಾಹಕರನ್ನು ಕೊಳ್ಳುಬಾಕರನ್ನಾಗಿ ಮಾಡಲು ಹೊಸ ತಂತ್ರಗಳನ್ನು ಹೆಣೆಯುತ್ತಲೇ ಇರುತ್ತವೆ.

ಸ್ಟಾರ್ಟ್‌ಅಪ್‌ನಲ್ಲಿ ಕಾರ್ಯ ನಿರ್ವಹಿಸುವ ಪರಿಚಿತರೊಬ್ಬರು, ತಾವು ಸದ್ಯ ಕೆಲಸ ಮಾಡುತ್ತಿರುವ ಪ್ರಾಜೆಕ್ಟ್ ಒಂದರ ವಿವರಗಳನ್ನು ಇತ್ತೀಚೆಗೆ ಹಂಚಿಕೊಂಡಿದ್ದರು. ಕನ್ನಡಕಗಳನ್ನು ಮಾರುವ ಸಂಸ್ಥೆ, ದೇಶದ ಪ್ರಮುಖ ಪಟ್ಟಣಗಳಲ್ಲಿ ಅಂಗಡಿ ಮಳಿಗೆಗಳನ್ನು ತೆರೆದಿದ್ದು, ಅಲ್ಲಿಗೆ ಭೇಟಿ ನೀಡುವ ಗ್ರಾಹಕರ ಮನಃಸ್ಥಿತಿ ಅರಿಯಲು ಯಾಂತ್ರಿಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಳ್ಳಲು ಮುಂದಾಗಿದೆ. ಅಂಗಡಿಯಲ್ಲಿ ಅಳವಡಿಸಿರುವ ಕ್ಯಾಮೆರಾದಲ್ಲಿ ಸೆರೆಯಾಗುವ ದೃಶ್ಯಾವಳಿಗಳನ್ನು ವಿಶ್ಲೇಷಿಸಿ, ಗ್ರಾಹಕರು ಯಾವ ಉತ್ಪನ್ನಗಳತ್ತ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ ಮತ್ತು ಅಂಗಡಿಯ ಯಾವ ಸ್ಥಳಗಳಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಾರೆ ಎಂಬುದನ್ನು ತಿಳಿಯಲಾಗುತ್ತದೆ. ಈ ನಿದರ್ಶನ ಗ್ರಾಹಕರನ್ನು ಸೆಳೆಯಲು, ತಮ್ಮ ಬಳಿ ಹೆಚ್ಚು ಖರೀದಿಸುವಂತೆ ಮಾಡಲು ವ್ಯಾಪಾರಿ ಸಂಸ್ಥೆಗಳು ಹೇಗೆ ಹೊಸ ದಾರಿಗಳನ್ನು ಅನ್ವೇಷಿಸುತ್ತವೆ ಎಂಬುದಕ್ಕೆ ಒಂದು ನಿದರ್ಶನವಷ್ಟೆ. ಸೀಮಿತ ಸಂಪನ್ಮೂಲ ಮತ್ತು ತಿಳಿವಳಿಕೆಯ ಕಾರಣದಿಂದ ಇಂತಹ ತಂತ್ರಗಳನ್ನು ಹೆಣೆಯಲಾಗದ ಸಣ್ಣ ವ್ಯಾಪಾರಿಗಳು ಮಾರುವ ಉತ್ಪನ್ನದ ಬೆಲೆ ಸ್ವಲ್ಪ ಹೆಚ್ಚೇ ಇದ್ದರೂ, ಅದು ಗ್ರಾಹಕರ ಜೇಬಿಗೆ ದೊಡ್ಡ ಮಾರ್ಟ್‌ಗಳಂತೆ ಯೋಜಿತ ರೀತಿಯಲ್ಲಿ ಕನ್ನ ಹಾಕಲಾರದು.

ದೊಡ್ಡ ಮಾರ್ಟ್‌ಗಳ ಕಾರ್ಯತಂತ್ರ ಹೇಗಿರುತ್ತದೆಂದರೆ, ಬೇಕೆನಿಸಿದ್ದೆಲ್ಲವನ್ನೂ ಖರೀದಿಸಿ ಬಿಲ್ಲಿಂಗ್ ಕೌಂಟರ್ ಮುಂದಿರುವ ಸಾಲಿನಲ್ಲಿ ನಿಂತಾಗಲೂ ನಮ್ಮೆದುರು ಕೆಲವು ವಸ್ತುಗಳು ಪ್ರತ್ಯಕ್ಷವಾಗುತ್ತವೆ. ಸ್ವಲ್ಪ ಹೊತ್ತು ನೋಡುತ್ತಿದ್ದಂತೆ, ಇದೂ ಬೇಕಾಗುತ್ತದೆ ಎನ್ನಿಸುವುದಕ್ಕೆ ಶುರುವಾಗಿ, ಬಿಲ್ ಪಾವತಿಸುವ ಕ್ಷಣದಲ್ಲೂ ಒಂದೆರಡು ವಸ್ತುಗಳು ಬಿಲ್‌ಗೆ ಸೇರುತ್ತವೆ.

ಬೇಕಿರುವ ವಸ್ತುಗಳಿಗೂ, ಬೇಕೆನಿಸುವ ವಸ್ತುಗಳಿಗೂ ಇರುವ ಅಂತರದ ಕುರಿತು ನಮಗೆ ಸ್ಪಷ್ಟತೆ ಇದ್ದಾಗ ಮಾತ್ರ ದೊಡ್ಡ ಮಾರ್ಟ್‌ಗಳಲ್ಲಿನ ಖರೀದಿ ಮೂಲಕ ಒಂದಿಷ್ಟು ಹಣ ಉಳಿಸಲು ಸಾಧ್ಯ. ಇಲ್ಲವಾದಲ್ಲಿ, ಹೆಚ್ಚು ಹಣ ಉಳಿಸುತ್ತಿದ್ದೇವೆ ಎನ್ನುವ ಭ್ರಮೆಯಲ್ಲಿ ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಸ್ತುಗಳನ್ನು ಖರೀದಿಸುತ್ತೇವೆ, ಉಳಿಸಿದ್ದಕ್ಕಿಂತ ಹೆಚ್ಚು ಕಳೆದುಕೊಂಡಿರುತ್ತೇವೆ.

ಒಟ್ಟು ವಹಿವಾಟಿನ ಗಾತ್ರ ಹಿಗ್ಗಿಸಲು ಹೊಸ ಕಾರ್ಯತಂತ್ರಗಳ ಮೊರೆ ಹೋಗುವ ಮಾರ್ಟ್‌ಗಳು, ಉಳಿಸುವ ಉಮೇದಿನಲ್ಲಿ ಗಳಿಸಿದ್ದನ್ನು ಕರಗಿಸುವ ಮಾರುಕಟ್ಟೆಯ ಆಟಕ್ಕೆ ನಮ್ಮನ್ನು ನಾಜೂಕಾಗಿ ಅಣಿಗೊಳಿಸಿರುತ್ತವೆ. ಬೆಲೆ ಇರುವುದು ಬರೀ ನಾವು ವ್ಯಯಿಸುವ ಹಣಕ್ಕಷ್ಟೇ ಅಲ್ಲ, ಕಳೆಯುವ ಸಮಯಕ್ಕೂ ಎಂಬ ಅರಿವು, ನಮಗಿರಿವಿಲ್ಲದಂತೆಯೇ ನಾವು ಏನೆಲ್ಲ ಕಳೆದುಕೊಳ್ಳುತ್ತಿರುತ್ತೇವೆ ಎನ್ನುವ ಸ್ಪಷ್ಟತೆ ದೊರಕಿಸಿಕೊಡಲಿದೆ. ಕೊಳ್ಳುಬಾಕ ಸಂಸ್ಕೃತಿಯ ತೀವ್ರತೆಯಲ್ಲಿ ವಸ್ತುಗಳ ಉಪಯೋಗದ ನೈಜ ಸಾಧ್ಯತೆಯನ್ನೇ ಮರೆತಿದ್ದೇವೆ. ಅಗತ್ಯವಿಲ್ಲದ ವಸ್ತುಗಳು ಜೀವನಕ್ಕೆ ಭಾರ ಎನ್ನುವ ಸತ್ಯವನ್ನು ಮರೆತಿದ್ದೇವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

16ನೇ ಹಣಕಾಸು ಆಯೋಗದ ಮುಂದೆ ರಾಜ್ಯದ 9 ಬೇಡಿಕೆಗಳು

ರಾಜ್ಯಕ್ಕೆ ಶೇ 4.71ಕ್ಕಿಂತ ಹೆಚ್ಚು ತೆರಿಗೆ ಪಾಲು ಸಿಗಲೇಬೇಕು

16ನೇ ಹಣಕಾಸು ಆಯೋಗದ ವರದಿಯನ್ನು ಬಜೆಟ್ ಅಧಿವೇಶನದ ಆರಂಭದಲ್ಲಿ ಕೇಂದ್ರ ಸರ್ಕಾರ ಮಂಡಿಸುವ ನಿರೀಕ್ಷೆ ಇದೆ. 15ನೇ ಹಣಕಾಸು ಆಯೋಗದ ಶಿಫಾರಸಿನಿಂದ ಕರ್ನಾಟಕ ಸೇರಿದಂತೆ ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ಅನ್ಯಾಯವಾಗಿದೆ, ತೆರಿಗೆ ಪಾಲಿನಲ್ಲಿ ಗಣನೀಯ ಇಳಿಕೆಯಾಗಿದೆ ಎಂಬ ಕೂಗು ಮೊದಲಿನಿಂದಲೂ ಇದೆ. ಅನುದಾನ ಹಂಚಿಕೆಯಲ್ಲೂ ಕೇಂದ್ರ ಸರ್ಕಾರ ತಾರತಮ್ಯ ಎಸಗಿದೆ ಎಂಬ ಆಪಾದನೆಯನ್ನು ಬಿಜೆಪಿಯೇತರ ರಾಜ್ಯ ಸರ್ಕಾರಗಳು ಮಾಡುತ್ತಾ ಬಂದಿವೆ. 15ನೇ ಹಣಕಾಸು ಆಯೋಗದ ಶಿಫಾರಸಿನಿಂದ ರಾಜ್ಯಕ್ಕೆ ಆಗಿರುವ ಆರ್ಥಿಕ ನಷ್ಟ, ಅನುದಾನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಹಾಗೂ ಹಣಕಾಸು ಆಯೋಗಕ್ಕೆ ರಾಜ್ಯ ಮಾಡಿರುವ ಮನವಿಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ವಿವರಿಸಿದ್ದಾರೆ

• ಸಿದ್ದರಾಮಯ್ಯ

ಅರವಿಂದ ಪನಗರಿಯಾ ಅವರ ಅಧ್ಯಕ್ಷತೆಯ 16ನೇ ಹಣಕಾಸು ಆಯೋಗವು 2023ರಿಂದ ರಾಜ್ಯಗಳಿಗೆ ಭೇಟಿ ನೀಡಿ ಚರ್ಚಿಸಿ, ಮನವಿಗಳನ್ನು ಸ್ವೀಕರಿಸಿ 2025ರ ನ.17ರಂದು ತನ್ನ ವರದಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಿದೆ. ಸಂವಿಧಾನದ ವಿಧಿ 280ರಡಿ ರಾಷ್ಟ್ರಪತಿಯವರು ಹಣಕಾಸು ಆಯೋಗವನ್ನು ರಚಿಸುತ್ತಾರೆ. ಸಂಗ್ರಹವಾಗುವ ಒಟ್ಟು ತೆರಿಗೆ, ಆ ತೆರಿಗೆಯನ್ನು ರಾಜ್ಯಗಳಿಗೆ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಸೂತ್ರಗಳನ್ನು ಆಯೋಗವು ರೂಪಿಸಿ ಒಕ್ಕೂಟ ವ್ಯವಸ್ಥೆಯ ಮುಖ್ಯಸ್ಥರಾದ ರಾಷ್ಟ್ರಪತಿಯವರಿಗೆ ಶಿಫಾರಸು ಮಾಡುತ್ತದೆ. ಜೊತೆಗೆ, ಕೇಂದ್ರ ಪುರಸ್ಕೃತ ಯೋಜನೆಗಳಡಿ ರಾಜ್ಯಗಳಿಗೆ ನೀಡಬೇಕಾದ ಅನುದಾನ, ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕಾದ ಅನುದಾನ, ಆರೋಗ್ಯ, ಪ್ರಕೃತಿ ವಿಕೋಪಗಳಿಗಾಗಿ ಒದಗಿಸಬೇಕಾದ ಅನುದಾನ ಹಾಗೂ ಸುಭದ್ರ ಹಣಕಾಸು ಸ್ಥಿತಿ... ಹೀಗೆ ರಾಷ್ಟ್ರಪತಿಯವರು ಆಯೋಗಕ್ಕೆ ವಹಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಶಿಫಾರಸನ್ನೂ ಅದು ಮಾಡಬೇಕಾಗುತ್ತದೆ.

ಈ ವರದಿಯನ್ನು ಬಜೆಟ್ ಮಂಡಿಸುವ ಮೊದಲು ಬಿಡುಗಡೆ ಮಾಡುವ ನಿರೀಕ್ಷೆಯಿದೆ. ಹಿಂದಿನ ಆಯೋಗಗಳಿಗೆ ಇಲ್ಲದ ಮಹತ್ವ 16ನೇ ಹಣಕಾಸು ಆಯೋಗಕ್ಕೆ ಬಂದಿದೆ. ಕಾರಣ ಏನೆಂದರೆ, 15ನೇ ಹಣಕಾಸು ಆಯೋಗ ಮತ್ತು ಕೇಂದ್ರ ಸರ್ಕಾರವು ದೇಶದ ಪ್ರಗತಿಶೀಲ ರಾಜ್ಯಗಳಿಗೆ ಮಾಡಿದ ಅನ್ಯಾಯದ ಕಾರಣದಿಂದ ದೇಶದ ಬಹುತೇಕ ರಾಜ್ಯಗಳ ಆರ್ಥಿಕ ಪರಿಸ್ಥಿತಿ ಹದಗೆಡುವಂತಾಗಿದೆ. ಪ್ರಮುಖ ರಾಜ್ಯಗಳ ವಿತ್ತೀಯ ಶಿಸ್ತುಗಳೇ ಬುಡಮೇಲಾಗಿವೆ.

ಕರ್ನಾಟಕದ ಆರ್ಥಿಕ ಸ್ಥಿತಿಯನ್ನು ನೋಡಿದರೆ, 14ನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ 15ನೇ ಹಣಕಾಸು ಆಯೋಗದ ವರದಿಯಿಂದಾಗಿ ಶೇ 23ರಷ್ಟು ತೆರಿಗೆ ಪಾಲು ನೇರವಾಗಿ ಕಡಿಮೆಯಾಯಿತು. ಕೆಲವು ಆರ್ಥಿಕ ಅಜ್ಞಾನಿಗಳು ಈ ಸಂಗತಿಯನ್ನು ಅರ್ಥ ಮಾಡಿಕೊಳ್ಳದೆ ಅಪರಾ ತಪರಾ ವಿತಂಡವಾದ ಮಾಡುತ್ತಾರೆ. 14ನೇ ಹಣಕಾಸು ಆಯೋಗವು ಶೇ 4.71ರಷ್ಟು ಪಾಲನ್ನು ನಮಗೆ ಒದಗಿಸಿತ್ತು. 15ನೇ ಹಣಕಾಸು ಆಯೋಗವು ಇದನ್ನು ಶೇ 3.64ಕ್ಕೆ ಇಳಿಸುವ ಮೂಲಕ ಘೋರ ಅನ್ಯಾಯ ಮಾಡಿತು. ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ ₹100ರಲ್ಲಿ ಮೊದಲು ಕರ್ನಾಟಕಕ್ಕೆ ₹4.71 ಸಿಗುತ್ತಿದ್ದರೆ 15ನೇ ಆಯೋಗವು ಅದನ್ನು ₹3.64 ಇಳಿಸಿತು. ಇದರಿಂದ ರಾಜ್ಯಕ್ಕೆ ನೇರವಾಗಿ ಸುಮಾರು ₹80 ಸಾವಿರ ಕೋಟಿಯಷ್ಟು ಬೃಹತ್ ಪ್ರಮಾಣದ ತೆರಿಗೆ ಪಾಲು ಸಿಗದೆ ಅನ್ಯಾಯವಾಯಿತು.

ದೇಶದ ಆರ್ಥಿಕ ಶಕ್ತಿಯಲ್ಲಿ ಚಾಲಕ ಸ್ಥಾನದಲ್ಲಿರುವ ಕರ್ನಾಟಕ ತಲಾವಾರು ಆರ್ಥಿಕ ಉತ್ಪಾದಕತೆಯಲ್ಲಿ ಮೊದಲ ಸ್ಥಾನದಲ್ಲಿದೆ. ತೆರಿಗೆ, ಸೆಸ್ ಮುಂತಾದ ರೂಪದಲ್ಲಿ ಕೇಂದ್ರ ಸರ್ಕಾರವು ಕರ್ನಾಟಕದಿಂದ ₹4.5 ಲಕ್ಷ ಕೋಟಿಯಿಂದ ₹5 ಲಕ್ಷ ಕೋಟಿಗಳಷ್ಟು ಸಂಗ್ರಹಿಸುತ್ತದೆ. ರಾಜ್ಯದ ಒಟ್ಟಾರೆ ಆಯವ್ಯಯದಲ್ಲಿ ಇಡೀ ದೇಶದಲ್ಲಿಯೇ ಕೇಂದ್ರದಿಂದ ಅತ್ಯಂತ ಕಡಿಮೆ ತೆರಿಗೆ ಪಾಲು ಮತ್ತು ಅನುದಾನ ಪಡೆಯುವ ರಾಜ್ಯವೂ ಕರ್ನಾಟಕವೇ ಆಗಿರುವುದು ದುರದೃಷ್ಟಕರ. ಈ ಹಿನ್ನೆಲೆಯಲ್ಲಿ ನಮಗೆ 14ನೇ ಹಣಕಾಸು ಆಯೋಗವು ನೀಡಿದ್ದ ಶೇ 4.71ರಷ್ಟು ಪಾಲನ್ನು ಕೊಟ್ಟರೆ ಮಾತ್ರ ನಾವು ನಿಟ್ಟುಸಿರು ಬಿಡುವಂತಾಗುತ್ತದೆ. ಅದಕ್ಕಿಂತ ಹೆಚ್ಚು ಕೊಟ್ಟರೆ ಮಾತ್ರ ನೈಜವಾಗಿ ನ್ಯಾಯ ಸಿಕ್ಕಂತಾಗುತ್ತದೆ. ಅದಕ್ಕಿಂತ ಶೇ 0.001ರಷ್ಟು ಕಡಿಮೆ ಕೊಟ್ಟರೂ ರಾಜ್ಯಕ್ಕೆ ಅನ್ಯಾಯ ಮುಂದುವರಿಯುತ್ತದೆ ಎಂದು ಭಾವಿಸಬೇಕಾಗುತ್ತದೆ.

ಒಕ್ಕೂಟ ಸರ್ಕಾರವು ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ಮಿತಿಯಿಲ್ಲದ ಪ್ರಮಾಣದಲ್ಲಿ ಸಂಗ್ರಹಿಸಿ ಅದರಲ್ಲಿ ಪಾಲು ಕೊಡದಿರುವುದರಿಂದ ರಾಜ್ಯಗಳಿಗೆ ತೀವ್ರ ಅನ್ಯಾಯವಾಗುತ್ತಿದೆ. 2023-24ರಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳ ಮೂಲಕವೇ ₹5.53 ಲಕ್ಷ ಕೋಟಿ ಸಂಗ್ರಹಿಸಿದೆ. 2011-12ರಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳ ಪ್ರಮಾಣ ಶೇ 9.4ರಷ್ಟಿತ್ತು. ಇದು 2023-24ರಲ್ಲಿ ಶೇ 20ರ ವರೆಗೂ ಏರಿಕೆಯಾಯಿತು. ಹೀಗಾಗಿರುವುದರಿಂದ ರಾಜ್ಯಗಳಿಗೆ ಶೇ 42ರಷ್ಟು ತೆರಿಗೆ ಸಂಪನ್ಮೂಲಗಳನ್ನು ಹಂಚಿಕೆ ಮಾಡುತ್ತೇವೆ ಎಂದು ಹೇಳಿದರೂ ವಾಸ್ತವವಾಗಿ ದೊರೆಯುತ್ತಿರುವುದು ಶೇ 30ರಷ್ಟು ಮಾತ್ರ.

ಜಿಎಸ್‌ಟಿ ಸೆಸ್‌ಗಳನ್ನು ಕೇಂದ್ರ ಸರ್ಕಾರವು ಜನರಿಂದ ಸಂಗ್ರಹಿಸುತ್ತಲೇ ಇದೆ. ರಾಜ್ಯಗಳಿಗೆ ಅದರಲ್ಲಿ ನಯಾಪೈಸೆಯೂ ಬರುತ್ತಿಲ್ಲ. ಇದನ್ನು 2022ರ ಜೂನ್‌ನಿಂದಲೇ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ. ಜಿಎಸ್‌ಟಿ ವ್ಯವಸ್ಥೆಯನ್ನು ಜಾರಿಗೆ ತಂದಾಗ ವಾರ್ಷಿಕವಾಗಿ ಶೇ 14ರಷ್ಟು ಬೆಳವಣಿಗೆಯನ್ನು ರಾಜ್ಯಕ್ಕೆ ಖಾತ್ರಿ ಮಾಡಲಾಗಿತ್ತು. ಆ ಬೆಳವಣಿಗೆ ಸಾಧ್ಯವಾಗದೇ ಹೋದಾಗ ರಾಜ್ಯಕ್ಕೆ ಜಿಎಸ್‌ಟಿ ಪರಿಹಾರ ಕೊಡಬೇಕಾಗಿತ್ತು. ಕೊಡದೇ ಹೋದ ಕಾರಣದಿಂದ ರಾಜ್ಯಕ್ಕೆ ಪ್ರತಿ ವರ್ಷ ಸುಮಾರು ₹20 ಸಾವಿರ ಕೋಟಿಗಳಷ್ಟು ನಷ್ಟವಾಗುತ್ತಿದೆ. ಕೇಂದ್ರ ಸರ್ಕಾರವು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಏಕಾಏಕಿ ಜಿಎಸ್‌ಟಿ ದರಗಳನ್ನು ಕಡಿಮೆ ಮಾಡಿತು. ಇದರಿಂದಾಗಿ ಜಿಎಸ್‌ಟಿ ಬೆಳವಣಿಗೆ ದರವು ಶೇ 5ಕ್ಕೆ ಕುಸಿದಿದೆ.

ಜಿಎಸ್‌ಟಿ ದರಗಳ ಏಕಾಏಕಿ ಪರಿಷ್ಕರಣೆಗೆ ಮುಖ್ಯ ಕಾರಣ ಜನರ ಕೊಂಡುಕೊಳ್ಳುವ ಶಕ್ತಿ ಕ್ಷೀಣಿಸುತ್ತಿರುವ ವಿದ್ಯಮಾನವೇ ಆಗಿದೆ. ಇಲ್ಲದಿದ್ದರೆ ಕಳೆದ ಫೆಬ್ರುವರಿಯಿಂದೀಚೆಗೆ ಎರಡು ಬಾರಿ ರೆಪೊ ದರಗಳನ್ನು ಕಡಿಮೆ ಮಾಡಲು ಕಾರಣಗಳಿರಲಿಲ್ಲ. 2017ರಿಂದ ಜಿಎಸ್‌ಟಿಯ ನೆಪದಲ್ಲಿ ಅಪಾರ ಪ್ರಮಾಣದ ತೆರಿಗೆ ಸಂಗ್ರಹಿಸಿದ ಕೇಂದ್ರವು ಇದ್ದಕ್ಕಿದ್ದಂತೆ ಪರಿಷ್ಕರಣೆ ಮಾಡಿ ತನ್ನದು ಜನಹಿತಕಾರಿ ತೆರಿಗೆ ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಇಷ್ಟಾದರೂ ದೇಶದ ಗ್ರಾಹಕ ಬೆಲೆ ಸೂಚ್ಯಂಕವನ್ನು (ಸಿಪಿಐ) ಪರಿಶೀಲಿಸಿದರೆ ಅತ್ಯಂತ ನಿರಾಶಾದಾಯಕ ಸ್ಥಿತಿಯಲ್ಲಿಯೇ ಇದೆ. ಹಣದುಬ್ಬರ ಪ್ರಮಾಣವು ಕನಿಷ್ಠ ಶೇ 2ರಷ್ಟು ಮತ್ತು ಗರಿಷ್ಠ ಶೇ 4ರಷ್ಟು ಇರಬೇಕಾಗುತ್ತದೆ. ಇದು ಶೇ 2ಕ್ಕಿಂತ ಕಡಿಮೆಯಾದರೆ ಅಪಾಯಕಾರಿ ಸ್ಥಿತಿ ಎಂದು ಪರಿಗಣಿಸಲಾಗುತ್ತದೆ. 2025ರ ಮೇನಿಂದ ಸರಾಸರಿ ಸಿಪಿಐ ಅನ್ನು ನೋಡಿದರೆ ಕರ್ನಾಟಕವನ್ನು ಹೊರತುಪಡಿಸಿ ಉಳಿದ ರಾಜ್ಯಗಳ ಸಿಪಿಐ ಆಶಾದಾಯಕವಾಗಿಲ್ಲ. ಡಿಸೆಂಬರ್ ತಿಂಗಳಲ್ಲಿ ಮಾತ್ರ ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಲ್ಲಿ ತುಸು ಸುಧಾರಿತ ಪರಿಸ್ಥಿತಿಯಿದೆ. ಕರ್ನಾಟಕದ ಸಿಪಿಐ ಆರೋಗ್ಯಕರವಾಗಿದ್ದರೆ ಅದಕ್ಕೆ ಕಾರಣ ನಮ್ಮ ಗ್ಯಾರಂಟಿ ಯೋಜನೆಗಳು.

2020ರಿಂದ ರಾಜ್ಯವು ಆರ್ಥಿಕ ಅನ್ಯಾಯಗಳಿಂದ ಬಹಳ ಬಳಲಿದೆ. ಈ ಎಲ್ಲ ಸಂಗತಿಗಳನ್ನು ಗಮನದಲ್ಲಿ ಇಟ್ಟುಕೊಂಡು 16ನೇ ಹಣಕಾಸು ಆಯೋಗ ಮತ್ತು ಕೇಂದ್ರ ಸರ್ಕಾರಗಳು ರಾಜ್ಯಕ್ಕೆ ನ್ಯಾಯ ನೀಡಬಹುದು ಎಂದು ನಿರೀಕ್ಷಿಸುತ್ತಿದ್ದೇವೆ. ಜನರ ಹಣಕ್ಕೆ ಟ್ರಸ್ಟಿಯಾಗಿರುವ ಸರ್ಕಾರವು ಈ ಎಲ್ಲ ವಿಚಾರಗಳನ್ನು ನಾಡಿನ ಮುಂದೆ ಮಂಡಿಸಬೇಕಾದುದು ಕರ್ತವ್ಯವೆಂದು ಭಾವಿಸಿದೆ.

ಅನುದಾನ ಕೊಡದೆ ಕೇಂದ್ರದಿಂದ ಅನ್ಯಾಯ

15ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ₹5,495 ಕೋಟಿ ವಿಶೇಷ ಅನುದಾನ ಹಾಗೂ ಬೆಂಗಳೂರಿನ ಪೆರಿಫೆರಲ್ ರಸ್ತೆಗೆ ₹3,000 ಕೋಟಿ ಮತ್ತು ಕೆರೆಗಳ ಅಭಿವೃದ್ಧಿಗೆ ₹3,000 ಕೋಟಿ ಸೇರಿ ಒಟ್ಟಾರೆ ₹11,495 ಕೋಟಿ ಕೊಡಬೇಕೆಂದು ಶಿಫಾರಸು ಮಾಡಿತ್ತು. ಆದರೆ ಕೇಂದ್ರ ಸರ್ಕಾರ ಅದನ್ನು ಕೊಡದೆ ಅನ್ಯಾಯ ಮಾಡಿತು.

ಕೇಂದ್ರ ಪುರಸ್ಕೃತ ಯೋಜನೆಗಳಿಗೆ ರಾಜ್ಯಗಳು ಶೇ 40ರಷ್ಟನ್ನು ತಮ್ಮ ತೆರಿಗೆ ಸಂಗ್ರಹದಿಂದ ಕೊಡಬೇಕಾಗಿದೆ. ಆದರೆ ಕರ್ನಾಟಕವು 2021ರಿಂದ 2024-25ರವರೆಗೆ ₹49,271 ಕೋಟಿ ಕೊಡಬೇಕಾಗಿತ್ತು. ಆದರೆ ಕೇಂದ್ರವು ತನ್ನ ಪಾಲನ್ನು ಸಮರ್ಪಕವಾಗಿ ಕೊಡದೇ ಹೋದ ಕಾರಣ ರಾಜ್ಯವು ಹೆಚ್ಚುವರಿಯಾಗಿ ₹23,402 ಕೋಟಿ ಭರಿಸಬೇಕಾಯಿತು. ಹಾಗಾಗಿ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಕರ್ನಾಟಕವು ಭರಿಸಿದ ಪಾಲು ಶೇ 50ಕ್ಕಿಂತ ಹೆಚ್ಚಾಯಿತು. ಜಲಜೀವನ್ ಮಿಷನ್ ಯೋಜನೆಯೊಂದರಲ್ಲೇ ₹13 ಸಾವಿರ ಕೋಟಿಗೂ ಹೆಚ್ಚಿನ ಮೊತ್ತವನ್ನು ಕೇಂದ್ರ ಸರ್ಕಾರ ಕೊಡದೆ ಬಾಕಿ ಉಳಿಸಿಕೊಂಡಿದೆ.

ಆಯೋಗವು ಶಿಫಾರಸು ಮಾಡಿದ್ದ ಅನುದಾನದಲ್ಲಿ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ₹1,802 ಕೋಟಿ ಹಾಗೂ ಆರೋಗ್ಯ ಕ್ಷೇತ್ರಕ್ಕೆ ₹874 ಕೋಟಿಗಳಷ್ಟು ಕಡಿಮೆ ಅನುದಾನ ನೀಡಲಾಗಿದೆ.

ರಾಜ್ಯವು 16ನೇ ಹಣಕಾಸು ಆಯೋಗದ ಮುಂದೆ ಸಲ್ಲಿಸಿದ ಬೇಡಿಕೆ ಹಾಗೂ ಒತ್ತಾಯಗಳನ್ನು ಜನರ ಮುಂದೆ ತಿಳಿಸಬೇಕಾದುದು ನಮ್ಮ ಕರ್ತವ್ಯ. ನಮ್ಮ ಒತ್ತಾಯಪೂರ್ವಕ ಮನವಿಗಳಿವು:

1. ರಾಜ್ಯಕ್ಕೆ 15ನೇ ಹಣಕಾಸು ಆಯೋಗದಲ್ಲಿ ಸಮಸ್ಯೆಯಾಗಲು ಆಯೋಗವು ಅಳವಡಿಸಿಕೊಂಡ ಸೂತ್ರಗಳಲ್ಲಿಯೇ ದೋಷಗಳಿದ್ದವು. ಆದಾಯ ದೂರ ಅಥವಾ ಇನ್‌ಕಂ ಡಿಸ್ಟೆನ್ಸ್ ಎಂಬ ಸೂತ್ರಕ್ಕೆ ಶೇ 45ರಷ್ಟು ಪ್ರಾಮುಖ್ಯ (ವೈಟೇಜ್) ನೀಡಿದ್ದು ಮುಖ್ಯ ಕಾರಣ. ಕರ್ನಾಟಕದ ಜನರ ತಲಾ ಆದಾಯ ಹೆಚ್ಚಿಗಿದೆಯೆಂದು ನಮಗೆ ಕಡಿಮೆ ಪಾಲನ್ನು ಹಂಚಿಕೆ ಮಾಡಲಾಯಿತು. ತಲಾ ಆದಾಯ ಎನ್ನುವುದು ಆರ್ಥಿಕತೆಯನ್ನು ಅಳೆಯುವ ಮಾನದಂಡಗಳಲ್ಲೊಂದಷ್ಟೆ. ಅದೇ ಮುಖ್ಯವಲ್ಲ. ರಾಜ್ಯದ ಉತ್ಪನ್ನವನ್ನು ಶ್ರೀಮಂತರು ಮತ್ತು ಬಡವರನ್ನೆಲ್ಲ ಒಂದೇ ಗುಂಪಿಗೆ ಸೇರಿಸಿ ಎಲ್ಲರಿಗೂ ಸಮಾನವಾಗಿ ವಿಭಾಗಿಸಲಾಗುತ್ತದೆ. ಇದರಿಂದ ಬರುವ ಮೊತ್ತವನ್ನು ತಲಾ ಆದಾಯ ಎನ್ನಲಾಗುತ್ತದೆ. 2014ರಿಂದ ಈಚೆಗೆ ಆಡಳಿತ ನಡೆಸುತ್ತಿರುವ ಕೇಂದ್ರ ಸರ್ಕಾರವು ಅಳವಡಿಸಿಕೊಂಡ ನೀತಿಗಳಿಂದಾಗಿ ಸಂಪತ್ತು ಕೆಲವೇ ಜನರ ಬಳಿ ಕೇಂದ್ರೀಕೃತವಾಗುತ್ತಿದೆ. ಜಾಗತಿಕ ಅಸಮಾನತಾ ಸೂಚ್ಯಂಕದ ಅಧ್ಯಯನಗಳ ಪ್ರಕಾರ, ಶೇ 50ರಷ್ಟಿರುವ ಬಡ ಜನರು ಕೇವಲ ಶೇ 15ರಷ್ಟು ಆದಾಯ ಗಳಿಸುತ್ತಿದ್ದಾರೆ. ಶೇ 10ರಷ್ಟಿರುವ ಶ್ರೀಮಂತರು ಶೇ 58ಕ್ಕೂ ಹೆಚ್ಚಿನ ಆದಾಯ ಗಳಿಸುತ್ತಿದ್ದಾರೆ. ಈ ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ಅಳತೆ ಮಾಡಿ ಅದನ್ನು ಆದಾಯ ದೂರ ಎಂಬ ಸೂತ್ರಕ್ಕೆ ತಂದು ಅನುದಾನಗಳನ್ನು ಖೋತಾ ಮಾಡುವುದು ಅನ್ಯಾಯವಾಗುತ್ತದೆ ಎಂದು ಹೇಳಿದ್ದೇವೆ. ಕಲ್ಯಾಣ ಕರ್ನಾಟಕವೂ ಸೇರಿದಂತೆ ಕೆಲವು ಜಿಲ್ಲೆಗಳ ತಲಾ ಆದಾಯ ದೇಶದ ಸರಾಸರಿ ತಲಾ ಆದಾಯಕ್ಕಿಂತ ಕಡಿಮೆ ಇದೆ ಎಂಬುದನ್ನು 16ನೇ ಹಣಕಾಸು ಆಯೋಗಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಆದ್ದರಿಂದ ಈ ಸೂತ್ರವನ್ನು ಶೇ 45ರ ಬದಲು ಶೇ 25ಕ್ಕೆ ಇಳಿಸಬೇಕು.

2. 15 ನೇ ಹಣಕಾಸು ಆಯೋಗವು ಜಿಎಸ್‌ಡಿಪಿಯನ್ನು ಲೆಕ್ಕ ಹಾಕುವಾಗ ಅಳವಡಿಸಿಕೊಂಡಿದ್ದ ಮೂಲ ವರ್ಷ (ಬೇಸ್ ಇಯರ್) 2004-05ರ ಬದಲು 2011-12ಕ್ಕೆ ಬದಲಾಯಿಸಿದ್ದರಿಂದ ಕರ್ನಾಟಕಕ್ಕೆ ನಷ್ಟವಾಯಿತು. 2004-05ರಲ್ಲಿ ರಾಜ್ಯಗಳು ರಫ್ತಿನಲ್ಲಿ, ಉತ್ಪಾದನೆಯ ವಿಧಾನಗಳಲ್ಲಿ ತುಸು ಸಮೀಪವರ್ತಿಯಾಗಿದ್ದವು. ಐಟಿ ಕ್ರಾಂತಿ ಸಂಭವಿಸಿದ ನಂತರ ಕಾನೂನು ಸುವ್ಯವಸ್ಥೆ ಸೇರಿದಂತೆ ಯಾವ ರಾಜ್ಯವು ಅನುಕೂಲಕರವಾಗಿದೆಯೋ ಅಲ್ಲಿ ಐಟಿ ಕಂಪನಿಗಳು ನೆಲಸಿದವು. ಅವುಗಳಲ್ಲಿ ಬೆಂಗಳೂರು ಒಂದು. ಐಟಿ ರಫ್ತಿನಿಂದ ಕೇಂದ್ರಕ್ಕೆ ಹಲವಾರು ಅನುಕೂಲಗಳಾಗುತ್ತಿವೆ. ನಮ್ಮಲ್ಲಿ ಖರೀದಿ ಸಾಮರ್ಥ್ಯ ಹಾಗೂ ಆರ್ಥಿಕ ಚಟುವಟಿಕೆಗಳು ಒಂದಿಷ್ಟು ಹೆಚ್ಚಾಗಬಹುದು. ಆದರೆ ಐಟಿ ರಫ್ತಿನ ಕಾರಣಕ್ಕೆ ನಮ್ಮ ಜಿಎಸ್‌ಡಿಪಿ ಹೆಚ್ಚು ಹಿಗ್ಗಿದಂತೆ ಕಾಣುತ್ತದೆ. ಮೂಲ ವರ್ಷ ಬದಲಾಯಿಸಿದ ಕಾರಣಕ್ಕೆ ಕರ್ನಾಟಕದ ಜಿಎಸ್‌ಡಿಪಿ ಬೆಳವಣಿಗೆ ದರ ಶೇ 33ರಷ್ಟು ಹೆಚ್ಚಾಗಿರುವಂತೆ ಕಂಡು ಬಂದಿತು. ಇತರೆ ರಾಜ್ಯಗಳ ಸರಾಸರಿ ಏರಿಕೆ ಶೇ 5.6ರಷ್ಟು ಎಂದು ಲೆಕ್ಕ ಹಾಕಿದ ಕಾರಣ ನಮಗೆ ಅನ್ಯಾಯವಾಗಿದೆ. ಹೀಗಾಗಿ ಈ ಮಾನದಂಡವನ್ನು ವಾಸ್ತವಿಕವಾಗಿ ಲೆಕ್ಕ ಹಾಕಿ ಸರಿಪಡಿಸಬೇಕು.

3. 15ನೇ ಹಣಕಾಸು ಆಯೋಗವು ಜನಸಂಖ್ಯೆಯನ್ನು 1971ರ ಬದಲಾಗಿ 2011 ಅನ್ನು ಆಧಾರವಾಗಿರಿಸಿಕೊಂಡ ಕಾರಣದಿಂದಲೂ ನಮಗೆ ತೀವ್ರ ರೂಪದ ಅನ್ಯಾಯವಾಗಿದೆ. ಜನಸಂಖ್ಯಾ ನಿಯಂತ್ರಣದ ಮೂಲಕ ಅಭಿವೃದ್ಧಿ ಸಾಧಿಸುತ್ತಿರುವ ರಾಜ್ಯಗಳಿಗೆ ಇದರಿಂದ ದೊಡ್ಡ ಹೊಡೆತ ಬಿದ್ದಿತು. ಜನಸಂಖ್ಯಾ ನಿಯಂತ್ರಣ ಸಾಧಿಸಿದ ರಾಜ್ಯಗಳಿಗೆ ಉತ್ತೇಜನ ನೀಡುವ ಬದಲು ಘೋರ ಶಿಕ್ಷೆ ನೀಡಲಾಯಿತು. ಇದನ್ನು ಸರಿಪಡಿಸಬೇಕಾದರೆ 1971ರ ಜನಸಂಖ್ಯೆಯನ್ನೇ ಮಾನದಂಡವನ್ನಾಗಿ ಇಟ್ಟುಕೊಳ್ಳಬೇಕು ಹಾಗೂ ಜನಸಂಖ್ಯೆಗೆ ನಿಗದಿಪಡಿಸಿರುವ ಪ್ರಾಮುಖ್ಯವನ್ನು ವೈಜ್ಞಾನಿಕವಾಗಿ ಪರಿಗಣಿಸಬೇಕು.

4. ಪ್ರಕೃತಿ ವಿಕೋಪಗಳನ್ನು ನಿಭಾಯಿಸಲು ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಅನುದಾನಗಳನ್ನು ವೈಜ್ಞಾನಿಕ ವಿಧಾನಗಳ ಮೂಲಕ ಲೆಕ್ಕ ಹಾಕಿ ಹಂಚಿಕೆ ಮಾಡಬೇಕು. 2018-24ರ ಅವಧಿಯಲ್ಲಿ ರಾಜ್ಯವು ಪ್ರಕೃತಿ ವಿಕೋಪಗಳಿಂದಾಗಿ ₹1.56 ಲಕ್ಷ ಕೋಟಿಗಳಷ್ಟು ನಷ್ಟವನ್ನು ಅನುಭವಿಸಿದೆ. 2002ರಿಂದಲೂ ಅತಿವೃಷ್ಟಿ, ಬರ, ಪ್ರವಾಹಗಳಿಗೆ ರಾಜ್ಯವು ನಿರಂತರವಾಗಿ ಒಳಗಾಗುತ್ತಲೇ ಇದೆ. ಇಷ್ಟಿದ್ದರೂ ನಮಗೆ ಕೇವಲ 5 ರಿಸ್ಕ್ ಫ್ಯಾಕ್ಟರ್ ಅಂಕ ನೀಡುವ ಮೂಲಕ ವಂಚಿಸಲಾಗಿದೆ. ಇದನ್ನು 15ಕ್ಕೆ ಏರಿಸಬೇಕು.

5. ವಿಕೇಂದ್ರೀಕರಣದಲ್ಲಿ ಉತ್ತಮ ಸಾಧನೆ ಮಾಡಿದ ರಾಜ್ಯಗಳನ್ನು ಪ್ರೋತ್ಸಾಹಿಸಲು ಪಂಚಾಯತ್ ಅಧಿಕಾರ ಹಂಚಿಕೆ ಸೂಚ್ಯಂಕವನ್ನು ಅಳವಡಿಸಿಕೊಳ್ಳಬೇಕು. ಹಿಂದಿನ ಹಣಕಾಸು ಆಯೋಗಗಳು ಜನಸಂಖ್ಯೆಗೆ ಶೇ 90 ಹಾಗೂ ವಿಸ್ತೀರ್ಣಕ್ಕೆ ಶೇ 10ರಷ್ಟು ಮಾನದಂಡಗಳನ್ನು ಅಳವಡಿಸಿಕೊಂಡ ಕಾರಣ, ವಿಕೇಂದ್ರೀಕರಣ ಸಾಧಿಸಿದ ರಾಜ್ಯಗಳಿಗೆ ಅನ್ಯಾಯವಾಯಿತು. ಆದ್ದರಿಂದ ಜನಸಂಖ್ಯೆಗೆ ಶೇ 60, ಭೌಗೋಳಿಕ ವಿಸ್ತೀರ್ಣಕ್ಕೆ ಶೇ 20 ಮತ್ತು ಅಧಿಕಾರ ಹಂಚಿಕೆ ಸೂಚ್ಯಂಕಕ್ಕೆ ಶೇ 20ರಷ್ಟು ಮಾನದಂಡಗಳನ್ನು ನಿಗದಿಪಡಿಸಬೇಕು.

6. ರಾಜ್ಯವು ಕಲ್ಯಾಣ ಕರ್ನಾಟಕಕ್ಕೆ 5 ವರ್ಷಗಳಲ್ಲಿ ₹25 ಸಾವಿರ ಕೋಟಿಗಳನ್ನು ಮೀಸಲಿರಿಸಿದೆ. ಇದರ ಜೊತೆಗೆ ಕೇಂದ್ರ ಸರ್ಕಾರವೂ ಅಷ್ಟೇ ಮೊತ್ತವನ್ನು ಮ್ಯಾಚಿಂಗ್ ಗ್ರ್ಯಾಂಟ್ ನೀಡಬೇಕು ಹಾಗೂ ಆ ಭಾಗದ ಪರಿಸರ ಸಂರಕ್ಷಣೆ ಮತ್ತು ವಿಪತ್ತು ನಿರ್ವಹಣೆಗಾಗಿ ₹10 ಸಾವಿರ ಕೋಟಿ ವಿಶೇಷ ಪ್ಯಾಕೇಜ್ ನೀಡಬೇಕು.

7. ಮಲೆನಾಡು, ಕರಾವಳಿ ಹಾಗೂ ಪಶ್ಚಿಮ ಘಟ್ಟಗಳು ಪರಿಸರ ಸೂಕ್ಷ್ಮ ವಲಯಗಳಾಗಿವೆ. ಅವು ಇಡೀ ಭಾರತದ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತಿವೆ. ಅಲ್ಲಿನ ಕೃಷಿಕರ ಬದುಕು ಸಂಕಷ್ಟದಲ್ಲಿದೆ. ಅದಕ್ಕಾಗಿ ವಿಶೇಷ ಅನುದಾನಗಳನ್ನು ಒದಗಿಸಬೇಕು. ಅಲ್ಲದೆ, ರಾಜಸ್ಥಾನದ ನಂತರ ಅತಿ ಹೆಚ್ಚು ಒಣ ಭೂಮಿ ಹೊಂದಿರುವ ರಾಜ್ಯ ಕರ್ನಾಟಕವಾಗಿದೆ. ಒಣ ಭೂಮಿಗಳಿಗೆ ನೀರಾವರಿ ವ್ಯವಸ್ಥೆ ಕಲ್ಪಿಸುವ ಜವಾಬ್ದಾರಿಯೂ ನಮ್ಮ ಮೇಲಿದೆ. ಅದಕ್ಕೆ ಅನುದಾನಗಳನ್ನು ಕೊಡಬೇಕು.

8. ಬೆಂಗಳೂರಿನ ಮೂಲ ಸೌಕರ್ಯ ಅಭಿವೃದ್ಧಿಗೆ ಮುಂದಿನ 5 ವರ್ಷಗಳಲ್ಲಿ ₹1.15 ಲಕ್ಷ ಕೋಟಿಗಳಷ್ಟು ಹೂಡಿಕೆ ಅಗತ್ಯವಿದೆ. ಇದಕ್ಕಾಗಿ 16ನೇ ಹಣಕಾಸು ಆಯೋಗವು ಕನಿಷ್ಠ ₹27,793 ಕೋಟಿಗಳನ್ನಾದರೂ ನೀಡುವಂತೆ ಶಿಫಾರಸು ಮಾಡಬೇಕು.

9. ಪ್ರಧಾನಿಯವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಒತ್ತಾಯ ಮಾಡುತ್ತಿದ್ದಂತೆಯೇ ರಾಜ್ಯಗಳಿಗೆ ಹಂಚಿಕೆ ಮಾಡುತ್ತಿರುವ ಶೇ 41ರಷ್ಟು ಹಂಚಿಕೆಯನ್ನು ಶೇ 50ಕ್ಕೆ ಏರಿಕೆ ಮಾಡಬೇಕು; ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ಕೇಂದ್ರದ ಆದಾಯದ ಶೇ 5ಕ್ಕೆ ಮಾತ್ರ ಸೀಮಿತಗೊಳಿಸಿ ಉಳಿಕೆ ಮೊತ್ತವನ್ನು ರಾಜ್ಯಗಳಿಗೆ ಹಂಚಬೇಕು.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಇತ್ತೀಚೆಗೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಿರುವ ವಿಡಿಯೊ ತುಣುಕನ್ನು ಅಬ್ಬಾಸ್ ಚಾಂಡಿಯೊ (@AbbasChandio__) ಎಂಬ 'ಎಕ್ಸ್' ಖಾತೆಯಲ್ಲಿ ಇದೇ 14ರಂದು ಪೋಸ್ಟ್ ಮಾಡಲಾಗಿದೆ. ಅದರಲ್ಲಿ ಪ್ರಶ್ನೆಗೆ ಉತ್ತರಿಸುವ ದ್ವಿವೇದಿ ಅವರು, 'ಆಪರೇಷನ್ ಸಿಂಧೂರ ಇನ್ನೂ ನಡೆಯುತ್ತಿದೆ ಎಂದು ನಾನು ಈ ಹಿಂದೆ ಹೇಳಿದ್ದೆ. ಯಾಕೆಂದರೆ ಆ ಕಾರ್ಯಾಚರಣೆಯ ಉದ್ದೇಶ ಇನ್ನೂ ಪೂರ್ಣವಾಗಿ ಈಡೇರಿಲ್ಲ. ನಮಗೆ ಬೇಕಾದ ಫಲಿತಾಂಶವನ್ನು ಪಡೆಯಲು ನಾವು ಬದ್ಧರಾಗಿದ್ದೇವೆ. ಆ ಸಮಯದಲ್ಲಿ ನಮ್ಮ ಪಡೆಗಳು ಎಲ್ಲ ರೀತಿಯಲ್ಲೂ ಶ್ರಮ ಹಾಕಿರುವುದು ನಿಮಗೆ ಗೊತ್ತೇ ಇದೆ. ಆದರೆ, (ಅಮೆರಿಕ) ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಧ್ಯಪ್ರವೇಶಿಸಿ, ಸಂಘರ್ಷವನ್ನು ಕೊನೆಗೊಳಿಸಿದರು. ಇದು ನಮ್ಮ ಪ್ರತೀಕಾರವನ್ನು ಸೀಮಿತಗೊಳ್ಳುವಂತೆ ಮಾಡಿತು. ರಾಜತಾಂತ್ರಿಕ ಮಧ್ಯಪ್ರವೇಶವು ನಮಗೆ ಹಿನ್ನಡೆ ತಂದಿತು' ಎಂದು ಹೇಳುತ್ತಾರೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಇಂಡಿಯಾ ಟುಡೇಯ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಿದ ವಿಡಿಯೊ ಸಿಕ್ಕಿತು. ಆ ವಿಡಿಯೊವು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿರುವ ವಿಡಿಯೊವನ್ನೇ ಹೋಲುತ್ತಿತ್ತು. ಅದು ಜ.13ರಂದು ನಡೆದ ಸೇನೆಯ ವಾರ್ಷಿಕ ಪತ್ರಿಕಾಗೋಷ್ಠಿಯ ವಿಡಿಯೊವಾಗಿತ್ತು. ಅದನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದರಲ್ಲಿ ಎಲ್ಲೂ ದ್ವಿವೇದಿ ಅವರು ಈ ರೀತಿ ಹೇಳಿರುವುದು ಕಂಡು ಬರಲಿಲ್ಲ. ಅನುಮಾನ ಬಂದು, ವಿಡಿಯೊ ತುಣುಕಿನಿಂದ ಧ್ವನಿಯನ್ನು ಪ್ರತ್ಯೇಕಿಸಿ ಎಐ ಧ್ವನಿ ಪತ್ತೆ ಟೂಲ್ ಔರಿಜಿನ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ, ಅದು ಕೃತಕವಾಗಿ ಸೃಷ್ಟಿಸಿದ ಧ್ವನಿ ಎಂಬುದು ದೃಢಪಟ್ಟಿತು. ದ್ವಿವೇದಿ ಅವರ ಧ್ವನಿಯನ್ನು ತಿರುಚಿ, ಪತ್ರಿಕಾಗೋಷ್ಠಿಯಲ್ಲಿ ಆ ರೀತಿ ಮಾತನಾಡಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6298

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪೂಜಾ ಸಮಯದಲ್ಲಿ ನೀರು ತುಂಬಿಟ್ಟಿರುವ ಚೊಂಬು (3)
5.ಸಮಾಧಾನಿ ಹೆಂಗಸಿಲ್ಲಿ ತಿರುಗಿದ್ದಾಳಲ್ಲಾ? (3)
7.ಹತ್ತು ವರ್ಷಗಳ ಅವಧಿ (3)
9.ವನದಲ್ಲಿ ಕೊಟ್ಟ ವಾಗ್ದಾನ (3)
11.ಜನರ ಕಲ್ಯಾಣಕ್ಕಾಗಿ ಕಟ್ಟಿಸಿರುವ ಮೆಟ್ಟಿಲುಗಳುಳ್ಳ ಭಾವಿ (3)
12.ಬವಣೆ ಪಟ್ಟು ಬೆಳೆದ ಧಾನ್ಯ (3)
13.ಇದಿನ್ನೂ ಕರು ಹಾಕದ ಹಸು! (3)
15.ಹಿರಿ ಹಿರಿ ಹಿಗ್ಗುತ್ತಾ ತೋರಿದ ಹೆಚ್ಚುಗಾರಿಕೆ (3)
17.ಭಯಂಕರ ರೂಪದ ಶಿವನ ಕಣ್ಣು (3)
19.ತಿಲದಿಂದ ಇರಿಸಿಕೊಂಡಿರುವ ಬೊಟ್ಟು (3)

ಮೇಲಿಂದ ಕೆಳಕ್ಕೆ

2.ನವಗ್ರಹಗಳಲ್ಲಿ ಕಾಟ ಕೊಡುವ ಗ್ರಹ! (2)
3.ಮಾದ ಎಸಗಿದ ತಪ್ಪು (3)
4.ಜಲ ಶೇಖರಿಸಿ ಉತ್ತರದವರು ಮಾಡಿದ ಸ್ನಾನ (3)
6.ಸೀತಾಪರಣಕ್ಕಾಗಿ ಚಿನ್ನದ ಜಿಂಕೆ ವೇಷ ಧರಿಸಿದವನು (3)
8.ಬಾಣ ಹಿಡಿದಿರುವ ಶಿವ ಭಕ್ತೆ (3)
9.ವರ್ತಕನನ್ನು ಹೀಗೂ ಕರೆವರು (3)
10.ಕನಸು ಇಲ್ಲಿ ನಿಜವಾಗಿದೆ (3)
11.ಕರಿಯಲ್ಲಿರುವ ಸುಗಂಧ ದ್ರವ್ಯ (3)
14.ಶಿವನ ವಾದ್ಯ (3)
15.ಚಾಡಿಕೋರ ಇಲ್ಲಿದ್ದಾನೆ (3)
16.ಮಸ್ತಿಷ್ಕ ಇಲ್ಲಿದೆ (3)
18.ಕ್ಷಿತಿಜದಲ್ಲಿರುವ ಭೂಮಿ ಕಾಣುತ್ತಿದೆಯೇ? (2)



6297ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಲಪಾತ 3.ಪ್ರಸಂಗ 5.ನವದಂಪತಿ 7.ಕೆರಳು 9.ತಾಕತ್ತು 11.ಉಗುರು 13.ವ್ಯವಕಲನ 15.ವನಿತ 16.ನಡುಪ್ರಾಯ

ಮೇಲಿಂದ ಕೆಳಕ್ಕೆ:
1.ಜವನಿಕೆ 2.ತಲ್ಲೀನ 4.ಸಂಗಾತಿ 6.ದಂಡೆತ್ತು 8.ರಕ್ತ 9.ತಾರಕ 10.ಹಂಗು 12.ರುಗ್ಣಾಲಯ 13.ವ್ಯಸನಿ 14.ನಯನ

ಸುಡೊಕು 6682

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7				1			8	
	3	6	8		9	5	1	7
4			7				9	
	7							
		4	9	3	8		7	
8		1						
	8			9			4	
1		2		8		7		
	4		1		7		2	

6681ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಭೇಟಿಗೇಕೆ ಮೀನ-ಮೇಷ

ನುಡಿ ಬೆಳಗು

ವಾಸುದೇವ ನಾಡಿಗ್

ಈ ಕಥೆಯ ನಾಲ್ವರು ಗೆಳೆಯರ ಸಂಬಂಧವೇ ಬಹಳ ವಿಶಿಷ್ಟವಾದುದು. ಕಷ್ಟ ಮತ್ತು ಸುಖ ಎಲ್ಲದರಲ್ಲೂ ಪರಸ್ಪರ ಭಾಗಿಯಾಗುವ ಅವರು ತಮ್ಮ ಒಂದು ಭೇಟಿಯಲ್ಲಿ ತೆಗೆದುಕೊಂಡ ನಿರ್ಧಾರವೇ ರೋಮಾಂಚಕ. ತಮ್ಮ ಓದು ಬರಹ ಮುಗಿಸಿ ಉದ್ಯೋಗಕ್ಕೆ ಬೇರೆ ಬೇರೆ ಊರು ದೇಶಗಳಿಗೆ ತೆರಳುವಾಗ ಒಮ್ಮೆ ನಾಲ್ವರೂ ಟೀ ದೋಸೆ ಎಂದು ಸೇರಿದರು. ಹರಟೆ ಹೊಡೆದರು. ಎಂದಿನಂತೆ ಹೋಟೆಲ್ ಬಿಲ್ಲಿನ ಖರ್ಚನ್ನು ಇದ್ದವರು ಹಂಚಿಕೊಂಡು ಭರಿಸಿದರು. ನಗು, ತಮಾಷೆ, ಮಾತು ಮುಗಿಯುತ್ತಿದ್ದ ಹಾಗೆ ಮುಂದಿನ ಭೇಟಿ ಕೂಡ ಇಲ್ಲೇ ಹೀಗೆ ಎಂದು ನಿರ್ಧಾರ ಮಾಡಿ ಎದ್ದರು. ಮೂವತ್ತು ವರುಷಗಳ ನಂತರ ಭೇಟಿ ಆಗುವ ನಿರ್ಣಯ ಅದು. ಆದರೆ ಒಂದು ಕರಾರು: ಆಗ ಭೇಟಿಯಾದಾಗ ಯಾವ ಗೆಳೆಯ ತಡವಾಗಿ ಬಂದು ಸೇರುವರೋ ಅವರೇ ಹೋಟೆಲ್ ಕಾಫಿ ತಿಂಡಿಯ ಬಿಲ್ ಪಾವತಿಸಬೇಕು. ದಿನಾಂಕ ನಿಗದಿಯಾಯಿತು. ಎಲ್ಲರೂ ತಮ್ಮ ತಮ್ಮ ಬಾಳಿನ ದಾರಿ ಹಿಡಿದು ನಡೆದರು. ಕಾಲ ಮತ್ತು ಅದರ ಹಸಿವು ಶೋಧದ ತೀವ್ರತೆ ತಾತ್ಕಾಲಿಕವಾದ ಅಗಲಿಕೆಯನ್ನು ಸೃಷ್ಟಿಸಿತು. ಅವರವರ ದಾರಿ.

ಕಾಲವನ್ನು ನಿಲ್ಲಿಸಲಾಗುವುದಿಲ್ಲ. ಅಭಿನವ ಪಂಪ ನಾಗಚಂದ್ರನ ಕಾಲವಶವನ್ನು ದಾಟಿಹೋಗುವ ಕ್ರಿಯೆ, ಬೇಂದ್ರೆಯವರ ಹಾರುವ ಹಕ್ಕಿ ಮತ್ತು ಕಣವಿಯವರ ಕಟ್ಟಿಹಾಕಲಾಗದ ಕತ್ತೆ. ಯಾರೂ ನಿಯಂತ್ರಿಸಲಾಗದ ಇದು ಈ ನಾಲ್ವರನ್ನೂ ಮತ್ತೆ ಕೂಡಿಸಿತು. ಮೊದಲೇ ನಿಗದಿಯಾದ ದಿನದಂದು ನಿಗದಿಯಾದ ಜಾಗದಲ್ಲಿ ಸೇರಲು ಅಣಿಯಾದರು. ಮೂವರು ಮಾತ್ರ ಬಂದು ಸೇರಿದರು. ಒಬ್ಬ ಇಂಜಿನಿಯರ್, ಒಬ್ಬ ವ್ಯಾಪಾರಿ ಮತ್ತೊಬ್ಬ ಬ್ಯಾಂಕಿಂಗ್ ಉದ್ಯೋಗಸ್ಥನಾಗಿ ಕೆಲಸ. ಎಷ್ಟು ಹೊತ್ತು ಕಾದರೂ ಇನ್ನೊಬ್ಬ ಗೆಳೆಯ ಬರಲೇ ಇಲ್ಲ, ಕಾದರು. ಕೊನೆಗೆ ಬರುವವ ಹೋಟೆಲ್ ಬಿಲ್ ಕೊಡುವ ಮಾತಾಗಿತ್ತು. ಅವನು ಬರುವವರೆಗೂ ಮಾತನಾಡುತ್ತ ತಮಗೆ ಬೇಕಾದ ತಿನಿಸುಗಳನ್ನು ಆರ್ಡರ್ ಮಾಡಿ ತಿನ್ನಲು ಶುರು ಮಾಡಿದರು. ಸಂಜೆ ಹೋಗಿ ಇರುಳು ಕವಿಯುತ್ತಿದ್ದರೂ ಆ ಗೆಳೆಯ ಬರಲೇ ಇಲ್ಲ. ಇನ್ನೇನು ಎದ್ದು ಬಿಲ್ ಕೊಟ್ಟು ಹೋಗಬೇಕು ಅನ್ನುವಷ್ಟರಲ್ಲಿ ಒಬ್ಬ ಯುವಕ ಓಡಿ ಬಂದು ಆ ಬಿಲ್ಲನ್ನು ತೆಗೆದುಕೊಂಡು ಪಾವತಿ ಮಾಡಿಬಿಟ್ಟ. 'ನಾನು ನಿಮ್ಮ ಇನ್ನೊಬ್ಬ ಗೆಳೆಯನ ಮಗ. ಈಗ ಡಾಕ್ಟರ್ ಆಗಿದ್ದೇನೆ. ಅಪ್ಪ ಮೇಷ್ಟ್ರಾಗಿ ಕೆಲಸಕ್ಕೆ ಸೇರಿಕೊಂಡರು. ಅವರು ತಮ್ಮ ಡೈರಿಯಲ್ಲಿ ದಿನಾಂಕ ಬರೆದಿಟ್ಟು ಸದಾ ನನಗೂ ನೆನಪು ಮಾಡುತ್ತಿದ್ದರು. ಕಳೆದ ತಿಂಗಳಷ್ಟೆ ನಿಧನ ಹೊಂದಿದರು' ಎಂದ. ಪರಸ್ಪರ ಈ ಮೂವರೂ ಈ ಮೊದಲು ಮತ್ತೆ ಮತ್ತೆ ಆಗಾಗ ಕಾಣಬಹುದಾಗಿತ್ತು ಎಂದು ಕೊರಗಿ ಪೇಚಾಡಿದರು.

ನಿಜ ಅಲ್ಲವೇ? ಕೆಲವರ ಭೇಟಿ ನಮ್ಮ ಬಾಳಿಗೆ ಪ್ರೇರಕವಾಗಬಹುದಾದರೆ ದಿನಾಂಕವನ್ನು ನಿಗದಿಪಡಿಸಿ ಕಾಯದೇ ಕಂಡುಬಿಡಬೇಕು. ಈ ಮೊದಲೇ ಭೇಟಿಯಾಗಬೇಕಿತ್ತು ಎಂಬ ನಮ್ಮ ಆಲೋಚನೆ ಕಾರ್ಯರೂಪಕ್ಕೆ ತಂದುಬಿಡಬೇಕು. ಅಪ್ತ ಸ್ನೇಹಿತರನ್ನೋ ಹಿರಿಯರನ್ನೋ ಹಿತೈಷಿಗಳನ್ನೋ ಕಂಡು ಮಾತಾನಾಡಿಸುವ ಮೂಲಕ ಒತ್ತಡ, ರೋಗ ರುಜಿನ, ಖಿನ್ನತೆ ಮತ್ತು ಒಳಗೆ ಕಾದುಕೂತ ಅಕಾಲಿಕ ಸಾವನ್ನೂ ಮುಂದೂಡಬಲ್ಲುದಾದರೆ ಆ ಭೇಟಿಗೆ ತಡವೇಕೆ. ನಮ್ಮದೇ ಖಾಸಗಿ ಒಳಗುದಿಗೆ ಅಂತಹ ಭೇಟಿ ಒಂದು ಧ್ರುವನಕ್ಷತ್ರವಾಗಬಲ್ಲುದಾದರೆ ಅಂತಹದಕ್ಕೂ ನೆಪಬೇಕೆ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

28 ಜನವರಿ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ದಶಮಿ ಗಂ. 16-37, **ನಕ್ಷತ್ರ:** ಕೃತ್ತಿಕಾ ಗಂ. 9-27 , **ಯೋಗ:** ಬ್ರಹ್ಮ ಗಂ. 23-54, **ಕರಣ:** ಗರ ಗಂ. 16-37 ನಂತರ ವಣಿಜ ಗಂ 27-17 ಮಕರ ಮಾಸದ 14 ನೇ ದಿನ. **ಮಳೆ ನಕ್ಷತ್ರ :** ಶ್ರವಣ 2 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 - 01-30, **ಸೂರ್ಯೋದಯ :** 07-01, **ಸೂರ್ಯಾಸ್ತ :** 06-26, **ಮುಸ್ಲಿಂ ದಿನಾಂಕ:** 8 ಶಬನ್, **ಅದೃಷ್ಟ ಸಂಖ್ಯೆ:** 6, 2

ಮೇಷ: ವಿದ್ಯಾಭ್ಯಾಸವನ್ನು ಮುಂದುವರಿಸುವ ಪ್ರಯತ್ನ ಮಾಡಿದಲ್ಲಿ ಸಫಲವಾಗುವುದು. ಹತ್ತಾರು ಜನರಿಗೆ ಮಾರ್ಗದರ್ಶಕರಾಗಿ ನೇಮಕಗೊಳ್ಳುವ ಯೋಗವಿದೆ. ನಿಸ್ವಾರ್ಥ, ತ್ಯಾಗದ ಮನೋಭಾವ ಬೆಳೆಸಿಕೊಳ್ಳಿ.

ವೃಷಭ: ಸಿವಿಲ್ ಎಂಜಿನಿಯರುಗಳಿಗೆ ಹೆಚ್ಚು ಲಾಭದ ದಿನ. ಅದೃಷ್ಟ ದೇವತೆ ನಿಮ್ಮ ಕೈ ಹಿಡಿದಿದ್ದಾಳೆ. ನಿಮ್ಮ ವ್ಯಾಪಾರ ವ್ಯವಹಾರಗಳು ಅಧಿಕ ವರಮಾನಗಳನ್ನು ತರಲಿವೆ. ಅನಗತ್ಯ ಖರೀದಿಯಲ್ಲಿ ದುಂದುವೆಚ್ಚ ಮಾಡದಿರಿ.

ಮಿಥುನ: ನಿಮ್ಮ ಆಶಾವಾದ ಮತ್ತು ಧನಾತ್ಮಕ ವರ್ತನೆ, ಅಭಿವೃದ್ಧಿಯ ಹೆಜ್ಜೆಗಳು ನಿಮ್ಮ ಸುತ್ತಮುತ್ತಲಿನ ಜನರ ಕಣ್ಣನ್ನು ಕೆಂಪಾಗಿಸುತ್ತವೆ. ಶಸ್ತ್ರ ಚಿಕಿತ್ಸಾ ವೈದ್ಯರಿಗೆ ರೋಗಿಯ ಕುಟುಂಬಸ್ಥರಿಂದ ಪ್ರಶಂಸೆ ಕೇಳಿ ಬರುವುದು.

ಕರ್ಕಾಟಕ: ನೀವು ಮಾಡಿದ ಹಳೆ ತಪ್ಪುಗಳನ್ನೇ ಮತ್ತೆ ಮತ್ತೆ ಹೇಳುವ ಮೂಲಕ ನಿಮ್ಮನ್ನು ಗಾಸಿಗೊಳಿಸುವ ಜನರು ನಿಮಗೆ ಇಂದು ಎದುರಾಗಬಹುದು. ನೀವು ನಿಮ್ಮ ವೈಯಕ್ತಿಕ ಮನೋಭಾವವನ್ನು ಬದಲಿಸಿಕೊಳ್ಳುವಂತೆ ಆಗಲಿದೆ.

ಸಿಂಹ: ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯವಿದೆ. ಹೆಚ್ಚಿನ ಜ್ಞಾನಸಂಪಾದನೆ ಬಗ್ಗೆ ಚಿಂತನೆ ನಡೆಯುವುದು. ದುರ್ಗಾದೇವಿಯನ್ನು ಆರಾಧಿಸಿದಲ್ಲಿ ಶುಭವು ಪ್ರಾಪ್ತಿಯಾಗುವುದು.

ಕನ್ಯಾ: ನಿಮ್ಮ ಸಮಾಜ ಸೇವೆಯನ್ನು ಕುಟುಂಬದವರು ಹಾಗೂ ಸಮಾಜದವರು ಗುರುತಿಸಿ ಶ್ಲಾಘಿಸುವರು. ಅನೇಕ ಕಡೆಯಿಂದ ಸಹಾಯ ಹಸ್ತಗಳು ಸಿಗುವವು. ಇದೇ ಪ್ರೇರಣೆಯೊಂದಿಗೆ ಮುಂದುವರಿಯಿರಿ.

ತುಲಾ: ಪತ್ತೇದಾರಿ ಕೆಲಸ ಮಾಡುವವರು ಕಾನೂನುಬಾಹಿರವಾದ ಮಾರ್ಗಗಳನ್ನು ಅನುಸರಿಸದಂತೆ ಕೆಲಸವನ್ನು ಮಾಡಿ. ಶಿಶುವಿನ ಜನನ ಕುಟುಂಬದಲ್ಲಿ ಸಂತೋಷಕ್ಕೆ ಕಾರಣವಾಗುತ್ತದೆ.

ವೃಶ್ಚಿಕ: ಪ್ರಭಾವಿ ವ್ಯಕ್ತಿಗಳ ಒಡನಾಟ ನಿಮಗೆ ಹೆಚ್ಚಿನ ಸ್ಥಾನಮಾನದ ಜೊತೆಯಲ್ಲಿ ಆಯಾಸವನ್ನು ತಂದು ಕೊಡಲಿದೆ. ಮಹತ್ತರವಾದುದನ್ನು ಸಾಧಿಸಲು ಕುಟುಂಬ ಹಾಗೂ ಸ್ವಸ್ಥಾನದಿಂದ ದೂರವಾಗುವ ಸಾಧ್ಯತೆಗಳಿವೆ.

ಧನು: ನಿಮ್ಮ ವ್ಯವಹಾರದಲ್ಲಿ ಅಡ್ಡಿ ಆತಂಕ ಎದುರಾದರೂ ಇಷ್ಟದೇವತೆಯ ಆರಾಧನೆಯಿಂದಾಗಿ ಸಹಜವಾಗಿ ಮುಂದುವರಿಯುವುದು. ಶತ್ರು ಬಾಧೆ ಈ ದಿನದಿಂದ ಹಂತ ಹಂತವಾಗಿ ನಿವಾರಣೆ ಆಗಲಿದೆ.

ಮಕರ: ವಾತ ಅಥವಾ ಪಿತ್ತದಿಂದ ಉಂಟಾದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರಾಣಾಯಾಮ ಉತ್ತಮವಾದುದು. ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ ಮತ್ತು ದೇವರ ಕೃಪಾ ಕಟಾಕ್ಷ ಪಡೆಯಬೇಕಾಗುವುದು.

ಕುಂಭ: ನಿಮ್ಮನ್ನು ಅವಲಂಬಿಸಿಕೊಂಡು ಕೆಲಸ ಮಾಡುತ್ತಿರುವವರನ್ನು ಕಡೆಗಣಿಸುವುದು ಸರಿಯಲ್ಲ. ಸಮಯವನ್ನು ಅರಿತು ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು ಹಾಗೂ ಅಭಿವೃದ್ಧಿಗೆ ಕಾರಣವಾಗುತ್ತದೆ.

ಮೀನ: ಬೇರೆಯವರ ತಪ್ಪುಗಳನ್ನು ಎತ್ತಿ ಹಿಡಿಯುವ ನಿಮ್ಮ ವ್ಯಕ್ತಿತ್ವ ಎಲ್ಲರ ವಿರೋಧಕ್ಕೆ ಕಾರಣವಾಗುವುದು. ನಿಮ್ಮ ಮೇಲೆ ನಂಬಿಕೆ ಇಟ್ಟು ಮಾಡಿದಂತಹ ಉಪಕಾರವನ್ನು ಮರೆಯಬೇಡಿ. ರಾಜಕೀಯದಲ್ಲಿ ಪ್ರಭಾವ ಗಳಿಸಿಕೊಳ್ಳುವಿರಿ.

ಗುಂಡಣ್ಣ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಂಭ

ಬಿ.ಮುನಿಸ್ವಾಮಿ ಗೌಡ ನಿವೃತ್ತ ಎಇಇ. ಪಿಬ್ಲ್ಯೂಡಿ
(ದಿ. ರಾಮಕೃಷ್ಣ. ಬಿ ಇವರ ಮಗ)
ಜನನ: 06/05/1947 ಮರಣ: 19.01.2026
ವೈಕುಂಠ ಸಮಾರಂಭ: ದಿನಾಂಕ: 29.01.2026
ಸ್ಥಳ: ಇಂದಿರಾ ನಗರ, ಬೆಂಗಳೂರು.
ಇಂತಿ ಶೋಕತಪ್ತರು:
ಎಂ. ವಿನಯ್ ಕುಮಾರ್ (ಪುತ್ರ), ಸುಮ ಟಿ.ಎಸ್. (ಸೊಸೆ), ವಿ.ಪಾವಕಿ (ಮೊಮ್ಮಗಳು).

ಪುಣ್ಯಸ್ಮರಣೆ

ಶ್ರೀಮತಿ ಉಮಾ ವಿಶ್ವನಾಥ್
ಜನನ: 18.06.1958 ಮರಣ: 28.01.2022
ಶ್ರೀಮತಿ ಉಮಾ ವಿಶ್ವನಾಥ್ ಒಬ್ಬ ಉದ್ಯಮಿ, ಪತ್ನಿ, ಅಜ್ಜಿ ಮತ್ತು ಆರ್. ವಿಶ್ವನಾಥ್‌ರವರ ಧರ್ಮಪತ್ನಿಯಾದ ನೀವು ಎಂದೆಂದಿಗೂ ನಮ್ಮ ಹೃದಯದಲ್ಲಿ
ನಿಮ್ಮ ನಿರ್ಭಯ ನಡೆ, ನುಡಿ ಮತ್ತು ನಿಮ್ಮ ಸದ್ಗುಣಗಳಿಂದ ಎಲ್ಲರನ್ನು ಸೆಳೆಯುತ್ತಿದ್ದ ರೀತಿ, ಶಕ್ತಿ, ನಮ್ಮೆಲ್ಲರ ಬಾಳಿಗೆ ದಾರಿದೀಪವಾಗಿದೆ.
ದುಃಖತಪ್ತರು: ಆರ್. ವಿಶ್ವನಾಥ್, ಮಕ್ಕಳು, ಮೊಮ್ಮಕ್ಕಳು ಮತ್ತು ನಂದಾವನಮ್ ಕುಟುಂಬ.

9ನೇ ವರ್ಷದ ಪುಣ್ಯಸ್ಮರಣೆ

ಕಲಾವತಿ
ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆಯಿತು. ನಿಮ್ಮ ಸರಳ ಜೀವನದ ಮಾರ್ಗದರ್ಶನ ನಮಗೆ ದಾರಿದೀಪ. ನಿಮ್ಮ ಮಾರ್ಗದರ್ಶನದಲ್ಲಿ ನಡೆಯುವ ಕುಟುಂಬದವರು ಮತ್ತು ಅಪಾರ ಬಂಧು ವರ್ಗದವರು. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ
-: ದುಃಖತಪ್ತರು :-
ಜಟ್ಟಂಗಿ ಹಾಗೂ ಶ್ರೀಪುರಂ ಕುಟುಂಬ ವರ್ಗದವರು.

ಷೇರುಪೇಟೆ ವಹಿವಾಟು	
ಹಿಂದಿನ ಅಂತ್ಯ	81,537
ಇಂದಿನ ಅಂತ್ಯ	81,857
ಏರಿಕೆ	319



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,048
ಇಂದಿನ ಅಂತ್ಯ:	25,175
ದಿನದ ಗರಿಷ್ಠ:	25,246
ಏರಿಕೆ	126

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹570
	12 ಕ್ಕೆ	₹75
ಮೈಸೂರು:	100 ಕ್ಕೆ	₹572

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹196
ಆರ್‌ಎಸ್‌ಎಸ್-5	₹191
ಗುಡ್ ಲಾಟ್	₹179

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹555-758
ದ್ವಿತಳಿ (ಬಿ.ವಿ)	₹315-946

ಮುಂಬೈ ಧಾರಣೆ (ಶೇಂಗಾ)

27-1-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1690 (-)
ಒಂದು ವಾರದ ಡೆಲಿವರಿ	1685 (-)
ಪಾಮ್ ವಾರದ ಡೆಲಿವರಿ	1298 (-)
ಸೂರ್ಯಕಾಂತಿ ಎಣ್ಣೆ ಕಚ್ಚಾ	1535 (-)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,900 (-)
ಬೆಳ್ಳಿ ಕೆ.ಜಿಗೆ	3,46,000 (-)

ಹಿಂದಿನ ದಿನದ ಧಾರಣೆ ಲಭ್ಯವಿಲ್ಲ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1680 (--)
ಸೋಯಾ (ರಿಫೈನ್ಡ್)	₹1390 (--)
ಸೂರ್ಯಕಾಂತಿ (ರಿಫೈನ್ಡ್)	₹1630 (--)
ಪಾಮೋಲಿನ್	₹1300 (--)

ಬೆಳ್ಳಿ ಬೆಲೆ ₹44,500 ಜಿಗಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಬೆಲೆಯು ದಾಖಲೆ ಬರೆದಿವೆ.

ಶೇಕಡ 99.9ರಷ್ಟು ಪರಿಶುದ್ಧತೆಯ ಚಿನ್ನದ ಬೆಲೆಯು 10 ಗ್ರಾಂಗೆ ₹7,300ರಷ್ಟು ಹೆಚ್ಚಳ ಕಂಡು ₹1,66,000ಕ್ಕೆ ತಲುಪಿದೆ.

ಬೆಳ್ಳಿಯ ಬೆಲೆಯು ಮಂಗಳವಾರ ₹44,500ರಷ್ಟು ಏರಿಕೆ ಕಂಡಿದೆ. ಕೆ.ಜಿ. ಬೆಳ್ಳಿಯ ಬೆಲೆಯು ₹3,70,000 ಆಗಿದೆ. ಸೋಮವಾರ ಗಣರಾಜ್ಯೋತ್ಸವದ ಕಾರಣಕ್ಕೆ ಮಾರುಕಟ್ಟೆಗೆ ರಜೆ ಇತ್ತು.

ಹೂಡಿಕೆಯ ಉದ್ದೇಶದಿಂದ ಬೆಳ್ಳಿಯನ್ನು ಖರೀದಿಸುವುದು ಹೆಚ್ಚಾಗುತ್ತಿದೆ. ಕೈಗಾರಿಕೆಗಳಿಂದಲೂ ಬೆಳ್ಳಿಗೆ ಉತ್ತಮ ಬೇಡಿಕೆ ಇದೆ. ಹೀಗಾಗಿ ಬೆಲೆ ಹೆಚ್ಚಾಗುತ್ತಿದೆ ಎಂದು ಲೆಮನ್ ಮಾರ್ಕೆಟ್ ಡೆಸ್ಕ್‌ನ ಸಂಶೋಧನಾ ವಿಶ್ಲೇಷಕ ಗೌರವ್ ಗರ್ಗ್ ಹೇಳಿದ್ದಾರೆ.

ಅಡಿಕೆ ಧಾರಣೆ

ಪುತ್ತೂರು		ರಾಶಿ	48099-55699	ಗೊರಬಲು	19020-44444
ಕೋಕ	23000-35500	ತಟ್ಟಿಬೆಟ್ಟೆ	35299-48099	ರಾಶಿ	40438-57009
ಹೊಸತು	26000-46000	**ಶಿರಸಿ**		ಸರಕು	58100-97520
ಹಳತು	41500-53500	ಬೆಟ್ಟೆ	46259-52699	**ಸಾಗರ**	
ಸಿದ್ದಾಪುರ		ಬಿಳಿಗೋಟು	24296-35499	ಬಿಳಿಗೋಟು	30666-36025
ಬಿಳಿಗೋಟು	26689-39219	ಚಾಲಿ	45751-51411	ಚಾಲಿ	41,299-45299
ಚಾಲಿ	44169-49099	ಕೆಂಪುಗೋಟು	31509-38691	ಕೆಂಪುಗೋಟು	33599-38599
ಕೋಕ	21699-32199	ರಾಶಿ	52949-56899	ರಾಶಿ	51089-56370
ಹೊಸಚಾಲಿ	35899-45399	**ಶಿವಮೊಗ್ಗ**		ಸಿಪ್ಪೆಗೋಟು	18599-24599
ಕೆಂಪುಗೋಟು	30089-36989	ಬೆಟ್ಟೆ	52700-66300		

ಕ್ಷಿಪಣಿ ಉಡಾವಣೆ

ಸೋಲ್ (ಎಪಿ): ಉತ್ತರ ಕೊರಿಯಾ ಕ್ಷಿಪಣಿಯೊಂದನ್ನು ತನ್ನ ಪೂರ್ವ ಕರಾವಳಿಯಲ್ಲಿ ಉಡಾವಣೆ ಮಾಡಿದೆ. ಇದು ಶಸ್ತ್ರಾಸ್ತ್ರದ ಪರೀಕ್ಷಾರ್ಥ ಪ್ರಯೋಗ ಇರಬಹುದು ಎಂದು ದಕ್ಷಿಣ ಕೊರಿಯಾ ಮಂಗಳವಾರ ಶಂಕೆ ವ್ಯಕ್ತಪಡಿಸಿದೆ.

ಅದು ಶಸ್ತ್ರಾಸ್ತ್ರವೊ, ಕ್ಷಿಪಣಿಯೊ ಅಥವಾ ಫಿರಂಗಿಯೊ ಎಂದು ತಿಳಿಸಿಲ್ಲ. ಎಷ್ಟು ದೂರ ಕ್ರಮಿಸಬಲ್ಲದು ಎಂಬ ಬಗ್ಗೆ ವಿವರಗಳನ್ನು ನೀಡಿಲ್ಲ.

ಜಿಯೊ ಅರ್ಜಿ ಮಾನ್ಯ ಮಾಡಲು ಸುಪ್ರೀಂ ಕೋರ್ಟ್ ನಿರಾಕರಣೆ

ನವದೆಹಲಿ (ಪಿಟಿಐ): ಕೇರಳದ ಕೇಬಲ್ ಟೆಲಿವಿಷನ್ ಮಾರುಕಟ್ಟೆಯಲ್ಲಿ ತನ್ನ ಪ್ರಬಲ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡ ಆರೋಪಕ್ಕೆ ಸಂಬಂಧಿಸಿ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ನಡೆಸುತ್ತಿರುವ ತನಿಖೆಯನ್ನು ರದ್ದುಗೊಳಿಸುವಂತೆ ಕೋರಿ ರಿಲಯನ್ಸ್ ಇಂಡಸ್ಟ್ರೀಸ್ ಮಾಲೀಕತ್ವದ ‘ಜಿಯೊಸ್ಟಾರ್’ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

‘ಈ ವಿಷಯವು ಪ್ರಾಥಮಿಕ ಹಂತದಲ್ಲಿದೆ. ಸಿಸಿಐ ತನ್ನ ತನಿಖೆಯನ್ನು ಮುಂದುವರಿಸಬಹುದು’ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಸಂದೀಪ್ ಮೆಹ್ತಾ ಅವರ ನ್ಯಾಯಪೀಠ ತಿಳಿಸಿತು.

‘ಕ್ಷಮಿಸಿ. ಭಾರತೀಯ ಸ್ಪರ್ಧಾ ಆಯೋಗವು ತನ್ನ ತನಿಖೆಯನ್ನು ನಿರ್ವಹಿಸಲಿ. ಈ ವಿಚಾರವು ಪ್ರಾಥಮಿಕ ಹಂತದಲ್ಲಿದೆ. ಹೀಗಾಗಿ, ಈ ಅರ್ಜಿಯನ್ನು ವಜಾಗೊಳಿಸಲಾಗಿದೆ’ ಎಂದು ಜಿಯೊಸ್ಟಾರ್ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಮುಕುಲ್ ರೋಹ್ಟಗಿ ಅವರಿಗೆ ತಿಳಿಸಿತು.

‘ಜಿಯೊ ಹಾಟ್‌ಸ್ಟಾರ್ ಭಾರತೀಯ ಟೆಲಿಕಾಂ ಪ್ರಾಧಿಕಾರ ಕಾಯ್ದೆ–1997ರ ಅಡಿಯಲ್ಲಿ ಬದ್ಧವಾಗಿದ್ದು, ಎಷ್ಟು ಶುಲ್ಕ ವಿಧಿಸಬಹುದು, ಎಷ್ಟು ರಿಯಾಯಿತಿ ನೀಡಬಹುದು ಎಂಬುದನ್ನು ನಿರ್ಧರಿಸುತ್ತದೆ’ ಎಂದು ರೋಹ್ಟಗಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರು.

‘ಬೇರೆ ನಿಯಂತ್ರಣ ಪ್ರಾಧಿಕಾರಕ್ಕೆ ಸಂಬಂಧಿಸಿದ ತನಿಖೆಯನ್ನು ನೀವು ಮಾಡಬಹುದೇ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸಿದೆ. ಬಾಂಬೆ ಹೈಕೋರ್ಟ್ ನೀಡಿದ ತೀರ್ಪು ಕೂಡ ನಮ್ಮ ಪರವಾಗಿದೆ’ ಎಂದು ತಿಳಿಸಿದರು.

ರೋಹ್ಟಗಿ ವಾದ ಪರಿಗಣಿಸಿದ ನ್ಯಾಯಮೂರ್ತಿ ಪಾರ್ದಿವಾಲಾ, ‘ಈ ವಿಷಯವನ್ನು ಪರಿಗಣಿಸಬೇಕಿದೆ’ ಎಂದು ಹೇಳಿದರು.

ಕೇರಳದ ದೂರದರ್ಶನ ಪ್ರಸಾರ ಕ್ಷೇತ್ರದಲ್ಲಿ ‘ಜಿಯೊ ಸ್ಟಾರ್’ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದು, ತಾರತಮ್ಯದ ರಿಯಾಯಿತಿ ನೀಡುವ ಮೂಲಕ ‘ಸ್ಪರ್ಧಾ ಕಾಯ್ದೆ 2002 ಅನ್ನು ಉಲ್ಲಂಘಿಸಿದೆ’ ಎಂದು ಆರೋಪಿಸಿ ಏಷ್ಯಾನೆಟ್ ನೆಟ್‌ವರ್ಕ್ ಲಿಮಿಟೆಡ್, ಸಿಸಿಐಗೆ ದೂರು ದಾಖಲಿಸಿತ್ತು.

ಶಾಂತಿ ಕಾಪಾಡುವ ಸಂಸ್ಥೆಯಾಗಿ ಉಳಿದಿಲ್ಲ: ಭಾರತ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ಶಾಂತಿಯನ್ನು ಕಾಪಾಡುವ ಸಂಸ್ಥೆಯಾಗಿ ಉಳಿದಿಲ್ಲ. ಅದೀಗ ಸಮಾನಾಂತರವಾದ ಸೀಮಿತ ಗುಂಪಿನ ಚೌಕಟ್ಟುಗಳನ್ನು ಹೊಂದಿರುವ ಸಂಸ್ಥೆಯಾಗಿದೆ ಎನ್ನುವ ಚರ್ಚೆಗಳು ನಡೆಯುತ್ತಿವೆ ಎಂದು ಭಾರತ ಹೇಳಿದೆ.

‘ಎಲ್ಲ ರಾಷ್ಟ್ರಗಳು ಸಮಾನ ಮತ್ತು ಅಂತರರಾಷ್ಟ್ರೀಯ ವಿಚಾರದ ಬಗ್ಗೆ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎನ್ನುವ ವಿಶ್ವಸಂಸ್ಥೆಯ ಧ್ಯೇಯಕ್ಕೀಗ ಚ್ಯುತಿ ಬಂದಿದೆ’ ಎಂದು ವಿಶ್ವಸಂಸ್ಥೆಯ ಭಾರತದ ಶಾಶ್ವತ ಪ್ರತಿನಿಧಿ ಪರ್ವತನೇನಿ ಹರೀಶ್ ಸೋಮವಾರ ಹೇಳಿದರು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ನಡೆದ ಬಹಿರಂಗ ಚರ್ಚೆ ವೇಳೆ ಅವರು ಈ ಹೇಳಿಕೆ ನೀಡಿದರು.

ಜಗತ್ತಿನ ಹಲವು ಭೌಗೋಳಿಕ ರಾಜಕೀಯ ಸಂಘರ್ಷವನ್ನು ನಿಲ್ಲಿಸುವಲ್ಲಿ ಹಾಗೂ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುವಲ್ಲಿ ವಿಶ್ವಸಂಸ್ಥೆ ಮತ್ತು ಅದರ ಅಂಗಸಂಸ್ಥೆಯಾದ ಭದ್ರತಾ ಮಂಡಳಿಯು ವಿಫಲವಾಗಿರುವಾಗಲೇ ಭಾರತ ಈ ಹೇಳಿಕೆ ನೀಡಿದೆ

With a heavy heart,
we announce the passing of our beloved

Sri H. Shivalingaiah
Left for heavenly abode on
27th January 2026
Final respects at the Residence
22, Palace Rd,
Vasanth Nagar, Bengaluru,
560001
Cremation today 28.01.2026
after 2 p.m at
Hebbal cremation grounds
In grief
Loving wife Smt Sarvamangla
Son Shivaprasad & Family
Daughter Pushpa & Family
Daughter Suvarna & Family
Daughter Shylaja & Family
98455 35644 98865 33332

ಡಾಲರ್ ಎದುರು ರಿಯಾಲ್ ಮೌಲ್ಯ ಕುಸಿತ

ದುಬೈ(ಎಪಿ): ಆರ್ಥಿಕ ಬಿಕ್ಕಟ್ಟಿನಿಂದಾಗಿ ಪ್ರತಿಭಟನೆಗಳು ಭುಗಿಲೆದ್ದಿರುವ ಇರಾನ್‌ನಲ್ಲಿ ‘ರಿಯಾಲ್’ನ ವಿನಿಮಯ ಮೌಲ್ಯವು ಡಾಲರ್ ಎದುರು ಸಾರ್ವಕಾಲಿಕ ಕುಸಿತ ದಾಖಲಿಸಿದೆ. ಒಂದು ಡಾಲರ್‌ಗೆ 15 ಲಕ್ಷ ರಿಯಾಲ್ ಸಮ ಎಂಬ ಸ್ಥಿತಿಗೆ ತಲುಪಿದೆ.

ಪರಮಾಣು ಕಾರ್ಯಕ್ರಮವೂ ಸೇರಿದಂತೆ ವಿವಿಧ ವಿಚಾರಗಳಿಂದಾಗಿ ಅಂತರರಾಷ್ಟ್ರೀಯ ನಿರ್ಬಂಧಗಳನ್ನು ಇರಾನ್ ಎದುರಿಸುತ್ತಿರುವ ಕಾರಣ ರಿಯಾಲ್ ಮೌಲ್ಯದಲ್ಲಿ ಗಣನೀಯ ಕುಸಿತ ದಾಖಲಾಗುತ್ತಿದೆ ಎನ್ನಲಾಗಿದೆ.

ಡಿಸೆಂಬರ್ 28ರಂದು ಪ್ರತಿಭಟನೆಗಳು ಆರಂಭಗೊಂಡು ದೇಶದಾದ್ಯಂತ ವ್ಯಾಪಿಸಿ, ಹಿಂಸಾಚಾರಕ್ಕೆ ತಿರುಗಿತು. ಇದರಿಂದ 6,126 ಮಂದಿ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಜಾಗತಿಕ ಸ್ಥಿರತೆಗೆ ಬಲ: ಮೋದಿ

ಭಾರತ–ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದ

ನವದೆಹಲಿ (ಪಿಟಿಐ): ವಿಶ್ವದ ಎರಡನೆಯ ಅತಿದೊಡ್ಡ ಆರ್ಥಿಕತೆ ಆಗಿರುವ ಐರೋಪ್ಯ ಒಕ್ಕೂಟದೊಂದಿಗೆ, ವಿಶ್ವದ ನಾಲ್ಕನೆಯ ಅತಿ ದೊಡ್ಡ ಆರ್ಥಿಕ ಶಕ್ತಿಯಾದ ಭಾರತ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದವು(ಎಫ್‌ಟಿಎ) ಜಾಗತಿಕ ಸ್ಥಿರತೆಯನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದಾರೆ.

ಮುಕ್ತ ವ್ಯಾಪಾರ ಒಪ್ಪಂದ ಕುರಿತ ಮಾತುಕತೆ ಪೂರ್ಣಗೊಂಡ ಬಳಿಕ, ಐರೋಪ್ಯ ಪರಿಷತ್ತಿನ ಅಧ್ಯಕ್ಷ ಆ್ಯಂಟೊನಿಯೊ ಕೋಸ್ಟಾ, ಐರೋಪ್ಯ ಆಯೋಗದ ಮುಖ್ಯಸ್ಥೆ ಉರ್ಸುಲಾ ಫಾಂಡರ್ ಲೇಯನ್ ಅವರೊಂದಿಗೆ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಇದು ವ್ಯಾಪಾರ ಒಪ್ಪಂದ ಮಾತ್ರವಲ್ಲ. ಯುರೋಪ್ ರಾಷ್ಟ್ರಗಳು ಹಾಗೂ ಭಾರತ ಒಟ್ಟಿಗೆ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಲು ರೂಪಿಸಿರುವ ನೀಲನಕ್ಷೆ’ ಎಂದು ಮೋದಿ ಬಣ್ಣಿಸಿದರು.

‘ಇದು ಐತಿಹಾಸಿಕ ಒಪ್ಪಂದವಾಗಿದ್ದು, ಭಾರತದ ರೈತರು, ಸಣ್ಣ ಉದ್ದಿಮೆದಾರರಿಗೆ ಯುರೋಪ್ ರಾಷ್ಟ್ರಗಳ ಮಾರುಕಟ್ಟೆ ತೆರೆದುಕೊಳ್ಳಲಿದೆ. ತಯಾರಿಕಾ ಕ್ಷೇತ್ರಕ್ಕೆ ಹೊಸ ಅವಕಾಶಗಳ ಸೃಷ್ಟಿಯಾಗಲಿದೆ, ಸೇವಾ ವಲಯದಲ್ಲಿನ ಸಹಕಾರವನ್ನು ಬಲಪಡಿಸಲಿದೆ’ ಎಂದು ಹೇಳಿದರು.

‘ಸದ್ಯದ ಜಾಗತಿಕ ಪ್ರಕ್ಷುಬ್ಧ ವಾತಾವರಣದಲ್ಲಿ, ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಐತಿಹಾಸಿಕ ಒಪ್ಪಂದ, ಅಂತರರಾಷ್ಟ್ರೀಯ ಸುಸ್ಥಿರತೆಯನ್ನು ಬಲಪಡಿಸಲಿದೆ’ ಎಂದೂ ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

‘ಮಾತುಕತೆ ಮೂಲಕ ಉಕ್ರೇನ್‌ನಲ್ಲಿ ಶಾಂತಿ ನೆಲಸುವಂತಾಗಬೇಕು. ಇದಕ್ಕೆ ಪೂರಕವಾದ ವಾತಾವರಣ ಸೃಷ್ಟಿಗೆ ನೆರವು ನೀಡುವುದನ್ನು ನಾವು ನಿಮ್ಮಿಂದ ನಿರೀಕ್ಷಿಸುತ್ತೇವೆ’ ಎಂದು ಮೋದಿ ಅವರನ್ನು ಉದ್ದೇಶಿಸಿ ಐರೋಪ್ಯ ಪರಿಷತ್ತಿನ ಅಧ್ಯಕ್ಷ ಆ್ಯಂಟೊನಿಯೊ ಕೋಸ್ಟಾ ಹೇಳಿದರು.

> ರಕ್ಷಣೆ ಮತ್ತು ಭದ್ರತೆ ವಿಚಾರದಲ್ಲಿ ಭಾರತ ಮತ್ತು ಐರೋಪ್ಯ ಒಕ್ಕೂಟ ಪಾಲುದಾರಿಕೆಗೆ ಮುಂದಾಗಲಿವೆ. ಭಯೋತ್ಪಾದನೆ ನಿಗ್ರಹ, ಕಡಲಗಡಿ ಸುರಕ್ಷತೆ ಹಾಗೂ ಸೈಬರ್ ಭದ್ರತೆಯಲ್ಲಿ ಇದು ಸಹಕಾರ ಹೆಚ್ಚಿಸಲಿದೆ
> **ನರೇಂದ್ರ ಮೋದಿ,** ಪ್ರಧಾನಿ

> ಈ ಮುಕ್ತ ವ್ಯಾಪಾರ ಒಪ್ಪಂದವು ಭಾರತ ಮತ್ತು ಐರೋಪ್ಯ ಒಕ್ಕೂಟವು ನಂಬಿಕಸ್ಥ ಪಾಲುದಾರರಾಗಿ ಒಟ್ಟಿಗೆ ಸಾಗಲಿವೆ ಎಂಬ ಸ್ಪಷ್ಟ ಸಂದೇಶವನ್ನು ಜಗತ್ತಿಗೆ ರವಾನಿಸಿದೆ
> **ಆ್ಯಂಟೊನಿಯೊ ಕೋಸ್ಟಾ**
> ಐರೋಪ್ಯ ಪರಿಷತ್ತಿನ ಅಧ್ಯಕ್ಷ

ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಐರೋಪ್ಯ ಮಂಡಳಿ ಅಧ್ಯಕ್ಷ ಆ್ಯಂಟೊನಿಯೊ ಕೋಸ್ಟಾ ಹಾಗೂ ಐರೋಪ್ಯ ಆಯೋಗದ ಮುಖ್ಯಸ್ಥೆ ಉರ್ಸುಲಾ ಫಾಂಡರ್ ಲೇಯನ್ ಅವರೊಂದಿಗೆ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಪ್ರಮುಖ ಅಂಶಗಳು

- ಈ ಒಪ್ಪಂದವು ಪ್ರಮುಖವಾಗಿ ಭಾರತೀಯ ರಫ್ತುದಾರರಿಗೆ ವಾರ್ಷಿಕವಾಗಿ ₹43.71 ಸಾವಿರ ಕೋಟಿಯಷ್ಟು ಸುಂಕದ ಹೊರೆಯನ್ನು ಕಡಿಮೆ ಮಾಡುತ್ತದೆ
- ಐರೋಪ್ಯ ಒಕ್ಕೂಟಕ್ಕೆ ಭಾರತವು ಅತಿದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿದೆ. 2024–25ರಲ್ಲಿ ಭಾರತವು ಐರೋಪ್ಯ ಒಕ್ಕೂಟದೊಂದಿಗೆ 136 ಶತಕೋಟಿ ಡಾಲರ್(ಅಂದಾಜು 12.45 ಲಕ್ಷ ಕೋಟಿ) ಮೊತ್ತದ ವ್ಯಾಪಾರ ನಡೆಸಿದೆ

> ಭಾರತ–ಐರೋಪ್ಯ ಒಕ್ಕೂಟದ ನಡುವಿನ ಒಪ್ಪಂದವು ಜಾಗತಿಕ ಸವಾಲುಗಳಿಗೆ ಸಹಕಾರವೇ ಅತ್ಯುತ್ತಮ ಉತ್ತರ ಎಂಬ ಸಂದೇಶವನ್ನು ಬಲವಾಗಿ ಸಾರಿದೆ
> **ಉರ್ಸುಲಾ ಫಾಂಡರ್ ಲೇಯನ್,** ಐರೋಪ್ಯ ಆಯೋಗದ ಮುಖ್ಯಸ್ಥೆ

> ಭಾರತ ಮತ್ತು ಇಟಲಿ ನಡುವಿನ ಸಂಬಂಧಗಳು ತ್ವರಿತ ವಿಸ್ತರಣೆಯ ಹಾದಿಯಲ್ಲಿವೆ. ಭಾರತ–ಇಯು ನಡುವಿನ ಒಪ್ಪಂದವು ಇದಕ್ಕೆ ಇನ್ನಷ್ಟು ಬಲ ನೀಡಲಿದೆ
> **ಸೆರ್ಗಿಯೊ ಮ್ಯಾಟರೆಲ್ಲಾ**
> ಇಟಲಿ ಅಧ್ಯಕ್ಷ

ದರ್ಶನಕ್ಕೆ ತೆರೆದ ಲವ ದೇಗುಲ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿನ ಲಾಹೋರ್‌ನ ಕೋಟೆಯಲ್ಲಿರುವ ಲವ ದೇವಸ್ಥಾನದ ಪುನರ್‌ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸಾರ್ವಜನಿಕರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಲವ ದೇಗುಲದ ಜೊತೆಗೆ ಸ್ಮಾರಕಗಳಾದ ಸಿಖ್ಖರ ಹಮ್ಮಾಮ್ ಹಾಗೂ ಮಹಾರಾಜ ರಂಜಿತ್ ಸಿಂಗ್ ಅವರಿಂದ ನಿರ್ಮಾಣವಾಗಿದ್ದ ಅಷ್ಟದ್ವಾರ ಮಂಟಪವನ್ನು ಆಗಾ ಖಾನ್ ಸಾಂಸ್ಕೃತಿಕ ಸೇವಾ ಕೇಂದ್ರದ ಸಹಯೋಗದಲ್ಲಿ ಪುನರುಜ್ಜೀವನಗೊಳಿಸಲಾಗಿದೆ ಎಂದು ವಾಲ್ಡ್ ಸಿಟಿ ಲಾಹೋರ್ ಪ್ರಾಧಿಕಾರ (ಡಬ್ಲ್ಯುಸಿಎಲ್‌ಎ) ಮಂಗಳವಾರ ತಿಳಿಸಿದೆ.

ಲಾಹೋರ್ ಕೋಟೆ ಒಳಗಿರುವ ಲವ ದೇಗುಲ ಇದೀಗ ಐತಿಹಾಸಿಕ ಸ್ಮಾರಕ. ಭಗವಾನ್ ರಾಮನ ಪುತ್ರರಲ್ಲಿ ಒಬ್ಬರಾದ ಲವನಿಗೆ ಸಮರ್ಪಿತವಾಗಿರುವ ದೇಗುಲ. ಲವನ ದೇಗುಲ ಇಲ್ಲಿರುವುದರಿಂದಲೇ ಲಾಹೋರ್ ಎಂಬ ಹೆಸರು ಬಂದಿದೆ ಎಂಬ ನಂಬಿಕೆ ಹಿಂದೂಗಳದ್ದು.

ಸೇವೆಗೆ ಅಡಚಣೆ

ನವದೆಹಲಿ (ಪಿಟಿಐ): ಶಾಖೆಗೆ ತೆರಳಿ ಪಡೆಯಬೇಕಾದ ಬ್ಯಾಂಕಿಂಗ್ ಸೇವೆಗಳಿಗೆ ಬ್ಯಾಂಕ್ ನೌಕರರ ಮುಷ್ಕರದ ಕಾರಣದಿಂದಾಗಿ ಮಂಗಳವಾರ ಅಡಚಣೆ ಉಂಟಾಯಿತು.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಗ್ರಾಹಕರು ಮುಷ್ಕರದ ಬಿಸಿ ಅನುಭವಿಸಿದರು.

‘ಒಪ್ಪಂದಗಳ ತಾಯಿ’ಗೆ ದಾರಿ ಮುಕ್ತ

ಒಂದನೇ ಪುಟದಿಂದ...

ಭಾರತ ಮತ್ತು ಇ.ಯು ದೇಶಗಳ ಅರ್ಥ ವ್ಯವಸ್ಥೆಯು ಒಟ್ಟಾಗಿ ವಿಶ್ವದ ಜಿಡಿಪಿಯಲ್ಲಿ ಶೇಕಡ 25ರಷ್ಟು ಪಾಲು ಹೊಂದಿವೆ, ಜಾಗತಿಕ ವ್ಯಾಪಾರದಲ್ಲಿ ಮೂರನೆಯ ಒಂದರಷ್ಟು ಪಾಲು ಹೊಂದಿವೆ.

ಇ.ಯು ನಾಯಕರಾದ ಉರ್ಸುಲಾ ಫಾಂಡರ್ ಲೇಯನ್ ಮತ್ತು ಆ್ಯಂಟೊನಿಯೊ ಕೋಸ್ಟಾ ಅವರ ಜೊತೆ ಶೃಂಗಸಭೆಯಲ್ಲಿ ಭಾಗಿಯಾದ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಇತಿಹಾಸದಲ್ಲಿನ ಅತಿದೊಡ್ಡ ಮುಕ್ತ ವ್ಯಾಪಾರ ಒಪ್ಪಂದ ಕುರಿತ ಮಾತುಕತೆಯು ಪೂರ್ಣಗೊಂಡಿದೆ ಎಂಬುದನ್ನು ಪ್ರಕಟಿಸಿದರು.

ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ವಾಹನಗಳು ಹಾಗೂ ಉಕ್ಕು ಹೊರತುಪಡಿಸಿ, ಭಾರತದ ಬಹುತೇಕ ಎಲ್ಲ ಉತ್ಪನ್ನಗಳು (ಶೇ 93ರಷ್ಟಕ್ಕಿಂತ ಹೆಚ್ಚು) ಐರೋಪ್ಯ ಒಕ್ಕೂಟದ 27 ದೇಶಗಳ ಮಾರುಕಟ್ಟೆಯನ್ನು ಯಾವುದೇ ಸುಂಕ ಪಾವತಿಸದೆ ಪ್ರವೇಶಿಸಬಹುದು. ಭಾರತದ ಇನ್ನುಳಿದ ಸರಿಸುಮಾರು ಶೇ 6ರಷ್ಟು ಉತ್ಪನ್ನಗಳಿಗೆ (ಆಟೊಮೊಬೈಲ್‌ನಂತಹ ಉತ್ಪನ್ನಗಳಿಗೆ) ಸುಂಕ ಕಡಿತ ಅಥವಾ ಕೋಟಾ ಆಧಾರಿತ ಸುಂಕ ವಿನಾಯಿತಿಯ ಪ್ರಯೋಜನ ಸಿಗಲಿದೆ.

ಒಪ್ಪಂದಕ್ಕೆ ಈ ವರ್ಷದಲ್ಲಿ ಸಹಿ ಬೀಳಲಿದೆ. ಒಪ್ಪಂದವು ಮುಂದಿನ ವರ್ಷದ ಆರಂಭದಲ್ಲಿ ಜಾರಿಗೆ ಬರುವ ನಿರೀಕ್ಷೆ ಇದೆ. ಭಾರತದ ಸರಕುಗಳಿಗೆ ಇ.ಯು ದೇಶಗಳಲ್ಲಿ ಈಗ ಸರಾಸರಿ ಶೇ 3.8ರಷ್ಟು ಸುಂಕ ಇದೆ. ಇದು ಒಪ್ಪಂದ ಜಾರಿಯಾದ ನಂತರದಲ್ಲಿ ಶೇ 0.1ಕ್ಕೆ ಇಳಿಕೆ ಆಗುತ್ತದೆ.

ಇ.ಯು ದೇಶಗಳ ಶೇ 90ರಷ್ಟಕ್ಕಿಂತ ಹೆಚ್ಚಿನ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯನ್ನು 10 ವರ್ಷಗಳ ಅವಧಿಯಲ್ಲಿ ಸುಂಕ ರಹಿತವಾಗಿ ಪ್ರವೇಶಿಸಲು ಸಾಧ್ಯವಾಗಲಿದೆ. ಒಪ್ಪಂದ ಜಾರಿಗೆ ಬರುವ ಮೊದಲ ದಿನ ಶೇ 30ರಷ್ಟು ಉತ್ಪನ್ನಗಳಿಗೆ ಮಾತ್ರ ಭಾರತದ ಮಾರುಕಟ್ಟೆಗೆ ಸುಂಕರಹಿತ ಪ್ರವೇಶ ಸಿಗಲಿದೆ.

ಐರೋಪ್ಯ ಒಕ್ಕೂಟದ ದೇಶಗಳ ಯಂತ್ರೋಪಕರಣಗಳು, ಎಲೆಕ್ಟ್ರಿಕಲ್ ಉಪಕರಣಗಳು, ವಿಮಾನಗಳು, ವೈದ್ಯಕೀಯ ಹಾಗೂ ಶಸ್ತ್ರಚಿಕಿತ್ಸಾ ಉಪಕರಣಗಳು, ಪ್ಲಾಸ್ಟಿಕ್, ರಾಸಾಯನಿಕಗಳು, ಉಕ್ಕು ಮತ್ತು ಕಬ್ಬಿಣ, ಔಷಧಗಳಿಗೆ ಭಾರತದ ಮಾರುಕಟ್ಟೆಯನ್ನು ಸುಂಕರಹಿತವಾಗಿ ಪ್ರವೇಶಿಸಲು ಆಗಲಿದೆ.

ಸೇವಾ ವಲಯಕ್ಕೆ ಸಂಬಂಧಿಸಿದ 144 ಉಪ ವಲಯಗಳನ್ನು ಇ.ಯು ಭಾರತದ ಪಾಲಿಗೆ ಮುಕ್ತವಾಗಿಸುತ್ತಿದೆ. ಇದಕ್ಕೆ ಪ್ರತಿಯಾಗಿ ಭಾರತವು 102 ಉಪ ವಲಯಗಳನ್ನು ಇ.ಯು ಪಾಲಿಗೆ ಮುಕ್ತವಾಗಿಸುತ್ತಿದೆ.

ಇಂಗಾಲದ ತೆರಿಗೆ ವಿಚಾರವಾಗಿ ಇ.ಯು ಈ ಒಪ್ಪಂದದಲ್ಲಿ ಭಾರತಕ್ಕೆ ನಿರ್ದಿಷ್ಟವಾದ ಯಾವುದೇ ರಿಯಾಯಿತಿ ನೀಡುತ್ತಿಲ್ಲ. ಆದರೆ ಇ.ಯು ಮುಂದಿನ ದಿನಗಳಲ್ಲಿ ಯಾವುದೇ ದೇಶಕ್ಕೆ ಈ ತೆರಿಗೆ ವಿಚಾರದಲ್ಲಿ ಯಾವುದೇ ಬಗೆಯ ವಿನಾಯಿತಿ ನೀಡಿದಲ್ಲಿ, ಅದು ಭಾರತಕ್ಕೆ ಕೂಡ ಅನ್ವಯವಾಗುತ್ತದೆ ಎಂಬ ಭರವಸೆ ನೀಡಲಾಗಿದೆ.

ಯುರೋಪಿನ ಐಷಾರಾಮಿ ಕಾರುಗಳು ಅಗ್ಗ

ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ಯುರೋಪಿನ ಐಷಾರಾಮಿ ಕಾರುಗಳಿಗೆ ಭಾರತವು ಕೋಟಾ ಆಧಾರಿತ ಸುಂಕ ವಿನಾಯಿತಿ ಒದಗಿಸಲಿದೆ. ಇದರಿಂದಾಗಿ ಬಿಎಂಡಬ್ಲ್ಯು, ಮರ್ಸಿಡೀಸ್, ಲ್ಯಾಂಬೋರ್ಗಿನಿ, ಪೋರ್ಷೆ, ಔಡಿ ಕಂಪನಿಗಳ ಕಾರುಗಳ ಬೆಲೆಯು ಭಾರತದ ಮಾರುಕಟ್ಟೆಯಲ್ಲಿ ಕಡಿಮೆ ಆಗುವ ನಿರೀಕ್ಷೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇ.ಯು ದೇಶಗಳು ಭಾರತದ ಆಟೊಮೊಬೈಲ್‌ಗಳ ಮೇಲಿನ ಸುಂಕವನ್ನು ಹಂತ ಹಂತವಾಗಿ ತಗ್ಗಿಸಲಿವೆ. ಭಾರತವು ಇ.ಯು ಒಕ್ಕೂಟದ ದೇಶಗಳ ಕಾರುಗಳ ಮೇಲಿನ ಸುಂಕವನ್ನು ವಾರ್ಷಿಕ 2.5 ಲಕ್ಷ ವಾಹನಗಳ ಕೋಟಾ ಮಿತಿಗೆ ಒಳಪಟ್ಟು ಶೇ 10ಕ್ಕೆ ಇಳಿಕೆ ಮಾಡಲಿದೆ.

ಭಾರತದ ಕಾರು ಮಾರುಕಟ್ಟೆಯಲ್ಲಿ ₹10 ಲಕ್ಷದಿಂದ ₹25 ಲಕ್ಷದವರೆಗಿನ ಕಾರುಗಳ ಮಾರಾಟವು ಹೆಚ್ಚಿದೆ. ಇ.ಯು ದೇಶಗಳು ಭಾರತದಲ್ಲಿ ಈ ಬೆಲೆಯ ಕಾರುಗಳ ಮಾರಾಟದಲ್ಲಿ ಹೆಚ್ಚಿನ ಆಸಕ್ತಿ ಹೊಂದಿಲ್ಲ. ಹೀಗಾಗಿ, ಇ.ಯು. ದೇಶಗಳಿಗೆ ಸೇರಿದ ಕಂಪನಿಗಳ ₹25 ಲಕ್ಷಕ್ಕಿಂತ ಕಡಿಮೆ ಬೆಲೆಯ ಕಾರುಗಳನ್ನು ಇಲ್ಲಿಗೆ ರಫ್ತು ಮಾಡುವ ಬದಲು, ಅವುಗಳನ್ನು ಕಂಪನಿಗಳು ಭಾರತದಲ್ಲಿಯೇ ತಯಾರು ಮಾಡಬಹುದು ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಕೋಟಾ ಮೂಲಕ ನಿಗದಿ ಮಾಡಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಯುರೋಪಿನ ಕಂಪನಿಗಳ ಕಾರುಗಳಿಗೆ ಭಾರತದಲ್ಲಿ ಬೇಡಿಕೆ ಇದೆ ಎಂದಾದರೆ, ಆ ಮಾದರಿ ಕಾರುಗಳನ್ನು ಕಂಪನಿಗಳು ಭಾರತದಲ್ಲಿಯೇ ತಯಾರು ಮಾಡುವುದಕ್ಕೆ ಉತ್ತೇಜನ ನೀಡುವುದು ಸರ್ಕಾರದ ಉದ್ದೇಶ ಎಂದು ಅಧಿಕಾರಿ ಹೇಳಿದ್ದಾರೆ.

ಯುರೋಪಿನ ವಿದ್ಯುತ್ ಚಾಲಿತ ವಾಹನಗಳಿಗೆ ಭಾರತದ ಮಾರುಕಟ್ಟೆಯಲ್ಲಿ ಕೋಟಾ ಆಧಾರಿತ ಸುಂಕ ಇಳಿಕೆಯ ಪ್ರಯೋಜನವು ಒಪ್ಪಂದ ಜಾರಿಗೆ ಬಂದ ಐದನೆಯ ವರ್ಷದಿಂದ ಸಿಗಲಿದೆ.

ಶೂನ್ಯಕ್ಕೆ ಇಳಿಯಲಿದೆ ಸುಂಕ

ವಲಯ	ಈಗಿನ ಸುಂಕ (%)
ಸಮುದ್ರ ಉತ್ಪನ್ನಗಳು	0-26
ರಾಸಾಯನಿಕಗಳು	12.8ರವರೆಗೆ
ಪ್ಲಾಸ್ಟಿಕ್, ರಬ್ಬರ್	6.5ರವರೆಗೆ
ಚರ್ಮ ಮತ್ತು ಪಾದರಕ್ಷೆ	17ರವರೆಗೆ
ಜವಳಿ, ವಸ್ತ್ರ, ಉಡುಪು	12ರವರೆಗೆ
ಹರಳು ಮತ್ತು ಆಭರಣ	4ರವರೆಗೆ
ರೈಲು, ವಿಮಾನ, ಹಡಗು, ದೋಣಿ	7.7ರವರೆಗೆ
ಪೀಠೋಪಕರಣಗಳು	10.5ರವರೆಗೆ
ಆಟಿಕೆಗಳು	4.7ರವರೆಗೆ
ಕ್ರೀಡಾ ಉತ್ಪನ್ನಗಳು	4.7ರವರೆಗೆ

ಭಾರತದಿಂದ ರಫ್ತು ಆಗುವ ಈ ಎಲ್ಲ ಉತ್ಪನ್ನಗಳ ಮೇಲಿನ ಸುಂಕವು ಶೂನ್ಯಕ್ಕೆ ತಗ್ಗಲಿದೆ

ತ್ವರಿತ ರಾಜತಾಂತ್ರಿಕ ಕ್ರಮಕ್ಕೆ ಮನವಿ

ಕೀವ್ (ಎಪಿ): ‘ಉಕ್ರೇನ್ ಮೇಲೆ ಸುಮಾರು ನಾಲ್ಕು ವರ್ಷಗಳಿಂದ ರಷ್ಯಾ ನಡೆಸುತ್ತಿರುವ ದಾಳಿಯನ್ನು ಕೊನೆಗೊಳಿಸಲು ಅಮೆರಿಕವು ತನ್ನ ರಾಜತಾಂತ್ರಿಕ ಕ್ರಮಗಳನ್ನು ತ್ವರಿತಗತಿಯಲ್ಲಿ ಮುಂದುವರಿಸಬೇಕು’ ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮನವಿ ಮಾಡಿದ್ದಾರೆ.


ಝೆಲೆನ್‌ಸ್ಕಿ

ಉಕ್ರೇನ್‌ನ ಒಡೆಸಾ ನಗರದ ಮೇಲೆ ರಷ್ಯಾ 50ಕ್ಕೂ ಹೆಚ್ಚು ಡ್ರೋನ್‌ಗಳ ಮೂಲಕ ಬಾಂಬ್ ದಾಳಿ ನಡೆಸಿದ್ದು, ಇಬ್ಬರು ಮಕ್ಕಳು ಮತ್ತು ಗರ್ಭಿಣಿ ಸೇರಿದಂತೆ 23 ಮಂದಿ ಗಾಯಗೊಂಡಿದ್ದಾರೆ. ಈ ಘಟನೆಯ ಬೆನ್ನಲ್ಲೇ ಝೆಲೆನ್‌ಸ್ಕಿ ಅವರು ಟೆಲಿಗ್ರಾಮ್ ಆ್ಯಪ್ ಮೂಲಕ ಮನವಿ ಮಾಡಿದ್ದಾರೆ.

‘ರಷ್ಯಾದ ಪ್ರತಿಯೊಂದು ದಾಳಿಯು ಯುದ್ಧವನ್ನು ಕೊನೆಗೊಳಿಸಲು ನಡೆಸುತ್ತಿರುವ ರಾಜತಾಂತ್ರಿಕ ಕ್ರಮಗಳನ್ನು ದುರ್ಬಲಗೊಳಿಸುತ್ತದೆ. ಅಲ್ಲದೆ, ಇದಕ್ಕಾಗಿ ಸಹಾಯ ಮಾಡುತ್ತಿರುವ ಪಾಲುದಾರ ದೇಶಗಳ ಪ್ರಯತ್ನಗಳ ಮೇಲೂ ಪರಿಣಾಮ ಬೀರುತ್ತದೆ’ ಎಂದು ಹೇಳಿದ್ದಾರೆ.

‘ಈ ದಾಳಿಯಲ್ಲಿ ಸುಧಾರಿತ ಡ್ರೋನ್‌ಗಳನ್ನು ರಷ್ಯಾ ಬಳಸಿದೆ. ಈ ವರ್ಷ ಚಳಿಗಾಲದಲ್ಲೇ ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿ ಪದೇ ಪದೇ ಬಾಂಬ್ ದಾಳಿ ನಡೆಸುತ್ತಿದೆ. ಐದು ಅಪಾರ್ಟ್‌ಮೆಂಟ್ ಬ್ಲಾಕ್‌ಗಳಿಗೆ ಹಾನಿಯಾಗಿದೆ. ಪ್ರೊಟೆಸ್ಟಂಟ್ ಕ್ರೈಸ್ತರು ಅನೌಪಚಾರಿಕವಾಗಿ ಪೂಜಿಸುವ ಸ್ಥಳಕ್ಕೂ ಹಾನಿಯಾಗಿದೆ’ ಎಂದು ಉಕ್ರೇನ್ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ದಕ್ಷಿಣ ಕೊರಿಯಾಕ್ಕೆ ಟ್ರಂಪ್ ಸುಂಕ ಏರಿಕೆ ಬೆದರಿಕೆ

ವಾಷಿಂಗ್ಟನ್ (ಎಪಿ): ದಕ್ಷಿಣ ಕೊರಿಯಾದ ಸರಕುಗಳ ಮೇಲಿನ ಸುಂಕವನ್ನು ಏರಿಕೆ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಘೋಷಿಸಿದ್ದಾರೆ.

ಕಳೆದ ವರ್ಷ ಘೋಷಣೆಯಾದ ವ್ಯಾಪಾರ ಒಪ್ಪಂದದ ಚೌಕಟ್ಟಿಗೆ ದೇಶದ ಶಾಸಕಾಂಗವು ಇನ್ನೂ ಒಪ್ಪಿಗೆ ನೀಡದ ಕಾರಣ ಸುಂಕವನ್ನು ಏರಿಕೆ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಟ್ರಂಪ್ ಹೇಳಿದ್ದಾರೆ.

‘ದಕ್ಷಿಣ ಕೊರಿಯಾದ ಆಟೊಮೊಬೈಲ್, ಔಷಧಗಳ ಮೇಲಿನ ಆಮದು ಸುಂಕವನ್ನು ಶೇ 15ರಿಂದ ಶೇ 25ಕ್ಕೆ ಏರಿಕೆ ಮಾಡಲಾಗುವುದು’ ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದ ಮೂಲಕ ತಿಳಿಸಿದ್ದಾರೆ.

‘ಅಮೆರಿಕಕ್ಕೆ ವ್ಯಾಪಾರ ಒಪ್ಪಂದಗಳು ಬಹಳ ಮುಖ್ಯವಾಗುತ್ತವೆ. ಒಪ್ಪಂದದ ಅನುಸಾರವಾಗಿ ಸರಕುಗಳ ಮೇಲಿನ ಸುಂಕವನ್ನು ತ್ವರಿತಗತಿಯಲ್ಲಿ ಕಡಿಮೆ ಮಾಡುತ್ತೇವೆ. ಪಾಲುದಾರ ರಾಷ್ಟ್ರಗಳಿಂದಲೂ ಅದನ್ನೇ ನಿರೀಕ್ಷಿಸುತ್ತೇವೆ’ ಎಂದು ಟ್ರಂಪ್ ಹೇಳಿದ್ದಾರೆ.

ಕ್ಲಾಸಿಫೈಡ್ಸ್
ADMISSION CORNER

BMS Educational Trust
BMS ACADEMY FOR PROFESSIONAL COURSES In Association with Sri Chaitanya ACADEMY
Coaching Classes for JEE, NEET & KCET with PUC/10+2
JEE (Advance + Mains)
NEET (Medical Aspirants)
KCET (Engineering Aspirants)

FEATURES
-PUC Classes @ BMSCW (PU) Campus
-Experience Faculties for PUC & JEE / NEET / KCET
-Daily Practice Papers (DDPs) & Regular Assignments
-Weekly Tests & Monthly Grand Tests with Detailed Analysis
Contact us at:
BMS Academy for Professional Courses
BMS College of Engineering Campus,
Bull Temple Rd, Basavanagudi, Bengaluru-19
89717 36008 | 90365 10011
bmsiasacademy@gmail.com www.bmsacademy.org.in
LIMITED SEATS - ENROLL NOW! Your success is our commitment.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
This is to inform the general public that my client intends to purchase the immovable properties mentioned and described in the schedule below from its Owner Sri. **Rajaiah B.**, son of Late Basappa, (hereafter referred to as “Owner”). The Owner represents that he is the absolute owner of the Schedule Property which is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence within **Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE
All that piece and parcel of the below mentioned properties situated at Kethohalli Village, Kasaba Hobli, Ramanagara Taluk:

Sl. No.	Sy. No.	Extent in Acres & Guntas	Boundaries			
1.	123/4	02-10	Survey No. 124/10	Survey Nos. 123/1 & 5	Private Property	Survey No. 123/2
2.	124/10	00-06	Road	Survey No. 123/4	Survey Nos. 125 & 123/4	Property belongs to Smt.Prema

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49,
Edward Road, Bengaluru-560001
Ph.: 080 22863885 / 49763233
email: vinay@vinaykademane.in
Place : Bengaluru
Date : 27-01-2026

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ,ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964311522, 9742133993

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597/ 9739320897/ 9743972747/ 9448842717

ಪ್ರವಾಸ

Travel

1ದಿನ ಕದ್ರಿ, ನರಸಿಂಹಸ್ವಾಮಿ, ಲೇಪಾಕ್ಷಿ, ಪುಟ್ಟಪರ್ತಿ 1ದಿನ ತಿರುವಣ್ಣಾಮಲೈ, ಗೋಲ್ಡನ್ ಟೆಂಪಲ್ ಜಲಕಂಠೇಶ್ವರ 2 ದಿನಗಳು ಅಹೋಬಿಲಂ ನವನರಸಿಂಹ,ಲೇಪಾಕ್ಷಿ ಬೆಲ್ಲುಂಗುಹೆಗಳು ಪ್ರತಿ ಬುಧವಾರ 6 ದಿನಗಳು ಪಂಚರಾಮ ವಿಜಯವಾಡ ವಿಶಾಖಪಟ್ಟಣಂ, ರಾಜಮಹೇಂದ್ರವರಂ ಅಣ್ಣವರಂ, ಸಿಂಹಾಚಲಂ ಪೆಣುಗೊಂಡ ಪ್ರತಿತಿಂಗಳು ವಿಮಾನ ಪ್ರಯಾಣ 9403890729 ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್

ಜಿ.ಆರ್.ಟ್ರಾವೆಲ್ಸ್ 1ದಿನದ ಮಾಘ ಮಾಸದ ಪ್ರವಾಸ: 31012026 ನಂಜನಗೂಡು, ಸುತ್ತೂರುಮಠ, ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟ. 9945272907

ಲಾಂಛನ ಬಿಡುಗಡೆ ಸಮಾರಂಭದಲ್ಲಿ ಅನು ಮುಖರ್ಜಿ, ಶ್ರೀನಿವಾಸಮೂರ್ತಿ, ಕೋಮಲ್ ಅವರೊಂದಿಗೆ ರಾಘವೇಂದ್ರ ಚಿತ್ರವಾಣಿ ತಂಡ.

ರಾಘವೇಂದ್ರ ಚಿತ್ರವಾಣಿಗೆ ಸುವರ್ಣ ಸಂಭ್ರಮ

ಕನ್ನಡದ ಮೊದಲ ಸಿನಿಮಾ ಪ್ರಚಾರ ಸಂಸ್ಥೆ ರಾಘವೇಂದ್ರ ಚಿತ್ರವಾಣಿಗೆ ಸುವರ್ಣ ಸಂಭ್ರಮ. ಅದರ ಬೆನ್ನಲ್ಲೇ ವಿಶೇಷ ಲಾಂಛನವನ್ನು ಸಂಸ್ಥೆ ಇತ್ತೀಚೆಗಷ್ಟೇ ಅನಾವರಣಗೊಳಿಸಿತು. ನಟರಾದ ಶ್ರೀನಿವಾಸಮೂರ್ತಿ, ಕೋಮಲ್ ಹಾಗೂ ನಟಿ ಅನು ಮುಖರ್ಜಿ ಲಾಂಛನ ಬಿಡುಗಡೆಗೊಳಿಸಿ ಶುಭ ಹಾರೈಸಿದರು.

‘1976ರಲ್ಲಿ ದಿವಂಗತ ಡಿ.ವಿ.ಸುಧೀಂದ್ರ ಅವರು ರಾಘವೇಂದ್ರ ಚಿತ್ರವಾಣಿ ಸಂಸ್ಥೆಯನ್ನು ಪ್ರಾರಂಭಿಸಿದರು. ಅದೇ ವರ್ಷ ನಾನು ಕೂಡ ಚಿತ್ರರಂಗಕ್ಕೆ ಕಾಲಿಟ್ಟೆ. ನಿರ್ದೇಶಕ ಸಿದ್ದಲಿಂಗಯ್ಯ, ನಿರ್ಮಾಪಕ ವರದರಾಜ್ ಅವರೆಲ್ಲ ಆಗ ಹೆಚ್ಚಾಗಿ ಮೆಜೆಸ್ಟಿಕ್‌ನ ಟೂರಿಸ್ಟ್ ಹೊಟೇಲ್‌ನಲ್ಲಿ ಇರುತ್ತಿದ್ದರು. ಅಲ್ಲಿಗೆ ಸುಧೀಂದ್ರ ಬರುತ್ತಿದ್ದರು. ಅಲ್ಲಿಂದ ನಮ್ಮ ಒಡನಾಟ ಪ್ರಾರಂಭವಾಯಿತು. ಸಿನಿಮಾ ಪ್ರಚಾರ ಸಂಸ್ಥೆಯೊಂದು 50 ವರ್ಷ ಸಕ್ರಿಯವಾಗಿ ಕಾರ್ಯನಿರ್ವಹಿಸಿರುವುದು ಭಾರತೀಯ ಚಿತ್ರರಂಗದ ಇತಿಹಾಸದಲ್ಲಿಯೇ ಮೊದಲು. ಐವತ್ತು ನೂರಾಗಲಿ, ಸಂಸ್ಥೆ ಇನ್ನೂ ಎತ್ತರಕ್ಕೆ ಬೆಳೆಯಲಿ’ ಎಂದು ಶ್ರೀನಿವಾಸಮೂರ್ತಿ ಹಾರೈಸಿದರು.

‘ನಾನು ಪುಟ್ಟ ಪಾತ್ರಗಳನ್ನು ಮಾಡಿಕೊಂಡಿದ್ದ ಕಾಲದಲ್ಲಿ ನೀವು ಕನ್ನಡ ಚಿತ್ರರಂಗದಲ್ಲಿ ದೊಡ್ಡ ನಟರಾಗಿ ಬೆಳೆಯುತ್ತೀರಿ ಎಂದು ನನಗೆ ಹಾರೈಸಿದವರು ಸುಧೀಂದ್ರ. ಅವರನ್ನು ಬಹಳ ಬೇಗ ಕಳೆದುಕೊಂಡೆವು. ಆದರೂ ವೆಂಕಟೇಶ್ ಮತ್ತು ಅವರ ಕುಟುಂಬದವರು ಸಂಸ್ಥೆಯನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ’ ಎಂದು ಸಂಸ್ಥೆ ಜತೆಗಿನ ತಮ್ಮ ಒಡನಾಟವನ್ನು ನೆನಪಿಸಿಕೊಂಡರು ಕೋಮಲ್.

‘ಈವರೆಗೂ ಸುಮಾರು 3000ಕ್ಕೂ ಅಧಿಕ ಚಿತ್ರಗಳಿಗೆ ಪ್ರಚಾರ ಕಾರ್ಯ ನೀಡಿರುವ ಏಕಮಾತ್ರ ಸಂಸ್ಥೆ ನಮ್ಮದು. ಐವತ್ತರ ಸಂಭ್ರಮವನ್ನು ಏಪ್ರಿಲ್ ತಿಂಗಳಲ್ಲಿ ವಿಶೇಷವಾಗಿ ಆಚರಿಸಲು ಆಲೋಚಿಸಿದ್ದೇವೆ. ಜತೆಗೆ ಮುಂದಿನ ದಿನಗಳಲ್ಲಿ ಸಹಭಾಗಿತ್ವದಲ್ಲಿ ಸಿನಿಮಾ ನಿರ್ಮಾಣದ ಗುರಿಯೂ ಇದೆ’ ಎಂದು ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ರೂವಾರಿ ವೆಂಕಟೇಶ್ ತಿಳಿಸಿದರು.

ಮನಿಷಾ ಭಟ್

ಐದು ಭಾಷೆಗಳಲ್ಲಿ ಜಿರೋ ಟು ಒನ್

ನಾಗವೇಣಿ ಸಂತೋಷ್

ನಾಗವೇಣಿ ಸಂತೋಷ್ ನಿರ್ದೇಶಿಸಿ, ನಟಿಸುತ್ತಿರುವ ‘ಜಿರೋ ಟು ಒನ್’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಈ ಚಿತ್ರವು ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ಮಾಣಗೊಳ್ಳಲಿದ್ದು, ಐದು ಭಾಷೆಗಳಲ್ಲಿ ತೆರೆಕಾಣಲಿದೆ.

‘ನನ್ನ ಹದಿಮೂರು ವರ್ಷಗಳ ಕನಸಿದು. ಚಿತ್ರರಂಗಕ್ಕೆ ಬರಬೇಕೆಂದು ಬಹಳ ಕಷ್ಟಪಟ್ಟೆ. ಯಾರೂ ಇಲ್ಲಿ ಬೆಂಬಲಕ್ಕೆ ಬರಲಿಲ್ಲ. ಅದಕ್ಕೆ ನಾನೇ ಧೈರ್ಯ ಮಾಡಿ ಸಿನಿಮಾ ಮಾಡುವ ನಿರ್ಧಾರಕ್ಕೆ ಬಂದೆ. ಮುಂಬೈನಲ್ಲಿ ಚಿತ್ರದ ಕೆಲಸ ಪ್ರಾರಂಭಿಸಿದೆ. ಹಿಂದಿಯಲ್ಲಿ ಸಿನಿಮಾ ಮಾಡುತ್ತಿದ್ದೇನೆ. ಆದರೆ ಕನ್ನಡ ಮಾತೃಭಾಷೆ. ಹೀಗಾಗಿ ಮೊದಲು ಇಲ್ಲಿಗೆ ಆದ್ಯತೆ. ನಂತರ ಹಿಂದಿಯಲ್ಲಿ ಮತ್ತೊಂದು ಸಿನಿಮಾ ಕೈಗೆತ್ತಿಕೊಳ್ಳುವೆ. ಈ ಸಿನಿಮಾ ಇದೇ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭಿಸಿ, ಆಗಸ್ಟ್, ಸೆಪ್ಟೆಂಬರ್‌ನಲ್ಲಿ ತೆರೆಗೆ ತರುವ ಆಲೋಚನೆ ಇದೆ’ ಎಂದರು ಸಂತೋಷ್.

ಮನಿಷಾ ಭಟ್ ಚಿತ್ರದ ನಾಯಕಿ. ಎ.ಯು.ಮೂವೀಸ್ ಮೂಲಕ ನಿರ್ದೇಶಕರೇ ಬಂಡವಾಳವನ್ನು ಹೂಡುತ್ತಿದ್ದಾರೆ. ರಕ್ಷಿತಾ ಗೌಡ, ಸುಮಾ, ನಕ್ಷತ್ರ, ರಿತ್ವಿಕಾ ಮುಂತಾದವರು ತಾರಾಗಣದಲ್ಲಿದ್ದಾರೆ. ವೆಂಕಟೇಶ ನಾಕಿ ಛಾಯಾಚಿತ್ರಗ್ರಹಣ, ರಾಹುಲ್ ವಸಿಷ್ಠ ಸಂಕಲನ ಚಿತ್ರಕ್ಕಿದೆ.

ಚಿತ್ರತಂಡ

ಸೆಟ್ಟೇರಲು ಸಜ್ಜಾದ ‘ತಿಕ್ಲು ರಾಮ’

ಮಂಜುಕವಿ ನಿರ್ದೇಶನದ ‘ತಿಕ್ಲು ರಾಮ’ ಚಿತ್ರದ ಶೀರ್ಷಿಕೆ ಮತ್ತು ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ನಟ ಚೇತನ್ ಚಿತ್ರದ ಟೈಟಲ್ ಟೀಸರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

‘ಚಿತ್ರರಂಗ ಅಭಿವೃದ್ಧಿ ಹೊಂದಬೇಕಾದರೆ ಕ್ರಿಯಾಶೀಲರು ಹೆಚ್ಚಾಗಬೇಕು. ಅಂಥ ತಂಡವನ್ನು ಇಟ್ಟುಕೊಂಡು ಮಂಜುಕವಿ ಸಿನಿಮಾ ಮಾಡುತ್ತಿದ್ದಾರೆ. ಶೀರ್ಷಿಕೆ ಹಾಸ್ಯಮಯವಾಗಿದ್ದರೂ ಸಮಾಜಕ್ಕೆ ಸಂದೇಶ ನೀಡುವ, ಕೌಟುಂಬಿಕ ಹಾಗೂ ಭಾವನಾತ್ಮಕ ವಿಷಯಗಳನ್ನು ಹೊಂದಿರುವ ಚಿತ್ರವನ್ನು ಮಾಡಲು ಈ ತಂಡ ಹೊರಟಿದೆ’ ಎಂದರು ಚೇತನ್.

ಶೃತಿ.ಜಿ.ಬಿ ಮತ್ತು ಕೋಮಲ ನಟರಾಜು ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ರಾಜ್‌ವೀರ್, ಸಂಗೀತ, ಮಿತ್ರ, ಭಾಗ್ಯಶ್ರೀ, ಶೃತಿ. ಬಿ, ಗೋವಿಂದೇಗೌಡ, ವಿನೋದ್ ಗೊಬ್ಬರಗಾಲ, ಸುಚೇಂದ್ರ ಪ್ರಸಾದ್ ಮುಂತಾದವರು ತಾರಾಗಣದಲ್ಲಿದ್ದಾರೆ.

‘ಚಿತ್ರದಲ್ಲಿ ಪರಿಸರ, ಸಾಮಾಜಿಕ ಕಳಕಳಿ, ಕೂಡು ಕುಟುಂಬದ ಕುರಿತಾದ ಅಂಶಗಳು ಇರಲಿವೆ. ಸೈಲೆಂಟ್ ಆಗಿದ್ದರೆ ರಾಮ, ಕೊಡಲಿ ಹಿಡಿದರೆ ತಿಕ್ಲು ರಾಮ. ಹಾಗಂತ ರಕ್ತಪಾತವನ್ನು ವೈಭವಿಕರಿಸುವುದಿಲ್ಲ. ಹಾಸನ ಸುತ್ತಮುತ್ತ ಚಿತ್ರೀಕರಣ ನಡೆಸುವ ಯೋಚನೆಯಿದೆ’ ಎಂದರು ನಿರ್ದೇಶಕ.

ವಿನು ಮನಸು ಹಿನ್ನೆಲೆ ಸಂಗೀತ, ರಾಜ್ ಕಡೂರು-ನಾಗರಾಜಮೂರ್ತಿ ಛಾಯಾಚಿತ್ರಗ್ರಹಣ, ವೆಂಕಿ.ಯುಡಿವಿ ಸಂಕಲನ ಚಿತ್ರಕ್ಕಿದೆ.

ಬಜೆಟ್ ಅಧಿವೇಶನ: ಮತ್ತೆ ಕದನ?

ಜಿ ರಾಮ್ ಜಿ ಕಾಯ್ದೆ, ಎಸ್‌ಐಆರ್ ಚರ್ಚೆಗೆ ವಿಪಕ್ಷ ಪಟ್ಟು • ಚರ್ಚೆಗೆ ಒಪ್ಪದ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ನರೇಗಾ ಬದಲು ಜಾರಿಗೊಳಿಸಿರುವ ‘ವಿಬಿ ಜಿ ರಾಮ್ ಜಿ’ ಕಾಯ್ದೆ ಹಾಗೂ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಬಜೆಟ್ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಹಾಗೂ ವಿರೋಧ ಪಕ್ಷಗಳ ನಡುವೆ ಮತ್ತೊಂದು ಸುತ್ತಿನ ಸಂಘರ್ಷ ನಡೆಯುವ ಸಾಧ್ಯತೆ ದಟ್ಟವಾಗಿದೆ. ಬಜೆಟ್ ಅಧಿವೇಶನದ ಮುನ್ನಾ ದಿನವಾದ ಮಂಗಳವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ, ಈ ವಿಷಯಗಳ ಬಗ್ಗೆ ಚರ್ಚೆಗೆ ವಿರೋಧ ಪಕ್ಷಗಳು ಪಟ್ಟು ಹಿಡಿದವು. ಆದರೆ, ಈ ಬೇಡಿಕೆಯನ್ನು ಸರ್ಕಾರ ಸಾರಾಸಗಟಾಗಿ ತಿರಸ್ಕರಿಸಿತು.



ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸೇರಿದಂತೆ ಹಲವಾರು ಹಿರಿಯ ಸಚಿವರು ಹಾಗೂ ವಿಪಕ್ಷಗಳ ಸದಸ್ಯರು ಭಾಗವಹಿಸಿದ್ದರು.

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕಿರಣ್ ರಿಜಿಜು, ‘ಬಜೆಟ್ ಅಧಿವೇಶನದ ಪ್ರಾಥಮಿಕ ಗಮನವು ಬಜೆಟ್ ಕುರಿತು ಆಗಿರುತ್ತದೆ. ರಾಷ್ಟ್ರಪತಿಯವರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯ ಸಮಯದಲ್ಲಿ ಸದಸ್ಯರು ಇತರ ವಿಷಯಗಳನ್ನು ಪ್ರಸ್ತಾಪಿಸಬಹುದು’ ಎಂದರು.

ಬಜೆಟ್ ಅಧಿವೇಶನದ ಸಂಸದೀಯ ಕಾರ್ಯಸೂಚಿಯನ್ನು ಹಂಚಿಕೊಳ್ಳದಿದ್ದಕ್ಕೆ ಕಾಂಗ್ರೆಸ್ ಮತ್ತು ಸಿಪಿಐ(ಎಂ) ಸೇರಿದಂತೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದವು. ಇದಕ್ಕೆ ಪ್ರತಿಕ್ರಿಯಿಸಿದ ರಿಜಿಜು, ‘ಸಾಮಾನ್ಯವಾಗಿ ರಾಷ್ಟ್ರಪತಿಯವರ ಭಾಷಣದ ನಂತರ ಈ ಕಾರ್ಯಸೂಚಿಯನ್ನು ಹಂಚಿಕೊಳ್ಳಲಾಗುತ್ತದೆ. ಆದಾಗ್ಯೂ, ಕಾರ್ಯಸೂಚಿ ಹಂಚಿಕೊಳ್ಳಲು ನಾನು ಸಿದ್ಧನಿದ್ದೇನೆ. ಈ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ’ ಎಂದರು.

ವಿಪಕ್ಷಗಳ ಪಟ್ಟು ಏನು?

- ವಿಬಿ ಜಿ ರಾಮ್ ಜಿ ಕಾಯ್ದೆ, ಎಸ್‌ಐಆರ್, ಮಾಲಿನ್ಯ, ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ, ಭಾರತದ ವಿದೇಶಾಂಗ ನೀತಿ, ಭಾರತದ ಮೇಲೆ ಅಮೆರಿಕ ವಿಧಿಸಿದ ಸುಂಕಗಳು, ದೇಶದ ಆರ್ಥಿಕ ಸ್ಥಿತಿ, ಯುಜಿಸಿಯ ಮಾರ್ಗಸೂಚಿ ಬಗ್ಗೆ ವಿಸ್ತೃತ ಚರ್ಚೆ.
- ಎಸ್‌ಐಆರ್ ಕುರಿತು ಚರ್ಚೆಗೆ ಡಿಎಂಕೆ, ಟಿಎಂಸಿ ಹಾಗೂ ಎಡಪಕ್ಷಗಳ ಸಂಸದರಿಂದ ಆಗ್ರಹ. ಕೇಂದ್ರ–ರಾಜ್ಯಗಳ ಸಂಬಂಧ ಹಾಗೂ ವಿಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಲೋಕಭವನಗಳ ದುರುಪಯೋಗದ ಕುರಿತ ಚರ್ಚೆಗೆ ಒತ್ತಾಯ.

‘ಕಾಯ್ದೆ’ ಹಿಂಪಡೆಯಲ್ಲ: ರಿಜಿಜು

‘ಸಂಸತ್‌ನ ಉಭಯ ಸದನಗಳಿಂದ ಅಂಗೀಕಾರ ಪಡೆದು ವಿಬಿ ಜಿ ರಾಮ್ ಜಿ ಕಾಯ್ದೆಯು ದೇಶದಲ್ಲಿ ಜಾರಿಯಾಗಿದೆ. ನಾವು ರಿವರ್ಸ್ ಗೇರ್‌ನಲ್ಲಿ ಚಲಿಸಲು ಸಾಧ್ಯವಿಲ್ಲ. ಈ ಕಾಯ್ದೆಯನ್ನು ಹಿಂದಕ್ಕೆ ಪಡೆಯುವುದಿಲ್ಲ‘ ಎಂದು ಕಿರಣ್ ರಿಜಿಜು ಸ್ಪಷ್ಟಪಡಿಸಿದರು. ಚುನಾವಣಾ ವ್ಯವಸ್ಥೆಯ ಸುಧಾರಣೆ ಬಗ್ಗೆ ಈಗಾಗಲೇ ವ್ಯಾಪಕ ಚರ್ಚೆ ಆಗಿದೆ. ಇದೇ ವಿಷಯದ ಬಗ್ಗೆ ಮತ್ತೊಮ್ಮೆ ಚರ್ಚಿಸುವುದು ಅನಗತ್ಯ‘ ಎಂದು ಅವರು ಅಭಿಪ್ರಾಯಪಟ್ಟರು. ‘ವಿಪಕ್ಷ ಸದಸ್ಯರ ಸಲಹೆಗಳನ್ನು ಸರ್ಕಾರ ಮುಕ್ತ ಮನಸ್ಸಿನಿಂದ ಕೇಳಲು ಸಿದ್ಧವಿದೆ‘ ಎಂದರು.

‘ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ವಾಗ್ದಂಡನೆ ಪ್ರಕ್ರಿಯೆ ನಡೆಯುತ್ತಿದೆ. ಅವರ ವಿರುದ್ಧದ ಆರೋಪಗಳ ತನಿಖೆಗಾಗಿ ಲೋಕಸಭಾಧ್ಯಕ್ಷ ಓಂ ಬಿರ್ಲಾ ರಚಿಸಿರುವ ಮೂವರು ಸದಸ್ಯರ ಸಮಿತಿಯ ವರದಿಗಾಗಿ ಸರ್ಕಾರ ಕಾಯುತ್ತಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

‘ದೇಶವನ್ನು ‘ಮಹಾರಾಜ’ ಯುಗಕ್ಕೆ ತಳ್ಳಲು ಯತ್ನ’

ರಾಹುಲ್

ನವದೆಹಲಿ (ಪಿಟಿಐ): ‘ನರೇಗಾ’ವನ್ನು ನಾಶಮಾಡುವ ಮೂಲಕ ಕಾರ್ಮಿಕರ ವೇತನದ ಹಕ್ಕು ನಾಶಪಡಿಸುವ ಯತ್ನ ನಡೆಸುತ್ತಿದ್ದು, ಪಂಚಾಯಿತಿಗಳಿಗೆ ನೀಡಿದ ಅಧಿಕಾರವನ್ನು ಕಸಿದು, ದೇಶವನ್ನು ಮಹಾರಾಜರ ಕಾಲಕ್ಕೆ ತಳ್ಳಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಪ್ರಯತ್ನಿಸುತ್ತಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

‘ನರೇಗಾವು ನಮ್ಮ ಜೀವನವನ್ನು ಬದಲಾಯಿಸಿತು, ಈಗಿನ ಮೋದಿ ಸರ್ಕಾರವು ನಮ್ಮನ್ನು (ಕಾರ್ಮಿಕ) ಗುಲಾಮರನ್ನಾಗಿ ಮಾಡಲು ಹೊರಟಿದೆ’ ಎಂದು ನರೇಗಾ ಕಾರ್ಮಿಕರು ಅಭಿಪ್ರಾಯ ವ್ಯಕ್ತಪಡಿಸಿದ ವಿಡಿಯೊವನ್ನು ರಾಹುಲ್ ಅವರ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

‘ನರೇಗಾವನ್ನು ನಾಶಪಡಿಸುವುದರ ಹಿಂದೆ ಮೋದಿ ಅವರು ಯಾವ ಉದ್ದೇಶ ಹೊಂದಿದ್ದಾರೆ? ಪಂಚಾಯಿತಿ ತಮ್ಮ ಅಧಿಕಾರ ಕಳೆದುಕೊಂಡು, ಕೈ ಕಟ್ಟಿ ಹಾಕಲಾಗುತ್ತಿದೆ. ರಾಜ್ಯಗಳ ಅಧಿಕಾರವನ್ನು ಕಿತ್ತುಕೊಂಡು, ದೆಹಲಿಯಲ್ಲೇ ಕೇಂದ್ರಿಕೃತ ಅಧಿಕಾರ ಹೊಂದುವ ಪ್ರಯತ್ನಗಳು ನಡೆಯುತ್ತಿವೆ. ಇಡೀ ದೇಶವನ್ನು ಮಹಾರಾಜರ ಆಡಳಿತಕ್ಕೆ ತಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಆ ಮೂಲಕ ಎಲ್ಲ ಅಧಿಕಾರ ಹಾಗೂ ಸಂಪತ್ತನ್ನು ಕೆಲವೇ ಜನರ ಹಿಡಿತಕ್ಕೆ ನೀಡಲಾಗುತ್ತಿದೆ’ ಎಂದು ರಾಹುಲ್ ಗಾಂಧಿ ದೂರಿದ್ದಾರೆ.

ವಂದೇ ಭಾರತ್ ಸ್ಲೀಪರ್‌ನಲ್ಲಿ ಶೀಘ್ರ ಮಾಂಸಾಹಾರ

ಕೋಲ್ಕತ್ತ (ಪಿಟಿಐ): ಹೌರಾ–ಕಾಮಾಕ್ಯ ನಡುವೆ ಸಂಚರಿಸುವ ಭಾರತದ ಮೊದಲ ವಂದೇ ಭಾರತ್ ಸ್ಲೀಪರ್ ರೈಲಿನ ಮೆನುವಿನಲ್ಲಿ ಮಾಂಸಾಹಾರ ಕೂಡ ಶೀಘ್ರವೇ ಸೇರ್ಪಡೆಯಾಗಲಿದೆ ಎಂದು ಪೂರ್ವ ರೈಲ್ವೆ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ವಂದೇ ಭಾರತ್ ಸ್ಲೀಪರ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 17ರಂದು ಹಸಿರು ನಿಶಾನೆ ತೋರಿದ್ದರು. ರೈಲಿನಲ್ಲಿ ಸಸ್ಯಾಹಾರ ಮಾತ್ರ ನೀಡುವ ಬಗ್ಗೆ ಕೆಲ ಪ್ರಯಾಣಿಕರು ಆಕ್ಷೇಪ ವ್ಯಕ್ತ ಪಡಿಸಿದ್ದರು.

ರಾಜಧಾನಿ ಎಕ್ಸ್‌ಪ್ರೆಸ್, ಶತಾಬ್ದಿ ಎಕ್ಸ್‌ಪ್ರೆಸ್ ಮತ್ತು ವಂದೇ ಭಾರತ್ ಇತರ ರೈಲುಗಳಲ್ಲಿ ಈಗಾಗಲೇ ಮಾಂಸಾಹಾರ ಆಯ್ಕೆ ಲಭ್ಯವಿದೆ.

‘ಜನ ನಾಯಗನ್’: ಏಕ ಸದಸ್ಯ ಪೀಠದ ಆದೇಶ ರದ್ದು

ವಿಜಯ್

ಚೆನ್ನೈ (ಪಿಟಿಐ): ನಟ ವಿಜಯ್ ಅಭಿನಯದ ‘ಜನ ನಾಯಗನ್’ ಸಿನಿಮಾಕ್ಕೆ ಸೆನ್ಸಾರ್ ಪ್ರಮಾಣಪತ್ರ ನೀಡಲು ಚಲನಚಿತ್ರ ಸೆನ್ಸಾರ್ ಮಂಡಳಿಗೆ (ಸಿಬಿಎಫ್‌ಸಿ) ನಿರ್ದೇಶನ ನೀಡಿದ್ದ ಏಕಸದಸ್ಯ ಪೀಠದ ಆದೇಶವನ್ನು ಮದ್ರಾಸ್ ಹೈಕೋರ್ಟ್ ಮಂಗಳವಾರ ರದ್ದುಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎಂ.ಎಂ. ಶ್ರೀವಾಸ್ತವ ಮತ್ತು ನ್ಯಾಯಮೂರ್ತಿ ಜಿ. ಅರುಳ್ ಮುರುಗನ್ ಅವರ ಪೀಠವು ಏಕಸದಸ್ಯ ಪೀಠದ ನ್ಯಾಯಮೂರ್ತಿ ಪಿ.ಟಿ. ಆಶಾ ಅವರು ಚಿತ್ರತಂಡದ ವಾದಕ್ಕೆ ಪ್ರತಿಯಾಗಿ ವಾದ ಮಂಡಿಸಲು ಸಿಬಿಎಫ್‌ಸಿಗೆ ಸಮಯ ನೀಡಬೇಕಿತ್ತು ಎಂದು ಹೇಳಿತು.

ಚಿತ್ರದಲ್ಲಿ ಸೇನೆ ಮತ್ತು ಜನರ ಧಾರ್ಮಿಕ ಭಾವನೆಗಳಿಗೆ ಸಂಬಂಧಿಸಿದ ಕೆಲವು ವಿಷಯಗಳಿವೆ. ಇದು ದೇಶದಲ್ಲಿ ಧಾರ್ಮಿಕ ಸಾಮರಸ್ಯವನ್ನು ಕದಡುವ ಸಾಧ್ಯತೆಯಿದೆ. ಆದ್ದರಿಂದ ಈ ವಿಷಯಗಳನ್ನು ಪರಿಗಣಿಸುವ ಅಗತ್ಯವಿದೆ ಎಂದಿತು. ನ್ಯಾಯಮೂರ್ತಿ ಆಶಾ ಅವರ ಜನವರಿ 9ರ ಆದೇಶವನ್ನು ಪ್ರಶ್ನಿಸಿ ಸಿಬಿಎಫ್‌ಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಪೀಠವು ಅಂಗೀಕರಿಸಿತು.

ತಮ್ಮ ಈ ಹಿಂದಿನ ಮನವಿಯನ್ನು ತಿದ್ದುಪಡಿ ಮಾಡಲು ಮತ್ತು ಹೊಸದಾಗಿ ಸಲ್ಲಿಸುವ ಅರ್ಜಿಯನ್ನು ತ್ವರಿತ ವಿಚಾರಣೆಗೆ ತೆಗೆದುಕೊಳ್ಳುವಂತೆ ಕೋರಿ ಏಕಸದಸ್ಯ ಪೀಠದ ಬಳಿ ಹೋಗುವ ಸ್ವಾತಂತ್ರ್ಯವನ್ನು ಪೀಠವು ಚಿತ್ರದ ನಿರ್ಮಾಪಕರಾದ ಕೆವಿಎನ್ ಪ್ರೊಡಕ್ಷನ್ಸ್‌ಗೆ ನೀಡಿದೆ.

ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಶ್ಲಾಘಿಸಿದ ಅಖಿಲೇಶ್ ಯಾದವ್

‘ದೀದಿ’ ಮಾತ್ರ ಬಿಜೆಪಿ ಎದುರಿಸಬಲ್ಲರು’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬಿಜೆಪಿ ವಿರುದ್ಧ ಹೋರಾಡಲು ತೋರುತ್ತಿರುವ ಧೈರ್ಯವನ್ನು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಕೊಂಡಾಡಿದ್ದಾರೆ.

ಅಖಿಲೇಶ್ ಅವರು ಸಂಸದರೂ ಆಗಿರುವ ಪತ್ನಿ ಡಿಂಪಲ್ ಯಾದವ್ ಅವರೊಂದಿಗೆ ಮಂಗಳವಾರ ಇಲ್ಲಿ ಮಮತಾ ಅವರನ್ನು ಭೇಟಿಯಾಗಿ ಸುಮಾರು 40 ನಿಮಿಷ ಮಾತುಕತೆ ನಡೆಸಿದರು.

‘ಇಡೀ ದೇಶದಲ್ಲಿ ಬಿಜೆಪಿಯನ್ನು ಎದುರಿಸಲು ‘ದೀದಿ’ (ಮಮತಾ ಬ್ಯಾನರ್ಜಿ) ಅವರಿಗೆ ಮಾತ್ರ ಸಾಧ್ಯ’ ಎಂದು ಭೇಟಿಯ ಬಳಿಕ ಅಖಿಲೇಶ್ ಅವರು ಸುದ್ದಿಗಾರರಿಗೆ ತಿಳಿಸಿದರು.

> **ಪ್ರಜಾಪ್ರಭುತ್ವ ಉಳಿಸಲು ನಡೆಸುತ್ತಿರುವ ಹೋರಾಟದಲ್ಲಿ ಮಮತಾ ಬ್ಯಾನರ್ಜಿ ಅವರಿಗೆ ನಾವು ಸಂಪೂರ್ಣ ಬೆಂಬಲ ನೀಡುತ್ತೇವೆ**
> **ಅಖಿಲೇಶ್ ಯಾದವ್,** ಸಮಾಜವಾದಿ ಪಕ್ಷದ ಮುಖ್ಯಸ್ಥ

‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹೆಸರಿನಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ಜಾರಿಗೆ ತರಲು ಪ್ರಯತ್ನಿಸಲಾಗುತ್ತಿದೆ ಹಾಗೂ ಜನರಿಗೆ ಕಿರುಕುಳ ನೀಡಲಾಗುತ್ತಿದೆ’ ಎಂದು ಆರೋಪಿಸಿದರು. ಉತ್ತರ ಪ್ರದೇಶದಲ್ಲಿ ಸುಮಾರು 2.89 ಕೋಟಿ ಮತದಾರರನ್ನು ಕರಡು ಪಟ್ಟಿಯಿಂದ ಕೈಬಿಟ್ಟಿರುವುದನ್ನು ಅವರು ಉಲ್ಲೇಖಿಸಿದರು.

ಬಿಜೆಪಿ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದ್ದ ಅಖಿಲೇಶ್, ‘ದೀದಿ’ ಅವರು ಇ.ಡಿಯನ್ನು (ಜಾರಿ ನಿರ್ದೇಶನಾಲಯ) ಸೋಲಿಸಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಅವರು ಮತ್ತೊಮ್ಮೆ ಬಿಜೆಪಿಯನ್ನು ಸೋಲಿಸುತ್ತಾರೆ ಎಂಬುದು ನಮಗೆ ಖಚಿತವಾಗಿದೆ’ ಎಂದಿದ್ದರು.

ಐ–ಪ್ಯಾಕ್ ಕಚೇರಿ ಮತ್ತು ಅದರ ನಿರ್ದೇಶಕ ಪ್ರತೀಕ್ ಜೈನ್ ಅವರ ನಿವಾಸದ ಮೇಲೆ ಇ.ಡಿ ದಾಳಿಯ ಸಂದರ್ಭದಲ್ಲಿ ಮಮತಾ ಅವರು ಎರಡೂ ಸ್ಥಳಗಳಿಗೆ ಧಾವಿಸಿ ಬಂದದ್ದನ್ನು ಉಲ್ಲೇಖಿಸಿ ಅಖಿಲೇಶ್ ಈ ಹೇಳಿಕೆ ಕೊಟ್ಟಿದ್ದರು.

‘ಅಶಾಂತಿ ಸೃಷ್ಟಿಸುವ ಪ್ರಯತ್ನ’

ಮುಂಬರುವ ಚುನಾವಣೆಗೆ ಮುನ್ನ ರಾಜ್ಯದಲ್ಲಿ ಅಶಾಂತಿ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ ಎಂದು ಎಚ್ಚರಿಸಿರುವ ಮಮತಾ ಬ್ಯಾನರ್ಜಿ, ಶಾಂತಿ ಕಾಪಾಡುವಂತೆ ಮತ್ತು ಪ್ರಚೋದನೆಗೆ ಬಲಿಯಾಗದಂತೆ ಜನರನ್ನು ಒತ್ತಾಯಿಸಿದ್ದಾರೆ. ‘ಕೆಲವರು ಚುನಾವಣಾ ಲಾಭಕ್ಕಾಗಿ ಗಲಭೆ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ನಾವು 365 ದಿನವೂ ಒಟ್ಟಾಗಿ ಬದುಕಬೇಕಿರುವುದರಿಂದ ಯಾರೂ ಪ್ರಚೋದನೆಗೆ ಒಳಗಾಗಬಾರದು. ಈ ಬಂಗಾಳ ಎಲ್ಲರಿಗೂ ಸೇರಿದೆ’ ಎಂದು ಮಂಗಳವಾರ ಹೇಳಿದರು.

ಕೇಂದ್ರಾಡಳಿತ ಪ್ರದೇಶ ಮತ್ತು ಎಲ್ಲ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

‘ಆ್ಯಸಿಡ್ ದಾಳಿ ಪ್ರಕರಣಗಳ ಮಾಹಿತಿ ನೀಡಿ’

ನವದೆಹಲಿ (ಪಿಟಿಐ): ‘ಆ್ಯಸಿಡ್ ದಾಳಿ ಪ್ರಕರಣಗಳ ಬಗ್ಗೆ ವರ್ಷವಾರು ಮಾಹಿತಿ ನೀಡಿ. ನ್ಯಾಯಾಲಯಗಳಲ್ಲಿ ಈ ಪ್ರಕರಣಗಳ ವಿಚಾರಣೆ ಯಾವ ಹಂತದಲ್ಲಿದೆ ಮತ್ತು ಸಂತ್ರಸ್ತರಿಗೆ ಪುನರ್ವಸತಿ ಸೇರಿ ಯಾವ ರೀತಿಯಲ್ಲಿ ಬೆಂಬಲ ನೀಡಲಾಗುತ್ತಿದೆ ಎಂಬುದನ್ನು ನೀಡಿ’ ಎಂದು ಕೇಂದ್ರಾಡಳಿತ ಪ್ರದೇಶ ಮತ್ತು ಎಲ್ಲ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿತು.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಆರ್. ಮಹದೇವನ್ ಹಾಗೂ ಜಾಯ್ ಮಾಲ್ಯಾ ಬಾಗ್ಚಿ ಅವರ ಪೀಠ ಮಂಗಳವಾರ ಈ ಸೂಚನೆ ನೀಡಿತು.

> **ಆ್ಯಸಿಡ್ ದಾಳಿ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಕಠಿಣಾತಿ ಕಠಿಣ ಶಿಕ್ಷೆ ವಿಧಿಸುವ ಕಾನೂನು ರೂಪಿಸಿ**
> **ಸುಪ್ರೀಂ ಕೋರ್ಟ್‌ನ ಪೀಠ**
> (ಕೇಂದ್ರ ಸರ್ಕಾರಕ್ಕೆ ನೀಡಿದ ಸೂಚನೆ)

ಕಾನೂನಿನಲ್ಲಿ ಈಗಾಗಲೇ ಇರುವ ‘ಅಂಗವಿಕಲ ವ್ಯಕ್ತಿ’ ಎನ್ನುವ ಅರ್ಥ ವಿವರಣೆಯನ್ನು ವಿಸ್ತರಿಸಬೇಕು ಎಂದು ಕೋರಿ ಆ್ಯಸಿಡ್ ದಾಳಿಯ ಸಂತ್ರಸ್ತೆ ಶಾಹೀನ್ ಮಲ್ಲಿಕ್ ಅವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು. ಬಲವಂತದಿಂದ ಆ್ಯಸಿಡ್ ಕುಡಿಸಿದ ಪ್ರಕರಣಗಳ ಸಂತ್ರಸ್ತರನ್ನೂ ‘ಅಂಗವಿಕಲ ವ್ಯಕ್ತಿ’ ಎನ್ನುವ ಅರ್ಥ ವಿವರಣೆಯಲ್ಲಿ ಒಳಗೊಳ್ಳಬೇಕು. ಆ್ಯಸಿಡ್ ದಾಳಿಯ ಸಂತ್ರಸ್ತರಿಗೆ ಸೂಕ್ತ ಪರಿಹಾರ, ವೈದ್ಯಕೀಯ ಸೌಕರ್ಯ ಸೇರಿ ಹಲವು ಸೌಲಭ್ಯ ನೀಡಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

‘ಸಂತ್ರಸ್ತರ ಮಾಹಿತಿಯೂ ಇರಲಿ’

- ಎಲ್ಲ ಸಂತ್ರಸ್ತರ ಶೈಕ್ಷಣಿಕ ವಿವರ, ಉದ್ಯೋಗ, ವೈವಾಹಿಕ ಮಾಹಿತಿ ನೀಡಿ. ಜೊತೆಗೆ, ಚಿಕಿತ್ಸೆಗಾಗಿ ಖರ್ಚು ಮಾಡಿದ ಮತ್ತು ಮುಂದೆ ಖರ್ಚು ಮಾಡಬೇಕಿರುವ ಹಣದ ಮಾಹಿತಿಯೂ ಇರಲಿ
- ಬಲವಂತದಿಂದ ಆ್ಯಸಿಡ್ ಕುಡಿಸಿದ ಪ್ರಕರಣಗಳ ಮಾಹಿತಿಯನ್ನೂ ನೀಡಿ
- ಯಾವ ವಿಚಾರಣಾ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗಿವೆ ಮತ್ತು ಇನ್ನೂ ಎಷ್ಟು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ. ಯಾವ ಯಾವ ಪ್ರಕರಣಗಳಲ್ಲಿ ಅರ್ಜಿದಾರರು ಹೈಕೋರ್ಟ್ ಸೇರಿದಂತೆ ಇತರೆ ಮೇಲ್ಮನವಿ ನ್ಯಾಯಾಲಯಗಳಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂಬ ಮಾಹಿತಿಯನ್ನೂ ನೀಡಿ

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ಮರು ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಸಂಖ್ಯೆ: ಕಾಯೋಮೋಶಿ /ಎ2/ಮೋಜಣಿ/ಇ–ಟೆಂಡರ್/ಸಿಆರ್–12/2025–26 E-1815780 ದಿ: 23.01.2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
2025–26 ನೇ ಸಾಲಿನಲ್ಲಿ ಶಿವಮೊಗ್ಗ, ಮಂಗಳೂರು, ಕುಂದಾಪುರ ಮತ್ತು ಕುದುರೆಮುಖ ವನ್ಯಜೀವಿ ವಿಭಾಗಗಳ ವಿವಿಧ ವಲಯಗಳಲ್ಲಿನ ಅಧಿಸೂಚಿತ ಅರಣ್ಯ ಪ್ರದೇಶಗಳ ಮರುಮೋಜಣಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಒಟ್ಟು ಅಂದಾಜು ರೂ. 112,212 ಲಕ್ಷಗಳ ಒಟ್ಟು 27 ಕಾಮಗಾರಿಗಳಿಗೆ ಅಲ್ಪಾವಧಿ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರಣ್ಯ ಗುತ್ತಿಗೆದಾರರು ದಿನಾಂಕ: 31.01.2026 ರ ಸಂಜೆಯೊಳಗೆ as per KPPP-Portal ಟೆಂಡರನ್ನು ಲ್ಲಿಸಬಹುದಾಗಿದೆ. ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182–250785 ಅಥವಾ ಖುದ್ದಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/–(ಜ್ಞಾನಾನಂದ.ಎಸ್) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25–26/199/01/1713

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಜಂಟಿ ಆಯುಕ್ತರವರ ಕಛೇರಿ,
ವಲಯ–1, ಮೆಯೊಹಾಲ್ ಆವರಣ, ರೆಸಿಡೆನ್ಸಿ ರಸ್ತೆ, ಬೆಂಗಳೂರು – 560001.
ಸಂಖ್ಯೆ: ಬೆಂಕೇನಪಾ/ಜಆ–1/ಟೆಂಡರ್/05/2025–26 ದಿನಾಂಕ: 27–01–2026
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಜಂಟಿ ಆಯುಕ್ತರು (ವಲಯ–1), ಬೆಂಕೇನಪಾ, ಬೆಂಗಳೂರು ಇವರು ಈ ಕೆಳಕಂಡ ಕೆಲಸಕ್ಕಾಗಿ ಬೆಂಕೇನಪಾ ಅಥವಾ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿರುವ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಅರ್ಹ ಗುತ್ತಿಗೆದಾರರು / ಸಂಸ್ಥೆಯಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಬೆಂಗಳೂರು ಕೇಂದ್ರ ನಗರ ಪಾಲಿಕೆಗೆ ಪದವೀಧರರು / ಡಿಪ್ಲೊಮಾ ಸಿವಿಲ್ ಇಂಜಿನಿಯರ್‌ಗಳನ್ನು ಒದಗಿಸುವುದು. **ಟೆಂಡರಿಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ. ಲಕ್ಷಗಳಲ್ಲಿ): 238.06, ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ): 3.57**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **30–01–2026 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **06–02–2026 ರಂದು 16.00 ಗಂಟೆಗೆ ಜಂಟಿ ಆಯುಕ್ತರ, ಕಛೇರಿ, ವಲಯ–1, ರೆಸಿಡೆನ್ಸಿ ರಸ್ತೆ, ಮೆಯೊಹಾಲ್ ಆವರಣ, ಬೆಂಗಳೂರು ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ: **16–02–2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **18–02–2026 ರಂದು 16.00 ಗಂಟೆಗೆ ವೆಬ್‌ಸೈಟ್: https://kppp.karnataka.gov.in** ನಲ್ಲಿ ಜಂಟಿ ಆಯುಕ್ತರ ಕಛೇರಿ, ವಲಯ–1, **ಬೆಂಕೇನಪಾ, ಬೆಂಗಳೂರು** ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/–
ಜಂಟಿ ಆಯುಕ್ತರು, ವಲಯ–1, ಬೆಂಕೇನಪಾ.

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕೃಷಿ ನಗರ ಧಾರವಾಡ–580005
ಮಿಂಚಂಚೆ : spo@uasd.in ದೂರವಾಣಿ ಸಂಖ್ಯೆ: 0836–2214291
ನಂ. ನಿ.ಅ/ಆಅ/ಟೆಂಡರ್.ಇಪ್ರೋಕ್–16/2025–26 ದಿನಾಂಕ : 23.01.2026
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ)
ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಪೀಠೋಪಕರಣಗಳ ಖರೀದಿಗಾಗಿ ಟೆಂಡರನ್ನು ಆಹ್ವಾನಿಸಿದ್ದು, ಅರ್ಹ ನೋಂದಾಯಿತ ಅಧಿಕೃತ ಸರಬರಾಜುದಾರರು ಟೆಂಡರಿನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟನ್ನು ಆನ್‌ಲೈನ ಮುಖಾಂತರ ಸಂಪರ್ಕಿಸುವುದು http://kppp.karnataka.gov.in ಹಾಗೂ ಟೆಂಡರ ದಸ್ತಾವೇಜುಗಳನ್ನು ಡೌನಲೋಡ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **12.02.2026** (ಗುರುವಾರ) ಸಾಯಂಕಾಲ 4.00 ಗಂಟೆಯವರೆಗೆ. ಟೆಂಡರ ವೇಳಾಪಟ್ಟಿಯ ಇತರ ಮಾಹಿತಿಯನ್ನು ಇ ಪೋರ್ಟಲ್‌ನಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ **0836–2214291** ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಟೆಂಡರಿನಲ್ಲಿ ಭಾಗವಹಿಸಲಿಚ್ಛಿಸುವ ಸರಬರಾಜುದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: **080–46010000**. ಭಾಗವಹಿಸುವ ಸರಬರಾಜುದಾರರು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ http://kppp.karnataka.gov.in ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.
ಸಹಿ/– ಆಸ್ತಿ ಅಧಿಕಾರಿಗಳು
ಕೃ.ವಿ.ವಿ. ಧಾರವಾಡ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/1147/2025–26

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483636/38/39
No.KSBCL/INFRA/ADM11-104/2025-26 Date: 27.01.2026
ಟೆಂಡರ್‌ಗಾಗಿ ಆಹ್ವಾನ–2ನೇ ಕರೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯನಿರ್ವಾಹಕ ನಿರ್ದೇಶಕರು (A&I), ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ, ಬೆಂಗಳೂರು ಇವರು ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000ರ ಅನ್ವಯ KPWD / CPWD ನಲ್ಲಿ ನೋಂದಾಯಿತ ವರ್ಗ–1 ಸಿವಿಲ್ ಗುತ್ತಿಗೆದಾರರು/ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂದರದ ಟೆಂಡರನ್ನು ಆಹ್ವಾನಿಸಿದ್ದಾರೆ. ಇತರೆ ವಿವರಗಳನ್ನು ವೆಬ್‌ಸೈಟ್ ವಿಳಾಸ **https://kppp.karnataka.gov.in** ನಲ್ಲಿ ಪಡೆಯಬಹುದು.
ಕಾಮಗಾರಿಯ ಹೆಸರು: ಬೆಂಗಳೂರಿನ ಕಿತ್ತಗಾನಹಳ್ಳಿ–2 ಡಿಪೋಗೆ ರ್‍ಯಾಕಿಂಗ್ ವ್ಯವಸ್ಥೆ, ಕಚೇರಿ ಪಾರ್ಟಿಷನ್, ಕೋಲ್ಡ್ ಸ್ಟೋರೇಜ್ ಕೊಠಡಿ, ಇಪಾಕ್ಸಿ ನೆಲಹಾಸು ಮತ್ತು ಇತರೆ ಕೆಲಸಗಳನ್ನು ಒದಗಿಸುವುದು.
ಟೆಂಡರಿಗಿಟ್ಟ ಮೊತ್ತ: ರೂ 4,68,34,964/– + ಜಿಎಸ್‌ಟಿ. **ಇಎಂಡಿ:** ರೂ. 7,02,524/–.
ಕಾಮಗಾರಿ ಪೂರ್ಣಗೊಳಿಸುವ ಅವಧಿ: 6 ತಿಂಗಳು (ಮಳೆಗಾಲ ಸೇರಿ).
1) ವಿಚಾರಣೆಯನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ: 05.02.2026ರ ಮಧ್ಯಾಹ್ನ 12:30 ಗಂಟೆಯವರೆಗೆ.** 2) ಪೂರ್ವಭಾವಿ ಸಭೆಯ **ದಿನಾಂಕ: 06.02.2026ರ ಮಧ್ಯಾಹ್ನ 3:00 ಗಂಟೆಗೆ.** 3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ: 13.02.2026ರ ಸಂಜೆ 5:30 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 16.02.2026ರ ಸಂಜೆ 4:00 ಗಂಟೆಗೆ.**
ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಎ & ಐ)
ಕರಾಪಾನಿನಿ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/5214/2025–26

ಭಾರತದ ಪ್ರಾಬಲ್ಯ ಮುಂದುವರಿವ ನಿರೀಕ್ಷೆ

4ನೇ ಟಿ20 ಪಂದ್ಯ ಇಂದು: ಒತ್ತಡದಲ್ಲಿ ಕಿವೀಸ್ ತಂಡ
ಈಗಾಗಲೇ ಸರಣಿ ಗೆದ್ದಿರುವ ಸೂರ್ಯಕುಮಾರ್ ಪಡೆ

ವಿಶಾಖಪಟ್ಟಣ (ಪಿಟಿಐ): ಆತಿಥೇಯ ಭಾರತ ಈಗಾಗಲೇ ಟಿ20 ಸರಣಿ ಕೈವಶ ಮಾಡಿಕೊಂಡಿದೆ. ನ್ಯೂಜಿಲೆಂಡ್ ವಿರುದ್ಧ ಬುಧವಾರ ನಡೆಯುವ ನಾಲ್ಕನೇ ಪಂದ್ಯದಲ್ಲೂ ಇದೇ ರೀತಿಯ ಪ್ರಾಬಲ್ಯ ಮುಂದುವರಿಸುವ ವಿಶ್ವಾಸದಲ್ಲಿದೆ. ಇದರ ನಡುವೆ, ತಂಡವು ಪ್ರಮುಖ ಸ್ಪಿನ್ನರ್‌ಗಳಿಂದ ಸುಧಾರಿತ ಪ್ರದರ್ಶನದ ನಿರೀಕ್ಷೆಯಲ್ಲಿದೆ.

ಆರಂಭ ಆಟಗಾರ ಅಭಿಷೇಕ್ ಶರ್ಮಾ, ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಇಶಾನ್ ಕಿಶನ್ ಅವರು ಬಿರುಗಾಳಿ ಬ್ಯಾಟಿಂಗ್ ಪ್ರದರ್ಶಿಸಿದ್ದಾರೆ. ಈ ಬ್ಯಾಟರ್‌ಗಳ ಅಬ್ಬರದಲ್ಲಿ ತಂಡದ ಪ್ರಮುಖ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ ಮತ್ತು ವರುಣ್ ಚಕ್ರವರ್ತಿ ಅವರ ಸಾಧಾರಣ ನಿರ್ವಹಣೆ ಎದ್ದು ಕಂಡಿಲ್ಲ.

ಕುಲದೀಪ್ ಎರಡು ಪಂದ್ಯಗಳಿಂದ ಎರಡು ವಿಕೆಟ್ ಅಷ್ಟೇ ಪಡೆದಿದ್ದಾರೆ. ಅವರಿಗೆ ಇನ್ನೂ ಲಯ ಕಂಡುಕೊಳ್ಳಲು ಆಗಿಲ್ಲ. ಪ್ರತಿ ಓವರಿಗೆ ಅವರು 9.5 ರನ್ ತೆತ್ತಿದ್ದಾರೆ. ಭಾನುವಾರ ಮೂರನೇ ಪಂದ್ಯದಲ್ಲಿ ಜಸ್‌ಪ್ರೀತ್ ಬೂಮ್ರಾ, ರವಿ ಬಿಷ್ಣೋಯಿ ಮತ್ತು ಹಾರ್ದಿಕ್ ಪಾಂಡ್ಯ ಪರಿಣಾಮಕಾರಿ ದಾಳಿ ನಡೆಸಿ ಕಿವೀಸ್ ತಂಡವನ್ನು 9 ವಿಕೆಟ್‌ಗೆ 153 ರನ್‌ಗಳಿಗೆ ಸೀಮಿತಗೊಳಿಸಿದ್ದ ವೇಳೆ ಕುಲದೀಪ್ 3 ಓವರುಗಳಲ್ಲಿ 32 ರನ್ ಕೊಟ್ಟು ದುಬಾರಿಯಾಗಿದ್ದಾರೆ. ಇದಕ್ಕೆ ಮೊದಲು, ಏಕದಿನ ಸರಣಿಯಲ್ಲೂ ಅವರು ಪ್ರತಿ ಓವರಿಗೆ 7.28 ರನ್ ನೀಡಿದ್ದರು.

ಮೂರನೇ ಪಂದ್ಯಕ್ಕೆ ವಿಶ್ರಾಂತಿ ಪಡೆದಿದ್ದ ಚಕ್ರವರ್ತಿ ಅವರ ವಿಷಯ ಕೊಂಚ ಭಿನ್ನ. ಎರಡು

ಸೂರ್ಯಕುಮಾರ್

ಮಿಚೆಲ್ ಸ್ಯಾಂಟ್ನರ್

ಹೈಸ್ಕೋರಿಂಗ್ ಪಂದ್ಯಗಳಲ್ಲಿ (190 ಮತ್ತು 208) ದುಬಾರಿಯಾಗಿದ್ದರು. ಅವರ ಬೌಲಿಂಗ್ ಸಹ ಎಂದಿನ ಮೊನಚು ಹೊಂದಿರಲಿಲ್ಲ.

ಈ ಹಿನ್ನೆಲೆಯಲ್ಲಿ ತಂಡವು ಬಿಷ್ಣೋಯಿ ಅವರನ್ನು ಉಳಿಸಿ ಕುಲದೀಪ್ ಅವರನ್ನು ನಾಲ್ಕನೇ ಪಂದ್ಯಕ್ಕೆ ಕೈಬಿಡುವ ಸಾಧ್ಯತೆಯಿದೆ. ವರುಣ್ ಅವರು ಮರಳಿ ತಂಡಕ್ಕೆ ಸೇರ್ಪಡೆಯಾಗಬಹುದು.

ಬ್ಯಾಟರ್‌ಗಳ ಮಿಂಚು: ಬೌಲಿಂಗ್ ಕಥೆ ಹೀಗಾದರೆ ಬ್ಯಾಟಿಂಗ್ ಪ್ರದರ್ಶನ ಚೇತೋಹಾರಿಯಾಗಿದೆ. ಸರಣಿಯ ಮೂರನೇ ಪಂದ್ಯದಲ್ಲಿ ಅಭಿಷೇಕ್ 300ಕ್ಕೂ ಹೆಚ್ಚಿನ ಸ್ಟ್ರೈಕ್ ರೇಟ್‌ನಲ್ಲಿ ರನ್ ಸೂರೆ ಮಾಡಿದ್ದರು. ಸಂಜು ಸ್ಯಾಮ್ಸನ್ ಅವರನ್ನು ಬಿಟ್ಟರೆ ಅಗ್ರ ಸರದಿಯ ಇತರ ಆಟಗಾರರು ಅಮೋಘ ಯಶಸ್ಸು ಕಂಡಿದ್ದಾರೆ. ಸೂರ್ಯಕುಮಾರ್ ಮತ್ತು ಇಶಾನ್ ಕಿಶನ್ 230ರ ಆಸುಪಾಸಿನ ಸ್ಟ್ರೈಕ್‌ರೇಟ್‌ನಲ್ಲಿ ರನ್ ಹರಿಸಿದ್ದಾರೆ. ತಂಡವು ಕಳೆದ ಎರಡು ಪಂದ್ಯಗಳಲ್ಲಿ ಅನಾಯಾಸವಾಗಿ ಗುರಿ ಮುಟ್ಟಿದೆ. ವಿಶಾಖಪಟ್ಟಣದ ಪಿಚ್ ಕೂಡ ಬ್ಯಾಟರ್‌ಗಳಿಗೆ ಅನುಕೂಲವಾಗುವ ನಿರೀಕ್ಷೆಯಿದೆ.

ಭಾರತ ತಂಡದ ಇಶಾನ್ ಕಿಶನ್, ಜಸ್‌ಪ್ರೀತ್ ಬೂಮ್ರಾ, ಅಭಿಷೇಕ್ ಶರ್ಮಾ ಮತ್ತು ರಿಂಕು ಸಿಂಗ್ ಅವರು ಅಭ್ಯಾಸದ ವೇಳೆ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಆದರೆ ಆರಂಭ ಆಟಗಾರ ಸಂಜು ನಿರಾಶೆ ಮೂಡಿಸಿದ್ದಾರೆ. ತಂಡದಲ್ಲಿ ಸ್ಥಾನ ಗಳಿಸಲು ಇರುವ ಪೈಪೋಟಿ ಗಮನಿಸಿದರೆ, ಅವರಿಗೆ ಉತ್ತಮ ಇನಿಂಗ್ಸ್ ಆಡಬೇಕಾದ ಒತ್ತಡವಿದೆ. ಮೂರು ಪಂದ್ಯಗಳಲ್ಲಿ ಅವರು 5.33 ಸರಾಸರಿಯಲ್ಲಿ ಕೇವಲ 16 ರನ್ ಗಳಿಸಿದ್ದಾರೆ.

ಕಿವೀಸ್‌ಗೆ ಒತ್ತಡ: ಈ ಸರಣಿಯಲ್ಲಿ ನ್ಯೂಜಿಲೆಂಡ್ ಅಂದುಕೊಂಡಂತೆ ಯಾವುದೂ ನಡೆದಿಲ್ಲ. ಬ್ಯಾಟರ್‌ಗಳು ಸ್ಥಿರ ಪ್ರದರ್ಶನ ನೀಡಿಲ್ಲ. ಬೌಲರ್‌ಗಳು ಭಾರತದ ಬ್ಯಾಟರ್‌ಗಳ ಅಬ್ಬರದ ಆಟಕ್ಕೆ ನಲುಗಿಹೋಗಿದ್ದಾರೆ. ಪ್ರವಾಸಿ ಪಡೆಯ ಯಶಸ್ವಿ ಬೌಲರ್ ಜೇಕಬ್ ಡಫಿ ಅವರ ಇಕಾನಮಿ 10.30 ಎಂದರೆ ತಂಡದ ಇತರ ಬೌಲರ್‌ಗಳ ದಯನೀಯ ಸ್ಥಿತಿ ಊಹಿಸಬಹುದು. ಮ್ಯಾಟ್ ಹೆನ್ರಿ (13.80), ಕೈಲ್ ಜೇಮಿಸನ್ (14.20), ನಾಯಕ ಮಿಚೆಲ್ ಸ್ಯಾಂಟ್ನರ್ (13.14) ಮತ್ತು ಈಶ್ ಸೋಧಿ (12.50) ಅವರು ಕೈಸುಟ್ಟುಕೊಂಡಿದ್ದಾರೆ.

ಲಯದಲ್ಲಿರುವ ಡ್ಯಾರಿಲ್ ಮಿಚೆಲ್ ಅವರಿಗೆ ಕ್ರಮಾಂಕದಲ್ಲಿ ಬಡ್ತಿ ನೀಡುವುದು ತಂಡದ ಮುಂದಿರುವ ಆಯ್ಕೆಗಳಲ್ಲಿ ಒಂದಾಗಿದೆ. ಆದರೆ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡದೇ ಹೋದರೆ ಈ ಪ್ರಯೋಗ ಪರಿಣಾಮ ಬೀರದು.

ಪಂದ್ಯ ಆರಂಭ: ರಾತ್ರಿ 7.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಯೂತ್ ಕ್ರಿಕೆಟ್ ವಿಶ್ವಕಪ್: ಮಿಂಚಿದ ವೈಭವ್, ಅಭಿಗ್ಯಾನ್
ವಿಹಾನ್ ಶತಕಕ್ಕೆ ಒಲಿದ ಜಯ



ಬುಲವಾಯೊ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟರ್ ವಿಹಾನ್ ಮಲ್ಹೋತ್ರಾ ಗಳಿಸಿದ ಶತಕದ ಬಲದಿಂದ ಭಾರತ ಯುವ ತಂಡವು ಇಲ್ಲಿ ನಡೆಯು ತ್ತಿರುವ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಸಿಕ್ಸ್ ಹಂತದ ಪಂದ್ಯದಲ್ಲಿ ಜಿಂಬಾಬ್ವೆ ಎದುರು ಜಯಭೇರಿ ಬಾರಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ಯುವಪಡೆಯು 204 ರನ್‌ಗಳಿಂದ ಜಯ ಸಾಧಿಸಿತು. ಟಾಸ್ ಗೆದ್ದ ಜಿಂಬಾಬ್ವೆ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಐದನೇ ಕ್ರಮಾಂಕದ ಬ್ಯಾಟರ್ ವಿಹಾನ್ (ಅಜೇಯ 109; 107ಎ, 4X7) ಶತಕ ಮತ್ತು ಅಭಿಗ್ಯಾನ್ ಕುಂದು (61, 62ಎ, 4X5, 6X1) ಅವರ ಅರ್ಧಶತಕದ ಬಲದಿಂದ ಭಾರತ ಯುವ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 352 ರನ್ ಗಳಿಸಿತು. ಇದಕ್ಕುತ್ತರವಾಗಿ ಜಿಂಬಾಬ್ವೆ ತಂಡವು 37.4 ಓವರ್‌ಗಳಲ್ಲಿ 148 ರನ್ ಗಳಿಸಿತು. ವಿಹಾನ್ ಮತ್ತು ಅಭಿಗ್ಯಾನ್ ಅವರು ಐದನೇ ವಿಕೆಟ್ ಜತೆಯಾಟದಲ್ಲಿ 113 ರನ್ ಸೇರಿಸಿದರು.

ವೈಭವ್ ಅರ್ಧಶತಕದ ಅಬ್ಬರ: ವೈಭವ್ ಸೂರ್ಯವಂಶಿ (52; 30ಎ) ಅವರ ಅಬ್ಬರದ ಆಟದಿಂದಾಗಿ ತಂಡಕ್ಕೆ 62 ಎಸೆತಗಳಲ್ಲಿ 100 ರನ್ ಸೇರಿದವು. ವೈಭವ್ ನಾಲ್ಕು ಬೌಂಡರಿ ಮತ್ತು ಅಷ್ಟೇ ಸಂಖ್ಯೆಯ ಸಿಕ್ಸರ್ ಸಿಡಿಸಿದರು.

ವೈಭವ್ ಅವರು ಆ್ಯರನ್ ಜಾರ್ಜ್ ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 44 ರನ್ ಸೇರಿಸಿದರು. ಆಯುಷ್ ಮ್ಹಾತ್ರೆ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 56 ರನ್ ಪೇರಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 8ಕ್ಕೆ352 (ವೈಭವ ಸೂರ್ಯವಂಶಿ 52, ವಿಹಾನ್ ಮಲ್ಹೋತ್ರಾ ಔಟಾಗದೇ 109, ಅಭಿಗ್ಯಾನ್ ಕುಂದು 61, ಪನಾಶೆ ಮಝ್ಯೆ 86ಕ್ಕೆ2, ಟಟೆಂಡಾ ಚಿಮುಗುರೊ 49ಕ್ಕೆ3, ಸಿಂಬರಾಶೆ ಮುದೆಝುಗೆರೆರೆ 51ಕ್ಕೆ2) ಜಿಂಬಾಬ್ವೆ: 37.4 ಓವರ್‌ಗಳಲ್ಲಿ 148 (ಕಿರಣ್ ಬ್ಲಿಗ್‌ನಾಟ್ 37, ಲೀರೈ ಚಿವೂಲಾ 62, ಆರ್.ಎಸ್. ಅಂಬರೀಶ್ 19ಕ್ಕೆ2, ಉಧವ್ ಮೋಹನ್ 20ಕ್ಕೆ3, ಆಯುಷ್ ಮ್ಹಾತ್ರೆ 14ಕ್ಕೆ3) ಭಾರತ ತಂಡಕ್ಕೆ 204 ರನ್ ಜಯ.

ಗುಜರಾತ್ ಜೈಂಟ್ಸ್‌ಗೆ ರೋಚಕ ಗೆಲುವು

ಮಹಿಳಾ ಪ್ರೀಮಿಯರ್ ಲೀಗ್

ವಡೋದರ (ಪಿಟಿಐ): ಕೊನೆಯ ಎಸೆತದವರೆಗೆ ಕುತೂಹಲ ಕೆರಳಿಸಿದ್ದ ಮಹಿಳಾ ಪ್ರೀಮಿಯರ್ ಲೀಗ್‌ನ ರೋಚಕ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವು ಮಂಗಳವಾರ ಮೂರು ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತು.

ಈ ಗೆಲುವಿನೊಂದಿಗೆ ಜೈಂಟ್ಸ್ ತಂಡವು (8 ಅಂಕ) ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆದು, ಪ್ಲೇ ಆಫ್‌ಗೆ ಹತ್ತಿರವಾಯಿತು. ಕ್ಯಾಪಿಟಲ್ಸ್ ತಂಡದ (6) ಪ್ಲೇ ಆಫ್ ಹಾದಿ ಕಠಿಣವಾಯಿತು.

175 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ತಂಡವು ರಾಜೇಶ್ವರಿ ಗಾಯಕವಾಡ್ (20ಕ್ಕೆ 3) ಮತ್ತು ಸೋಫಿ ಡಿವೈನ್ (37ಕ್ಕೆ 4) ಅವರ ದಾಳಿಗೆ ಸಿಲುಕಿ 100 ರನ್‌ಗೆ 6 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕರ್ನಾಟಕದ ನಿಕಿ ಪ್ರಸಾದ್ (47;24ಎ, 4x9) ಮತ್ತು ಸ್ನೇಹಾ ರಾಣಾ (29;15ಎ, 4x3, 6x2) ಅವರು ಏಳನೇ ವಿಕೆಟ್ ಜೊತೆಯಾಟದಲ್ಲಿ 70 (31ಎ) ರನ್ ಸೇರಿಸಿ ತಂಡಕ್ಕೆ ಮಹತ್ವದ ಚೇತರಿಕೆ ನೀಡಿದರು.

ಇವರಿಬ್ಬರು ಸೋಫಿ ಹಾಕಿದ 17ನೇ ಓವರ್‌ನಲ್ಲಿ 23 ರನ್ ಮತ್ತು ನಾಯಕಿ ಆ್ಯಶ್ಲೆ ಗಾರ್ಡನರ್ ಹಾಕಿದ 19ನೇ ಓವರ್‌ನಲ್ಲಿ 20 ರನ್ ಬಾಚಿದರು. ಹೀಗಾಗಿ, ಕೊನೆಯ ಓವರ್‌ನಲ್ಲಿ ಗೆಲುವಿಗೆ 9 ರನ್ ಅಗತ್ಯವಿತ್ತು. ಗಾರ್ಡನರ್ ಅವರು ಮತ್ತೆ ಸೋಫಿ ಕೈಗೆ ಚೆಂಡನ್ನು ನೀಡಿದರು. ಒತ್ತಡದ ಮಧ್ಯೆ ಪರಿಣಾಮಕಾರಿಯಾಗಿ ಬೌಲಿಂಗ್ ಮಾಡಿದ ಅವರು ಕೇವಲ ಐದು ರನ್ ನೀಡಿ, ಸ್ನೇಹಾ ಮತ್ತು ನಿಕಿ ಅವರ ವಿಕೆಟ್ ಪಡೆದು ಗೆಲುವಿನ ರೂವಾರಿಯಾದರು.

ಇದಕ್ಕೂ ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಗುಜರಾತ್ ಜೈಂಟ್ಸ್ ತಂಡವು ವಿಕೆಟ್ ಕೀಪರ್–ಬ್ಯಾಟರ್ ಬೆತ್ ಮೂನಿ (58;46ಎ, 4x7) ಅವರ ಅರ್ಧಶತಕದ ನೆರವಿನಿಂದ 9 ವಿಕೆಟ್‌ಗೆ 174 ರನ್ ದಾಖಲಿಸಿತ್ತು. ಅನುಷ್ಕಾ ಶರ್ಮಾ (39;25ಎ) ಅವರೂ ಉಪಯುಕ್ತ ಕಾಣಿಕೆ ನೀಡಿದರು.

ಎಡಗೈ ಸ್ಪಿನ್ನರ್ ಎನ್.ಶ್ರೀಚರಣಿ (31ಕ್ಕೆ 4) ಅವರ ದಾಳಿಗೆ ಸಿಲುಕಿದ ತಂಡ 15.4 ಓವರುಗಳಾಗುವಷ್ಟರಲ್ಲಿ 131 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಕೊನೆಯಲ್ಲಿ ತನುಜಾ ಕನ್ವರ್ (21, 11 ಎಸೆತ) ಅವರು ತಂಡದ ಮೊತ್ತ 175ರ ಸನಿಹ ತಲುಪಿಸಿದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 9ಕ್ಕೆ 174 (ಬೆತ್ ಮೂನಿ 58, ಅನುಷ್ಕಾ ಶರ್ಮಾ 39, ತನುಜಾ ಕನ್ವರ್ 21; ಶ್ರೀಚರಣಿ 31ಕ್ಕೆ4, ಚಿನೆಲ್ ಹೆನ್ರಿ 38ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 171 (ಲಾರಾ ವೋಲ್ವಾರ್ಟ್ 24, ನಿಕಿ ಪ್ರಸಾದ್ 47, ಸ್ನೇಹಾ ರಾಣಾ 29; ರಾಜೇಶ್ವರಿ ಗಾಯಕವಾಡ್ 20ಕ್ಕೆ 3, ಸೋಫಿ ಡಿವೈನ್ 37ಕ್ಕೆ 4). ಫಲಿತಾಂಶ: ಗುಜರಾತ್ ಜೈಂಟ್ಸ್‌ಗೆ 3 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ಸೋಫಿ ಡಿವೈನ್

ಗಾಫ್‌ಗೆ ಆಘಾತ ನೀಡಿದ ಸ್ವಿಟೋಲಿನಾ: ಸಬಲೆಂಕಾ, ಜ್ವರೇವ್ ಮುನ್ನಡೆ
ಮೊದಲ ಬಾರಿ ಸೆಮಿಗೆ ಅಲ್ಕರಾಜ್

ಮೆಲ್ಬರ್ನ್ (ಎಎಫ್‌ಪಿ): ಸ್ಪೇನ್‌ನ ಸೂಪರ್ ಸ್ಟಾರ್ ಕಾರ್ಲೋಸ್ ಅಲ್ಕರಾಜ್ ಅವರು ಆಸ್ಟ್ರೇಲಿಯನ್ ಓಪನ್‌ನಲ್ಲಿ ಮೊದಲ ಬಾರಿ ಸೆಮಿಫೈನಲ್‌ಗೆ ಮುನ್ನುಗ್ಗುವ ಮೂಲಕ ಎದುರಾಳಿಗಳಿಗೆ ಎಚ್ಚರಿಕೆಯ ಸಂದೇಶ ರವಾನಿಸಿದರು. ಮಹಿಳೆಯರ ವಿಭಾಗದಲ್ಲಿ ಎಲಿನಾ ಸ್ವಿಟೋಲಿನಾ ಒಂದು ಗಂಟೆಗೂ ಕಡಿಮೆ ಅವಧಿಯಲ್ಲಿ ಮೂರನೇ ಶ್ರೇಯಾಂಕದ ಕೊಕೊ ಗಾಫ್ ಅವರನ್ನು ಅನಾಯಾಸವಾಗಿ ಸೋಲಿಸಿದ್ದು ವಿಶೇಷ.

ವಿಶ್ವದ ಅಗ್ರಮಾನ್ಯ ಆಟಗಾರ ಅಲ್ಕರಾಜ್ ಅವರು ರಾಡ್ ಲೇವರ್ ಅರೇನಾದಲ್ಲಿ ತವರಿನ ಭರವಸೆಯಾಗಿದ್ದ ಅಲೆಕ್ಸ್ ಡಿ ಮಿನೋರ್ ಅವರನ್ನು 7–5, 6–2, 6–1 ರಿಂದ ಸೋಲಿಸಿದರು. ಅವರು ಸೆಮಿಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಎದುರಿಸಲಿದ್ದಾರೆ.

ಇಲ್ಲಿ ಮೊದಲ ಕಿರೀಟಕ್ಕೆ ಗುರಿಯಿಟ್ಟಿರುವ 22 ವರ್ಷ ವಯಸ್ಸಿನ ಅಲ್ಕರಾಜ್ ಈವರೆಗಿನ ಅಭಿಯಾನದಲ್ಲಿ ಒಂದೂ ಸೆಟ್ ಕಳೆದುಕೊಂಡಿಲ್ಲ. ಉಳಿದ ಮೂರು ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಟ್ರೋಫಿ ಎತ್ತಿಹಿಡಿದಿರುವ ಅವರು, ಈ ಹಿಂದಿನ ಭೇಟಿಗಳಲ್ಲಿ ಕ್ವಾರ್ಟರ್‌ಫೈನಲ್ ದಾಟಿರಲಿಲ್ಲ.



ಗೆಲುವಿನ ಸಂತಸದಲ್ಲಿ ಉಕ್ರೇನಿನ ಎಲಿನಾ ಸ್ವಿಟೋಲಿನಾ (ಎಡ). ಸೆಮಿಫೈನಲ್ ಪ್ರವೇಶಿಸಿದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರಗಳು

ಸ್ಪೇನ್‌ನ ಆಟಗಾರ ಇಲ್ಲೂ ಟ್ರೋಫಿ ಗೆದ್ದಲ್ಲಿ ಎಲ್ಲ ನಾಲ್ಕು ಪ್ರಮುಖ ಟೂರ್ನಿಗಳಲ್ಲಿ ಕಿರೀಟ ಧರಿಸಿದ ಅತಿ ಕಿರಿಯ ಆಟಗಾರನೆಂಬ ಹಿರಿಮೆಗೆ ಪಾತ್ರರಾಗಲಿದ್ದಾರೆ. ಈಗ ಆ ಗೌರವ ಸ್ಪೇನ್‌ನವರೇ ಆದ ರಫೆಲ್ ನಡಾಲ್ (ಆಗ ಅವರ ವಯಸ್ಸು 24) ಹೆಸರಿನಲ್ಲಿದೆ.

ಜ್ವರೇವ್‌ಗೆ ಜಯ: ಕಳೆದ ಬಾರಿಯ ರನ್ನರ್ ಅಪ್ ಜ್ವರೇವ್ ಅವರು ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಅಮೆರಿಕದ ಲರ್ನರ್ ಟಿಯೆನ್ ಅವರನ್ನು 6-3, 6-7 (5/7), 6-1, 7-6 (7/3) ರಿಂದ ಸೋಲಿಸಿದರು. ಭರ್ಜರಿ ಸರ್ವ್‌ಗಳ ಪ್ರದರ್ಶನ ನೀಡಿದ ಜ್ವರೇವ್ 24 ಏಸ್‌ಗಳನ್ನು ಸಿಡಿಸಿದರು.

ಮೂರನೇ ಕ್ರಮಾಂಕದ ಆಟಗಾರ ಜ್ವರೇವ್, 28ರ ವಯಸ್ಸಿನಲ್ಲಿ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲಲು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ. ಜರ್ಮನಿಯ ತಾರೆ, 2025ರ ಫೈನಲ್‌ನಲ್ಲಿ ಯಾನಿಕ್ ಸಿನ್ನರ್‌ಗೆ ಮಣಿದಿದ್ದರು.

ರ‍್ಯಾಕೆಟ್ ಕುಕ್ಕಿದ ಗಾಫ್: ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಎದುರು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಎಸಗಿದ ತಪ್ಪುಗಳ ಸರಮಾಲೆಯ ಪರಿಣಾಮ ಮೂರನೇ ಶ್ರೇಯಾಂಕದ ಕೊಕೊ ಗಾಫ್ ಹೊರಬಿದ್ದರು. ಸ್ವಿಟೋಲಿನಾ ಕೇವಲ 59 ನಿಮಿಷಗಳಲ್ಲಿ 6–1, 6–2 ಯಿಂದ ಅಚ್ಚರಿಯ ರೀತಿ ಜಯಗಳಿಸಿದರು. 12ನೇ ಶ್ರೇಯಾಂಕದ ಸ್ವಿಟೋಲಿನಾ ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಅವರನ್ನು ಎದುರಿಸಲಿದ್ದಾರೆ.

ಉರಿಬಿಸಿಲಿನಲ್ಲಿ ಆಡಿದ ಸಬಲೆಂಕಾ 6–3, 6–0 ಯಿಂದ ಹದಿಹರೆಯದ ಆಟಗಾರ್ತಿ ಇವಾ ಜೋವಿಕ್ (ಅಮೆರಿಕ) ಅವರನ್ನು ಹಿಮ್ಮೆಟ್ಟಿಸಿ ಸೆಮಿಫೈನಲ್ ತಲುಪಿದರು.

ಗಾಫ್ ಅವರು ಸೋತು ಅಂಕಣದಿಂದ ಹೊರಹೋಗುವ ಹಾದಿಯಲ್ಲಿ ಹತಾಶೆಯಿಂದ ರ‍್ಯಾಕೆಟ್ ಅನ್ನು ಪದೇ ಪದೇ ನೆಲಕ್ಕೆ ಕುಕ್ಕುತ್ತಿದ್ದ ದೃಶ್ಯ ಟಿ.ವಿ. ಕ್ಯಾಮೆರಾಗಳಲ್ಲಿ ಸೆರೆಯಾಗಿದೆ.

ಕರ್ನಾಟಕಕ್ಕೆ ಮಣಿದ ಆಂಧ್ರಪ್ರದೇಶ

ಬೆಂಗಳೂರು: ಸುಭಾತ್ರಾ ಎ. (20ನೇ, 21ನೇ, 23ನೇ, 29ನೇ ಹಾಗೂ 42ನೇ ನಿಮಿಷ) ಅವರ ಐದು ಗೋಲುಗಳ ನೆರವಿನಿಂದ ಕರ್ನಾಟಕ ತಂಡವು ಖೇಲೊ ಇಂಡಿಯಾ– ಅಸ್ಮಿತಾ 13 ವರ್ಷದೊಳಗಿನ ಬಾಲಕಿಯರ ಫುಟ್‌ಬಾಲ್ ಲೀಗ್ (ದಕ್ಷಿಣ ವಲಯ) ಪಂದ್ಯದಲ್ಲಿ 8–0ಯಿಂದ ಆಂಧ್ರಪ್ರದೇಶ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡವು ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿತು. ಅಂಡಮಾನ್ ವಿರುದ್ಧ ಸೋಮವಾರ ಏಳು ಗೋಲು ಹೊಡೆದಿದ್ದ ಸುಭಾತ್ರಾ ಮತ್ತೊಮ್ಮೆ ಮಿಂಚಿದರು.

ಗೌರಿ ನಿಂಗಪ್ಪಗೌಡ ಪಾಟೀಲ (7ನೇ ನಿ.), ಅನ್ವಿ ಜೋಶಿ (18ನೇ ನಿ.) ಹಾಗೂ ಪ್ರಣೀತಾ ವಿ.ಆರ್. (50ನೇ ನಿ.) ತಲಾ ಒಂದು ಗೋಲು ಗಳಿಸಿದರು. ಎದುರಾಳಿ ತಂಡವು ಕರ್ನಾಟಕದ ರಕ್ಷಣಾ ವ್ಯೂಹವನ್ನು ಭೇದಿಸಲು ವಿಫಲವಾಯಿತು.

ನಿವೃತ್ತಿಗೆ ಸಮಯ ಬಂದಿಲ್ಲ: ರಾಹುಲ್

ನವದೆಹಲಿ (ಪಿಟಿಐ): ‘ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸುವ ಆಲೋಚನೆ ಬಂದಿತ್ತು. ಆದರೆ, ಅದಕ್ಕೆ ಇನ್ನೂ ಸಮಯವಿದೆ. ಆ ಸಮಯ ಬಂದಾಗ ಹಿಂಜರಿಯುವುದಿಲ್ಲ...’

– ಭಾರತ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ತಂಡದ ಅನುಭವಿ ಬ್ಯಾಟರ್ ಕೆ.ಎಲ್.ರಾಹುಲ್ ಅವರ ಮನದಾಳದ ಮಾತುಗಳಿವು.

ಇಂಗ್ಲೆಂಡ್ ತಂಡದ ಮಾಜಿ ನಾಯಕ ಕೆವಿನ್ ಪೀಟರ್ಸನ್ ಜೊತೆಗಿನ ಸಂದರ್ಶನದಲ್ಲಿ ನಿವೃತ್ತಿ ಕುರಿತಾದ ಆಲೋಚನೆಗಳನ್ನು ರಾಹುಲ್ ಹಂಚಿಕೊಂಡಿದ್ದಾರೆ. ಕ್ರಿಕೆಟ್‌ನ ಆಚೆಗೂ ಬದುಕು ಇದೆ. ಹಾಗಾಗಿ, ನಿವೃತ್ತಿ ಅಷ್ಟೊಂದು ಕಠಿಣವಾಗಲಾರದು ಎಂದು 33 ವರ್ಷ ವಯಸ್ಸಿನ ಕರ್ನಾಟಕದ ಆಟಗಾರ ಅಭಿಪ್ರಾಯಪಟ್ಟಿದ್ದಾರೆ.

‘ನನ್ನ ನಿವೃತ್ತಿಯ ಬಳಿಕವೂ ದೇಶದಲ್ಲಿ ಕ್ರಿಕೆಟ್ ಆಟ ಮುಂದುವರಿಯುತ್ತದೆ. ಬದುಕಿನಲ್ಲಿ ವೃತ್ತಿಗಿಂತಲೂ ಅತಿ ಮುಖ್ಯವೆನಿಸುವ ಹಲವು ವಿಚಾರಗಳಿವೆ. ಮೊದಲ ಮಗುವಿನ ಜನನದ ಬಳಿಕ ಜೀವನದ ಕುರಿತಾದ ನನ್ನ ದೃಷ್ಟಿಕೋನ ಸಂಪೂರ್ಣ ಬದಲಾಗಿದೆ’ ಎಂದು ರಾಹುಲ್ ಹೇಳಿದ್ದಾರೆ.

‘ಕ್ರೀಡಾಪಟುಗಳಿಗೆ ಗಾಯವೇ ಬಹುದೊಡ್ಡ ಸವಾಲು. ನಾನೂ ಹಲವಾರು ಬಾರಿ ಗಾಯಗೊಂಡು ಚೇತರಿಸಿಕೊಂಡಿದ್ದೇನೆ. ಆ ಸಂದರ್ಭದಲ್ಲಿ ‘ಎಲ್ಲವೂ ಮುಗಿಯಿತು. ಆಟವನ್ನು ನಿಲ್ಲಿಸೋಣ’ ಎಂದು ಮನಸ್ಸು ಹೇಳಿದ್ದಿದೆ. ಗಾಯದ ನೋವಿಗಿಂತಲೂ, ಆ ಮಾನಸಿಕ ಯಾತನೆ ಅತಿ ಕಠಿಣ’ ಎಂದು ಹೇಳಿದ್ದಾರೆ.

ಟಿ20 ವಿಶ್ವಕಪ್: ಸ್ಕಾಟ್ಲೆಂಡ್ ತಂಡ ಪ್ರಕಟ

ರಿಚಿ ಬ್ಯಾರಿಂಗ್ಟನ್

ಎಡಿನ್‌ಬರ್ಗ್ (ಪಿಟಿಐ): ಭಾರತ ಮತ್ತು ಶ್ರೀಲಂಕಾ ಆತಿಥ್ಯದಲ್ಲಿ ನಡೆಯುವ ಐಸಿಸಿ ಟಿ20 ಟೂರ್ನಿಗೆ ಕೊನೆಯ ಕ್ಷಣದಲ್ಲಿ ಅವಕಾಶ ಪಡೆದ ಸ್ಕಾಟ್ಲೆಂಡ್ ಸೋಮವಾರ 15 ಆಟಗಾರರ ತಂಡವನ್ನು ಪ್ರಕಟಿಸಿದೆ. ಅಫ್ಗಾನಿಸ್ತಾನ ಮೂಲದ ವೇಗಿ ಜೈನುಲ್ಲಾ ಇಹ್ಸಾನ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಭದ್ರತೆಯ ಕಳವಳ ವ್ಯಕ್ತಪಡಿಸಿ ಬಾಂಗ್ಲಾದೇಶ ತಂಡವು ಟಿ20 ವಿಶ್ವಕಪ್‌ನಿಂದ ಹಿಂದೆ ಸರಿದ ನಂತರ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯು (ಐಸಿಸಿ) ಸ್ಕಾಟ್ಲೆಂಡ್ ತಂಡಕ್ಕೆ ಅವಕಾಶ ಕಲ್ಪಿಸಿದೆ. ಟೂರ್ನಿಯ ಮೊದಲ ದಿನ ಫೆ.7ರಂದು ಕೋಲ್ಕತ್ತದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಸ್ಕಾಟ್ಲೆಂಡ್ ತನ್ನ ಅಭಿಯಾನವನ್ನು ಆರಂಭಿಸಲಿದೆ.

ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆದ 2024ರ ಟಿ20 ವಿಶ್ವಕಪ್ ತಂಡದಲ್ಲಿ ಆಡಿದ್ದ 11 ಮಂದಿ ಮತ್ತೆ ಅವಕಾಶ ಪಡೆದಿದ್ದಾರೆ. ಇಹ್ಸಾನ್ ಅವರು ಇದೇ ಮೊದಲ ಬಾರಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ರಿಚಿ ಬ್ಯಾರಿಂಗ್ಟನ್ ಅವರು ತಂಡವನ್ನು ಮುನ್ನಡೆಸಲಿದ್ದಾರೆ. ಟಾಮ್ ಬ್ರೂಸ್, ಫಿನ್ಲೆ ಮೆಕ್‌ಕ್ರೀತ್ ಮತ್ತು ಆಲಿವರ್ ಡೇವಿಡ್ಸನ್ ಅವರಿಗೆ ಇದು ಮೊದಲ ವಿಶ್ವಕಪ್ ಟೂರ್ನಿಯಾಗಿದೆ. ಪಾಕಿಸ್ತಾನ ಮೂಲದ ಸಫ್ಯಾನ್ ಷರೀಫ್ ತಂಡದಲ್ಲಿದ್ದು, ಅವರ ವೀಸಾ ಅರ್ಜಿಯು ಹೆಚ್ಚಿನ ಪರಿಶೀಲನೆಗೆ ಒಳಪಡಲಿದೆ.

ತಂಡ: ರಿಚಿ ಬ್ಯಾರಿಂಗ್ಟನ್ (ನಾಯಕ), ಟಾಮ್ ಬ್ರೂಸ್, ಮ್ಯಾಥ್ಯೂ ಕ್ರಾಸ್, ಬ್ರಾಡ್ಲಿ ಕ್ಯೂರಿ, ಆಲಿವರ್ ಡೇವಿಡ್‌ಸನ್, ಕ್ರಿಸ್ ಗ್ರೀವ್ಸ್, ಜೈನುಲ್ಲಾ ಇಹ್ಸಾನ್, ಮೈಕೆಲ್ ಜೋನ್ಸ್, ಮೈಕೆಲ್ ಲೀಸ್ಕ್, ಫಿನ್ಲೆ ಮೆಕ್‌ಕ್ರೀತ್, ಬ್ರಾಂಡನ್ ಮೆಕ್‌ಮುಲ್ಲೆನ್, ಜಾರ್ಜ್ ಮುನ್ಸೆ, ಸಫ್ಯಾನ್ ಷರೀಫ್, ಮಾರ್ಕ್ ವ್ಯಾಟ್, ಬ್ರಾಡ್ಲಿ ವೀಲ್.

ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅಭಿಮತ
ಭಾರತವೇ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತ ತಂಡವು ಟಿ20 ಕ್ರಿಕೆಟ್ ಮಾದರಿಯಲ್ಲಿ ಬೇರೆಲ್ಲ ದೇಶಗಳಿಗಿಂತ ವಿಭಿನ್ನವಾಗಿ ಆಡುತ್ತಿದೆ. ಚುಟುಕು ಮಾದರಿಯಲ್ಲಿ ಇಲ್ಲಿಯ ಆಟಗಾರರ ಸಾಮರ್ಥ್ಯ ಅಮೋಘವಾಗಿದೆ. ಆದ್ದರಿಂದ ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತವೇ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿದೆ’–

ಕ್ರಿಕೆಟ್ ದಂತಕಥೆ ರಾಹುಲ್ ದ್ರಾವಿಡ್ ಅವರ ವಿಶ್ವಾಸದ ನುಡಿಗಳಿವು. 2024ರಲ್ಲಿ ಭಾರತ ತಂಡವು ರೋಹಿತ್ ಶರ್ಮಾ ನಾಯಕತ್ವದಲ್ಲಿ ಟಿ20 ವಿಶ್ವಕಪ್ ಜಯಿಸಿತ್ತು. ಆಗ ದ್ರಾವಿಡ್ ಅವರು ತಂಡದ ಮುಖ್ಯ ಕೋಚ್ ಆಗಿದ್ದರು. ಮಂಗಳವಾರ ಕೆಎಸ್‌ಸಿಎ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಕ್ರಿಕೆಟ್ ಪತ್ರಕರ್ತ ಆರ್. ಕೌಶಿಕ್ ಅವರು ರೋಹಿತ್ ಶರ್ಮಾ ಕುರಿತು ಬರೆದಿರುವ ‘ದಿ ರೈಸ್ ಆಫ್ ದಿ ಹಿಟ್‌ಮ್ಯಾನ್’ ಕೃತಿಯ ‘ಸಂಭ್ರಮ’ದಲ್ಲಿ ದ್ರಾವಿಡ್ ಸಂವಾದ ನಡೆಸಿದರು.

ಮುಂದಿನ ತಿಂಗಳು ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ ಟಿ20 ವಿಶ್ವಕಪ್ ಆರಂಭವಾಗಲಿದೆ.

‘ವೈಟ್ ಬಾಲ್ ಕ್ರಿಕೆಟ್‌ನಲ್ಲಿ ಭಾರತದ್ದೇ ಪಾರಮ್ಯವಿದೆ. ಅದರಲ್ಲೂ ಟಿ20 ಕ್ರಿಕೆಟ್‌ನಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಶೇ 80ರಷ್ಟು ಯಶಸ್ಸು ಗಳಿಸಿದೆ. ಆದ್ದರಿಂದ ಈಬಾರಿ ವಿಶ್ವಕಪ್ ಟೂರ್ನಿಯಲ್ಲಿ ಸೆಮಿಫೈನಲ್‌ಗಂತೂ ಸರಾಗವಾಗಿ ತಲುಪಲಿದ್ದಾರೆ. ಆದರೆ; ಈ ಮಾದರಿಯಲ್ಲಿ ಯಾವ ತಂಡ ಬೇಕಾದರೂ ಆ ದಿನದಾಟದಲ್ಲಿ ಮಿಂಚಿಬಿಡಬಹುದು. ಅಂತಹ ಅಚ್ಚರಿಯ ಫಲಿತಾಂಶಗಳು ಬರುವ ಸಾಧ್ಯತೆಯೂ ಹೆಚ್ಚು’ ಎಂದರು.

‘ರೋಹಿತ್ ಶರ್ಮಾ ಅವರು ನಾಯಕತ್ವದ ಕೌಶಲಗಳನ್ನು ಬಹಳ ಚುರುಕಾಗಿ ಕಲಿತುಕೊಂಡರು. ಆ ಕಾಲದಲ್ಲಿ ತಂಡದಲ್ಲಿ ಪರಿವರ್ತನೆ ನಡೆಯುತ್ತಿತ್ತು. ಯುವ ಆಟಗಾರರು ಇದ್ದರು. ತಮ್ಮ

ದಿ ರೈಸ್ ಆಫ್ ಹಿಟ್‌ಮ್ಯಾನ್ ಪುಸ್ತಕ ಕುರಿತು ‘ಸಂಭ್ರಮ’ ಕಾರ್ಯಕ್ರಮದಲ್ಲಿ ಮಾತನಾಡಿದ ರಾಹುಲ್ ದ್ರಾವಿಡ್. ಲೇಖಕ ಆರ್. ಕೌಶಿಕ್ ಭಾಗವಹಿಸಿದ್ದರು

ವೈಯಕ್ತಿಕ ಸಾಧನೆ, ದಾಖಲೆಗಳನ್ನು ಪರಿವೆಗೆ ತೆಗೆದುಕೊಳ್ಳದೇ ತಂಡವನ್ನು ಕಟ್ಟಿ ಯಶಸ್ಸಿನತ್ತ ಮುನ್ನಡೆಸಲು ರೋಹಿತ್ ಎಲ್ಲ ರೀತಿಯಿಂದಲೂ ಶ್ರಮಿಸಿದರು. ಅದರಿಂದಾಗಿ ಕೋಚ್ ಆಗಿ ನನ್ನ ಕೆಲಸ ಹಗುರವಾಯಿತು’ ಎಂದರು.

ಟೆಸ್ಟ್ ಕ್ರಿಕೆಟ್ ಕುರಿತು ಪ್ರತಿಕ್ರಿಯಿಸಿದ ಅವರು, ‘ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆರಂಭವಾದ ನಂತರ ಸ್ಪಷ್ಟ ಫಲಿತಾಂಶ ಪಡೆಯಲು ಪೈಪೋಟಿ ಹೆಚ್ಚಿದೆ. ಅದರಿಂದಾಗಿ ಪಿಚ್‌ಗಳ ನಿರ್ವಹಣೆಯ ಮಾದರಿಯೂ ಬದಲಾಗಿದೆ. ಸ್ಪಿನ್ನರ್‌ಗಳ ಪಾತ್ರವೂ ಕಡಿಮೆಯಾಗುತ್ತಿದೆ. ಇದು ಭಾರತಕ್ಕಷ್ಟೇ ಅಲ್ಲ, ಇತ್ತೀಚಿನ ವರ್ಷಗಳಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್ ತಂಡಗಳಲ್ಲಿಯೂ ಇದೇ ಪರಿಸ್ಥಿತಿ ಇದೆ’ ಎಂದರು.

ಚೆಸ್: ಗುಕೇಶ್‌ಗೆ ಮತ್ತೊಂದು ಸೋಲು

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು ಟಾಟಾ ಮಾಸ್ಟರ್ಸ್ ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನಲ್ಲಿ ಜರ್ಮನಿಯ ಮಥಿಯಾಸ್ ಬ್ಲೂಬಾಮ್ ವಿರುದ್ಧ ಸೋತರೆ, ಅರ್ಜುನ್ ಇರಿಗೇಶಿ ಅವರು ಅಮೆರಿಕದ ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ ವಿರುದ್ಧ ಡ್ರಾ ಮಾಡಿಕೊಂಡರು.

ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ ಸ್ವದೇಶದ ಜಾವೊಖಿರ್ ಸಿಂದರೋವ್ ಜೊತೆ ಅಂಕ ಹಂಚಿಕೊಂಡರು. ನಾದಿರ್ಬೆಕ್ (6) ಮತ್ತು ಸಿಂದರೋವ್ (5.5) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿದ್ದಾರೆ.

ಮುಖ್ಯಸುತ್ತಿಗೆ ಅಸ್ಮಿತಾ

ಬ್ಯಾಂಕಾಕ್ (ಪಿಟಿಐ): ಭಾರತದ ಅಸ್ಮಿತಾ ಚಾಲಿಹಾ ಅವರು ಮಂಗಳವಾರ ಥಾಯ್ಲೆಂಡ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಧಾನ ಸುತ್ತು ಪ್ರವೇಶಿಸಿದರು.

ಗುವಾಹಟಿಯ ಆಟಗಾರ್ತಿ ಕ್ವಾಲಿಫೈಯರ್ ಪಂದ್ಯಗಳಲ್ಲಿ 21–15, 12–21, 21–12ರಿಂದ ತೈವಾನ್‌ನ ಹಂಗ್ ಯಿ–ಟಿಂಗ್ ವಿರುದ್ಧ ಹಾಗೂ 21–11, 10–21, 21–16ರಿಂದ ಕೊರಿಯಾದ ಕಿಮ್ ಜೂ ಯೂನ್ ವಿರುದ್ಧ ಗೆಲುವು ಸಾಧಿಸಿದರು.